ಚಿತ್ರದುರ್ಗ ಜಿಲ್ಲಾ ಪರಿಸರದ ಪ್ರಾಗಿತಿಹಾಸ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನೆ

ಶರತ್ ಬಾಬು ಕೆ.ಎಸ್

ಮಾರ್ಗದರ್ಶನ

ಡಾ.ಎಸ್.ವೈ.ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

— 1906

ಚಿತ್ರದುರ್ಗ ಜಿಲ್ಲಾ ಪರಿಸರದ ಪ್ರಾಗಿತಿಹಾಸ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನೆ

ಶರತ್‌ಬಾಬು ಕೆ.ಎಸ್.

ಮಾರ್ಗದರ್ಶನ

ಡಾ. ಎಸ್.ವೈ.ಸೋಮಶೇಖರ್

ಸಹಾಯಕ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೮-೧೯

ಮಾರ್ಗದರ್ಶಕರ ದೃಢೀಕರಣ ಪತ್ರ

ಚಿತ್ರದುರ್ಗ ಜಿಲ್ಲಾ ಪರಿಸರದ ಪ್ರಾಗಿತಿಹಾಸ ಎಂಬ ಶೀರ್ಷಿಕೆಯ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಶರತ್‌ಬಾಬು ಕೆ.ಎಸ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪ್ರಸ್ತುತ ನಿಬಂಧವಾಗಲೀ ಅಥವಾ ಯಾವುದೇ ಭಾಗವನ್ನಾಗಲೀ ಈ ಮೊದಲು ಬೇರೆ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೧೪/೭/೧೪
ಸ್ಥಳ :

ಡಾ. ಎಸ್.ವೈ.ಸೋಮಶೇಖರ್
ಸಹಾಯಕ ಪ್ರಾಧ್ಯಾಪಕರು
ಪ್ರಾ.ಇ. ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಚಿತ್ರದುರ್ಗ ಜಿಲ್ಲಾ ಪರಿಸರದ ಪ್ರಾಗಿತಿಹಾಸ ಎಂಬ ಶೀರ್ಷಿಕೆಯ ನಿಬಂಧವನ್ನು ೨೦೧೮-೧೯ನೇ ಶೈಕ್ಷಣಿಕ ಸಾಲಿನಲ್ಲಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಎಸ್.ವೈ.ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ನಿಬಂಧವನ್ನು ಪೂರ್ಣವಾಗಿಯಾಗಲಿ, ಆಂಶಿಕವಾಗಿಯಾಗಲಿ ಯಾವುದೇ ಪದವಿಗಾಗಿ ಈ ಮೊದಲು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 14/06/18
ಸ್ಥಳ : ಹಂಪಿ

Sharathbabu K S
ಶರತ್‌ಬಾಬು ಕೆ.ಎಸ್.
ಪ್ರಾ.ಇ. ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಚಿತ್ರದುರ್ಗ ಜಿಲ್ಲಾ ಪರಿಸರದ ಪ್ರಾಗಿತಿಹಾಸ

ಪರಿವಿಡಿ

ಚಿತ್ರದುರ್ಗ ಜಿಲ್ಲೆ


ಜಟಂಗಿರಾಮೇಶ್ವರ
ಬ್ರಹ್ಮಗಿರಿ
ನಾಗಸಮುದ್ರ
ನುಂಕೆಮಲೆ
ಮೊಳಕಾಲ್ಮೂರು
ಹಾನಗಲ್ಲು
ಕೋನಸಾಗರ
ಕೂಡ್ಲಿಗಿ ತಾಲೂಕು
ಅನಂತಪುರ ಜಿಲ್ಲೆ
ಜಗಳೂರು ತಾಲೂಕು
ಮನ್ನೇಕೋಟೆ
ತೊರೆಕೋಲಮ್ಮನಹಳ್ಳಿ
ನಾಯಕನಹಟ್ಟಿ
ಎನ್.ದೇವರಹಳ್ಳಿ
ಎನ್.ಮಹದೇವಪುರ
ದಾವಣಗೆರೆ ತಾಲೂಕು
ಸಂಗೇನಹಳ್ಳಿಕೆರೆ
ಹವಳೇನಹಳ್ಳಿ
ಸುಲ್ತಾನಿಪುರ
ತುರುವನೂರು
ಕೂನಬೇವು
ದೊಡ್ಡ ಉಳ್ಳಾರ್ತಿ
ಚಳ್ಳಕೆರೆ
ನನ್ನಿವಾಳ
ದೊಡ್ಡೇರಿ
ಚಿಕ್ಕಮಧುರೆ
ಪರಶುರಾಂಪುರ
ಪಿ.ಮಹದೇವಪುರ
ಟಿ.ಎನ್.ಕೋಟೆ
ಚಿಕ್ಕಬ್ಬಿಗೆರೆ
ತಮಟಕಲ್ಲು
ಚಿತ್ರದುರ್ಗ
ಜೆ.ಎನ್ ಕೋಟೆ
ಚಂದ್ರವಳ್ಳಿ
ಇಂಗಳದಾಳ್
ಗಂಜಿಗಟ್ಟೆ
ಮಿಂಚೇರಿಗುಡ್ಡ
ಬೆಳಗೆರೆ
ಪಾಲವ್ವನಹಳ್ಳಿ
ಮರಡಿಹಳ್ಳಿ
ಅಬ್ಬಿನಹೊಳೆ
ಚನ್ನಗಿರಿ ತಾಲೂಕು
ನಂದನಹೊಸೂರು
ಹೊಳಲ್ಕೆರೆ
ಐಮಂಗಲ
ಹರ್ತಿಕೋಟೆ
ಗೂಳಿಹೊಸಹಳ್ಳಿ
ತಾಳ್ಯ
ತವಂದಿ
ರಾಮಗಿರಿ
ಕಂದಿಕೆರೆ
ದೊಡ್ಡಗಟ್ಟ
ಬೋವಿಹಟ್ಟಿ
ಹಿರಿಯೂರು
ಜಾನಕಲ್ಲು
ಮಾಡದಕೆರೆ
ಶಿರಾ ತಾಲೂಕು
ತರೀಕೆರೆ ತಾಲೂಕು
ಅತ್ತಿಮೊಗೆ
ನಂದಿಹಳ್ಳಿ
ಹೊಸದುರ್ಗ
ಕೆಲ್ಲೋಡು
ಬಲ್ಲಾಳಸಮುದ್ರ
ಮಲ್ಲಾಪುರ
ಕಡೂರು ತಾಲೂಕು
ಚಿಕ್ಕನಾಯಕನಹಳ್ಳಿ ತಾಲೂಕು

ಸಂಕ್ಷೇಪಗಳು

ಸಂ– ಸಂಪುಟ

ಸಂ– ಸಂಪಾದಕರು

ಇ.ದ.ಸಂ– ಇತಿಹಾಸ ದರ್ಶನ ಸಂಪುಟ

ಲೇ– ಲೇಖಕರು

ಅನು– ಅನುವಾದಕರು

ಪ್ರಸಂ– ಪ್ರಧಾನ ಸಂಪಾದಕರು

ಸೆ– ಸೆಲ್ಸಿಯಸ್ಸ್

ಸೆಂ.ಮೀ– ಸೆಂಟಿ ಮೀಟರ್

ಕಿ.ಮೀ – ಕಿಲೋ ಮೀಟರ್

ಮಿ.ಮೀ– ಮಿಲಿ ಮೀಟರ್

ಕ್ರಿಪೂ– ಕ್ರಿಸ್ತ ಪೂರ್ವ

ಕ್ರಿಶ– ಕ್ರಿಸ್ತ ಶಕ

ಕ.ವಿ.ವಿ– ಕನ್ನಡ ವಿಶ್ವವಿದ್ಯಾಲಯ

ಎಂ.ಎ.ಆರ್– ಮೈಸೂರು ಆರ್ಕಿಯಾಲಾಜಿ ರಿಪೋರ್ಟ್

ಅಧ್ಯಾಯ ಒಂದು : ಪ್ರಸ್ತಾವನೆ

ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ, ಸ್ವರೂಪ

ಅಧ್ಯಾಯ - ಒಂದು

ಪ್ರಸ್ತಾವನೆ

ಚಿತ್ರದುರ್ಗ ಜಿಲ್ಲೆಯು ಭೌಗೋಳಿಕವಾಗಿ ಮಧ್ಯರಂಗವಾಗಿದೆ. ಹಾಗೆಯೇ ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನ ಹೊಂದಿದೆ. ಹವಮಾನ ಮತ್ತು ಉತ್ತಮ ಪರಿಸರವಿರುವ ಕಾರಣ ಪ್ರಸ್ತುತ ಜಿಲ್ಲೆಯಲ್ಲಿ ಪ್ರಾಗೈತಿಹಾಸಿಕ ಮಾನವರು ನಿರಂತರವಾಗಿ ವಾಸಮಾಡಲು ಸಾಧ್ಯವಾಗಿರುವುದು. 'ಚಿತ್ರದುರ್ಗ ಜಿಲ್ಲಾ ಪರಿಸರದ ಪ್ರಾಗಿತಿಹಾಸ' ಎಂಬ ಶೀರ್ಷಿಕೆಯಿಂದ ಕೂಡಿದ ಅಧ್ಯಯನವು ದಕ್ಷಿಣ ಕರ್ನಾಟಕದ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆಯುವುದು. ಜಿಲ್ಲಾ ಪರಿಸರದಲ್ಲಿ ಪ್ರಾಗಿತಿಹಾಸಕ್ಕೆ ಕುರಿತಾಗಿ ಲೇಖನಗಳು, ಕೃತಿಗಳು, ಪ್ರಕಟವಾಗಿವೆ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಉತ್ಖನನಗಳು ಪ್ರಾಗೈತಿಹಾಸಿಕ ಸಂಸ್ಕೃತಿಯನ್ನು ಅನಾವರಣಗೊಳಿಸಲು ಸಹಾಯಕವಾಗಿವೆ. ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಅವಶೇಷಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಹರಡಿವೆ.

ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸವನ್ನು ರಚಿಸಲು ಭೌಗೋಳಿಕ ಪರಿಸರ ಪ್ರಮುಖ ಪಾತ್ರವಹಿಸುವುದು. ಜಿಲ್ಲೆಯಲ್ಲಿ ಆರು ತಾಲೂಕುಗಳಿದ್ದು, ೧೦,೮೫೨ ಚ.ಕಿ.ಮೀ ವಿಸ್ತಾರವಾಗಿದೆ. ವಿಸ್ತಾರವಾದ ಜಿಲ್ಲೆಯಲ್ಲಿ ಅರಣ್ಯ, ಖನಿಜ, ಜಲ, ಸಸ್ಯ, ಶಿಲೆ ಹಾಗೂ ಪ್ರಾಣಿ ಸಂಪತ್ತಿಗೆ ಕೊರತೆಯಿಲ್ಲ. ಆಯುಧಗಳನ್ನು ತಯಾರಿಸಲು ಬೇಕಾದ ಡೈಕ್, ಕ್ವಾರ್ಟ್ಜ್, ಚರ್ಟ್, ಡೋಲರೈಟ್ ಶಿಲೆಗಳು ಹಾಗೂ ಲೋಹದ ವಸ್ತುಗಳನ್ನು ತಯಾರಿಸಲು ಅವಶ್ಯಕವಾದ ತಾಮ್ರ, ಚಿನ್ನ, ಬೆಳ್ಳಿ, ಕಬ್ಬಿಣ, ಮ್ಯಾಂಗನೀಸ್ ಖನಿಜಗಳು ಕಾಣಸಿಗುತ್ತವೆ. ಶಿಲಾಸಮಾಧಿ ರಚಿಸಲು ಗ್ರಾನೈಟ್ ಬಂಡೆಗಳು ಮತ್ತು ಚಿತ್ರಗಳನ್ನು ಕುಟ್ಟಿ ಮೂಡಿಸಲು ಬಯಲುಬಂಡೆಗಳು ಜಿಲ್ಲೆಯಲ್ಲಿವೆ. ಮುಖ್ಯವಾಗಿ ಪಶುಸಂಗೋಪನೆಗೆ ವೇದಾವತಿ

ನದಿ, ಜನಗಿಹಳ್ಳ ಮತ್ತು ಗುಂಡಿಹಳ್ಳದ ಬಯಲಿನಲ್ಲಿ ಹುಲ್ಲುಗಾವಲು ಹರಡಿರುವುದರಿಂದ ಮಾನವನು ವಾಸಿಸಲು ಉಪಯುಕ್ತವಾದ ಪರಿಸರವಾಗಿದೆ. ಆದುದರಿಂದ ಚಿತ್ರದುರ್ಗ ಪರಿಸರವು ಪ್ರಾಗಿತಿಹಾಸವನ್ನು ಅಧ್ಯಯನ ಮಾಡಲು ಅತ್ಯಂತ ಉಪಯುಕ್ತ ನೆಲೆಯೆಂಬುದಂತೂ ಸತ್ಯ.

ಪ್ರಾಗಿತಿಹಾಸದ ಅರ್ಥ:

ಮಾನವರ ವಿಕಸನದ ಹಾದಿಯಲ್ಲಿ ಶಿಲಾಯುಗ ಸಂಸ್ಕೃತಿಯು ಮೊಟ್ಟ ಮೊದಲಿಗೆ ಕಂಡುಬರುವುದು. ಪ್ರಾಗಿತಿಹಾಸ, ಪೂರ್ವಭಾವಿ ಇತಿಹಾಸ ಮತ್ತು ಇತಿಹಾಸ ಕಾಲಗಳು ಸಾಂಸ್ಕೃತಿಕ ವಿಕಸನದ ಅನುಕ್ರಮಾವಾದ ಹಂತಗಳಾಗಿವೆ. ಪ್ರಾಗಿತಿಹಾಸವನ್ನು ಆಂಗ್ಲ ಭಾಷೆಯಲ್ಲಿ prehistory ಎಂಬುದಾಗಿ ಕರೆಯಲಾಗುತ್ತಿದೆ. ಪ್ರಾಗಿತಿಹಾಸವೆಂದರೆ ಹಳೆಯ ಇತಿಹಾಸ, ಬರವಣಿಗೆಯ ಪೂರ್ವಕಾಲ ಎಂದು ಅರ್ಥೈಸಬಹುದು. ಮಡಕೆ, ಶಿಲೋಪಕರಣ, ಲೋಹದ ವಸ್ತುಗಳು, ಸಮಾಧಿ, ಮೂಳೆ, ವರ್ಣಚಿತ್ರ, ಬಯಲು ಬಂಡೆಚಿತ್ರಗಳು ಪ್ರಾಗಿತಿಹಾಸ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಶಿಲೋಪಕರಣಗಳು ಹೆಚ್ಚು ಬಳಕೆಯಾಗಿದ್ದರಿಂದ ಶಿಲಾಯುಗವೆಂದು ಕರೆಯಲಾಗುತ್ತಿದೆ. ಶಿಲೋಪಕರಣಗಳ ವ್ಯತ್ಯಾಸ ಮತ್ತು ಸಾಂಸ್ಕೃತಿಕ ಭಿನ್ನತೆಯ ಕಾರಣದಿಂದ ಶಿಲಾಯುಗವನ್ನು ಹಳೆ ಶಿಲಾಯುಗ (ಪೆಲಿಯೋಲಿಥಿಕ್), ಸೂಕ್ಷ್ಮ ಶಿಲಾಯುಗ (ಮೆಸೋಲಿಥಿಕ್), ನವ ಶಿಲಾಯುಗ (ನಿಯೋಲಿಥಿಕ್), ಬೃಹತ್ ಶಿಲಾಯುಗ (ಮೆಗಾಲಿಥಿಕ್) ಎಂಬುದಾಗಿ ವಿಂಗಡಿಸಲಾಗಿದೆ.

ಹಳೆಶಿಲಾಯುಗವನ್ನು ಮತ್ತೆ ಆದಿ, ಮಧ್ಯ, ಅಂತ್ಯ ಹಳೆಶಿಲಾಯುಗವೆಂದು ವಿಭಾಗಿಸಲಾಗಿರುವುದು[೧]. ಈ ಸುದೀರ್ಘ ಕಾಲದಲ್ಲಿ ಅಶ್ಯೂಲಿಯನ್, ಅಬ್ಬಿವಿಲಿಯನ್ ಸಂಸ್ಕೃತಿಯು ಬೆಳೆದಿದೆ[೨]. ಕರ್ನಾಟಕದಲ್ಲಿ ಅಬ್ಬಿವಿಲಿಯನ್ ಸಂಸ್ಕೃತಿಗಿಂತ ಅಶ್ಯೂಲಿಯನ್ ಸಂಸ್ಕೃತಿಯು ಹೆಚ್ಚಾಗಿ ಹರಡಿರುವುದು ಗಮನಾರ್ಹ[೩]. ಆದಿ ಹಳೆಶಿಲಾಯುಗದ ಶಿಲಾಕೊಡಲಿಯ ಹಿಡಿಕೆಯು ದಪ್ಪವಾಗಿದ್ದು, ಅಲಗು ಮೊನಚಾಗಿರುತ್ತದೆ. ಕರ್ನಾಟಕದಲ್ಲಿರುವ ಹುಣಸಗಿ ನೆಲೆಯು ಆದಿ ಹಳೆಶಿಲಾಯುದ ನೆಲೆಗೆ ಉತ್ತಮ ಉದಾಹರಣೆಯಾಗಿದೆ. ೧೯೫೫ರಲ್ಲಿ ಸಂಕಾಲಿಯಾ ಮಹಾರಾಷ್ಟ್ರದ ನೆವಾಸದಲ್ಲಿ ಮಧ್ಯಹಳೆಶಿಲಾಯುಗದ ಎರೆಯುವ, ಕೊರೆಯುವ ಆಯುಧಗಳನ್ನು ಉತ್ಖನನದ ಮೂಲಕ ಬೆಳಕಿಗೆ ತಂದಿದ್ದಾರೆ[೪]. ಈ ಆಯುಧಗಳು ಲಂಬ, ವರ್ತುಲ ಮತ್ತು ತ್ರಿಕೋನಾಕೃತಿಯಲ್ಲಿದ್ದಾವೆ[೫]. ಅಂತ್ಯ ಹಳೆಶಿಲಾಯುಗದಲ್ಲಿ ಒರೆ ಮೊನೆಗಳು, ನೀಳ

ಅಲುಗುಗಳು, ರಂಧ್ರಕಾರಕಗಳು ಪ್ರಮುಖವಾದ ಆಯುಧಗಳಾಗಿವೆ[೬]. ಪದ್ದಯ್ಯ ಅವರು ಗುಲ್ಬರ್ಗ ಜಿಲ್ಲೆಯ ಮರಳುಭಾವಿಯ ಪ್ರದೇಶದಲ್ಲಿ ಆದಿ, ಮಧ್ಯ, ಅಂತ್ಯ ಹಳೆಶಿಲಾಯುಗದ ಪದರವನ್ನು ಗುರುತಿಸಿದ್ದಾರೆ[೭]. ಈ ಮೂಲಕ ಹಳೆಶಿಲಾಯುಗವನ್ನು ಅರ್ಥೈಸಲಾಗಿದೆ.

ಸೂಕ್ಷ್ಮ ಶಿಲಾಯುಗವು ಹಳೆಶಿಲಾಯುಗದ ನಂತರ ಕಾಲವಾಗಿದೆ. ಪದ್ದಯ್ಯ ಅವರು ಮರಳುಭಾವಿ ನೆಲೆಯಲ್ಲಿ ಅಂತ್ಯಹಳೆಶಿಲಾಯುಗದ ಪದರಿನ ಮೇಲೆ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು ಗುರುತಿಸಿರುವುದು ಗಮನೀಯ ಸಂಗತಿ[೮]. ಜಕ್ರಾಸ್.ಡಿ.ಮಾರ್ಗನ್ ಅವರು ದೊರೆತಿರುವ ಆಯುಧಗಳನ್ನು ಬೇರ್ಪಡಿಸುವುದರ ಜೊತೆಗೆ ಸೂಕ್ಷ್ಮ ಶಿಲಾಯುಗವೆಂದು ಕರೆದವರಲ್ಲಿ ಮೊದಲಿಗರು[೯]. ಸೂಕ್ಷ್ಮ ಆಯುಧ ತಯಾರಿಕೆಯಲ್ಲಿ ಚರ್ಟ, ಅಗೇಟ್, ಕ್ವಾರ್ಟ್ಜ ಮೊದಲಾದ ಪ್ರಶಸ್ತಶಿಲೆಗಳನ್ನು ಬಳಸಿದ್ದಾರೆ[೧೦]. ಈ ಯುಗದ ಆಯುಧಗಳು ಬ್ರಹ್ಮಗಿರಿಯ ನವಶಿಲಾಯುಗದ ಕೆಳಗಿನ ಸ್ತರದಲ್ಲಿ ಕಂಡು ಬಂದಿರುವುದು ಪ್ರಮುಖ ವಿಚಾರವಾಗಿದೆ. ಈ ಮೂಲಕ ಸೂಕ್ಷ್ಮ ಶಿಲಾಯುಗದಿಂದ ಪ್ರಸ್ತುತ ಜಿಲ್ಲೆಯಲ್ಲಿ ಒಂದು ಕಡೆ ವಾಸಮಾಡುವುದಕ್ಕೆ ಆರಂಭಿಸಿದ್ದಾರೆಂದು ನಿರ್ಧರಿಸಬಹುದು.

ಬ್ರಹ್ಮಗಿರಿಯಲ್ಲಿ ಎಂ.ಎಚ್ ಕೃಷ್ಣ ಅವರು ಉತ್ಖನನಮಾಡಿ ನವಶಿಲಾಯುಗದ ಮತ್ತು ನವ ಶಿಲಾತಾಮ್ರಯುಗದ ಸ್ತರವನ್ನು ಗುರುತಿಸಿದ್ದಾರೆ[೧೧]. ಈ ಶೋಧವು ಕರ್ನಾಟಕದಲ್ಲಿ ಮೊದಲೆನಿಸಿದೆ. ಮಡಕೆ, ನಯವಾದ ಕಲ್ಲಿನ ಕೊಡಲಿ ಬಳಕೆ, ಪಶುಸಂಗೋಪನೆ ಹಾಗು ಕೃಷಿಯಲ್ಲಾದ ಹೊಸಕ್ರಾಂತಿಯಿಂದ ಸೂಕ್ಷ್ಮಶಿಲಾಯುಗದ ನಂತರದ ಕಾಲವು ನವಶಿಲಾಯುಗವೆಂದು ಗುರುತಿಸಿಕೊಂಡಿರುವುದು. ಈ ಯುಗದ ಮಾನವರು ನಯಗೊಳಿಸಿದ ಕಲ್ಲಿಕೊಡಲಿಯನ್ನು ಬಳಸಿದ್ದರಿಂದ ನಯಗೊಳಿಸಿದ ಕಲ್ಲಿನಕೊಡಲಿ ಸಂಸ್ಕೃತಿಯೆಂದು ಕರೆಯಲಾಗುತ್ತಿದೆ. ಕಲ್ಲಿನ ಕೊಡಲಿಯ ಜೊತೆಗೆ ತಾಮ್ರದ ವಸ್ತುಗಳು ದೊರೆತಿರುವ ಕಾರಣದಿಂದ ನವ ಶಿಲಾತಾಮ್ರಯುಗವೆಂದು ಕರೆಯಲಾಗಿರುವುದು. ನವಶಿಲಾಯುಗದ ಬೂದಿದಿನ್ನೆಗಳು, ವಸತಿನೆಲೆಗಳು ಪ್ರಸ್ತುತ ಜಿಲ್ಲೆಯಲ್ಲಿ ಹರಡಿವೆ. ಅಲ್ಲದೆ ವರ್ಣಚಿತ್ರ, ಬಯಲು ಬಂಡೆಚಿತ್ರಗಳು ಕಾಣಸಿಗುತ್ತವೆ.

ನವಶಿಲಾಯುಗದ ಮಾನವರು ಬೃಹತ್ ಶಿಲಾಯುಗದ ಆರಂಭದಲ್ಲಿ ಕಬ್ಬಿಣವನ್ನು ಆಯುಧಕ್ಕಾಗಿ ಬಳಸಿದ್ದಾರೆ[೧೨]. ಆದುದರಿಂದ ಕಬ್ಬಿಣಯುಗವೆಂದು ಕರೆದಿದ್ದಾರೆ. ತರುವಾಯ ಬೃಹತ್ ಬಂಡೆಗಳನ್ನು ಸೀಳುವುದು, ಉರುಳಿಸುವ ಕಲೆಯನ್ನು ರೂಢಿಸಿಕೊಂಡು ಬೃಹತ್ ಶಿಲಾಸಮಾಧಿಗಳನ್ನು ರಚಿಸಿದ್ದಾರೆ. ಈ ಕಾರಣದಿಂದ ಬೃಹತ್ ಶಿಲಾಯುಗವೆಂದು ಕರೆಯಲಾಗಿರುವುದು. ಚಕ್ರದ ಸಹಾಯದಿಂದ ತಯಾರಾದ

ಕಪ್ಪು ಮತ್ತು ಕೆಂಪು ಮಡಕೆಗಳು ಪ್ರಸ್ತುತ ಯುಗದಲ್ಲಿ ಕಂಡುಬರುತ್ತವೆ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಲ್ಲಿ ವಸತಿನೆಲೆ ಹಾಗು ಸಮಾಧಿ ನೆಲೆಗಳ ಉತ್ಖನನವು ಪ್ರಮುಖ ಆಧಾರವಾಗಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ನವಶಿಲಾಯುಗಕ್ಕಿಂತ ಬೃಹತ್ ಶಿಲಾಯುಗದ ಅವಶೇಷಗಳು ಹೆಚ್ಚು ವಿಸ್ತಾರವಾಗಿ ಹರಡಿವೆ.

ಉದ್ದೇಶ

ಪ್ರಾಚೀನ ಮಾನವನ ಬಹುದೊಡ್ಡ ನೆಲೆಗಳಾದ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಗಳಲ್ಲಿ ಮೊಟ್ಟ ಮೊದಲು ಉತ್ಖನನವಾಗಿದೆ. ಈ ಉತ್ಖನನವು ಕರ್ನಾಟಕದಲ್ಲಿ ಪ್ರಾಗಿತಿಹಾಸವನ್ನು ಮೊಟ್ಟಮೊದಲು ವೈಜ್ಞಾನಿಕ ದೃಷ್ಟಿಕೋನದಿಂದ ನೋಡಲು ಸಾಧ್ಯವಾಗಿಸಿದೆ.

ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಕರ್ನಾಟಕ ಹಾಗೂ ಭಾರತದ ಪ್ರಾಗಿತಿಹಾಸವನ್ನು ಒರೆಹಚ್ಚುವ ಉದ್ದೇಶವು ಪ್ರಸ್ತುತ ಅಧ್ಯಯನದ್ದು.

ಕರ್ನಾಟಕದಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಂಡುಬಂದಿರುವುದು ಸತ್ಯ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಗಳು ಕಂಡುಬರುವುದಲ್ಲದೆ, ಕಾಲಾನುಕ್ರಮಣಿಕೆಯಲ್ಲಿ ಪ್ರಾಗಿತಿಹಾಸವನ್ನು ರಚಿಸುವಷ್ಟು ಅವಶೇಷಗಳಿರುವುದು ಪ್ರಮುಖ ಸಂಗತಿ. ಇಷ್ಟೇ ಅಲ್ಲದೆ ಬೃಹತ್ ಶಿಲಾಸಮಾಧಿಗಳು, ಬಯಲು ಬಂಡೆ ರೇಖಾಚಿತ್ರಗಳು ಯಥೇಚ್ಚವಾಗಿ ಗಮನಸೆಳೆಯುತ್ತವೆ. ಆದ್ದರಿಂದ ಪ್ರಾಗೈತಿಹಾಸಿಕ ನೆಲೆಗಳನ್ನು ಇವೆಲ್ಲವುಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸುವುದು ಮುಖ್ಯವಾಗಿದೆ.

ಕುಟ್ಟುಚಿತ್ರ ಮತ್ತು ವರ್ಣಚಿತ್ರಗಳು ಬಯಲು ಬಂಡೆ ಹಾಗೂ ಕಲ್ಲಾಸರೆಗಳ ಮೇಲೆ ರಚಿತವಾಗಿವೆ. ಅಲ್ಲದೆ ಅವು ಅಂದಿನ ಜನರ ಕಲಾಭಿರುಚಿ, ತಂತ್ರಜ್ಞಾನ ಮತ್ತು ಪಶುಸಂಗೋಪನೆಯ ಮಹತ್ವವನ್ನು ತಿಳಿಸುತ್ತವೆ. ಆದರೆ ಇಂದಿನ ಆಧುನಿಕ ಮಾನವನ ಕಲ್ಲು ಗಣಿಗಾರಿಕೆಯಿಂದ ಅವು ವಿನಾಶವಾಗುತ್ತಿವೆ. ಇದೇ ರೀತಿ ಸಮಾಧಿ ಹಾಗೂ ವಸತಿನೆಲೆಗಳು ಕೃಷಿಯ ವಿಸ್ತರಣೆಯಿಂದ ನಾಶವಾಗುತ್ತಿರುವುದರಿಂದ ಅವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅತ್ಯಂತ ಜರೂರಾಗಿದೆ.

ಹಳೇಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗಿನ ಅವಶೇಷಗಳು ಚಿತ್ರದುರ್ಗ ಜಿಲ್ಲೆಯಾದ್ಯಂತ ಹರಡಿವೆ. ಜಿಲ್ಲೆಯಲ್ಲಿ ಕಂಡುಬಂದಿರುವ ಅವಶೇಷಗಳು ಹೋಲಿಕೆಯಲ್ಲಿ ವಿಭಿನ್ನವಾಗಿವೆ. ಚಂದ್ರವಳ್ಳಿ ನೆಲೆಯಲ್ಲಿ ದೊರೆತಿರುವ ಮಡಕೆಗಳಿಗಿಂತ ಬ್ರಹ್ಮಗಿರಿಯ ಮಡಕೆಗಳು ಹೆಚ್ಚು ಸುಧಾರಿತಗೊಂಡಿವೆ. ಬ್ರಹ್ಮಗಿರಿ ಪರಿಸರದ ಸಮಾಧಿಗಳಿಗಿಂತ

ಚಿತ್ರದುರ್ಗ ಪರಿಸರದ ಸಮಾಧಿಗಳು ಕಾಲಾನುಕ್ರಮವಾಗಿ ಪ್ರಾಚೀನವಾದವುಗಳೆಂಬುದನ್ನು ಸ್ಪಷ್ಟಪಡಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ವ್ಯಾಪ್ತಿ:

ಯಾವುದೇ ಸಂಶೋಧನೆ ಯಶಸ್ವಿಯಾಗಬೇಕಾದರೆ ವ್ಯಾಪ್ತಿ ಅಗತ್ಯ. ಚೌಕಟ್ಟಿನ ಒಳಗೆ ಕ್ರಮಬದ್ಧತೆಯಿಂದ ಅಧ್ಯಯನಗಳಾದಾಗ ಸ್ಪಷ್ಟವಾದ ಇತಿಹಾಸ ರಚಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನವು ಚಿತ್ರದುರ್ಗ ಜಿಲ್ಲೆಗೆ ಸೀಮಿತವಾಗಿದೆ. ಹಾಗಿದ್ದೂ ಪ್ರಾಗಿತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾಗಿರುವುದರಿಂದ ಕರ್ನಾಟಕದಲ್ಲಿ ಇದುವರೆಗೆ ನಡೆದ ಅಧ್ಯಯನಗಳು ಹಾಗೂ ಉತ್ಖನನಗೊಂಡ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲಾ ಪರಿಸರದ ಭೌಗೋಳಿಕ ಹಾಗೂ ಪ್ರಾಗಿತಿಹಾಸವನ್ನು ಸಮಗ್ರವಾಗಿ ನೋಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಮೊಳಕಾಲ್ಮೂರು ತಾಲೂಕಿನಲ್ಲಿ ಕಂಡುಬಂದಿರುವ ಪ್ರಾಗೈತಿಹಾಸಿಕ ಅವಶೇಷಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿವೆ.

ಪ್ರಾಗಿತಿಹಾಸವನ್ನು ಅರ್ಥೈಸುವಂತೆ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಬೃಹತ್ ಶಿಲಾಯುಗದಲ್ಲಿನ ಜನರ ಸಾಂಸ್ಕೃತಿಕ ಚಟುವಟಿಕೆಗಳನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

ಪ್ರತಿಯೊಂದು ಅಧ್ಯಯನಕ್ಕೆ ಕಾಲಮಿತಿ ಅತ್ಯವಶ್ಯಕ. ಅದರಂತೆ ಪ್ರಸ್ತುತ ಕ್ರಿ.ಪೂ ಒಂದು ಲಕ್ಷವರ್ಷದಿಂದ ಕ್ರಿ.ಪೂ ಮುನ್ನೂರವರೆಗಿನ ಕಾಲಮಿತಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನ ಸಮೀಕ್ಷೆ:

ಪ್ರಾಗಿತಿಹಾಸ ಅಧ್ಯಯನದ ಪಿತಾಮಹನಾದ ರಾಬರ್ಟ್ ಬ್ರೂಸ್‌ಪೂಟ್ ಚಿತ್ರದುರ್ಗ ಜಿಲ್ಲೆಯ ತಾಳ್ಯದಲ್ಲಿ ಹಳೆ ಶಿಲಾಯುಗದ ಆಯುಧಗಳನ್ನು ಶೋಧಿಸಿದವರಲ್ಲಿ ಮೊದಲಿಗರು[೧೩]. ಎಂ.ಶೇಷಾದ್ರಿ ಜಾನಕಲ್ಲು ಪರಿಸರದಲ್ಲಿ ಹಳೆಶಿಲಾಯುಗದ ಆಯುಧಗಳನ್ನು ಶೋಧಿಸಿದವರಲ್ಲಿ ಎರಡನೆಯವರು[೧೪]. ನಾಗರಾಜಪ್ಪ.ಎಸ್ ಜೊತೆ ಕ್ಷೇತ್ರ ಮಾಡುವಾಗ ಕೂನಬೇವಿನಲ್ಲಿ ಆದಿ ಹಳೆಶಿಲಾಯುಗದ ಆಯುಧವನ್ನು ಶೋಧಿಸಿದ್ದೇವೆ[೧೫]. ಎಸ್.ನಾಗರಾಜಪ್ಪ ಗೊಡಬನಾಳ್ ಗ್ರಾಮದಲ್ಲಿ ಆದಿ ಹಳೆಶಿಲಾಯುಗದ ಆಯುಧವನ್ನು

ಶೋಧಿಸಿದ್ದಾರೆ[೧೬]. ಕ್ಷೇತ್ರಕಾರ್ಯದಲ್ಲಿ ಕೂನಬೇವು ಮತ್ತು ಸಂಗೇನಹಳ್ಳಿಕೆರೆಯಲ್ಲಿ ಮಧ್ಯ ಹಳೆಶಿಲಾಯುಗದ ಆಯುಧವನ್ನು ಶೋಧಿಸಿದ್ದೇನೆ. ಎಸ್.ವೈ.ಸೋಮಶೇಖರ್ ಜೊತೆಗೂಡಿ ಕ್ಷೇತ್ರಕಾರ್ಯ ಮಾಡುವಾಗ ಮತ್ತೊಂದು ಮಧ್ಯ ಹಳೆಶಿಲಾಯುಗದ ಆಯುಧವು ಸಂಗೇನಹಳ್ಳಿಕೆರೆಯಲ್ಲಿ ದೊರೆತಿದೆ. ಎಸ್.ಜಿ.ರಾಮದಾಸರೆಡ್ಡಿ ಯಾದಲಗಟ್ಟೆ ನೆಲೆಯಲ್ಲಿ ಅಂತ್ಯ ಹಳೆಶಿಲಾಯುಗದ ಆಯುಧವನ್ನು ಶೋಧಿಸಿದ್ದಾರೆ[೧೭].

ಸ್ಥಿತ್ಯಂತರಗೊಳ್ಳುತ್ತಿರುವ ಕಾಲವಾದ ಸೂಕ್ಷ್ಮ ಶಿಲಾಯುಗವು ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಬಹುಮುಖ್ಯವಾದದ್ದು. ಜಕ್ರಾಸ್.ಡಿ.ಮಾರ್ಗನ್ ಸೂಕ್ಷ್ಮ ಶಿಲಾಯುಗವೆಂದು ಕರೆದವರಲ್ಲಿ ಮೊದಲಿಗರು[೧೮]. ಇವರು ತೋರಿಸಿದ ದಾರಿಯಲ್ಲಿ ಸಾಕಷ್ಟು ನೆಲೆಗಳು ಕರ್ನಾಟಕದಲ್ಲಿ ಶೋಧಗೊಂಡಿವೆ. ಬ್ರಹ್ಮಗಿರಿಯಲ್ಲಿ ಎಂ.ಎಚ್.ಕೃಷ್ಣ ಉತ್ಖನನ ಮಾಡಿ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು ಸಂಗ್ರಹಿಸಿದ್ದಾರೆ. ಮಾರ್ಟಿಮರ್ ವಿಲ್ಹರ್ ೧೯೪೭–೧೯೪೮ರಲ್ಲಿ ಬ್ರಹ್ಮಗಿರಿಯಲ್ಲಿ ಉತ್ಖನನ ಮಾಡಿದಾಗ ಸೂಕ್ಷ್ಮ ಆಯುಧಗಳು ದೊರೆತಿರುವುದು ದಾಖಲಾಗಿದೆ[೧೯]. ಜಯಣ್ಣ.ಯು. ಮೊಳಕಾಲ್ಮೂರು ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಗಳನ್ನು ಶೋಧಿಸಿ ತಮ್ಮ ಮಹಾಪ್ರಬಂಧದಲ್ಲಿ ಪ್ರಕಟಿಸಿದ್ದಾರೆ. ಎಸ್.ಜಿ.ರಾಮದಾಸರೆಡ್ಡಿ ಚಳ್ಳಕೆರೆ ತಾಲೂಕಿನಲ್ಲಿ ಸಂಶೋಧಿಸಿ ಬೊಮ್ಮನಕುಂಟೆಯು ಆಯುಧಗಳ ತಯಾರಿಕೆಯ ಕೇಂದ್ರವಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ[೨೦]. ಎನ್.ಎಸ್. ಮಹಾಂತೇಶ್ ಹೊಸದುರ್ಗ ತಾಲೂಕಿನಲ್ಲಿ ಸೂಕ್ಷ್ಮ ಆಯುಧವನ್ನು ಶೋಧಿಸಿ ತಮ್ಮ ಮಹಾಪ್ರಬಂಧವಾದ ಹೊಸದುರ್ಗ ತಾಲೂಕು ಪರಿಸರ: ಸಾಂಸ್ಕೃತಿಕ ಅಧ್ಯಯನದಲ್ಲಿ ದಾಖಲಿಸಿದ್ದಾರೆ. ನಾಗರಾಜಪ್ಪ.ಎಸ್. ಜೊತೆಗೆ ಕ್ಷೇತ್ರಕಾರ್ಯ ಮಾಡಿ ಜೆ.ಎನ್.ಕೋಟೆಯಲ್ಲಿ ಸೂಕ್ಷ್ಮ ಶಿಲಾಯುಧಗಳನ್ನು ಶೋಧಿಸಿದ್ದೇವೆ.

ನವ ಶಿಲಾಯುಗದ ನೆಲೆಗಳಲ್ಲಿ ಆಯುಧಗಳು ಮಾತ್ರ ದೊರೆತಿರುವ ನೆಲೆಗಳು ಹಾಗೂ ವಸತಿ ನೆಲೆಗಳು ಮತ್ತು ಬೂದಿ ದಿನ್ನೆಗಳು ಕಾಣಸಿಗುತ್ತವೆ. ಕರ್ನಾಟಕದಲ್ಲಿ ನ್ಯೂಬೋಲ್ಡ್ ಕುಡುತಿನಿ ನೆಲೆಯಲ್ಲಿ ಮೊಟ್ಟ ಮೊದಲಬಾರಿಗೆ ನಯವಾದ ಕಲ್ಲಿನ ಕೊಡಲಿಯನ್ನು ಶೋಧಿಸಿದ್ದಾರೆ[೨೧]. ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ ಬಯಲಿನಲ್ಲಿ ಆರ್.ನರಸಿಂಹಾಚಾರ್ ಕಲ್ಲಿನಕೊಡಲಿ ಶೋಧಿಸಿದವರಲ್ಲಿ ಮೊದಲಿಗರು[೨೨]. ಎಂ.ಎಚ್. ಕೃಷ್ಣ ಚಂದ್ರವಳ್ಳಿಯಲ್ಲಿ ನವ ಶಿಲಾಯುಗದ ಅವಶೇಷಗಳನ್ನು ಶೋಧಿಸಿದವರಲ್ಲಿ ಎರಡನೆಯವರು. ಮಾರ್ಟಿಮರ್ ವಿಲ್ಹರ್ ಚಂದ್ರವಳ್ಳಿ ಹಾಗೂ ಬ್ರಹ್ಮಗಿರಿಯಲ್ಲಿ ಉತ್ಖನನಮಾಡಿ ನವ ಶಿಲಾಯುಗದ ಸ್ತರವನ್ನು ಗುರುತಿಸಿದ್ದಾರೆ[೨೩]. ಬ್ರಹ್ಮಗಿರಿ ನೆಲೆಯಲ್ಲಿ ಎಂ.ಎಚ್.ಕೃಷ್ಣ, ವಿಲ್ಹರ್‌ಗಿಂತ ಮುಂಚೆ ಉತ್ಖನನಮಾಡಿ ಅವಶೇಷಗಳನ್ನು

ಆಧರಿಸಿ ನಿಯೋಚಾಲ್ಕೋಲಿಥಿಕ್ ಸಂಸ್ಕೃತಿ ಎಂದು ಕರೆದಿದ್ದಾರೆ[೨೪]. ೧೯೭೭-೭೮ರಲ್ಲಿ ವಿ.ಕೆ.ಮಿಶ್ರ, ಕೆ.ವಿ.ರಾವ್, ಎನ್.ಎಸ್.ರಂಗರಾಜ್ ಬ್ರಹ್ಮಗಿರಿ ಪರಿಸರದಲ್ಲಿ ಬೂದುಬಣ್ಣದ ಪಾತ್ರೆಗಳು ಹಾಗೂ ಕಲ್ಲಿನ ಕೊಡಲಿಗಳನ್ನು ಪತ್ತೆ ಮಾಡಿದ್ದಾರೆ[೨೫]. ಅ.ಸುಂದರ ಮೊಟ್ಟಮೊದಲಿಗೆ ನವ ಶಿಲಾಯುಗದ ವರ್ಣಚಿತ್ರಗಳನ್ನು, ಗೀರು ಚಿತ್ರಗಳನ್ನು ಬ್ರಹ್ಮಗಿರಿ, ಜಟಂಗಿರಾಮೇಶ್ವರದಲ್ಲಿ ಶೋಧಿಸಿದ್ದಾರೆ[೨೬]. ಶ್ರೀಶೈಲ ಆರಾಧ್ಯ ಚಿತ್ರದುರ್ಗ, ಚಂದ್ರವಳ್ಳಿ, ಬ್ರಹ್ಮಗಿರಿ ಪರಿಸರದಲ್ಲಿ ವರ್ಣಚಿತ್ರ ಮತ್ತು ಬಯಲುಬಂಡೆ ಚಿತ್ರಗಳನ್ನು ಶೋಧಿಸಿದ್ದಾರೆ[೨೭]. ಹೆಚ್.ತಿಪ್ಪೇಸ್ವಾಮಿ ನುಂಕೆಮಲೆ ಪರಿಸರದಲ್ಲಿ[೨೮], ಎಸ್.ತಿಪ್ಪೇಸ್ವಾಮಿ ಮತ್ತು ಎಸ್.ವೈ.ಸೋಮಶೇಖರ್ ಸಂತೇಗುಡ್ಡದಲ್ಲಿ ವರ್ಣಚಿತ್ರಗಳನ್ನು ಪತ್ತೆ ಮಾಡಿದ್ದಾರೆ[೨೯]. ಜಿ.ಸಿ.ಚೌಲೆ ಮತ್ತು ಕೆ.ವೆಂಕಟೇಶ್ವರರಾವ್ ಚಿತ್ರದುರ್ಗ, ಬಾರ್ಲಗೊಂದಿಯಲ್ಲಿ, ಲಕ್ಷ್ಮಣ್ ತೆಲಗಾವಿ ಮತ್ತು ಎಸ್.ವೈ.ಸೋಮಶೇಖರ್ ಸಂಗೇನಹಳ್ಳಿಕೆರೆ ಬಯಲಿನಲ್ಲಿ, ಮುತ್ತುರಾಜ್ ಮಾಳಪ್ಪನಗುಡ್ಡದಲ್ಲಿ, ಎನ್.ಎಸ್.ರಂಗರಾಜು ಪರಶುರಾಂಪುರದಲ್ಲಿ[೩೦], ಮೊಳಕಾಲ್ಮೂರು ಪರಿಸರದಲ್ಲಿ ಜಯಣ್ಣ.ಯು, ಎಸ್.ಜಿ.ರಾಮದಾಸರೆಡ್ಡಿ ಹಿರಿಯೂರು ಮತ್ತು ಚಳ್ಳಕೆರೆ ಪರಿಸರದಲ್ಲಿ, ಎನ್.ಎಸ್.ಮಹಾಂತೇಶ್ ಹೊಸದುರ್ಗ ಪರಿಸರದಲ್ಲಿ, ಶರತ್‌ಬಾಬು.ಕೆ.ಎಸ್. ಮತ್ತು ನಾಗರಾಜಪ್ಪ.ಎಸ್. ಕೂನಬೇವು ಪರಿಸರದಲ್ಲಿ, ವಿರೂಪಾಕ್ಷಿ ಪೂಜಾರಹಳ್ಳಿ ಎನ್.ಗೌರೀಪುರದಲ್ಲಿ, ಬಿ.ಟಿ.ಚಾರುಲತ ಬ್ರಹ್ಮಗಿರಿ ಪರಿಸರದಲ್ಲಿ, ಎಸ್.ವೈ.ಸೋಮಶೇಖರ್ ಹಿರಿಯೂರಿನ ಸೋಮೇರಹಳ್ಳಿ ನವ ಶಿಲಾಯುಗದ ಅವಶೇಷಗಳನ್ನು ಶೋಧಿಸಿ ಲೇಖನ, ಕೃತಿಗಳಲ್ಲಿ ಪ್ರಕಟಿಸಿದ್ದಾರೆ.

ಬೃಹತ್ ಶಿಲಾಯುಗದ ಸಮಾಧಿ ನೆಲೆಗಳು, ವಸತಿ ನೆಲೆಗಳು ಜಿಲ್ಲೆಯಲ್ಲಿ ಹರಡಿವೆ. ರಾಬರ್ಟ್ ಬ್ರೂಸ್‌ಪೂಟ್ ತಾಳ್ಯದಲ್ಲಿ, ಬಿ.ಎಲ್.ರೈಸ್ ಐಮಂಗಲ, ಚಂದ್ರವಳ್ಳಿಯಲ್ಲಿ ಬೃಹತ್ ಶಿಲಾಗೋರಿಗಳನ್ನು ಶೋಧಿಸಿದವರಲ್ಲಿ ಮೊದಲಿಗರು[೩೧]. ಬಯಲುಬಂಡೆ ಚಿತ್ರಗಳನ್ನು ಅ.ಸುಂದರ ಬ್ರಹ್ಮಗಿರಿ ಪರಿಸರದಲ್ಲಿ ಶೋಧಿಸಿ ಬೆಳಕಿಗೆ ತಂದಿದ್ದಾರೆ[೩೨]. ಲಕ್ಷ್ಮಣ್ ತೆಲಗಾವಿ, ಎಸ್.ತಿಪ್ಪೇಸ್ವಾಮಿ, ಶ್ರೀಶೈಲ ಆರಾಧ್ಯ, ಎನ್.ಎಸ್. ಮಹಂತೇಶ್, ಜಯಣ್ಣ.ಯು, ಎಸ್.ಜಿ.ರಾಮದಾಸರೆಡ್ಡಿ ತಮ್ಮ ಕ್ಷೇತ್ರ ಕಾರ್ಯದ ಮೂಲಕ ಬಯಲು ಬಂಡೆ ಚಿತ್ರಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಬೆಳಕಿಗೆ ತಂದಿದ್ದಾರೆ. ಎಂ.ಎಚ್.ಕೃಷ್ಣ ಮತ್ತು ಮಾರ್ಟಿಮರ್ ವೀಲ್ಹರ್ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯಲ್ಲಿ ಉತ್ಖನನ ಮಾಡಿ ಬೃಹತ್ ಶಿಲಾಯುಗದ ಸಂಸ್ಕೃತಿಯನ್ನು ಬೆಳಕಿಗೆ ತಂದಿರುವರು. ವಿ.ಡಿ.ಕೃಷ್ಣಸ್ವಾಮಿ ಮೊಳಕಾಲ್ಮೂರು ನೆಲೆಯಲ್ಲಿ, ಕೆ.ವೆಂಕಟೇಶ್ವರರಾವ್ ಜಂಪಣ್ಣನಾಯಕನ

ಕೋಟೆಯಲ್ಲಿ[೩೩], ಶೇಷಾದ್ರಿ.ಎಂ. ತುರುವನೂರಿನಲ್ಲಿ[೩೪], ಎಸ್.ಜಿ.ರಾಮದಾಸರೆಡ್ಡಿ ಚಳ್ಳಕೆರೆ ಮತ್ತು ಹಿರಿಯೂರು ಭಾಗಗಳಲ್ಲಿ, ಜಯಣ್ಣ.ಯು. ಮೊಳಕಾಲ್ಮೂರು ತಾಲೂಕಿನಲ್ಲಿ, ಎನ್.ಎಸ್.ಮಹಾಂತೇಶ್ ಹೊಸದುರ್ಗ ತಾಲೂಕಿನಲ್ಲಿ, ಎಸ್.ವೈ.ಸೋಮಶೇಖರ್ ಮತ್ತು ಎಸ್.ತಿಪ್ಪೇಸ್ವಾಮಿ ಚಿತ್ರದುರ್ಗ ತಾಲೂಕಿನಲ್ಲಿ ಬೃಹತ್ ಶಿಲಾಗೋರಿಗಳನ್ನು ಶೋಧಿಸಿರುವರು. ಕ್ಷೇತ್ರಕಾರ್ಯದಲ್ಲಿ ಸುಲ್ತಾನಿಪುರ, ಗುಹೇಶ್ವರಪ್ಪನ ಗುಡ್ಡದಲ್ಲಿ ಬೃಹತ್ ಶಿಲಾಯುಗದ ಗೋರಿಗಳನ್ನು ಶೋಧಿಸಿದ್ದೇನೆ. ಬುರುಡೇಕಟ್ಟೆ ಮಂಜಪ್ಪ, ಮೀರಸಾಬಿಹಳ್ಳಿ ಶಿವಣ್ಣ, ಕೊಂಡ್ಲಹಳ್ಳಿ ಜಯಪ್ರಕಾಶ್ ಮೊದಲಾದವರು ಪ್ರಾಗಿತಿಹಾಸ ಸಂಶೋಧನೆಯಲ್ಲಿ ಆಸಕ್ತಿ ವಹಿಸಿದ್ದಾರೆ.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧ನ್ನು ಸೂರ್ಯನಾಥ.ಯು. ಕಾಮತ್ ಅವರು ಕರ್ನಾಟಕ ಸರ್ಕಾರದ ನೆರವಿನಿಂದ ರಚಿಸಿ ೧೯೮೪ರಲ್ಲಿ ಬಿಡುಗಡೆ ಮಾಡಿದ್ದಾರೆ. ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೩ನ್ನು ಕರ್ನಾಟಕ ಸರ್ಕಾರದ ನೆರವಿನಿಂದ ಸೂರ್ಯನಾಥ್.ಯು.ಕಾಮತ್ ೧೯೮೬ರಲ್ಲಿ ಬೆಳಕಿಗೆ ತಂದಿದ್ದಾರೆ. ಇದರಲ್ಲಿ ಪ್ರಾಚೀನ ಚಿತ್ರದುರ್ಗವನ್ನು ವಿವರಿಸಲಾಗಿದೆ. ಚಿತ್ರದುರ್ಗ ದರ್ಶಿನಿ ಎಂಬ ಗ್ರಂಥವು ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಮತ್ತು ಹುಲ್ಲೂರು ಶ್ರೀನಿವಾಸರ ಶ್ರಮದಿಂದ ೧೯೮೦ರಲ್ಲಿ ಪ್ರಕಟಣೆಯಾಗಿದೆ. ಈ ಕೃತಿಯಲ್ಲಿ ಚಿತ್ರದುರ್ಗವನ್ನು ಸುಳ್ಗಲ್ಲು, ಚಿಮ್ಮತ್ತನಕಲ್ಲು, ಬ್ರಹ್ಮಪುರಿ, ಛತ್ರಕಲ್ಲು, ಫರೂಕಬಾದ್, ಚಿನ್ಮೂಲಾದ್ರಿ, ಹಿಡಿಂಬಿಪಟ್ಟಣ ಎಂಬ ಹೆಸರುಗಳಿಂದ ಕರೆಯಲ್ಪಟ್ಟಿರುವ ಮಾಹಿತಿಯಿದೆ. ಚಿತ್ರದುರ್ಗ ಜಿಲ್ಲಾ ದರ್ಶಿನಿ ಟಿ. ಗಿರಿಜ ಅವರು ರಚನೆ ಮಾಡಿದ್ದಾರೆ. ಇವರು ಸಂಗ್ರಹಿಸಿದ ಕೃತಿಯಲ್ಲಿ ಪ್ರತಿಯೊಂದು ಹಳ್ಳಿಯ ಐತಿಹಾಸಿಕ ಅಂಶಗಳು ಅಡಗಿವೆ. ಅ.ಸುಂದರ ಅವರು ರಚಿಸಿದ ಇತಿಹಾಸ ಪೂರ್ವ ಕರ್ನಾಟಕ ಅಥವಾ ಕರ್ನಾಟಕ ಪ್ರಾಗೈತಿಹಾಸ ಎಂಬ ಕೃತಿಯು ೧೯೭೧ರಲ್ಲಿ ಪ್ರಕಟಣೆಯಾಗಿದೆ. ಈ ಕೃತಿಯಲ್ಲಿ ಬೃಹತ್ ಶಿಲಾಯುಗದ ಮಾನವರು ನವಶಿಲಾಯುಗದ ಪರಿವರ್ತನೆಯ ಜನಾಂಗದವರಾಗಿದ್ದಾರೆ ಎಂಬ ಮಾಹಿತಿ ಇದೆ. ಕರ್ನಾಟಕ ಪರಂಪರೆ ಸಂಪುಟ-೧ ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ೨೦೦೬ರಂದು ಪ್ರಕಟಣೆಗೊಂಡಿದ್ದು, ಇದರಲ್ಲಿ ಪ್ರಾಗಿತಿಹಾಸಕ್ಕೆ ಸಂಬಂಧಿಸಿದಂತೆ ಸಂಶೋಧನಾ ಲೇಖನಗಳಿವೆ. ಪುರಾತನ ಜಗತ್ತಿನ ಇತಿಹಾಸ ಎಂಬ ಗ್ರಂಥವನ್ನು ಎಫ್. ಕರೋವ್ಕಿನ್ ಎಂಬುವರು ೧೯೮೭ರಲ್ಲಿ ಪ್ರಕಟಿಸಿದರು. ಇದರಲ್ಲಿ ಆದಿಮಾನವನು ಈಗಿನ ಮನುಷ್ಯರ ತರಹ ಸ್ಫುಟವಾಗಿ ಮಾತನಾಡಲು ಪ್ರಯತ್ನಿಸಿದ್ದು ೩೦ ಸಾವಿರ ವರ್ಷಗಳ ಹಿಂದೇ ಎಂಬ ಸ್ಪಷ್ಟ

ಮಾಹಿತಿ ಇರುವುದು. ಚಿತ್ರಗಳಲ್ಲಿ ಚರಿತ್ರೆ ಎನ್ನುವ ಗ್ರಂಥವನ್ನು ಗಾಯತ್ರಿ ಅವರು ೨೦೦೫ರಂದು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೨೦೦ ಮಿಲಿಯನ್ ವರ್ಷಗಳ ಹಿಂದೆ ೭ ಖಂಡಗಳು ಒಂದಕ್ಕೊಂದು ಅಂಟಿಕೊಂಡಿದ್ದವು, ೬೫ ಮಿಲಿಯನ್ ವರ್ಷಗಳಲ್ಲಿ ಅಂತರ ಹೆಚ್ಚಾಯಿತು, ಸುಮಾರು ೧೦ ಸಾವಿರ ವರ್ಷಗಳ ಹಿಂದೆ ಪೂರ್ವ ಯೂರೋಪಿನಲ್ಲಿ ನೆಲೆಸಿದ್ದ ಜನರು ಮನೆಯಲ್ಲಿ ಬೆಚ್ಚಗಿರಲು ಮೂಳೆಗಳನ್ನು ಒಲೆಯಲ್ಲಿ ಹಾಕಿ ಉರಿಸುತ್ತಿದ್ದರು, ಬೆಂಕಿಯನ್ನು "ಹೋಮೋ ಎರಕ್ಟಸ್" ಮಾನವ ಕಂಡು ಹಿಡಿದ ಎಂಬ ಹಲವಾರು ವಿಚಾರಗಳಿವೆ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ಕೃತಿಯನ್ನು ಅ.ಸುಂದರ ಅವರು ೧೯೭೩ರಲ್ಲಿ ಪ್ರಕಟಿಸಿದ್ದಾರೆ. ಈ ಗ್ರಂಥವು ಉತ್ಖನನಗೊಂಡ ವರದಿಯಾಗಿದೆ. Heggadehalli Excavation ೧೯೯೫ Report ೧೯೯೬ರಲ್ಲಿ ಪುರಾತತ್ವ ಇಲಾಖೆ ಮತ್ತು ವಸ್ತು ಸಂಗ್ರಾಹಲಯ ಪ್ರಕಟಿಸಿದೆ. ಈ ಉತ್ಖನನವನ್ನು ಡಾಕ್ಟರ್ ಡಿ.ವಿ.ದೇವರಾಜ್ ಅವರು ಮಾಡಿದ್ದು, ಸಿ.ಎಸ್.ಪಾಟೀಲ್, ಎನ್.ವಿ.ಜೋಶಿ, ಟಿ.ಎಸ್.ಗಂಗಾಧರ ಅವರು ಸಹಾಯಕರಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಪುರಾತತ್ವ ನೆಲೆಗಳು ಎಂಬ ಗ್ರಂಥವು ಕೆ.ಬಿ.ಶಿವತಾರಕ ಅವರು ೨೦೦೧ರಲ್ಲಿ ಪ್ರಕಟಿಸಿದ್ದಾರೆ. ಇದು ಶಿಲಾಯುಗದ ಸಂಸ್ಕೃತಿಯ ನೆಲೆಗಳ ಮಾಹಿತಿಯನ್ನು ಒಳಗೊಂಡಿದೆ. ಐತಿಹಾಸಿಕ ಚಿತ್ರದುರ್ಗ ಎಂಬ ಲೇಖನ ಗ್ರಂಥವನ್ನು ಲಕ್ಷ್ಮಣ್ ತೆಲಗಾವಿ ಮತ್ತಿತರರು ೧೯೭೮ರಲ್ಲಿ ಬಿಡುಗಡೆ ಮಾಡಿದ್ದಾರೆ. ಈ ಕೃತಿಯಲ್ಲಿ ಬಸವನಗೊಂದಿಯಲ್ಲಿರುವ ಬಂಡೆಯ ಮೇಲೆ ಕಾಣುವ ಬೇಟೆಗಾರ ಮತ್ತು ಅವನ ಪರಿವಾರದ ಚಿತ್ರಗಳು ಈಜಿಪ್ಟ್ ಮತ್ತು ಮೆಸಪಟೋಮಿಯಾದ ಚಿತ್ರ ಶೈಲಿಯನ್ನು ಹೋಲುತ್ತವೆ ಎನ್ನುವ ಮಾಹಿತಿ ಇದೆ. ಪ್ರಾಚ್ಯವಸ್ತು ಸಂಶೋಧನೆ ಎಂಬ ಕೃತಿಯನ್ನು ಅ.ಸುಂದರ ಅವರು ೧೯೭೨ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಬೆಳಗಾವಿ, ಬಿಜಾಪುರ ಭಾಗದಲ್ಲಿ ಬೃಹತ್‌ಶಿಲಾಯುಗ ನೆಲೆಗಳಿಗೆ ಮುನಿವಾಸನ ಗುಹೆ ಎಂದೂ ಬಳ್ಳಾರಿ, ರಾಯಚೂರು, ಚಿತ್ರದುರ್ಗ, ಮೋರಿಯರಮಟ್ಟಿ, ಪಾಂಡವರ ಬೀಳೆಂದು, ದಕ್ಷಿಣ ಧಾರವಾಡ– ಸಿದ್ಧರಕಟ್ಟೆ, ಬಸವನಕಟ್ಟೆ ಎಂದೂ, ದಕ್ಷಿಣ ಕರ್ನಾಟಕದಲ್ಲಿ ಪಾಂಡವರ ಕಟ್ಟೆ ಎಂದೂ ಕರೆಯುತ್ತಾರೆಂಬ ವಿವಿಧ ಮಾಹಿತಿ ನೀಡಿದೆ. ಪೂರ್ವೇತಿಹಾಸ ಎಂಬ ಗ್ರಂಥವು ಇರ್ಫಾನ್ ಹಬೀಬ್ ಅವರಿಂದ ೨೦೦೮ರಲ್ಲಿ ರಚಿತಗೊಂಡು ಬಿಡುಗಡೆಯಾಗಿದೆ. ಇದರಲ್ಲಿ ಶಿಲಾಯುಗಗಳಲ್ಲಿ ಬೆಳೆದ ಧಾನ್ಯಗಳು ಮತ್ತು ಉಪಕರಣಗಳ ಕುರಿತಾದ ಮಾಹಿತಿ ಇರುವುದು. ಐತಿಹಾಸಿಕ ಲೇಖನಗಳು ಎಂಬ ಗ್ರಂಥವನ್ನು ಹುಲ್ಲೂರು ಶ್ರೀನಿವಾಸ ಜೋಯಿಸರು ೧೯೭೬ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ಅವಶೇಷಗಳ ಕುರಿತು ವಿವರಣೆ

ಇದೆ. ಕ್ಷೇತ್ರಕಾರ್ಯ ಎಂಬ ಸಂಶೋಧನಾ ಕೃತಿಯನ್ನು ಎಸ್.ಜಿ.ರಾಮದಾಸರೆಡ್ಡಿ ಅವರು ರಚಿಸಿ ೨೦೧೧ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸ ನೆಲೆಗಳನ್ನು ಶೋಧಿಸಿ ಅವಶೇಷಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿ ವಿಶ್ಲೇಷಿಸಿದ್ದಾರೆ. ದುರ್ಗಸಿರಿ ಎಂಬ ಶೀರ್ಷಿಕೆಯಡಿ ಸ್ಮರಣ ಸಂಚಿಕೆಯನ್ನು ಕೆ.ಅಮರನಾರಾಯಣ (ಪ್ರ.ಸಂ) ಮತ್ತು ಬಿ.ರಾಜಶೇಖರಪ್ಪ(ಸಂ)ಅವರು ೨೦೦೬ರಲ್ಲಿ ಬಿಡುಗಡೆ ಮಾಡಿದ್ದಾರೆ. ಇದರಲ್ಲಿ 'ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು' ಎಂಬ ಲೇಖನವನ್ನು ಎಸ್.ವೈ.ಸೋಮಶೇಖರ್ ಅವರು ಪ್ರಸ್ತುತ ಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪ ತಂಬಂಡ ವಿಜಯ್ ಪೂಣಚ್ಚ ಸಂಪಾದಕಿಯದಲ್ಲಿ ೨೦೦೧ರಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿ ಪ್ರಾಗೈತಿಹಾಸಿಕ ಸಂಬಂಧಿಸಿದ ವಿಸ್ತೃತವಾದ ಲೇಖನಗಳಿವೆ. ಎಸ್.ವೈ ಸೋಮಶೇಖರ್ ಅವರು ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಜಟಂಗಿರಾಮೇಶ್ವರ ಸಾಂಸ್ಕೃತಿಕ ದರ್ಶನ(೨೦೦೪), ಬ್ರಹ್ಮಗಿರಿ(೨೦೧೦), ಕರ್ನಾಟಕ ದೇವಾಲಯ ಕೋಶ: ಚಿತ್ರದುರ್ಗ ಜಿಲ್ಲೆ(೨೦೧೭) ಎಂಬ ಕೃತಿಗಳು ಪ್ರಕಟವಾಗಿವೆ. ಈ ಕೃತಿಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸಕ್ಕೆ ಸಂಬಂಧಿಸಿದ ಮಾಹಿತಿಗಳಿವೆ.

ಕೂನಬೇವು ಬಳಿ ಬೃಹತ್ ಶಿಲಾಗೋರಿಯ ನೆಲೆ ಪತ್ತೆ ಎಂದು ಎಸ್.ತಿಪ್ಪೇಸ್ವಾಮಿ ಮತ್ತು ಎಸ್.ವೈ.ಸೋಮಶೇಖರ್ ಅವರು ಶೋಧ ಮಾಡಿ ಸಂಯುಕ್ತ ಕರ್ನಾಟಕ ೧೫-೦೧-೨೦೦೧ರಲ್ಲಿ ಪ್ರಕಟಿಸಿದ್ದಾರೆ. ಚಿಕ್ಕಕಬ್ಬಿಗೆರೆಯಲ್ಲಿ ಪುರಾತನ ಶಿಲಾ ಸಮಾಧಿ ಪತ್ತೆ ಎಂದು ಎಸ್.ವೈ.ಸೋಮಶೇಖರ್ ಅವರು ವಿಜಯಕರ್ನಾಟಕ ಪತ್ರಿಕೆ ೧೪-೧೨-೨೦೦೫ರಲ್ಲಿ ಪ್ರಕಟಿಸಿದ್ದಾರೆ. ಸಂಗೇನಹಳ್ಳಿ ಕೆರೆ ಬಳಿ ಚಾರಿತ್ರಿಕ ಅವಶೇಷಗಳ ಪತ್ತೆ ಎಂದು ಲಕ್ಷ್ಮಣ್ ತೆಲಗಾವಿ ಮತ್ತು ತಂಡದವರು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ೦೫-೦೪-೧೯೯೬ರಂದು ಪ್ರಕಟಿಸಿದ್ದಾರೆ. ಬಯಲು ಬಂಡೆ ರೇಖಾಕೃತಿಗಳ ಪತ್ತೆ ಎಂದು ಶರತ್‌ಬಾಬು ಕೆ.ಎಸ್ ಮತ್ತು ನಾಗರಾಜಪ್ಪ.ಎಸ್ ಶೋಧನೆಗೈದು ದುರ್ಗದ ಕೂಗು ಪತ್ರಿಕೆಯಲ್ಲಿ ೧೨-೦೮-೨೦೦೯ರಂದು ಪ್ರಕಟಿಸಿದ್ದಾರೆ. ಇತಿಹಾಸ ದರ್ಶನ ಸಂಪುಟಗಳಲ್ಲಿ ಪ್ರಾಗಿತಿಹಾಸಕ್ಕೆ ಸಂಬಂಧಿಸಿದಂತೆ ಹಲವು ಲೇಖನಗಳು ಪ್ರಕಟಗೊಂಡಿವೆ.

ವಿಧಾನ:

ಪ್ರಸ್ತುತ ಅಧ್ಯಯನವು ವೈಜ್ಞಾನಿಕವಾದದ್ದಾಗಿದೆ. ಪ್ರತಿಯೊಬ್ಬ ಸಂಶೋಧಕರು ಆಸಕ್ತಿಗೆ ಅನುಸಾರವಾಗಿ ವಿಷಯ ಆಯ್ಕೆ ಮಾಡಿಕೊಳ್ಳುವಂತೆ ಚಿತ್ರದುರ್ಗ ಜಿಲ್ಲಾ

ಪರಿಸರದ ಪ್ರಾಗಿತಿಹಾಸವನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ. ಪ್ರಾಗಿತಿಹಾಸ ಮಟ್ಟಿಗೆ ಸಮಗ್ರ ಅಧ್ಯಯನವು ಚಿತ್ರದುರ್ಗ ಜಿಲ್ಲೆಯಲ್ಲಿ ಇದೇ ಮೊದಲು. ಪ್ರಸ್ತುತ ಅಧ್ಯಯನದಲ್ಲಿ ಪ್ರಾಗಿತಿಹಾಸದ ಸಿದ್ಧಾಂತದ ರಚನೆಗೆ ವಿಷಯ ಸಂಗ್ರಹಕ್ಕಾಗಿ ಗ್ರಂಥಾಲಯ ಭೇಟಿ, ಲೇಖನ ಕೃತಿಗಳ ಸಂಗ್ರಹ, ಪತ್ರಿಕೆ ವರದಿಗಳ ಸಂಗ್ರಹ, ವಿದ್ವಾಂಸರೊಂದಿಗೆ ಚರ್ಚೆ, ಸಿಕ್ಕ ಮಾಹಿತಿಗೆ ಅನುಗುಣವಾಗಿ ಅಡಿ ಟಿಪ್ಪಣಿಗಳನ್ನು ಪಟ್ಟಿಕೆಗಳನ್ನು ಕ್ರಮವಾಗಿ ದಾಖಲಿಸಲಾಯಿತು. ಈ ತರುವಾಯ ಕ್ಷೇತ್ರ ಕಾರ್ಯದ ಮೂಲಕ ನೆಲೆಗಳ ಶೋಧ, ಅವಶೇಷಗಳ ಛಾಯಾಗ್ರಹಣ, ಉಪಕರಣಗಳ ಸಂಗ್ರಹ, ಶೋಧಗೊಂಡ ನೆಲೆಗಳನ್ನು ಪತ್ರಿಕೆ ಹಾಗೂ ವಿಚಾರಸಂಕಿರಣಗಳಲ್ಲಿ ಮಂಡಿಸುವ ಮೂಲಕ ವಿದ್ವಾಂಸರೊಂದಿಗೆ ಮಂಥಿಸುವ ಕಾರ್ಯವನ್ನು ಮಾಡಲಾಗಿದೆ. ಅಧ್ಯಯನಕ್ಕೆ ಅವಶ್ಯಕವಾದ ವಸ್ತುಗಳೊಂದಿಗೆ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಇದಲ್ಲದೆ ಸ್ಥಳೀಯ ಜನರಿಂದ ಆಗುವ ಅನಾಹುತ, ಎದುರಾಗುವ ಸಮಸ್ಯೆಗಳನ್ನು ಅರಿತು ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ದಾಖಲೆಗಳು ಮತ್ತು ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಗಳನ್ನು ಅಧ್ಯಾಯಗಳಿಗೆ ಅನುಗುಣವಾಗಿ ಬೇರ್ಪಡಿಸಿ ರಚಿಸಲಾಗಿದೆ.

ಸ್ವರೂಪ:

ಈ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಐದು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಾಯಗಳಲ್ಲಿ ಉಪಶೀರ್ಷಿಕೆಗಳಿವೆ. ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸವನ್ನು ಅಧ್ಯಯನ ಮಾಡಲಾಗಿದ್ದು, ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ಸಮೀಕ್ಷೆ, ಅಧ್ಯಯನದ ವಿಧಾನ ಹಾಗೂ ಸ್ವರೂಪವನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯವು ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಪರಿಸರಕ್ಕೆ ಸಂಬಂಧಿಸಿದೆ. ಜಿಲ್ಲೆಯಲ್ಲಿ ಗ್ರಾನೈಟ್ ಮತ್ತು ಖನಿಜ ಸಂಪತ್ತನ್ನು (ಚಿನ್ನ, ತಾಮ್ರ, ಕಬ್ಬಿಣ, ಮ್ಯಾಂಗನೀಸ್) ಹೊಂದಿರುವ ಬೆಟ್ಟಗಳಿವೆ. ವೇದಾವತಿ ನದಿ, ಜಿನಗಿಹಳ್ಳ, ಗುಂಡಿಹಳ್ಳಗಳು ಪ್ರಮುಖ ನೀರಿನ ಮೂಲಗಳಾಗಿವೆ. ಡೈಕ್, ಡೋಲರೈಟ್, ಚರ್ಟ್, ಕ್ವಾರ್ಟ್ಜ್ ಮೊದಲಾದ ಶಿಲೆಗಳು ಚಿತ್ರದುರ್ಗ ಜಿಲ್ಲೆಯಲ್ಲಿದ್ದು, ಇವು ಪ್ರಾಗಿತಿಹಾಸ ಕಾಲದಲ್ಲಿ ಬಳಕೆಗೊಂಡಿವೆ. ಜೇಡಿಮಣ್ಣು, ಕೆಂಪು, ಕಪ್ಪು ಮಣ್ಣು ಹಾಗೂ ಮರಳು ಪ್ರಾಗಿತಿಹಾಸ ಕಾಲದಲ್ಲಿ ಪ್ರಮುಖ ಪಾತ್ರವಹಿಸಿವೆ. ಪಶುಸಂಗೋಪನೆಗೆ ಮತ್ತು ಗುಡಿಸಲು ನಿರ್ಮಾಣಕ್ಕೆ ಬೇಕಾದ ಹುಲ್ಲು ಪ್ರಸ್ತುತ ಜಿಲ್ಲೆಯಲ್ಲಿ ಕಾಣಬಹುದು. ಔಷಧಿ ಸಸ್ಯಗಳು(ಬಂದರಿಕೆ, ಎಕ್ಕೆ), ಮರಗಳು(ಆಲ, ಬೇವು, ಗಂಧ, ತೇಗ) ಹಾಗೂ ಸೌದೆಗೆ

ಬೇಕಾದ ಜಾಲಿ ಗಿಡಗಳು ಜಿಲ್ಲೆಯಲ್ಲಿ ಹೇರಳವಾಗಿ ಬೆಳೆದಿವೆ. ಸಾಕು ಪ್ರಾಣಿಗಳಾದ ಎತ್ತು, ಗೂಳಿ, ಎಮ್ಮೆ, ನಾಯಿ, ಆಡು, ಕುರಿ ಹಾಗೂ ಕಾಡು ಪ್ರಾಣಿಗಳಾದ ನರಿ, ಜಿಂಕೆ, ಕಡವೆ, ಚಿರತೆ, ಮುಳ್ಳು ಹಂದಿ ಮೊದಲಾದ ಪ್ರಾಣಿಗಳು ಪ್ರಸ್ತುತ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಈ ಎಲ್ಲಾ ಭೌಗೋಳಿಕ ಸಂಪತ್ತು ಪ್ರಾಗೈತಿಹಾಸಿಕವಾಗಿ ಮತ್ತು ಪ್ರಸ್ತುತವಾಗಿ ಮಹತ್ವವನ್ನು ಪಡೆದಿವೆ ಎಂಬುದಾಗಿ ಎರಡನೆಯ ಅಧ್ಯಾಯದಲ್ಲಿ ತಿಳಿಸಿಕೊಡಲಾಗಿದೆ.

ಮೂರನೆ ಅಧ್ಯಾಯವು ಪ್ರಾಗೈತಿಹಾಸಿಕ ನೆಲೆಗಳಿಗೆ ಸಂಬಂಧಿಸಿದ್ದು. ಚಿತ್ರದುರ್ಗ ಜಿಲ್ಲೆಯಲ್ಲಿ ೩೫೧ ಪ್ರಾಗೈತಿಹಾಸಿಕ ನೆಲೆಗಳು ಇವೆ. ಇವುಗಳಲ್ಲಿ ಹಳೆಶಿಲಾಯುಗ (ತಾಳ್ಯ, ಜಾನಕಲ್ಲು, ಕೂನಬೇವು, ಸಂಗೇನಹಳ್ಳಿಕೆರೆ), ಸೂಕ್ಷ್ಮಶಿಲಾಯುಗ (ಬ್ರಹ್ಮಗಿರಿ, ಜೆ.ಎನ್.ಕೋಟೆ), ನವಶಿಲಾಯುಗ(ಚಂದ್ರವಳ್ಳಿ, ಎನ್.ಗೌರಿಪುರ, ಸಂಗೇನಹಳ್ಳಿಕೆರೆ, ಪರುಶುರಾಂಪುರ), ಬೃಹತ್ ಶಿಲಾಯುಗದ(ನೆರೆನಾಳ್, ಮರಡಿಹಳ್ಳಿ, ಮನ್ನೆಕೋಟೆ, ತುರುವನೂರು, ಚಿಪ್ಪಿನಕೆರೆ) ನೆಲೆಗಳ ಮಹತ್ವವನ್ನು ಚರ್ಚಿಸಲಾಗಿದೆ. ಪ್ರತಿ ತಾಲೂಕುವಾರು ಕಂಡುಬಂದಿರುವ ನೆಲೆಗಳನ್ನು ಕಾಲಾನುಕ್ರಮಣಿಕೆಯಾಗಿ ವಿವರಿಸಲಾಗಿದೆ. ಕಂಡುಬಂದಿರುವ ನೆಲೆಗಳು ಹಳ್ಳ(ಜಿನಗಿಹಳ್ಳ, ಗುಂಡಿಹಳ್ಳ), ನದಿ(ವೇದಾವತಿ), ಬೆಟ್ಟ(ಮಾಳಪ್ಪನಗುಡ್ಡ), ಹುಲ್ಲುಗಾವಲು(ಸಂಗೇನಹಳ್ಳಿಕೆರೆ) ಪ್ರದೇಶದಲ್ಲಿ ಹಾಗೂ ಗ್ರಾನೈಟ್ ಬಂಡೆ(ಬ್ರಹ್ಮಗಿರಿ), ಖನಿಜ ಸಂಪತ್ತು ಸಿಗುವ(ಗಟ್ಟಿಹೊಸಹಳ್ಳಿ) ಕಡೆ ಪ್ರಾಗೈತಿಹಾಸಿಕ ನೆಲೆಗಳಿರುವುದಾಗಿ ನೆಲೆಗಳ ಸ್ವರೂಪದಲ್ಲಿ ತಿಳಿಸಿಕೊಡಲಾಗಿದೆ. ಸ್ಥಳನಾಮಗಳನ್ನು ಅಧ್ಯಯನ ಮಾಡಲಾಗಿದ್ದು, ಐತಿಹಾಸಿಕ ಸಂಗತಿಗಳನ್ನು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಾಯದ ಕೊನೆಯಲ್ಲಿ ಸ್ಥಳನಾಮಗಳ ಮತ್ತು ನೆಲೆಗಳ ಪಟ್ಟಿಯನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯವು ಸಂಸ್ಕೃತಿಯ ಕುರಿತದ್ದು. ಹಳೆಶಿಲಾಯುಗದಲ್ಲಿ–ಹೋಮೋ ಎರಕ್ಟಸ್, ಹೋಮೋಹ್ಯಾಬಿಲಸ್ ಹಾಗೂ ಸೂಕ್ಷ್ಮಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಹೋಮೋಸೆಪಿಯನ್ಸ್ ಮಾನವರಿದ್ದರು. ದೇಹ ರಚನೆ ಹಿನ್ನಲೆಯಲ್ಲಿ ನವಶಿಲಾಯುಗ (ಅಸ್ಟ್ರಲಾಯ್ಡ್) ಮತ್ತು ಬೃಹತ್ ಶಿಲಾಯುಗದಲ್ಲಿದ್ದ(ಅಸ್ಟ್ರಲಾಯ್ಡ್, ಮೆಡಿಟರೇನಿಯನ್) ಜನಾಂಗಗಳನ್ನು ವಿವರಿಸಲಾಗಿದೆ. ಅಂದಿನ ಜನರು ಅನುಸರಿಸಿದ್ದ ಕೃಷಿ ಪದ್ಧತಿ(ಒಣ ಮತ್ತು ನೀರಾವರಿ ಬೇಸಾಯ) ಹಾಗೂ ಪಶುಸಂಗೋಪನೆಯ (ಬೂದಿದಿನ್ನೆ) ಮಹತ್ವವನ್ನು ತಿಳಿಸಲಾಗಿದೆ. ಪ್ರಾಗೈತಿಹಾಸಿಕ ಮಾನವರು ಲೋಹ ಮತ್ತು ಶಿಲೋಪಕರಣಗಳು ಹಾಗೂ ಮಡಕೆಗಳನ್ನು ತಯಾರಿಸಿ ಬಳಸಿದ್ದಾರೆ. ಅಲ್ಲದೆ ಅಲಂಕಾರಿಕ ವಸ್ತುಗಳನ್ನು ಬಳಸಿದ್ದಾರೆಂಬ ವಿಚಾರಗಳನ್ನು ವಿವರಿಸಲಾಗಿದೆ. ೫ (ಪಿಟ್ಸ್, ಸಿಸ್ಟ್, ಡಾಲ್ಮೆನ್ ಸಿಸ್ಟ್, ನಿಲುಸುಗಲ್ಲು, ಆಯಾತಕಾರದ ಸಮಾಧಿಗಳು)

ಮಾದರಿಯಲ್ಲಿರುವ ಸಮಾಧಿಗಳು ಜಿಲ್ಲೆಯಲ್ಲಿದ್ದು, ಮೂರು ರೀತಿಯ ಶವಸಂಸ್ಕಾರ ಪದ್ದತಿಗಳನ್ನು(ಸುಡುವುದು, ಹೂಳುವುದು, ಮೂಳೆ ಸಂಗ್ರಹಿಸಿ ಹೂಳುವುದು) ಚರ್ಚಿಸಲಾಗಿದೆ. ಅಂದಿನ ಜನರು ರಚಿಸಿದ ವರ್ಣಚಿತ್ರಗಳು ಮತ್ತು ಬಯಲು ಬಂಡೆ ಚಿತ್ರಗಳ ಮೂಲಕ ಸಂಸ್ಕೃತಿಯನ್ನು ವಿಶ್ಲೇಷಿಸಲಾಗಿದೆ. ಪ್ರಾಗಿತಿಹಾಸ ಮಾನವರು ಹೊಂದಿದ್ದ ನಂಬಿಕೆಗಳನ್ನು ಚರ್ಚಿಸಲಾಗಿದ್ದು, ಕೊನೆಯದಾಗಿ ಶಿಲಾಯುಗ ಸಂಸ್ಕೃತಿಯ ಕಾಲಮಾನವನ್ನು ಸ್ಪಷ್ಟಪಡಿಸಲಾಗಿದೆ.

ಐದನೇ ಅಧ್ಯಾಯವು ಸಮಾರೋಪವಾಗಿದ್ದು, ನಾಲ್ಕು ಅಧ್ಯಾಯಗಳಲ್ಲಿ ಕಂಡುಕೊಂಡ ವಿಚಾರಗಳನ್ನು ತಿಳಿಸಲಾಗಿದೆ. ಕೊನೆಯದಾಗಿ ಅನುಬಂಧಗಳಲ್ಲಿ ಗಂಥಸೂಚಿ ಮತ್ತು ಛಾಯಾಚಿತ್ರಗಳನ್ನು ಕಾಣಬಹುದು.

ಅಡಿಟಿಪ್ಪಣಿಗಳು

೧. ತಂಬಂಡ ವಿಜಯ್ ಪೂಣಚ್ಚ(ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ೨೦೦೧, ಪು-೭೬.

೨. ಅದೇ, ಪು-೭೭.

೩. ಇತಿಹಾಸ ದರ್ಪಣ, ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು, ೨೦೧೨, ಪು-೨೦.

೪. ಅದೇ, ಪು-೨೦.

೫. ಬಾಲಸುಬ್ರಮಣ್ಯ(ಲೇ), ಕರ್ನಾಟಕ ಪ್ರಾಗಿತಿಹಾಸ ಪರಿಚಯ, ಕನ್ನಡ ವಿಶ್ವವಿದ್ಯಾಲಯ ದೂರಶಿಕ್ಷಣ ಪತ್ಯ, ೨೦೦೨, ಪು-೦೪.

೬. ಅದೇ, ಪು-೦೫.

೭. ಇತಿಹಾಸ ದರ್ಪಣ, ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು, ೨೦೧೨, ಪು-೨೧.

೮. ಅದೇ, ಪು-೨೧.

೯. ಎಸ್.ಜಿ.ರಾಮದಾಸರೆಡ್ಡಿ, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರೆ, ೨೦೦೯, ಪು-೧೫೧.

೧೦. ಸೂರ್ಯನಾಥ್.ಯು.ಕಾಮತ್, ಕರ್ನಾಟಕ ಗ್ಯಾಸೆಟಿಯರ್-೧, ೧೯೮೨, ಪು-೧೯೯.

೧೧. ಅ.ಸುಂದರ, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, ೧೯೭೩, ಪು-೧೦.

೧೨. ಅ.ಸುಂದರ, ಕರ್ನಾಟಕ ಪ್ರಾಗೈತಿಹಾಸಿಕ ಅಥವಾ ಇತಿಹಾಸ ಪೂರ್ವಕಾಲ, ೧೯೭೧, ಪು-೮೧.

೧೩. ಅದೇ, ಪು-೧೫೦.

೧೪. ಅದೇ, ಪು-೧೫೦.

೧೫. ಇತಿಹಾಸ ದರ್ಶನ ಸಂಪುಟ-೨೭, ೨೦೧೨, ಪು-೦೮.

೧೬. ಇತಿಹಾಸ ದರ್ಶನ ಸಂಪುಟ-೨೬, ೨೦೧೧, ಪು-೧೮.

೧೭. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೫೦.

೧೮. ಅದೇ, ಪು-೧೫೧.

೧೯. ಅದೇ, ಪು-೧೫೦.

೨೦. ಅದೇ, ಪು-೧೫೦.

೨೧. ಅದೇ, ಪು-೧೫೨.

೨೨. ಅದೇ, ಪು-೧೫೨.

೨೩. ಅ. ಸುಂದರ, ಪೂರ್ವೋಕ್ತ , ೧೯೭೩, ಪು-೨೨.

೨೪. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೫೨.

೨೫. ಅದೇ, ಪು-೧೫೨.

೨೬. ಅದೇ, ಪು-೧೫೪.

೨೭. ಅದೇ, ಪು-೧೫೪.

೨೮. ಅದೇ, ಪು-೧೫೩.

೨೯. ಅದೇ, ಪು-೧೫೩.

೩೦. ಅದೇ, ಪು-೧೫೩.

೩೧. ಅದೇ, ಪು-೧೫೫.

೩೨. ಅದೇ, ಪು-೧೫೪.

೩೩. ಅದೇ, ಪು-೧೫೬.

೩೪. ಎಂ.ಎ.ಅರ್-೧೯೪೭/೧೯೫೬, ೧೯೬೪, ಪು-೩೬.

ಅಧ್ಯಾಯ ಎರಡು : ಭೌಗೋಳಿಕ ಪರಿಸರ

ಅಧ್ಯಾಯ–ಎರಡು

ಭೌಗೋಳಿಕ ಪರಿಸರ

೨.೧. ಭೂಮಿಯ ಭೌತಿಕ ಇತಿಹಾಸ :

ಒಂಬತ್ತು ಗ್ರಹಗಳಲ್ಲಿ ಭೂಮಿಯು ಒಂದು ಗ್ರಹ. ಭೂಮಿಯು ಮಂಗಳ ಮತ್ತು ಬುಧ ಗ್ರಹಗಳ ನಡುವೆ ಇರುವುದು[೧]. ಇತರೆ ಗ್ರಹಗಳಿಗಿಂತ ವೈಶಿಷ್ಟ್ಯತೆಯಿಂದ ಕೂಡಿರುವ ಭೂಮಿಯಲ್ಲಿ ಜೀವಿಗಳ ಹುಟ್ಟು ವಿಕಸನಕ್ಕೆ ಜಲಮಂಡಲ ಮತ್ತು ವಾಯು ಮಂಡಲವು ಸಹಕಾರಿ. ಮಂಗಳ ಗ್ರಹದಲ್ಲಿ ನೀರಿನ ಕುರುಹುವಿನ ಕುರಿತು ಖಗೋಳ ವಿಜ್ಞಾನಿಗಳು ಪತ್ರಿಕೆ ಮತ್ತು ದೃಷ್ಯ ಮಾಧ್ಯಮಗಳ ಮೂಲಕ ತಿಳಿಯಪಡಿಸಿದ್ದಾರೆ. ಆದರೆ ಭೂಮಿಯಲ್ಲಿ ನೈಸರ್ಗಿಕ ಸಂಪತ್ತು ಆಗಾಧವಾಗಿ ಹರಡಿಕೊಂಡಿರುವುದು ಸತ್ಯ. ಮಂಗಳ ಗ್ರಹವನ್ನು ಭೂಮಿಗೆ ಹೋಲಿಸಲಾಗುತ್ತದೆ. ಏತನ್ಮಧ್ಯೆ ಭೂಮಿಯು ಭೌತಿಕವಾಗಿ ಬಹು ಮುಖ್ಯ. ಭೂಮಿ ೪೫೦೦ಮಿಲಿಯನ್ ವರ್ಷಗಳ ಹಿಂದೆ ಅತಿ ಸೂಕ್ಷ್ಮ ಕಣಗಳ ಒಟ್ಟು ಗೂಡುವಿಕೆಯಿಂದ ರೂಪುಗೊಂಡಿರುವುದು[೨]. ೪೦೦೦ಮಿಲಿಯನ್ ವರ್ಷಗಳ ಹಿಂದೆ ವಾಯುಮಂಡಲ ಮತ್ತು ಜಲ ಮಂಡಲ, ೩೯೦೦ಮಿಲಿಯನ್ ವರ್ಷಗಳ ಹಿಂದೆ ಬಂಡೆಗಳು ರೂಪುಗೊಂಡಿವೆ[೩]. ಭೂಮಿಯು ಚಲನಶೀಲವಾದದ್ದು. ಇದಕ್ಕೆ ಭೂಮಿಯು ಸೂರ್ಯನನ್ನು ಸುತ್ತುವುದು, ಜ್ವಾಲಮುಖಿಗಳು ಕಾಣಿಸಿಕೊಳ್ಳುವುದು, ಪದೇ ಪದೇ ಭೂಕಂಪನಗಳು ಆಗುತ್ತಿರುವುದು ಚಲನಶೀಲತೆಗೆ ಸಾಕ್ಷಿ. ಸುಮಾರು ೧೫೦ಮಿಲಿಯನ್ ವರ್ಷಗಳ ಹಿಂದೆ ಭಾರತವು ಅಂಟಾರ್ಟಿಕ ಖಂಡಕ್ಕೆ ಸಮೀಪದಲ್ಲಿತ್ತು. ೧೦೫ಮಿಲಿಯನ್ ವರ್ಷಗಳ ತರುವಾಯ ವಿಲ್ಸನ್ ಚಕ್ರಕ್ಕೆ ಒಳಗಾಗಿ ಭಾರತದ ಭೂಭಾಗ ಅಂಟಾರ್ಟಿಕದಿಂದ ಚಲಿಸಿ ಬಂದು ಏಷ್ಯಾ ಫಲಕಕ್ಕೆ ಡಿಕ್ಕಿ ಹೊಡಿಯಿತು[೪]. ಆ ಸಂದರ್ಭದಲ್ಲಿ ಹಿಮಾಲಯದಂತಹ ಬೆಟ್ಟಗಳು, ಉಬ್ಬು ತಗ್ಗುಗಳು ನೀರಿನ

ಅರಿವಿಕೆಯಲ್ಲಿ ಬದಲಾವಣೆಗಳು ಆಗಿರುವುದು. ಒಟ್ಟು ಭಾರತದ ಭೂಶಿರದೊಂದಿಗೆ ಸಾಗರದ ಭಾಗಗಳು ಒಂದುಗೂಡಿದ್ದು ೩೨ಮಿಲಿಯನ್ ವರ್ಷಗಳ ನಂತರವೆ[೫]. ಹೀಗೆ ಭಾರತದ ಭೂಶಿರವು ಅಂಟಾರ್ಟಿಕದಿಂದ ಬೇರ್ಪಟ್ಟು ಏಷ್ಯಾ ಖಂಡದೊಂದಿಗೆ ಅಂಟಿಕೊಂಡಿದೆ. ಭೂಮಿಯ ಇತಿಹಾಸವನ್ನು ತಿಳಿಯಲು ೪ ಯುಗಗಳಾಗಿ ಮಾಡಲಾಗಿದೆ. ಅವುಗಳಲ್ಲಿ ಮೊದಲನೆಯದು ಕ್ರೈಪ್ಟೋಜೋಯಿಕ್, ಪ್ಯಾಲಿಯೋಜೋಯಿಕ್, ಮೆಸೊಜೊಯಿಕ್, ಕೊನೆಯದಾದ ಸಿನೋಜೋಯಿಕ್ ಯುಗಗಳು ಪ್ರಮುಖವು[೬].

ಸಿನೋಜೋಯಿಕ್ ಅವಧಿಯಲ್ಲಿ ಮಾನವನು ಒಳಗೊಂಡಂತೆ ಜೀವಿಗಳ ಉಗಮ ವಿಕಾಸವನ್ನು ಕಾಣುತ್ತೇವೆ. ಈ ಹಿಂದೆ ಮೆಸೋಜೋಯಿಕ್ ಯುಗದ ಅಂತ್ಯದಲ್ಲಿ ಬೃಹದಾಕಾರದ ಡೈನೋಸರ್‌ಗಳು ನಾಶಗೊಂಡಿವೆ[೭]. ತರುವಾಯದ ಸಿನೋಜೋಯಿಕ್ ಯುಗದಲ್ಲಿ ವ್ಯವಸ್ಥಿತವಾದ ಹೊಸ ಜೀವಿಗಳು ರಚನೆಯಾದವು. ಡೈನೋಸರ್‌ಗಳು ೬೦ ಮಿಲಿಯನ್ ವರ್ಷಗಳ ಹಿಂದೆ ಆಗ್ನಿ ಪರ್ವತಗಳಿಂದ ಬಂದಂತ ಬೆಂಕಿ ಹಾಗೂ ಇಂಗಾಲಾಮ್ಲದಿಂದ ನಾಶವಾದವು ಎನ್ನುವುದು ಒಂದು ಅಭಿಪ್ರಾಯ. ಮತ್ತೊಂದು ಅಭಿಪ್ರಾಯ ಬೃಹದಾಕಾರದ ಉಲ್ಕೆಯೊಂದು ಭೂಮಿಗೆ ಬಡಿದ ಸಂದರ್ಭದಲ್ಲಿ ಉಂಟಾದ ಅಧಿಕ ತಾಪ ಮತ್ತು ಸಮುದ್ರಮಟ್ಟದಲ್ಲಿ ಆದ ಬದಲಾವಣೆಗಳು ನಾಶಕ್ಕೆ ಕಾರಣ[೮]. ಸಿನೋಜೋಯಿಕ್ ಅವಧಿಯಲ್ಲಿ ಪ್ಲಯೋಸಿನ್ ಯುಗವಿದ್ದು, ಸಸ್ತನಿಗಳ ಬೆಳವಣಿಗೆಗಳು ಹಾಗೂ ಮಾನವನ ಉಗಮವನ್ನು ಕಾಣಬಹುದು[೯]. ಇದರ ತರುವಾಯದ ಶಿಲಾಯುಗ ಸಂಸ್ಕೃತಿಯ ಅವಧಿಯಲ್ಲಿ ಪ್ಲಿಸ್ಟೋಸಿನ್ ಮತ್ತು ಹೊಲೋಸಿನ್ ಯುಗವೆಂದು ಎರಡು ಕಾಲಘಟ್ಟಗಳನ್ನು ಕಾಣಬಹುದಾಗಿದೆ. ಪ್ಲಿಸ್ಟೋಸಿನ್ ಅಂತ್ಯಹಳೆ ಶಿಲಾಯುಗದಲ್ಲಿ ಅಂತ್ಯಗೊಳ್ಳುವುದು. ಹೊಲೋಸಿನ್ ಯುಗವು ಸೂಕ್ಷ್ಮ ಶಿಲಾಯುಗದಿಂದ ಆರಂಭಗೊಳ್ಳುವುದು[೧೦]. ಆದಿ ಹಳೆಶಿಲಾಯುಗದಿಂದ ಅಂತ್ಯ ಹಳೆಶಿಲಾಯುಗದ ಅವಧಿಯಲ್ಲಿ ಹೋಮೊ ಹ್ಯಾಬಿಲಿಸ್ ಮತ್ತು ಹೋಮೋ ಎರಕ್ಟಸ್, ನಿಯಾಂಡ್ರಥಾಲ್ ಮಾನವರಿದ್ದರು[೧೧]. ಇವರಿಗಿಂತ ಪೂರ್ವಜನಾದ ಅಸ್ಟ್ರಲೋಪೆಥಿಕಸ್ ಮಾನವನು ೪.೫ ಮಿಲಿಯನ್ ವರ್ಷಗಳ ಹಿಂದೆ ಬದುಕಿದ್ದನು. ೨.೫ ಮಿಲಿಯನ್ ವರ್ಷಗಳ ಹಿಂದೆ ಅಸ್ಟ್ರಲೋಪೆಥಿಕಸ್ ಮಾನವ ಶಿಲಾಯುಧ ಬಳಸಿದ್ದರೆಂಬ ಅಭಿಪ್ರಾಯವಿದೆ[೧೨]. ೧.೮ ಮಿಲಿಯನ್ ವರ್ಷಗಳ ಹಿಂದಿನಿಂದ ಕ್ರಮಬದ್ಧವಾದ ಕೈಕೊಡಲಿಯನ್ನು ಹೋಮೋ ಎರಕ್ಟಸ್ ಮಾನವರು ಬಳಸಲು ಆರಂಭಿಸಿದರು[೧೩]. ಮಧ್ಯ ಅಥವಾ ಸೂಕ್ಷ್ಮ ಶಿಲಾಯುಗದಲ್ಲಿ

ಹೋಮೋಸೆಫಿಯನ್ಸ್ ಮಾನವರ ಉಗಮವಾಯಿತು[೧೪]. ಈ ಮಾನವರು ೨೦೦ ಸಾವಿರ ವರ್ಷಗಳಿಂದ ೪೦ ಸಾವಿರ ವರ್ಷಗಳವರೆಗೆ ನೆಲೆಸಿದ್ದರು[೧೫]. ಮುಂದಿನ ಕಾಲಾವಧಿಯಲ್ಲಿ ಬರುವ ನವ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಹೋಮೋ ಸೆಫಿಯನ್ಸ್ ಮಾನವನು ಮುಂದುವರೆಯುತ್ತಾರೆ[೧೬]. ಪ್ರಸ್ತುತ ನಾವುಗಳು ಹೋಮೋಸೆಫಿಯನ್ಸ್ ಸೆಫಿಯನ್ಸ್ ಮಾನವರು. ಹೋಮೊ ಹ್ಯಾಬಿಲಿಸ್‌ನಿಗಿಂತ ಹೋಮೋ ಎರಕ್ಟಸ್ ಮಾನವನ ಮೆದುಳು ಹೆಚ್ಚಿನ ಪ್ರಮಾಣದಲ್ಲಿತ್ತು[೧೭]. ಇವರೆಲ್ಲರಿಗಿಂತ ಬುದ್ಧಿವಂತ ಹೋಮೋ ಸೆಫಿಯನ್ಸ್ ಮಾನವರು. ಒಟ್ಟಿನಲ್ಲಿ ಪೂರ್ವಿಕರ ಮೂಲ ನೆಲೆ ಆಫ್ರಿಕವಾಗಿದ್ದು, ದಕ್ಷಿಣ ಏಷ್ಯಾ, ಯುರೋಪ್, ಜಾವಾಗಳೆಂಬ ಮೊದಲಾದ ಪ್ರದೇಶಗಳು ಮೂಲ ನೆಲೆ ಎಂಬ ವಾದಗಳಿವೆ.

ಕರ್ನಾಟಕವು ಭಾರತದ ಪರ್ಯಾಯ ದ್ವೀಪದ ಒಂದು ಭಾಗ. ಇದರ ವಿವರಣೆಯು ಭಾರತದ ಭೂಚರಿತ್ರೆಯನ್ನು ಅಧ್ಯಯನ ಮಾಡಿದಾಗ ತಿಳಿದುಬರುವುದು. ಕರ್ನಾಟಕದಲ್ಲಿ ಕಂಡುಬಂದಿರುವ ಆರ್ಷೆಯ ಕಲ್ಪ, ಕಲಾದಗಿ, ಟಾರ್ಷಿಯರಿಂದ ಪ್ರಾರಂಭವಾದ ದಖನ್ ಟ್ರ್ಯಾಪ್‌ಗಳು ಪ್ರಮುಖ ಮೂರು ಶಿಲಾ ಸಮೂಹಗಳಾಗಿವೆ[೧೮]. ಇವುಗಳಲ್ಲಿ ಮೊದಲನೇ ಶಿಲಾವರ್ಗದ ಧಾರವಾಡ ಶಿಲಾ ಸಮೂಹದ ವ್ಯಾಪ್ತಿಯಲ್ಲಿ ಚಿತ್ರದುರ್ಗ ಜಿಲ್ಲೆ ಇರುವುದು. ಶಿಸ್ಟ್‌ವಲಯಗಳಲ್ಲಿ ಗದಗ, ಚಿತ್ರದುರ್ಗ ಭೂವಲಯವು ಒಂದು. ಈ ವಲಯವು ಇಕ್ಕಟ್ಟಾಗಿದ್ದು, ಉತ್ತರದಲ್ಲಿ ನರಗುಂದದಿಂದ ದಕ್ಷಿಣದ ಮೈಸೂರಿನವರೆಗೂ ಹಬ್ಬಿದೆ[೧೯]. ೫೫೦ಮೈಲಿ ಉದ್ದ, ೫೦ಮೈಲಿ ಅಗಲವಾದ ಚಿತ್ರದುರ್ಗ ಶಿಸ್ಟ್ ವಲಯ ಪ್ರಸ್ತುತ ಪ್ರಾಗಿತಿಹಾಸ ಅಧ್ಯಯನದಲ್ಲಿ ಬಹುಮುಖ್ಯ. ಚಿತ್ರದುರ್ಗದ ಹಿರಿಯೂರು ತಾಲೂಕಿನ ಮರಡಿಹಳ್ಳಿಯಲ್ಲಿ ದಿಂಬು ರಚನೆ ರೀತಿಯಲ್ಲಿರುವ ಶಿಲೆಯನ್ನು ಭೂಗರ್ಭಶಾಸ್ತ್ರಜ್ಞರು ೨೭೦ ಕೋಟಿ ವರ್ಷಗಳ ಹಿಂದೆ ರಚಿತಗೊಂಡಿರುವುದಾಗಿ ಹೇಳುತ್ತಾರೆ[೨೦]. ಇದೇ ರೀತಿ ಅಗ್ನಿ ಶಿಲೆಗಳು ಹೊಳಲ್ಕೆರೆ ತಾಲೂಕಿನ ಗಟ್ಟಿಹೊಸಹಳ್ಳಿ ಪರಿಸರದಲ್ಲಿ ಕಂಡುಬರುತ್ತವೆ. ಈ ಹಿನ್ನಲೆಯಲ್ಲಿ ಚಿತ್ರದುರ್ಗದ ಶಿಲೆಗಳು ಪ್ರಾಚೀನವಾದವು ಎಂಬುದು ಸ್ಪಷ್ಟ. ಚಿತ್ರದುರ್ಗ, ಹೊಸದುರ್ಗ, ಬಳ್ಳಾರಿಯಲ್ಲಿ ಕಾಣಸಿಗುವ ಕಲ್ಲು ಬಂಡೆಯ ಬೆಟ್ಟಗಳು ಕಿರಿಯ ಗ್ರಾನೈಟ್ ಗುಂಪಿಗೆ ಸೇರಿವೆ. ಈ ಶಿಲೆಯನ್ನು ಕ್ಲೋಸಪೇಟೆ (ರಾಮನಗರ) ಗ್ರಾನೈಟ್ ಎಂಬ ಹೆಸರಿನಿಂದ ಕರೆಯುತ್ತಾರೆ[೨೧]. ಚಿತ್ರದುರ್ಗವು ಭೌಗೋಳಿಕವಾಗಿ ಮೈದಾನ ಪ್ರದೇಶವೆಂದು ಗುರುತಿಸಿಕೊಂಡಿದೆ. ಪ್ರಸ್ತುತ ಜಿಲ್ಲೆಯು ೧೩೦.೩೪' ರಿಂದ ೧೫೦.೦೨' ಅಕ್ಷಾಂಶದಲ್ಲೂ, ೭೬೦,೫' ರಿಂದ

೭೭೦.೦೦' ರೇಖಾಂಶದ ನಡುವೆ ಇದೆ[೨೨]. ಜಿಲ್ಲಾ ಪ್ರದೇಶದಲ್ಲಿ ೬ ತಾಲೂಕುಗಳು, ೧೦೫೯ ಗ್ರಾಮಗಳಿವೆ. ೯೪೮ ಗ್ರಾಮಗಳಲ್ಲಿ ವಾಸವಿದ್ದು, ೧೧೩ ಗ್ರಾಮಗಳಲ್ಲಿ ಜನವಸತಿ ಇಲ್ಲ. ೧೦,೮೫೨ ಚ.ಕಿ.ಮೀ. ವಿಸ್ತೀರ್ಣವಾಗಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ೨೨ ಹೋಬಳಿ, ೧೮೫ ಗ್ರಾಮ ಪಂಚಾಯಿತಿಗಳಿವೆ. ಒಟ್ಟು ೧೬,೫೯,೪೫೬ ಜನರು ನಗರ ಹಾಗೂ ಹಳ್ಳಿಗಳಲ್ಲಿ ವಾಸವಾಗಿದ್ದಾರೆ[೨೩]. ೧೯೯೭ರಲ್ಲಿ ಚಿತ್ರದುರ್ಗ ಜಿಲ್ಲೆ ವಿಭಾಗವಾಗಿ ದಾವಣಗೆರೆ, ಹರಿಹರ, ಜಗಲೂರು ತಾಲೂಕುಗಳು ದಾವಣಗೆರೆ ಜಿಲ್ಲೆಗೆ ಸೇರಿದವು[೨೪]. ಉಳಿದಂತಹವುಗಳಾದ ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ, ಮೊಳಕಾಲ್ಮೂರು, ಹೊಸದುರ್ಗ, ಚಿತ್ರದುರ್ಗ ತಾಲೂಕುಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಉಳಿದುಕೊಂಡಿವೆ. ಚಿತ್ರದುರ್ಗ ಜಿಲ್ಲೆಯ ಪೂರ್ವಕ್ಕೆ ಅನಂತಪುರ ಜಿಲ್ಲೆ, ಪಶ್ಚಿಮ ದಿಕ್ಕಿನಲ್ಲಿ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆ, ಆಗ್ನೇಯ ದಿಕ್ಕಿನಲ್ಲಿ ತುಮಕೂರು ಜಿಲ್ಲೆ, ವಾಯುವ್ಯ ಹಾಗೂ ಉತ್ತರ ದಿಕ್ಕಿನಲ್ಲಿ ಬಳ್ಳಾರಿ ಜಿಲ್ಲೆ, ನೈರುತ್ಯ ದಿಕ್ಕಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಸುತ್ತುವರಿಯಲ್ಪಟ್ಟಿದೆ[೨೫].

೨.೨: ಭೌಗೋಳಿಕ ಲಕ್ಷಣಗಳು

ಚಿತ್ರದುರ್ಗ ಜಿಲ್ಲೆಯ ಭೌಗೋಳಿಕವಾಗಿ ಮಹತ್ವದ್ದು. ಭೌಗೋಳಿಕ ಅಂಶಗಳು ಪ್ರಾಗೈತಿಹಾಸಿಕ ವಿಕಸನದ ಮೇಲೆ ಪ್ರಭಾವ ಬೀರಿವೆ. ತಾಲೂಕಿನಿಂದ ತಾಲೂಕಿಗೆ ಭೌಗೋಳಿಕವಾಗಿ ವ್ಯತ್ಯಾಸವನ್ನು ಗುರುತಿಸಬಹುದು. ಬಯಲು ಸೀಮೆಯಾಗಿರುವ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಖನಿಜ, ನೀರು, ಸಸ್ಯ, ಪ್ರಾಣಿ, ಅರಣ್ಯ, ಶಿಲೆಗಳಿಗೆ ಕೊರತೆಯಿಲ್ಲ. ಪ್ರಾಗಿತಿಹಾಸಕ್ಕೆ ಅನ್ವಯಿಸುವಂತೆ ಭೌಗೋಳಿಕ ಲಕ್ಷಣಗಳನ್ನು ವಿವರಿಸಲಾಗಿದೆ.

೨.೨.೧ ವಾಯುಗುಣ:

ಒಂದು ಪ್ರದೇಶದಲ್ಲಿ ನಾವುಗಳೂ ವಾಸವಾಗಬೇಕಾದರೆ ವಾಯುಗಣದ ಅರಿವು ಬಹುಮುಖ್ಯ. ಅದರಂತೆ ಚಿತ್ರದುರ್ಗ ಜಿಲ್ಲೆಯ ವಾಯುಗುಣವನ್ನು ತಿಳಿದುಕೊಂಡರೆ ಸಂಶೋಧಿಸಲು ಮತ್ತು ವಿವಿಧ ಚಟುವಟಿಕೆಯಲ್ಲಿ ತೊಡಗಲು ಸಾಧ್ಯ. ಬಹಳಷ್ಟು ಪ್ರಮಾಣದಲ್ಲಿ ಬಿಸಿಲು, ಮಳೆ, ಶೀತವಿಲ್ಲದೆ ಸಮಶೀತೋಷ್ಣ ವಲಯವಾಗಿರುವುದು ಚಿತ್ರದುರ್ಗ ಜಿಲ್ಲೆ. ೨೦೧೩-೧೪ರಲ್ಲಿ ವಾರ್ಷಿಕವಾಗಿ ಒಟ್ಟು ೫೯೨.೫ ಮಿ.ಮೀ ಮಳೆ ಆಗಿದೆ. ಅತಿ ಹೆಚ್ಚು ಮಳೆ ಆಗುವುದು ಹೊಳಲ್ಕೆರೆ ತಾಲೂಕಿನಲ್ಲಿ (೭೧೮.೪

ಮಿ.ಮೀ), ಅತಿ ಕಡಿಮೆ ಮಳೆ ಆಗುವ ಪ್ರದೇಶವೆಂದರೆ ಚಳ್ಳಕೆರೆ ತಾಲೂಕು (೪೬೪.೫ ಮಿ.ಮೀ). ಮೊಳಕಾಲ್ಮೂರು ತಾಲೂಕಿನಲ್ಲಿ ಚಳ್ಳಕೆರೆ ತಾಲೂಕಿಗಿಂತ ೭೭೧ಮಿ.ಮೀ ಮಳೆ ಜಾಸ್ತಿಯಾಗುತ್ತದೆ[೨೬]. ಜಿಲ್ಲೆಯಲ್ಲಿ ಮಳೆ ಮಾಪನ ಕೇಂದ್ರಗಳಿರುವುದು ಒಟ್ಟು ೩೪. ಈ ಕೇಂದ್ರಗಳಿಂದ ಸರಾಸರಿ ಮಳೆಯ ಪ್ರಮಾಣ ತಿಳಿದುಬರುವುದು. ಮಳೆ ಹಂಚಿಕೆಯು ತಾಲೂಕಿನಿಂದ ತಾಲೂಕಿಗೆ ವ್ಯತ್ಯಾಸ ಇರುವುದು ಸ್ಪಷ್ಟ. ಈ ವ್ಯತ್ಯಾಸವು ಹಲವು ಬೆಳೆಗಳ ಬದಲಾವಣೆಗೆ ಕಾರಣವಾಗಿದೆ. ಡಿಸೆಂಬರ್ ತಿಂಗಳಲ್ಲಿ ಸರಾಸರಿ ಗರಿಷ್ಟ ಉಷ್ಣಾಂಶವು ೨೭.೯೦°ಸೆಂ, ಇದ್ದರೆ ಕನಿಷ್ಟ ೧೬.೬೦°ಸೆಂ ಇರುತ್ತದೆ. ಬೇಸಿಗೆಯಲ್ಲಿ ೩೬.೨೦°ಸೆಂ ನಿಂದ ೪೦°ಸೆಂ ಉಷ್ಣಾಂಶ ಇರುವುದು[೨೭]. ಚಳ್ಳಕೆರೆ, ಮೊಳಕಾಲ್ಮೂರು ತಾಲೂಕು ಭಾಗದಲ್ಲಿ ಬೇಸಿಗೆಯಲ್ಲಿ ೪೦೦ ಸೆಂಟಿಗ್ರೇಡ್‌ನಷ್ಟು ಬಿಸಿಲು ಇರುತ್ತದೆ. ಈ ಕಾರಣದಿಂದ ವಾತಾವರಣವು ಬಿಸಿಯಾಗಿರುತ್ತದೆ. ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆ ತಾಲೂಕು ಪರಿಸರದಲ್ಲಿ ಬೇಸಿಗೆಯಲ್ಲಿ ವಾತಾವರಣವು ಸಮಶಿತೋಷ್ಣದಿಂದ ಕೂಡಿರುತ್ತದೆ. ಜೂನ್-ಜುಲೈ ತಿಂಗಳಲ್ಲಿ ಬಿಸಿಗಾಳಿ ಜೊತೆಗೆ ಸುಂಟರಗಾಳಿ ಬೀಸುವುದು. ಬೇಸಿಗೆಯಲ್ಲಿ ವೇದಾವತಿ ನದಿ ತೀರದ ಪ್ರದೇಶದ ಹೋದಾಗ ಗಾಳಿಯಲ್ಲಿ ಮರಳು ಸೇರಿರುತ್ತದೆ. ಇದರಿಂದ ಪ್ರಯಾಣಿಕರ ಕಣ್ಣುಗಳು ಹಾಳಾಗಬಹುದು. ಇದೇ ಸಂದರ್ಭದಲ್ಲಿ ಹೊಳಲ್ಕೆರೆಗೆ ಹೋದರೆ ಹಸಿರು ಕಾಣುವುದು. ಬೇಸಿಗೆಯಲ್ಲಿ ಚಿತ್ರದುರ್ಗ, ಚಳ್ಳಕೆರೆ, ಮೊಳಕಾಲ್ಮೂರು ಪರಿಸರದಲ್ಲಿನ ಹುಲ್ಲು ಒಣಗುವುದರಿಂದ ಹೊಳಲ್ಕೆರೆ ತಾಲೂಕು ಪರಿಸರವು ಪಶುಸಂಗೋಪನೆಗೆ ಯೋಗ್ಯವಾಗಿರುತ್ತದೆ. ಪ್ರಾಗಿತಿಹಾಸ ಕಾಲದಲ್ಲಿ ವಾಸವಾಗಿದ್ದ ವಸತಿ ನೆಲೆಗಳು ವೇದಾವತಿ ಹಾಗೂ ಜಿನಗಿಹಳ್ಳ ಪರಿಸರದಲ್ಲಿ ಹೆಚ್ಚು ಕಂಡುಬಂದಿವೆ. ಇದಕ್ಕೆ ಕಾರಣ ನಿರಂತರವಾಗಿ ಹರಿಯುತ್ತಿದ್ದ ನೀರು. ಬಿಸಿಲಿನ ಮತ್ತು ತಂಪಾದ ಎರಡು ವಾತಾವರಣದಲ್ಲಿ ನವ ಶಿಲಾಯುಗದಿಂದ ಬೃಹತ್ ಶಿಲಾಯುಗದ ಜನರು ವಾಸವಾಗಿದ್ದರು ಎಂಬುದಕ್ಕೆ ಕಂಡುಬಂದಿರುವ ಅವಶೇಷಗಳು ಆಧಾರ. ಪ್ರಾಗಿತಿಹಾಸದ ಜನರು ಬೇಸಿಗೆ ಸಂದರ್ಭದಲ್ಲಿ ಪಶುಸಂಗೋಪನೆ ಕಾರಣಕ್ಕಾಗಿ ಹೊಳಲ್ಕೆರೆ ಕಡೆ ಹೋಗಿರುವ ಸಾಧ್ಯತೆಗಳಿವೆ. ಅಧಿಕ ಮಳೆ, ಸಮಾಧಿ ರಚಿಸಲು ಶಿಲೆಗಳ ಅಭಾವದಿಂದ ಹೊಳಲ್ಕೆರೆ ಭಾಗದಿಂದ ಚಿತ್ರದುರ್ಗದ ಕಡೆ ಬೃಹತ್ ಶಿಲಾಯುಗದ ಜನರು ವಲಸೆ ಬಂದಿರಬೇಕು. ಇದೇ ರೀತಿಯಾಗಿ ಜಿಲ್ಲೆಯಲ್ಲಿ ವಲಸೆ ಹೋಗಿರುವುದಕ್ಕೆ ವಾತಾವರಣವು ಕಾರಣವೆಂಬುದು ಸ್ಪಷ್ಟ.

೨.೨.೨ ಜಲ ಸಂಪತ್ತು:

ನೀರು ಪ್ರತಿಯೊಂದು ಜೀವಿಗೂ ಬೇಕಾದ ಅಮೂಲ್ಯ ಸಂಪತ್ತು. ಜೀವಿಗಳು ಬದುಕಬೇಕಾದರೆ ನೀರು ಬೇಕು. ನೀರು ಉಪ್ಪಿನಿಂದ, ಗಡುಸಿನಿಂದ ಹಾಗೂ ಸಿಹಿಯಿಂದ ಕೂಡಿರುತ್ತದೆ. ನಾಗರೀಕತೆ ಬೆಳವಣಿಗೆಗೆ ಮತ್ತು ನಾಶಕ್ಕೆ ನೀರು ಕಾರಣ. ಪ್ರಾಚೀನ ಕಾಲದಲ್ಲಿ ವಿದೇಶಗಳೊಂದಿಗೆ ಸಮುದ್ರಗಳ ಮೂಲಕ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಕೆರೆಗಳ ನೀರು ಕಡಿಮೆಯಾದಾಗ ಬಹಳಷ್ಟು ಸಾಂಸ್ಕೃತಿಕ ಕುರುಹುಗಳು ಕಂಡುಬಂದಿವೆ. ಅದಕ್ಕೆ ಚಿತ್ರದುರ್ಗ ತಾಲೂಕು ಸಂಗೇನಹಳ್ಳಿಕೆರೆಯ ನಡುಗಡೆಯಲ್ಲಿರುವ ಬೂದಿದಿಬ್ಬವೇ ಸಾಕ್ಷಿ. ಹಾನಗಲ್ಲು ಪಕ್ಕದಲ್ಲಿರುವ ಹಳೇಕೆರೆ ನೆಲೆಯ ಪಕ್ಕದಲ್ಲಿನ ಹಳ್ಳದ ದವಡೆಯಲ್ಲಿ ಡಾಲ್ಮೆನ್ ಸಿಸ್ಟ್ ಸಮಾಧಿ ನಾಶವಾಗಿದೆ. ಇದಕ್ಕೆ ಕಾರಣ ಹಳ್ಳದ ನೀರು. ಇಂದಿನ ಜನರು ಕೊಳವೆ ಬಾವಿಗಳನ್ನು ನಂಬಿ ಬದುಕುತ್ತಿದ್ದಾರೆ. ಪ್ರಾಗಿತಿಹಾಸದಲ್ಲಿ ನಿಸರ್ಗದಲ್ಲಿ ಸಿಗುತ್ತಿದ್ದ ನದಿ, ಹಳ್ಳಗಳು, ಕುಂಟೆಗಳು, ಬೆಟ್ಟದ ಮೇಲೆ ನಿಧಾನವಾಗಿ ಹರಿಯುತ್ತಿದ್ದ ಚಿಲುಮೆಗಳು ಪ್ರಮುಖ ನೀರಿನ ಮೂಲಗಳಾಗಿವೆ. ಅಂದು ಕುಡಿಯುವ ನೀರು ಪರಿಶುದ್ಧವಾಗಿದ್ದವು. ಇದಕ್ಕೆ ಕಾರಣ ಪರಿಸರ ಮಾಲಿನ್ಯಗೊಳ್ಳದಿರುವುದು. ನೀರನ್ನು ಮಡಕೆಗಳಲ್ಲಿ ಸಂಗ್ರಹಿಸಿ ಬಳಸುತ್ತಿದ್ದರೆಂಬುದು ಆರೋಗ್ಯಕರವಾದ ವಿಚಾರ. ಮಣಿಯಾಕರಾದ ಬಾಯಿಯುಳ್ಳ ಮಡಕೆಗಳಲ್ಲಿ ನೀರನ್ನು ಹಾಕಿಕೊಂಡು ಬೇಟೆಯಾಡಲು ಹೋಗಿರುವ ಸಾಧ್ಯತೆಗಳಿವೆ. ಚಿತ್ರದುರ್ಗ ಪರಿಸರದಲ್ಲಿ ನದಿ ಹಳ್ಳಗಳು ಹಾಗೂ ಸ್ವಾಭಾವಿಕ ಕುಂಟೆಗಳು ಮತ್ತು ಚಿಲುಮೆಗಳು ಪ್ರಾಚೀನವಾದವು. ಜಿಲ್ಲೆಯಲ್ಲಿ ಸುವರ್ಣಮುಖಿ, ವೇದಾವತಿ ನದಿ ಹಾಗೂ ಜಿನಗಿಹಳ್ಳವು ಬಹುಮುಖ್ಯವಾದವು. ವೇದಾವತಿಯು ಹೊಸದುರ್ಗ, ಹಿರಿಯೂರು, ಚಳ್ಳಕೆರೆ ತಾಲೂಕುಗಳ ಮೂಲಕ ಹರಿಯುತ್ತದೆ[೨೮]. ಜಿನಗಿಹಳ್ಳ ಹೊಳಲ್ಕೆರೆ ತಾಲೂಕಿನ ಓಬಳದೇವರಗುಡ್ಡದಲ್ಲಿ ಹುಟ್ಟಿ ಕಾತ್ರಾಳ್‌ಕೆರೆ, ಸಂಗೇನಹಳ್ಳಿಕೆರೆಯ ಮೂಲಕ ಕೂಡ್ಲಿಗಿ ತಾಲೂಕಿನ ರಂಗಯ್ಯನಗುಡ್ಡದ ಜಲಾಶಯಕ್ಕೆ ಸೇರುವುದು[೨೯]. ವೇದಾವತಿ ನದಿಯ ಸಮೀಪದಲ್ಲಿ ಹಿರಿಯೂರು ತಾಲೂಕಿನ ಮಾಳಪ್ಪನಗುಡ್ಡ, ಪರಮೇನಹಳ್ಳಿ ಹಾಗೂ ಚಳ್ಳಕೆರೆ ತಾಲೂಕಿನ ಪರಶುರಾಂಪುರ, ಟಿ.ಎನ್.ಕೋಟೆ, ಯಾದಲಗಟ್ಟೆ, ಪರಿಸರದಲ್ಲಿ ನವ ಶಿಲಾಯುಗದ, ಬೃಹತ್ ಶಿಲಾಯುಗದ ಕುರುಹುಗಳು ಕಾಣಸಿಗುತ್ತವೆ. ಜಿನಗಿಹಳ್ಳದ ದಂಡೆಗಳಾದ ಚಿಪ್ಪಿನಕೆರೆ (ಚಿತ್ರದುರ್ಗ), ಸಂಗೇನಹಳ್ಳಿಕೆರೆ (ಚಿತ್ರದುರ್ಗ), ತೊರೆಕೋಲಮ್ಮನಹಳ್ಳಿ (ಚಳ್ಳಕೆರೆ), ಬ್ರಹ್ಮಗಿರಿ (ಮೊಳಕಾಲ್ಮೂರು) ಕಡೆಗಳಲ್ಲಿ ಪ್ರಾಗಿತಿಹಾಸ ಕಾಲದ ವಸತಿ

ನೆಲೆಗಳಿವೆ. ಕೂನಬೇವು (ಚಿತ್ರದುರ್ಗ), ನಾಯಕನಹಟ್ಟಿ (ಚಳ್ಳಕೆರೆ), ನೆರೆನಾಳ್ (ಹಿರಿಯೂರು), ಜಾನಕಲ್ಲು (ಹೊಸದುರ್ಗ), ಸಿರಾಪನಹಳ್ಳಿ (ಹೊಳಲ್ಕೆರೆ), ರಾಮಸಾಗರ (ಮೊಳಕಾಲ್ಮೂರು) ಈ ಮೊದಲಾದ ಕಡೆಗಳಲ್ಲಿ ಹರಿಯುವ ಹಳ್ಳಗಳ ದಂಡೆಯ ಮೇಲೆ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳಿವೆ. ಚಿತ್ರದುರ್ಗ ತಾಲೂಕಿನ ಚಿಕ್ಕಕಬ್ಬಿಗೆರೆಯಲ್ಲಿ ದೊಣೆಕರಿಯಮ್ಮ ಎಂದು ಪೂಜಿಸುವ ಬೃಹತ್ ಶಿಲಾಯುಗದ ಡಾಲ್ಮೆನ್‌ಸಿಸ್ಟ್ ಸಮಾಧಿಯೊಂದು ಇದ್ದು, ಸಮಾಧಿ ಹಿಂಭಾಗ ೧೦೦೦ಲೀಟರ್ ನೀರು ಸಂಗ್ರಹವಾಗುವ ನೈಸರ್ಗಿಕ ದೊಣೆಯನ್ನು ಕಾಣುತ್ತೇವೆ. ಕೂನಬೇವು, ತಾಳ್ಯ, ಸಂಗೇನಹಳ್ಳಿಕೆರೆ ಸಮೀಪದ ಹಳ್ಳಗಳು ಬಹು ಪ್ರಾಚೀನವಾದವುಗಳು. ೧ಲಕ್ಷವರ್ಷ ಪೂರ್ವದ ಹಳೆಶಿಲಾಯುಗದ ಆಯುಧಗಳು ಹಳ್ಳದ ದಂಡೆಗಳ ಮೇಲೆ ದೊರೆತಿವೆ. ಈ ಹಳ್ಳದ ನೀರು ವೇದಾವತಿ ನದಿಯನ್ನು ಸೇರುತ್ತವೆ. ಗುಂಡಿಹಳ್ಳ, ಸಾಸಲು ಹಳ್ಳ, ಕುರುಮರಡಿ ಹಳ್ಳ, ಶ್ರೀರಾಂಪುರ ಹಳ್ಳ, ಇನ್ನು ಮೊದಲಾದ ಹಳ್ಳಗಳು ಶಿಲಾಯುಗದ ಮಾನವನು ವಾಸಿಸಲು ನೆಲೆಯನ್ನು ಒದಗಿಸಿದ್ದವು. ಯಾದಲಗಟ್ಟೆ, ಗಟ್ಟಿಹೊಸಹಳ್ಳಿ, ಹಾಗೂ ದೊಡ್ಡಕಿಟ್ಟದಾಳ್ ಹಳ್ಳದ ದಂಡೆಯ ಪಕ್ಕದಲ್ಲಿ ಬೃಹತ್ ಶಿಲಾಯುಗದ ಕಬ್ಬಿಣದ ಕುಲುಮೆಗಳಿವೆ. ಕರಗಿದ ಕಬ್ಬಿಣವನ್ನು ತಣ್ಣಗೆ ಮಡುವ ಉದ್ದೇಶದಿಂದ ಹಳ್ಳದ ದಂಡೆಯ ಪಕ್ಕದಲ್ಲಿ ಕುಲುಮೆಗಳಿದ್ದವು. ಸಂತೇಗುಡ್ಡ, ಜಟಂಗಿರಾಮೇಶ್ವರ, ನುಂಕೆಮಲೆ, ಚಿತ್ರದುರ್ಗ, ಬ್ರಹ್ಮಗಿರಿ ಬೆಟ್ಟದಲ್ಲಿ ಕಲ್ಲಾಸರೆಗಳ ಮೇಲೆ ವರ್ಣಚಿತ್ರಗಳಿವೆ. ವರ್ಣಚಿತ್ರ ರಚಿಸಿದ ಪ್ರಾಗಿತಿಹಾಸದ ಮಾನವರು ಬೆಟ್ಟದಲ್ಲಿದ್ದ ಚಿಲುಮೆಯ ನೀರನ್ನು ಬಳಸಿರಬೇಕೆಂದು ನಿರ್ಧರಿಸಬಹುದು. ಈ ರೀತಿ ಹಲವು ಉದ್ದೇಶಗಳಿಗಾಗಿ ಹಳ್ಳ, ಕೆರೆ, ನದಿಗಳ ದಂಡೆಗಳ ಮೇಲೆ ವಾಸವಾಗಿದ್ದರು ಎಂದು ನಿರ್ಧರಿಸಲಾಗಿದೆ.

೨.೨.೩. ಶಿಲಾ ಸಮೂಹ:

ರಾಬರ್ಟ್ ಬ್ರೂಸ್‌ಪೂಟ್ ೧೮೭೬ರಲ್ಲಿ ಧಾರವಾಡ ಸುತ್ತಮುತ್ತ ಭೂ ಸರ್ವೆ ಮಾಡಿ, ಕಂಡುಬಂದಿರುವ ಶಿಲಾವರ್ಗಕ್ಕೆ ಧಾರವಾಡ ಶಿಲಾ ಸಮೂಹವೆಂದು ಕರೆದಿದ್ದಾರೆ[೩೦]. ಈ ಶಿಲೆಯು ಶಿಥಿಲೀಕರಣಗೊಂಡು ಸಾಗಾಣಿಕೆ ಹೊಂದಿ ಸಮುದ್ರತಳದಲ್ಲಿ ಸಂಚಯನವಾಗಿ ಪ್ರಾಚೀನ ಕಾಲದಲ್ಲಿ ಶಿಲಾ ಪದರು ರಚನೆಗೊಂಡಿವೆ. ಧಾರವಾಡ ಶಿಲೆಯು ೫೦೦ ದಶಲಕ್ಷ ವರ್ಷಗಳ ಹಿಂದೆ ರೂಪುಗೊಂಡಿವೆ[೩೧]. ಈ ಪ್ರಮುಖ ಶಿಲೆಯಲ್ಲಿ ಚಿನ್ನ, ತಾಮ್ರ, ಕ್ರೋಮೈಟ್, ಕಬ್ಬಿಣ, ಸತು, ಸೀಸ, ಮ್ಯಾಂಗನೀಸ್, ಬೆಣಚು ಕಲ್ಲು, ಬಳಪದ ಕಲ್ಲು, ಅಭ್ರಕ ಅಡಗಿವೆ[೩೨]. ಮುಖ್ಯವಾಗಿ ಕೆಳಭಾಗದ ಧಾರವಾಡ

ಶಿಲೆಯಲ್ಲಿ ಅಧಿಕ ಸಿಲಿಕಾಂಶ ಶಿಲಾರಸ ಪದರಗಳಿಂದ ಅಗ್ನಿ ಶಿಲೆಗಳನ್ನೊಳಗೊಂಡಿದ್ದರೆ, ಮಧ್ಯ ಧಾರವಾಡ ಶಿಲೆಗಳು ಕ್ವಾರ್ಟ್‌ಜೈಟ್, ಸುಣ್ಣ ಶಿಲೆಗಳು, ಡಾಲೋಮೈಟ್‌ಗಳಂತಹ ಶಿಲೆಗಳಿಂದ ಆಗಿವೆ. ಮೇಲಿನ ಧಾರವಾಡ ಶಿಲೆಯು ಕಂಗ್ಲಾಮರೇಟ್, ಕ್ವಾರ್ಟ್‌ಜೈಟ್, ಚರ್ಟ್, ಫೆರುಜಿನಸ್ ಶಿಲ್ಪುಗಳು ಹಾಗೂ ಸುಣ್ಣ ಶಿಲೆಗಳಿಂದ ಆದಂತಹವುಗಳು[೩೩]. ಪ್ರಸ್ತುತ ಜಿಲ್ಲೆಯು ಧಾರವಾಡ ಶಿಲಾಸಮೂಹಕ್ಕೆ ಸೇರಿದ ವಲಯವಾಗಿದೆ. ಅದಕ್ಕೆ ಗದಗ-ಚಿತ್ರದುರ್ಗ ಶಿಸ್ಟ್‌ವಲಯವೆಂದು ಹೆಸರು. ಈ ಶಿಸ್ಟ್‌ವಲಯವು ನರಗುಂದದಿಂದ ಮೈಸೂರುವರೆಗೆ ಹಬ್ಬಿದೆ[೩೪]. ೧೮೬೩ರಲ್ಲಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನಲ್ಲಿ ಭೂ ಸರ್ವೆ ಮಾಡುವಾಗ ತಾಳ್ಯ ಪರಿಸರದಲ್ಲಿ ಆದಿ ಹಳೆಶಿಲಾಯುಗದ ಆಯುಧಗಳನ್ನು ಶೋಧಿಸಿದ್ದಾರೆ. ರಾಬರ್ಟ್ ಬ್ರೂಸ್‌ಫೂಟ್ ೧೯೫೬ರಲ್ಲಿ ಶೇಷಾದ್ರಿ, ಎಂ. ಹೊಸದುರ್ಗ ತಾಲೂಕಿನ ಜಾನಕಲ್ಲು ಪರಿಸರದಲ್ಲಿ ಆದಿ ಹಳೆಶಿಲಾಯುಗದ ಆಯುಧವನ್ನು ಬೆಳಕಿಗೆ ತಂದಿದ್ದಾರೆ[೩೫]. ಈ ಆಯುಧಗಳು ಮೇಲಿನ ಧಾರವಾಡ ಶಿಲೆಗಳಿಂದ ರಚಿತಗೊಂಡವುಗಳು. ೧೮೯೫ರಲ್ಲಿ ರಾಬರ್ಟ್ ಬ್ರೂಸ್‌ಫೂಟ್ ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರಿನಿಂದ ರಾಯದುರ್ಗದ ಕೈಲಾಸಕೊಂಡದವರೆಗೆ ಇರುವ ಡೈಕ್ ಶಿಲೆಯನ್ನು ಗುರುತಿಸಿದ್ದಾರಲ್ಲದೆ, ಜಟಂಗಿರಾಮೇಶ್ವರ ಬೆಟ್ಟದ ಹತ್ತಿರ ಇರುವ ವಡ್ಡರಹಳ್ಳಿಯಲ್ಲಿ ಡೈಕ್ ಶಿಲೆಯು ಸಿಗುವುದು ಎಂದಿದ್ದಾರೆ[೩೬]. ಈ ಶಿಲೆಯು ಬ್ರಹ್ಮಗಿರಿ ನೆಲೆಯಲ್ಲಿ ಕಂಡುಬಂದಿರುವ ನವಶಿಲಾಯುಗದ ಆಯುಧಗಳು ಡೈಕ್ ಶಿಲೆಯಿಂದ ರಚಿತಗೊಂಡವುಗಳು. ಚಿತ್ರದುರ್ಗ ತಾಲೂಕಿನ ಕೂನಬೇವಿನಲ್ಲಿ ಡೈಕ್ ಶಿಲೆಯಿಂದ ರಚಿತಗೊಂಡ ನವ ಶಿಲಾಯುಗದ ಕಲ್ಲಿನ ಕೊಡಲಿಗಳು ಕಂಡುಬಂದಿವೆ[೩೭]. ಕ್ಷೇತ್ರಕಾರ್ಯದಲ್ಲಿ ಚಿತ್ರದುರ್ಗ ತಾಲೂಕಿನ ಜೆ.ಎನ್.ಕೋಟೆಯ ಪರಿಸರದಲ್ಲಿ ಚರ್ಟ್, ಅಗೇಟ್, ಜಾಸ್ಪರ್ ಶಿಲೆಗಳಿಂದ ರಚಿತಗೊಂಡ ಸೂಕ್ಷ್ಮ ಶಿಲಾಯುಗದ ಆಯುಧಗಳು ದೊರಕಿವೆ. ಇದೇ ರೀತಿ ಸೂಕ್ಷ್ಮ ಆಯುಧಗಳು ಜಾನಕಲ್ಲು ಮತ್ತು ಲಂಬಾಣಿಹಟ್ಟಿಯಲ್ಲಿ ಸಂಶೋಧಕರಿಗೆ ದೊರಕಿವೆ[೩೮]. ಬ್ರಹ್ಮಗಿರಿ ಪರಿಸರದಲ್ಲಿ ಶೋಧಗೊಂಡಿರುವ ಸೂಕ್ಷ್ಮ ಉಪಕರಣಗಳು ಚರ್ಟ್, ಅಗೇಟ್, ಜಾಸ್ಪರ್, ಕಾರ್ಲೀನಿಯಾ, ಫ್ಲಿಂಟ್, ಕ್ರಿಸ್ಟಲ್ ಶಿಲೆಗಳಿಂದ ರಚಿತಗೊಂಡಿವೆ[೩೯]. ಪ್ರಸ್ತುತ ಜಿಲ್ಲಾ ಪರಿಸರದಲ್ಲಿ ಕಂಡುಬಂದಿರುವ ಪ್ರಾಗಿತಿಹಾಸದ ವಸತಿ ನೆಲೆಗಳಲ್ಲಿ ದೊರಕಿರುವ ಕವಣೆಗಳು, ಉಜ್ಜುವ ಕಲ್ಲು, ರುಬ್ಬುವ ಕಲ್ಲುಗಳು ಗ್ರಾನೈಟ್ ಶಿಲೆಗಳಿಂದ ರೂಪುಗೊಂಡಿವೆ. ಬೃಹತ್ ಶಿಲಾಯುಗದ ಗೋರಿಗಳನ್ನು ನಿರ್ಮಾಣ ಮಾಡುವಲ್ಲಿ ಬೆಣಚುಕಲ್ಲು, ಗ್ರಾನೈಟ್, ಫೆರುಜಿನಸ್

ಶಿಲೆಯನ್ನು ಬಳಸಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ. ಬೆಣಚುಕಲ್ಲು ಕೂನಬೇವು, ಪಾಲವ್ವನಹಳ್ಳಿಯ ಪಶ್ಚಿಮದ ಗುಡ್ಡದಲ್ಲಿ, ಇಂಗಳದಾಳ್ ಸಮೀಪ, ಹೊರಕೆ ದೇವಪುರದಲ್ಲಿ, ಭೀಮಸಮುದ್ರ ಬಳಿಯಿರುವ ಬೆಣಚುಕಲ್ಲು ಮಟ್ಟಿಯಲ್ಲಿ ಕಂಡುಬಂದಿವೆ. ಕೂನಬೇವು ಮತ್ತು ಸಂಗೇನಹಳ್ಳಿಕೆರೆಯಲ್ಲಿ ದೊರೆತಿರುವ ಹಳೆ ಶಿಲಾಯುಗದ ಆಯುಧಗಳು ಫೆರುಜಿನಸ್ ಶಿಲೆಯಿಂದ ಆದಂತವು. ಈ ಫೆರುಜಿನಸ್ ಶಿಲೆಗಳಿಗೆ ಜಿಲ್ಲೆಯಲ್ಲಿ ಕೊರತೆಯಿಲ್ಲ. ಹಳೆಶಿಲಾಯುಗದಲ್ಲಿ ಕ್ವಾರ್ಟ್‌ಜೈಟ್, ಚರ್ಟ, ಫೆರುಜಿನಸ್ ಸಿಲ್ಟುಗಳು, ಸುಣ್ಣ ಶಿಲೆಗಳು, ಉಸುಕು ಕಲ್ಲು, ಶೇದಿಕಲ್ಲು ಮೊದಲಾದ ಕಲ್ಲುಗಳು ಆಯುಧಗಳ ತಯಾರಿಕೆಯಲ್ಲಿ ಬಳಕೆಗೊಂಡಿರುವುದು ತಿಳಿದಿರುವ ವಿಚಾರ. ಈ ರೀತಿಯ ಹಲವು ಶಿಲೆಗಳು ಬಳಕೆಯಾಗಿರುವುದು ಗಮನಿಸಿದರೆ ನಿರ್ದಿಷ್ಟವಾದ ಶಿಲೆಯಿಂದ ರಚನೆಗೊಳ್ಳುತ್ತಿರಲಿಲ್ಲ ಎಂದು ಅರ್ಥೈಸಬಹುದು. ಹುಣಸಗಿ ಪರಿಸರದಲ್ಲಿ ಮಾತ್ರ ಹಳೆ ಶಿಲಾಯುಗದ ಆಯುಧಗಳು ಸಿಗುತ್ತವೆ ಎನ್ನುವ ವಾದಗಳಿದ್ದವು. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬಂದಿರುವ ಹಳೆ ಶಿಲಾಯುಗದ ಆಯುಧಗಳು ಕರ್ನಾಟಕದಲ್ಲಿ ಬೇರೆ ಕಡೆಗಳಲ್ಲಿ ಸಿಗುವ ಸಾಧ್ಯತೆಗಳನ್ನು ಸೂಚಿಸುತ್ತವೆ. ಈ ಮೂಲಕ ಹಳೆ ಶಿಲಾಯುಗದ ಮಾನವನ ನೆಲೆಸುವಿಕೆ ವ್ಯಾಪ್ತಿ ವಿಶಾಲವಾದದ್ದು ಎಂದು ಹೇಳಬಹುದು.

೨.೨.೪. ಮಣ್ಣಿನ ಬಗೆಗಳು:

ಚಿತ್ರದುರ್ಗ ಜಿಲ್ಲೆಯಾದ್ಯಂತ ಕಪ್ಪು, ಕೆಂಪು, ಜೇಡಿಮಣ್ಣು, ಬಣ್ಣದ ಮಣ್ಣುಗಳು, ಜೌಗು ಮಣ್ಣು ಹಾಗೂ ಮರಳು ಸಿಗುತ್ತವೆ. ಕಪ್ಪು ಮಣ್ಣಿಗಿಂತ ಕೆಂಪು ಮಣ್ಣು ಹೆಚ್ಚು ಪ್ರಮಾಣದಲ್ಲಿ ಕಾಣಸಿಗುತ್ತವೆ. ಕೆಂಪು ಮಣ್ಣು ಸಿಗುವ ಕಡೆ ಕಪ್ಪು ಮಣ್ಣು ೨ಕಿ.ಮೀ. ದೂರದಲ್ಲಿ ಕಂಡುಬಂದಿರುವುದು ಪ್ರಕೃತಿಯ ವೈಶಿಷ್ಟ್ಯ. ಕಪ್ಪು ಮಣ್ಣು ದಕ್ಷಿಣ ಪ್ರಸ್ಥ ಭೂಮಿಯ ಬಸಾಲ್ಟ್‌ನಿಂದ ರೂಪುಗೊಂಡಿದ್ದು, ಇದರಲ್ಲಿ ಅಂಟುಗುಣವಿರುತ್ತದೆ[೪೦]. ಕೆಂಪು ಮಣ್ಣು ಹಳೆಯ ಪದರು ಶಿಲೆಗಳ ಶುಷ್ಕ ವಾಯುಗುಣ ಪರಿಸ್ಥಿತಿಯಲ್ಲಿ ಶಿಥಿಲೀಕರಣವಾಗಿ ರೂಪುಗೊಂಡಿರುವುದು[೪೧]. ಜೇಡಿಮಣ್ಣು ಸಾಮಾನ್ಯವಾಗಿ ಕೆರೆ ಅಂಗಳದಲ್ಲಿ ಸಿಗುವಂತದ್ದು. ಸಾಮಾನ್ಯವಾಗಿ ಇಟ್ಟಿಗೆ ಮತ್ತು ಮಡಕೆಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಬಣ್ಣದ ಮಣ್ಣುಗಳು ಜಲಜನಕಯುಕ್ತವಾದ ಬೆಣಚಾಗಿರುತ್ತವೆ[೪೨]. ಈ ಮಣ್ಣು ಕೆಂಪು ಅಥವಾ ಹಸಿರು ಬಣ್ಣದ್ದಾಗಿರುತ್ತವೆ[೪೩]. ಬಹುಶಃ ವರ್ಣಚಿತ್ರಗಳನ್ನು ರಚಿಸುವುದಕ್ಕೆ ಈ ಬಣ್ಣದ ಮಣ್ಣುಗಳು ಬಳಕೆಯಾಗಿರಬಹುದು. ಜೌಗು ಮಣ್ಣು ಉಪಯುಕ್ತವಲ್ಲದ ಮಣ್ಣಾಗಿದ್ದು, ಅತಿ ಹೆಚ್ಚು ನೀರು ಜೋಪು ಏಳುವ ಪ್ರದೇಶಗಳಲ್ಲಿ

ಸಿಗುತ್ತದೆ. ಮರಳು ಹಳ್ಳ ಹಾಗೂ ನದಿಗಳ ಹರುಹುವಿನಲ್ಲಿ ಸಿಗುವುದು. ಮರಳು ಹೆಚ್ಚಾಗಿ ಚಳ್ಳಕೆರೆ, ಹಿರಿಯೂರು ತಾಲೂಕಿನಲ್ಲಿ ಕಾಣಬಹುದು. ವೇದಾವತಿ ನದಿಯಲ್ಲಿ ಸಿಗುವ ಮರಳು ಶುದ್ಧವಾದದ್ದು. ಬ್ರಹ್ಮಗಿರಿ ಉತ್ಖನನದಲ್ಲಿ ಕೆಂಪು, ಕಂದು, ಹಸಿರು, ಬೂದು, ಬಿಳಿ ಬೂದು, ಕಪ್ಪು ಬೂದು, ಚಾಕಲೇಟ್ ಬಣ್ಣದ ಕಪ್ಪು ಬಣ್ಣದ ಮಡಕೆಯ ಉಪಕರಣಗಳು ಕಂಡುಬಂದಿವೆ[೪೪]. ಬೃಹತ್ ಶಿಲಾಯುಗದ ಮಾನವರು ಶವಸಂಸ್ಕಾರದಲ್ಲಿ ವಿವಿಧ ಬಗೆಯ ಮಣ್ಣನ್ನು ಬಳಸಿದ್ದಾರೆ. ಕೋಲಾರ ಜಿಲ್ಲೆಯ ಜಡಿಗೇನಹಳ್ಳಿಯಲ್ಲಿ ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ಧತಿಯಾದ ಸ್ಯಾಕ್ರಿಪೋಗಿಯಾ ಸಮಾಧಿಯು ಉತ್ಖನನಗೊಂಡಿದೆ. ಈ ಸಮಾಧಿಯ ಮೇಲ್ಭಾಗದಲ್ಲಿ ಮೊದಲಿಗೆ ಚಕ್ಕೆ ಕಲ್ಲುಗಳನ್ನು ಹಾಕಲಾಗಿದ್ದು, ನಂತರ ಕಪ್ಪು ಮಣ್ಣು, ಇದರ ಕೆಳಗೆ ಕೆಂಪು ಮಣ್ಣು, ಇದರ ಕೆಳಗೆ ಮರಳನ್ನು ಹಾಕಿದ್ದಾರೆ[೪೫]. ಈ ಎಲ್ಲಾ ಅಂಶಗಳು ಚಿತ್ರದುರ್ಗ ಪರಿಸರದಲ್ಲಿ ದೊರೆತಿರುವ ಪ್ರಾಗೈತಿಹಾಸಿಕ ಕಾಲದ ನೆಲೆಗಳ ಮೇಲೆ ಬೆಳಕು ಚೆಲ್ಲುತ್ತವೆ.

೨.೨.೫. ಬೆಟ್ಟಗಳು:

ಪ್ರಸ್ತುತ ಜಿಲ್ಲಾ ಪರಿಸರದಲ್ಲಿ ಸಾಕಷ್ಟು ಬೆಟ್ಟ ಗುಡ್ಡಗಳಿವೆ. ಕಲ್ಲುಬಂಡೆ, ಮಣ್ಣಿನ, ಖನಿಜಾಂಶವುಳ್ಳ ಬೆಟ್ಟಗುಡ್ಡಗಳು ಚಿತ್ರದುರ್ಗದಾದ್ಯಂತ ಹರಡಿವೆ. ಪ್ರಾಗೈತಿಹಾಸಿಕ ದೃಷ್ಟಿಯಿಂದ ಕೆಲವೊಂದು ಬೆಟ್ಟ ಗುಡ್ಡಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಅವುಗಳಲ್ಲಿ ಜಟಂಗಿರಾಮೇಶ್ವರ ಬೆಟ್ಟ (೩೪೬೯ ಅಡಿ ಎತ್ತರ), ನುಂಕೆಮಲೆ (೩೦೨೨ ಅಡಿ ಎತ್ತರ), ಸಂತೇಗುಡ್ಡ (೨೫೯೩ ಅಡಿ ಎತ್ತರ) ಬ್ರಹ್ಮಗಿರಿ (೨೩೪೭ ಅಡಿ ಎತ್ತರ)[೪೬], ಜೋಗಿಮರಡಿ (೧೧೫೯ ಅಡಿ ಎತ್ತರ) ಐಚಲದುರ್ಗ(೩೮೦೪ ಅಡಿ ಎತ್ತರ), ಹಾಲುರಾಮೇಶ್ವರ ಗುಡ್ಡ (೩೮೭೫ ಅಡಿ ಎತ್ತರ) ಮರಡಿಹಳ್ಳಿ ಬೆಟ್ಟ[೪೭], ತಣಿಗೆಕಲ್ಲು, ಕೋತಿಗುಡ್ಡ, ಗೊಸಿರಪ್ಪನಬೆಟ್ಟ, ಸಿದ್ದೇಶ್ವರನದುರ್ಗ, ನನ್ನಿವಾಳ, ಮಾಳಪ್ಪನಗುಡ್ಡ ಇನ್ನು ಮೊದಲಾದವುಗಳು ಪ್ರಮುಖವಾದವುಗಳು. ಜಟಂಗಿರಾಮೇಶ್ವರ ಬೆಟ್ಟದ ಗವಿಯಲ್ಲಿ ಶಿಲಾತಾಮ್ರಯುಗದ ವರ್ಣಚಿತ್ರವನ್ನು ಅ.ಸುಂದರ ಶೋಧಿಸಿದ್ದರು. ಸಂತೆಗುಡ್ಡದಲ್ಲಿ ಎಸ್.ತಿಪ್ಪೇಸ್ವಾಮಿ ಮತ್ತು ಎಸ್.ವೈ.ಸೋಮಶೇಖರ್ ವರ್ಣಚಿತ್ರಗಳನ್ನು ಶೋಧಿಸಿದ್ದಾರೆ[೪೮]. ಬ್ರಹ್ಮಗಿರಿ ನೆಲೆಯಲ್ಲಿ ಶ್ರೀಶೈಲ ಆರಾಧ್ಯ, ಆರ್.ಎಂ.ಷಡಕ್ಷರಯ್ಯ ಅಪ್ಪಯ್ಯನಹಳ್ಳಿ ಗವಿವರ್ಣಚಿತ್ರ ಹಾಗೂ ಬಯಲುಬಂಡೆ ಚಿತ್ರಗಳನ್ನು ಪತ್ತೆ ಹಚ್ಚಿದ್ದಾರೆ[೪೯]. ಎನ್.ಎಸ್.ಮಹಂತೇಶ್ ತಣಿಗೆಕಲ್ಲು ಬಳಿ ಗವಿಯ ಒಳಭಾಗದಲ್ಲಿ ಮಡಕೆಚೂರು ಹಾಗೂ ನವ ಶಿಲಾಯುಗದ ಕೊಡಲಿಯನ್ನು ಬೆಳಕಿಗೆ ತಂದಿರುವರು[೫೦]. ಕ್ಷೇತ್ರಕಾರ್ಯದಲ್ಲಿ

ಎಸ್.ವೈ.ಸೋಮಶೇಖರ್ ಜೊತೆಗೂಡಿ ಗೋಸಿರಪ್ಪನಗುಡ್ಡದ ತಪ್ಪಲಿನಲ್ಲಿ ಆದಿ ಹಳೆಶಿಲಾಯುಗದ ಆಯುಧವನ್ನು ಸಂಗ್ರಹಿಸಿ ದಾಖಲಿಸಿದ್ದೇವೆ. ಜಾನಕಲ್ಲು, ತಾಳ್ಯ ಬೆಟ್ಟದ ಬಯಲಿನಲ್ಲಿ ಎಂ.ಶೇಷಾದ್ರಿ, ಘೂಟ್ ಆದಿ ಹಳೆಶಿಲಾಯುಗದ ಆಯುಧವನ್ನು ಶೋಧನೆ ಮಾಡಿದ್ದರು[೫೧]. ಹಾನಗಲ್ಲು, ನುಂಕೆಮಲೆ ಬೆಟ್ಟದ ತಪ್ಪಲಿನಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳನ್ನು ಸಂಗ್ರಹಿಸಿ ದಾಖಲಿಸಿದವರಲ್ಲಿ ಜಯಣ್ಣ.ಯು ಪ್ರಮುಖರು. ಲಕ್ಷಣ್ ತೆಲಗಾವಿ ಬೆಳಗಟ್ಟದ ಎದ್ದಲುಬಂಡೆ ಮಟ್ಟಿಯಲ್ಲಿ ಬಯಲುಬಂಡೆ ಚಿತ್ರಗಳನ್ನು ಗಮನಿಸಿ ಅದರ ಮಹತ್ವವನ್ನು ತಿಳಿಸಿದ್ದಾರೆ[೫೨]. ಎಸ್.ಜಿ. ರಾಮದಾಸರೆಡ್ಡಿಯವರು ಸಿದ್ದೇಶ್ವರನದುರ್ಗದ ಬಂಡೆಯ ಮೇಲೆ ಹಂದಿ ಚಿತ್ರವಿರುವ ಗೀರು ಚಿತ್ರವನ್ನು ಶೋಧಿಸಿದವರಲ್ಲಿ ಮೊದಲಿಗರು[೫೩]. ಚಿತ್ರದುರ್ಗ ತಾಲೂಕಿನ ದೊಡಗಟ್ಟದ ದೇವರ ಎತ್ತಿನಗುಡ್ಡದಲ್ಲಿ ಬೃಹತ್ ಶಿಲಾಯುಗದ ಬಯಲುಬಂಡೆ ಚಿತ್ರಗಳನ್ನು ಕ್ಷೇತ್ರಕಾರ್ಯದಲ್ಲಿ ಎಸ್.ನಾಗರಾಜಪ್ಪ ಜೊತೆಗೂಡಿ ಶೋಧಿಸಿದ್ದೇವೆ[೫೪]. ಈ ರೀತಿಯಾಗಿ ಬೆಟ್ಟ-ಗುಡ್ಡ ಹಾಗೂ ಮಟ್ಟಿಗಳ ಆಶ್ರಯದಲ್ಲಿ ಪ್ರಾಗಿತಿಹಾಸ ಕಾಲದ ಮಾನವರು ತನ್ನ ಬದುಕನ್ನು ವಿವಿಧ ಚಟುವಟಿಕೆಯಲ್ಲಿ ಕಾರ್ಯನಿರತವಾಗಿದ್ದರೆಂದು ಹಲವು ಶೋಧನೆಗಳಿಂದ ಸಾಬೀತಾಗಿದೆ.

ಚಿತ್ರದುರ್ಗ, ಮೊಳಕಾಲ್ಮೂರು ಮತ್ತು ಹೊಸದುರ್ಗ ಭಾಗದಲ್ಲಿ ಶಿಲಾಬೆಟ್ಟಗಳು ಇರುವುದರಿಂದ ವರ್ಣಚಿತ್ರಗಳನ್ನು ಶೋಧಿಸಲು ಸಾಧ್ಯವಾಗಿದೆ. ಚಳ್ಳಕೆರೆ ಭಾಗವು ಬಯಲಿನಿಂದ ಕೂಡಿರುವುದರಿಂದ ವರ್ಣಚಿತ್ರಗಳು ಕಂಡು ಬರುವುದಿಲ್ಲ. ಜಿಲ್ಲೆಯ ಗೋಸಿರಪ್ಪನಗುಡ್ಡ, ಮಾಳಪ್ಪನಗುಡ್ಡ, ಸಂತೆಗುಡ್ಡ, ಇಂಗಳದಾಳ್ ಬೆಟ್ಟ, ಕೊಡವಳ್ಳಿ ಬೆಟ್ಟ, ಅಂಚಿಬಾರಿಹಟ್ಟಿ, ಗೂಳಿಹೊಸಹಳ್ಳಿ, ಶಿವಗಂಗ, ಚಿಕ್ಕಜಾಜೂರು ಪರಿಸದಲ್ಲಿರುವ ಬೆಟ್ಟಗಳಲ್ಲಿ ಕಬ್ಬಿಣ ಅದಿರು ನಿಕ್ಷೇಪಗಳಿರುವುದರಿಂದ ಪ್ರಾಗಿತಿಹಾಸ ಕಾಲದ ಮಾನವನು ವಾಸಗಿದ್ದರೆಂದು ತಿಳಿಯಬಹುದು.

೨.೨.೬. ಖನಿಜ ಸಂಪತ್ತು:

ಪ್ರಸ್ತುತ ಅಧ್ಯಯನದಲ್ಲಿ ಖನಿಜ ಸಂಪತ್ತು ಬಹುಮುಖ್ಯ. ಪ್ರಾಗೈತಿಹಾಸಿಕ ಕಾಲದಲ್ಲಿ ದೊರೆತಿರುವ ಅವಶೇಷಗಳನ್ನು ಆಧರಿಸಿ ಅಧ್ಯಯನ ಮಾಡಬೇಕಾದರೆ ಖನಿಜ ಜ್ಞಾನ ಅವಶ್ಯಕ. ಮಾನವನ ಚಟುವಟಿಕೆಯಲ್ಲಿ ಅವಶ್ಯಕತೆಯನ್ನು ಪೂರೈಸಲು ಖನಿಜಗಳು ಬಹುಮುಖ್ಯ ಪಾತ್ರವನ್ನು ವಹಿಸಿವೆ. ಕಾಲಮಾನದ ವಿಚಾರದಲ್ಲಿ ಖನಿಜ ಸಂಪತ್ತು ಪ್ರಮುಖ ಆಧಾರ.

ತಾಮ್ರ: ಕರ್ನಾಟಕದ ಚಿತ್ರದುರ್ಗ ಮತ್ತು ಮೈಸೂರಿನ ಬಳಿ ಖನಿಜವು ಸಿಗುತ್ತದೆ[೫೫]. ಚಿತ್ರದುರ್ಗ ಇಂಗಳದಾಳ್‌ನಲ್ಲಿ ತಾಮ್ರ ನಿಕ್ಷೇಪವಿದ್ದು, ೧೯೬೬ರಲ್ಲಿ ತಾಮ್ರ ತೆಗೆಯಲು ಸಂಸ್ಥೆಯು ಆರಂಭವಾಯಿತು. ತಾಮ್ರದ ಲೋಹವಲ್ಲದೆ ಚಿನ್ನ, ಬೆಳ್ಳಿ, ಮೈಲುತುತ್ತನ್ನು ಮೌರ್ಯರ ಕಾಲಕ್ಕಿಂತ ಮುಂಚೆ ಬಳಸುತ್ತಿದ್ದರೆಂದು ಅಭಿಪ್ರಾಯ ಪಟ್ಟಿದ್ದಾರೆ[೫೬]. ಇಂಗಳದಾಳ್ ಗಣಿಯ ಕುರಿತು ಬಿ.ಟಿ.ಚಾರುಲತ ಅಧ್ಯಯನ ಕೈಗೊಂಡು, ನವ ಶಿಲಾತಾಮ್ರಯುಗದಲ್ಲಿ ಗಣಿಗಾರಿಕೆ ಇತ್ತೇಂದು ಅಭಿಪ್ರಾಯಿಸಿದ್ದಾರೆ. ಇತ್ತೀಚೆಗೆ ಎಸ್.ತಿಪ್ಪೇಸ್ವಾಮಿಗೆ ತಾಮ್ರದ ಕೊಡಲಿಯೊಂದು ದೊರೆತಿರುವುದು ಅಧ್ಯಯನಕ್ಕೆ ಅಧಾರ. ತಾಮ್ರ ಮಿಶ್ರಣದ ಕಂಚನ್ನು ನವ ಶಿಲಾಯುಗದಲ್ಲಿ ಬಳಸಲಾಗುತ್ತಿತ್ತು ಎಂಬುದಕ್ಕೆ ಬ್ರಹ್ಮಗಿರಿ ಉತ್ಖನನದಲ್ಲಿ ದೊರೆತ ಅವಶೇಷಗಳು ಸಾಕ್ಷಿ. ಬ್ರಹ್ಮಗಿರಿ ಉತ್ಖನನದಲ್ಲಿ ನವ ಶಿಲಾಯುಗದ ಸ್ತರದಲ್ಲಿ ಕಂಚಿನ ಸಳಿ, ತಾಮ್ರದ ಕೊಡಲಿ ದೊರಕಿದ್ದಾವೆ. ಎಂ.ಎಚ್.ಕೃಷ್ಣ ನಡೆಸಿದ ಉತ್ಖನನದಲ್ಲಿ ಮೀನು ಹಿಡಿಯುವ ತಾಮ್ರದಗಾಳ ದೊರೆತಿವೆ[೫೭]. ಈ ಮೇಲಿನ ಆಧಾರಗಳನ್ನು ಆಧರಿಸಿ ಬ್ರಹ್ಮಗಿರಿ ಪರಿಸರದಲ್ಲಿ ನವ ಶಿಲಾಯುಗದ ಮಾನವರು ಇಂಗಳದಾಳ್ ಗಣಿಯಿಂದ ತಾಮ್ರವನ್ನು ತಂದಿರುವುದಾಗಿ ಹೇಳಬಹುದು.

ಚಿನ್ನ: ಕರ್ನಾಟಕದಲ್ಲಿ ಧಾರವಾಡ ಶಿಸ್ಟ್ ಎಂಬ ಶಿಲಾಸಮುದಾಯದಲ್ಲಿ ಚಿನ್ನವು ಕಂಡುಬರುವುದು. ಮೈಸೂರು, ನಂದಿದುರ್ಗ, ರಾಯಚೂರಿನ ಹಟ್ಟಿಯಲ್ಲಿ ಚಿನ್ನದ ಗಣಿಗಳಿವೆ[೫೮]. ಚಿತ್ರದುರ್ಗದ ದಿಂಡಾವರ, ಹಳೇಕಲ್ಲು, ಹೊನ್ನೇಮರಡಿ, ಗೋನೂರು, ಗುಡ್ಡದರಂಗವ್ವನಹಳ್ಳಿ ಭಾಗಗಳಲ್ಲಿ ಚಿನ್ನದ ನಿಕ್ಷೇಪಗಳಿವೆ[೫೯]. ಚಿತ್ರದುರ್ಗ ತಾಲೂಕಿನ ಸಾಸಲಹಟ್ಟಿ ಹತ್ತಿರವಿರುವ ಹಳ್ಳದಲ್ಲಿ ಪ್ರಾಚೀನ ಕಾಲದಲ್ಲಿ ಚಿನ್ನವನ್ನು ಜಾಲಿಸುತ್ತಿದ್ದರೆಂಬುದು ಸ್ಥಳೀಯರ ಅಭಿಪ್ರಾಯ. ಆ ಹಿನ್ನೆಲೆಯಲ್ಲಿ ಪಾಳೆಯಗಾರರ ದೇವಸ್ಥಾನಕ್ಕೆ ಜಾಲಗಾರ ಗುಡಿ ಎಂದು ಹೆಸರು ಬಂದಿರಬೇಕು. ರಾಯಚೂರಿನ ಹಟ್ಟಿ ಚಿನ್ನದ ಗಣಿಯಲ್ಲಿ ಕ್ರಿಪೂ. ೩೦೦೦ ವರ್ಷಗಳ ಹಿಂದೆ ಗಣಿಗಾರಿಕೆ ನಡೆಯುತ್ತಿತ್ತು[೬೦]. ಹೊಸದುರ್ಗ ತಾಲೂಕಿನ ಬೂದಿ ಮರಡಿಯಲ್ಲಿ ಚಿನ್ನದ ಗಣಿಗಾರಿಕೆ ಇತ್ತು[೬೧]. ಈ ಆಧಾರವು ಪ್ರಸ್ತುತ ಪರಿಸರದ ಮೇಲೆ ಪ್ರಭಾವ ಬೀರುವುದು. ಬ್ರಹ್ಮಗಿರಿಯ ಒಂದು ಶವಕುಣಿಯಲ್ಲಿ ೩೩ ಚಿನ್ನದ ಮಣಿಗಳು ದೊರಕಿರುವುದು ಆಶ್ಚರ್ಯ[೬೨]. ಬೃಹತ್ ಶಿಲಾಯುಗದ ಜನರು ಚಿನ್ನದ ಆಭರಣಗಳನ್ನು ತಯಾರಿಸುತ್ತಿದ್ದರು ಹಾಗೂ ಲೋಹ ತಂತ್ರಜ್ಞಾನದಲ್ಲಿ ನಿಪುಣರು ಎಂಬುದಕ್ಕೆ ಸಾಕ್ಷಿಯಾಗಿವೆ. ಬ್ರಹ್ಮಗಿರಿ ನೆಲೆಯ ಬೃಹತ್ ಶಿಲಾಯುಗದ ಮಾನವರು ಚಿನ್ನದ ಅದಿರನ್ನು ಬಹುಶಃ ರಾಯಚೂರಿನ ಹಟ್ಟಿಚಿನ್ನದ

ಗಣಿಯಿಂದ, ಹೊಸದುರ್ಗ ಹಾಗೂ ಚಿತ್ರದುರ್ಗ ತಾಲೂಕಿನ ಕಡೆಗಳಿಂದ ತಂದಿರುವ ಸಾಧ್ಯತೆಗಳಿವೆ.

ಕಬ್ಬಿಣ: ಕರ್ನಾಟಕದಲ್ಲಿ ಸಂಡೂರು, ಹೊಸಪೇಟೆ, ಕೆಮ್ಮಣ್ಣುಗುಂಡಿ, ಹೊಸಪೇಟೆ, ಶಿವಮೊಗ್ಗ, ಬಿಜಾಪುರ, ಧಾರವಾಡ, ಬೆಂಗಳೂರು, ಚಿತ್ರದುರ್ಗ, ಮಂಡ್ಯ, ತುಮಕೂರು ಪರಿಸರದಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿವೆ[೬೩]. ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಲಕ್ಕೀಹಳ್ಳಿ, ಕರೇಕಲ್ಲುಗುಡ್ಡ, ಕೋತಿಮರಡಿ, ಹನುಮನಕಟ್ಟೆ (ಹೊಸದುರ್ಗ ತಾಲೂಕು)[೬೪], ಶಿವಗಂಗ, ತಣಿಗೆಹಳ್ಳಿ, ಹಿರೇಕಂದವಾಡಿ, ಕೇಶವಾಪುರ, ಗಟ್ಟಿಹೊಸಹಳ್ಳಿ (ಹೊಳಲ್ಕೆರೆ ತಾಲೂಕು)[೬೫], ಸಂತೆಗುಡ್ಡ, ಬಾಂಡ್ರಾವಿ, ರಾಂಪುರ, ಕೆರೆಕೊಂಡಾಪುರ, ಹಾನಗಲ್, ಕರಡಿಹಳ್ಳಿ, ಬೊಮ್ಮಕ್ಕನಹಳ್ಳಿ (ಮೊಳಕಾಲ್ಮೂರು ತಾಲೂಕು)[೬೬], ಪರಮೇನಹಳ್ಳಿ, ಜಂಬುನಾಥನಹಳ್ಳಿ, ಓಬಳಾಪುರ, ಪಾಲವ್ವನಹಳ್ಳಿ, ಮಾಳಪ್ಪನಗುಡ್ಡ (ಹಿರಿಯೂರು ತಾಲೂಕು), ಚಳ್ಳಕೆರೆ ತಾಲೂಕಿನ ಹೆಗ್ಗೆರೆ, ಕಪರನಹಳ್ಳಿ, ತೊರೆಕೊಲಮ್ಮನಹಳ್ಳಿ, ಪರಶುರಾಂಪುರ, ಯಾದಲಗಟ್ಟೆ, ಸೋಮಗುದ್ದು, ಹಿರೇಹಳ್ಳಿ ಪ್ರದೇಶಗಳಲ್ಲಿ ಕಬ್ಬಿಣದ ನಿಕ್ಷೇಪಗಳಿವೆ[೬೭]. ಚಿತ್ರದುರ್ಗ ತಾಲೂಕಿನ ಭೀಮಸಮುದ್ರ, ಗೋಸಿರಪ್ಪನಗುಡ್ಡ, ಕೋತಿಗುಡ್ಡ, ಗುಡ್ಡದರಂಗವ್ವನಹಳ್ಳಿ, ಜೋಗಿಮರಡಿ ಮುಂತಾದ ಕಡೆಗಳಲ್ಲಿ ಕಬ್ಬಿಣದ ಅದಿರಿನ ನಿಕ್ಷೇಪಗಳಿರುವವು.

ಕಬ್ಬಿಣವನ್ನು ಸುಲಭವಾಗಿ ಮರ ಕಡಿಯಲು ಅನುಕೂಲವಾಗುವ ಹಿನ್ನೆಲೆಯಲ್ಲಿ ನವ ಶಿಲಾಯುಗದ ಮಾನವರು ಕೊನೆಯ ಹಂತದಲ್ಲಿ ಬಳಸಿದ್ದಾರೆ. ಈ ಸಂದರ್ಭದಿಂದ ಕಬ್ಬಿಣಯುಗವು ಆರಂಭಗೊಂಡಿತು[೬೮]. ಈ ಲೋಹವು ಹೊಸ ಸಂಸ್ಕೃತಿಯ ಉಗಮಕ್ಕೆ ಕಾರಣವಾಗಿರುವುದರಿಂದ ಅತ್ಯಂತ ಅಮೂಲ್ಯವಾದಾದ್ದು. ಪ್ರಸ್ತುತ ಭಾಗಗಳಲ್ಲಿ ಕಬ್ಬಿಣದ ಲೋಹ ಬಳಕೆ ಕ್ರಿ.ಪೂ. ೧೨೦೦ರಿಂದ ಆರಂಭವಾಗಿದ್ದು, ಬ್ರಹ್ಮಗಿರಿ ಉತ್ಖನನದಿಂದ ದೃಢಪಟ್ಟಿದೆ. ಈ ಉತ್ಖನನದಲ್ಲಿ ಶಿಲಾಸಮಾಧಿಗಳ ಒಳಗೆ ದೊರಕಿರುವ ಕಬ್ಬಿಣದ ಬಾಣದ ಮೊನೆಗಳು, ಚೂರಿಗಳು, ಚಾಕು, ಈಟಿ, ಕುಡುಗೋಲು, ಚಪ್ಪಟೆ ಕೊಡಲಿ, ನೇಗಿಲಿನ ಕುಳಗಳು ಪ್ರಮುಖವು[೬೯]. ಚಳ್ಳಕೆರೆ ತಾಲೂಕಿನ ಯಾದಲಗಟ್ಟೆಯ ಹಳ್ಳದ ದಂಡೆಯ ಮೇಲೆ ಕಬ್ಬಿಣದ ಕುಲುಮೆಯೊಂದು ಎಸ್.ಜಿ.ರಾಮದಾಸ್‌ರೆಡ್ಡಿರವರಿಂದ ಶೋಧಿತಗೊಂಡಿದೆ. ಕಂಡುಬಂದಿರುವ ಕುಲುಮೆಯು ಬೃಹತ್ ಶಿಲಾಯುಗದಲ್ಲಿ ಕಾರ್ಯನಿರತವಾಗಿತ್ತು. ಮತ್ತೆರಡು ಕಬ್ಬಿಣದ ಕುಲುಮೆಗಳು ಹೊಳಲ್ಕೆರೆ ತಾಲೂಕಿನ ಗಟ್ಟಿಹೊಸಹಳ್ಳಿ, ಹೊಸದುರ್ಗ ತಾಲೂಕಿನ ದೊಡ್ಡಕಿಟ್ಟದಾಳ್‌ನಲ್ಲಿ ಕಾಣಸಿಗುತ್ತವೆ. ಈ

ರೀತಿ ಕುಲುಮೆಗಳು ರಚನೆಯಾಗಬೇಕಾದರೆ ಪ್ರಸ್ತುತ ಜಿಲ್ಲೆಯಲ್ಲಿ ಉತ್ಕೃಷ್ಟವಾದ ಕಬ್ಬಿಣದ ನಿಕ್ಷೇಪಗಳಿವೆ ಎಂದು ಸತ್ಯವಾಗುತ್ತದೆ.

ಮ್ಯಾಂಗನೀಸ್: ಈ ಖನಿಜಾಂಶವು ಸಾಮಾನ್ಯವಾಗಿ ಕಬ್ಬಿಣದ ಅದಿರು ಸಿಗುವ ಕಡೆ ಸಿಗುವುದು. ಭಾರತದಲ್ಲಿ ಕರ್ನಾಟಕದ ಮ್ಯಾಂಗನೀಸ್ ಅದಿರು ೫ನೇ ಸ್ಥಾನ ಪಡೆದಿದೆ[೨೦]. ಬಳ್ಳಾರಿ, ಶಿವಮೊಗ್ಗ, ಉತ್ತರಕನ್ನಡ, ಬೆಳಗಾಂ ಜಿಲ್ಲೆಯಲ್ಲಿ ದೊರೆಯುವಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಮ್ಯಾಂಗನೀಸ್ ಅದಿರು ಸಿಗುವುದು. ಚಿತ್ರದುರ್ಗ ವ್ಯಾಪ್ತಿಯಲ್ಲಿ ಬರುವ ಚಿಕ್ಕಬ್ಯಾಲದಕೆರೆ, ಜೋಗಿಮರಡಿ, ಜವನಗೊಂಡನಹಳ್ಳಿ, ಮತ್ತೋಡು, ಕಂಚೀಪುರ, ಇಟ್ಟಿಗೆಹಳ್ಳಿಯಲ್ಲಿ ಮ್ಯಾಂಗನೀಸ್ ಅದಿರು ಕಂಡುಬಂದಿವೆ[೨೧]. ಕಬ್ಬಿಣ ಸಿಗುವ ಮುಂತಾದ ಕಡೆಗಳಲ್ಲಿ ಮ್ಯಾಂಗನೀಸ್ ಅದಿರು ಸಿಗುವುದು ಸ್ಪಷ್ಟ. ಹೊಳಲ್ಕೆರೆ ತಾಲೂಕಿನ ಗಟ್ಟಿಹೊಸಹಳ್ಳಿ ಕಬ್ಬಿಣದ ಕಿಟ್ಟಗಳ ಜೊತೆಗೆ ಮ್ಯಾಂಗನೀಸ್ ಕಿಟ್ಟಗಳು ದೊರತಿವೆ. ಮ್ಯಾಂಗನೀಸ್‌ನ್ನು ಹೊಳೆಯುವ ಮಣ್ಣಿನ ಅಲಂಕಾರಿಕ ವಸ್ತುಗಳನ್ನು ತಯಾರಿಸಲು ಬಳಸುತ್ತಾರೆ[೨೨]. ಆದ್ದರಿಂದ ಬೃಹತ್ ಶಿಲಾಯುಗದ ಮಾನವನ್ನು ತನ್ನ ಅಲಂಕಾರಿಕ ವಸ್ತುಗಳ ತಯಾರಿಕೆಯಲ್ಲಿ ಈ ಲೋಹದ ಬಳಕೆ ಆಗಿರುವ ಸಾಧ್ಯತೆಗಳಿವೆ. ಒಟ್ಟಿನಲ್ಲಿ ಗಟ್ಟಿಹೊಸಹಳ್ಳಿ ದೊರಕಿರುವ ಕಬ್ಬಿಣದ ಕಿಟ್ಟಗಳು, ಮಡಕೆಗಳು ಹಾಗೂ ಹೊಳೆಯುವ ಮ್ಯಾಂಗನೀಸ್ ಕಿಟ್ಟಗಳನ್ನು ಆಧರಿಸಿ ಬೃಹತ್ ಶಿಲಾಯುಗದಲ್ಲಿ ಕಬ್ಬಿಣದ ಆಯುಧ ತಯಾರಿಸುವ ಕೇಂದ್ರವಾಗಿತ್ತು, ಮಧ್ಯಕಾಲೀನ ಇತಿಹಾಸ ಕಾಲದಲ್ಲಿ ಗಾಜಿನ ಘಟಕವೂ ಆಗಿದ್ದುದು ಧೃಡವಾಗುತ್ತದೆ.

ಮ್ಯಾಗ್ನಾಸೈಟ್: ಇದು ಮೆಗ್ನೀಷಿಯಂ ಲೋಹದ ಕಾರ್ಬೋನೇಟ್. ಈ ವರ್ಗಕ್ಕೆ ಶಾಖಾ ತಡೆಯಬಲ್ಲ ನಿರೋಧಕ ಶಕ್ತಿಯಿದ್ದು, ಔಷಧಿಗಳ ಮತ್ತು ಮಣಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ[೨೩]. ಇಂತಹ ಮ್ಯಾಗ್ನಾಸೈಟ್ ವರ್ಗವು ಹಾಸನ, ಮೈಸೂರು, ಕೊಡಗು ಜಿಲ್ಲೆಯಲ್ಲಿ ಸಿಗುತ್ತವೆ[೨೪]. ಆದರೆ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ ನಡೆದ ಉತ್ಖನನದಲ್ಲಿ ಮ್ಯಾಗ್ನಾಸೈಟ್‌ನಿಂದ ಮಾಡಿದ ಮಣಿಗಳು ದೊರಕಿರುವುದು ವಿಶೇಷ[೨೫]. ಈ ಅಂಶವನ್ನು ಗಮನಿಸಿದರೆ ಮ್ಯಾಗ್ನಾಸೈಟ್ ವಸ್ತುವನ್ನು ಮೇಲೆ ಉಲ್ಲೇಖಿಸಿದ ಕಡೆಗಳಲ್ಲಿ ತಂದಿರುವ ಸಾಧ್ಯತೆಗಳಿವೆ. ಮ್ಯಾಗ್ನಾಸೈಟ್‌ನಿಂದ ತಯಾರುಗೊಂಡ ಮಣಿಗಳು ನವ ಶಿಲಾಯುಗದಲ್ಲಿ ಬಳಕೆಯಾಗಿವೆ.[೨೬] ಮ್ಯಾಗ್ನಾಸೈಟ್‌ನಂತಹ ಲೋಹವು ಪ್ರಾಗಿತಿಹಾಸ ಕಾಲದಲ್ಲಿ ಹೊಸ ಪರಿಚಯವೆಂದು ಹೇಳಬಹುದು.

ಸುಣ್ಣ: ಸುಣ್ಣದಕಲ್ಲುಗಳು ಚಿತ್ರದುರ್ಗ ಪರಿಸರದ ಕುದುರೆಕಣಿವೆ, ಚಿಕ್ಕಬ್ಯಾಲದಕರೆ, ಹೊರಕೆದೇವಪುರ, ಜವಗೊಂಡನಹಳ್ಳಿ, ಮಾರಿಕಣಿವೆಗಳಲ್ಲಿ ಸಿಗುತ್ತವೆ[೭೭]. ಪಾಲವ್ವನಹಳ್ಳಿ, ಐಮಂಗಲ, ಬ್ರಹ್ಮಗಿರಿ ಪರಿಸರದಲ್ಲೂ ಕಾಣಬಹುದು. ಸುಣ್ಣವನ್ನು ಸಿಮೆಂಟ್ ಕಾರ್ಖಾನೆಯಲ್ಲಿ ಬಳಸುವುದು ಹೆಚ್ಚು. ಬ್ರಹ್ಮಗಿರಿಯ ಉತ್ಖನನದಲ್ಲಿ ಬೃಹತ್ ಶಿಲಾಯುಗ, ನವ ಶಿಲಾಯುಗದ ಸ್ತರಗಳಲ್ಲಿ ಸುಣ್ಣ ಮಿಶ್ರಿತ ಮಣ್ಣು ದೊರಕಿರುವುದು ಪ್ರಮುಖ ಆಧಾರ[೭೮]. ೨೦೧೧ರ ಸಂದರ್ಭದಲ್ಲಿ ನಡೆದ ಕುರುಗೋಡು ಉತ್ಖನನದಲ್ಲಿ ಭಾಗವಹಿಸಿದ್ದಾಗ ವೈ.ಎ-೨ ಟ್ರೆಂಚ್‌ನಲ್ಲಿ ವೃತ್ತಕಾರದ ಸುಣ್ಣದ ಮಣ್ಣಿನ ಭಾಗವನ್ನು ಗಮನಿಸಿದ್ದೇವೆ. ಈ ರೀತಿಯಾದ ರಚನೆಯು ಬೃಹತ್ ಶಿಲಾಯುಗದಲ್ಲಿ ಮನೆಯ ನೆಲವಿರಬೇಕೆಂದು ನಂಬಲಾಗಿದೆ. ಬ್ರಹ್ಮಗಿರಿ, ರಾಮಸಾಗರದಲ್ಲಿ ಬಿಳಿ ಬಣ್ಣದ ವರ್ಣಚಿತ್ರಗಳಿವೆ. ಮಡಕೆಗಳ ಮೇಲೆ ಬಿಳಿ ಬಣ್ಣದ ಚಿತ್ರಗಳನ್ನು ಬಿಡಿಸಲು ಸುಣ್ಣ ಸಹಾಯಕ. ಹೆಗ್ಗಡೆಹಳ್ಳಿ ವರದಿಯಲ್ಲಿ ಗಮನಿಸಿದಂತೆ ಮಡಕೆಯ ತಳಭಾಗದಲ್ಲಿ ಸಣ್ಣ ಸಣ್ಣ ರಂಧ್ರಗಳಿರುವ(Porurations ware) ಭಾಗದಲ್ಲಿ ಬಿಳಿ ಬಣ್ಣದ ಕಲೆಗಳಿವೆ. ಇದು ಸುಣ್ಣವನ್ನು ಪ್ರತಿನಿಧಿಸುತ್ತದೆ. ಬಹುಶಃ ಕಲ್ಲು ಸುಣ್ಣವನ್ನು ಪುಡಿ ಮಾಡಿದ ಮಣ್ಣನ್ನು ಶುದ್ಧೀಕರಿಸಲು ಬಳಸಿರುವ ಸಾಧ್ಯತೆಗಳಿವೆ. ಈ ರೀತಿಯಾದ ಮಡಕೆಯನ್ನು ಕುರುಗೋಡಿನ ನೆಲೆಯಲ್ಲಿ ಕಾಣಬಹುದು.

೨.೨.೭. ಸಸ್ಯ ಸಂಪತ್ತು:

ಜಿಲ್ಲೆಯಲ್ಲಿರುವ ಕಾಡುಗಳು ಎಲೆ ಉದುರುವ ಹಾಗೂ ಕುರುಚಲು ಕಾಡುಗಳಾಗಿವೆ. ೧೯೬೪-೬೫ರಲ್ಲಿ ೨,೧೩,೧೮೩ ಎಕರೆಯಷ್ಟು ಕುರುಚಲ ಗಿಡಗಳಿಂದ ಆವೃತ್ತವಾದ ಕಾಡು ಚಿತ್ರದುರ್ಗ ಜಿಲ್ಲೆಯಲ್ಲಿತ್ತು[೭೯]. ಆದರೆ ಪಶುಸಂಗೋಪನೆ, ಕೃಷಿ ಹಾಗೂ ಗಣಿಗಾರಿಕೆಗಳಿಂದ ೨೦೧೪ರ ಅವಧಿಗೆ ೭೩,೭೧೯ ಹೆಕ್ಟೇರ್ (೧,೮೪,೨೯೭ ಎಕರೆ) ಗಳಷ್ಟು ಕಡಿಮೆಯಾಗಿದೆ[೮೦]. ಈ ಮೂಲಕ ೨೮ ಸಾವಿರ ಎಕರೆ ಕಾಡು ಕಡಿಮೆಯಾಗಿದೆ ಎಂದು ಹೇಳಬಹುದು. ಏತನ್ಮಧ್ಯೆ ೧೯೬೪ರ ಪೂರ್ವದಲ್ಲಿ ಅಥವಾ ಪ್ರಾಗಿತಿಹಾಸ ಕಾಲದಲ್ಲಿ ಅತಿ ಹೆಚ್ಚು ಕಾಡಿನಿಂದ ಕೂಡಿದ ಪ್ರದೇಶವಾಗಿತ್ತೆಂಬುದು ಸ್ಪಷ್ಟ. ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ೮೦% ರಷ್ಟು ಭಾಗ ಸವಕಳಿಗೆ ಒಳಗಾಗಿದ್ದರ ಪರಿಣಾಮ ಭೂಮಿಯ ಫಲವತ್ತತೆ ಕಡಿಮೆಯಾಗಿರುವುದು. ಜಿಲ್ಲೆಯಲ್ಲಿ ಕಂಡುಬರುವ ಮುಖ್ಯವಾದ ಮರಗಳನ್ನು ಸ್ಥಳೀಯರ ಭಾಷೆಯಲ್ಲಿ ಕರೆಯುವಂತೆ ಕಮರ, ಸೋನೆ, ತರದ್, ದಿಂಡಿಗ, ಬೇವು, ಹೊಂಗೆ, ಹುಣಸೆ, ನುಗ್ಗೆ, ಕಕ್ಕೆ, ಜಾಲಿ, ಬಿಲ್ವ, ಸುಜ್ಜಲು, ಜುವ್ವೆ

ಹತ್ತಿ, ಹರಳಿ, ಆಲ, ಹೊನ್ನೆ, ತೇಗ, ನೀಲಗಿರಿ, ಶ್ರೀಗಂಧ ಇನ್ನು ಮೊದಲಾದ ಮರಗಳಲ್ಲಿ ಪ್ರಮುಖವು. ಬೋರೆಹಣ್ಣು, ಸೀತಾಫಲ, ಹಲಸು, ನೇರಲೆ, ಬುಕ್ಕೆ ಮರಗಳು, ಹಣ್ಣಿನ ಪ್ರಮುಖ ಮರಗಳಾಗಿವೆ. ಕಾರೇಗಿಡ, ತೊಂಡೆ, ಪಾಪಾಸ್‌ಕಳ್ಳಿ, ಇವು ಹಣ್ಣಿನ ಸಸ್ಯಗಳು. ರೆಪ್ಪೆ, ತಂಗಟೆ, ಬಂದರಿಕೆ, ಲಂಟಾನು, ಉತ್ತರಾಣಿ, ಎಕ್ಕೆ, ಗೇರು, ಇನ್ನು ಮೊದಲಾದ ವಿವಿಧ ಗಿಡಗಳನ್ನು ಕಾಣಬಹುದು. ಬಂದರಿಕೆ, ಲಂಟಾನು ಗಿಡಗಳು ಬೇಲಿ ಹಾಗೂ ಕಸದ ಪೊರಕೆ ಬಳಕೆಗೆ ಉಪಯುಕ್ತವಾದವುಗಳು. ಉತ್ತರಾಣಿ, ಎಕ್ಕೆ, ಗೇರುಸೊಪ್ಪು, ಗರಿಕೆಸೊಪ್ಪನ್ನು ಔಷಧೀಯ ಸಸ್ಯಗಳಾಗಿ ಉಪಯೋಗಿಸುತ್ತಾರೆ.

ಚಿತ್ರದುರ್ಗ ಪರಿಸರದಲ್ಲಿ ಹುಲ್ಲುಗಾವಲು ಹೆಚ್ಚಿನ ಪ್ರಮಾಣದಲ್ಲಿವೆ. ಪ್ರಮುಖವಾಗಿ ಹುಲ್ಲುಗಳಲ್ಲಿ ಜೊಂಡು, ಮಂದಲಿಗೆ, ನಾರುಹುಲ್ಲು, ಪಾಚಿಹುಲ್ಲು, ಕೆಸರಿನಗಡ್ಡೆ, ಪೊರಕೆ ಹುಲ್ಲುಗಳು ಕಾಣಸಿಗುತ್ತವೆ. ಪ್ರಸ್ತುತ ಪರಿಸರದಲ್ಲಿ ಶೋಧಗೊಂಡಿರುವ ಪ್ರಾಗೈತಿಹಾಸಿಕ ಬಯಲುಬಂಡೆ ಚಿತ್ರಗಳಿರುವುದು ಹುಲ್ಲುಗಾವಲು ಬೆಟ್ಟಗಳ ಬಯಲಿನಲ್ಲಿ. ಹುಲ್ಲು ಮೇಯಿಸುವ ಸಲುವಾಗಿ ಬಂದಾಗ ಸಮಯವನ್ನು ಕಳೆಯಲು ಹಾಗೂ ತಮ್ಮ ಕಲೆಯನ್ನು ಬಿಂಬಿಸಲು ಬಯಲು ಬಂಡೆಗಳ ಮೇಲೆ ರೇಖಾಚಿತ್ರಗಳನ್ನು ರಚಿಸಿರಬೇಕು. ಬಹಳಷ್ಟು ಗೀರುಚಿತ್ರಗಳು ಪಶುಸಂಗೋಪನೆಯನ್ನು ಬಿಂಬಿಸುತ್ತವೆ. ಬೃಹತ್ ಶಿಲಾಯುಗದ ಸಮಾಧಿ ಹಾಗೂ ಗೀರುಚಿತ್ರಗಳು ಸಿಗುವ ಕಡೆಗಳಲ್ಲಿ (ಸಂಗೇನಹಳ್ಳಿ, ಸಿದ್ದೇಶ್ವರನದುರ್ಗ, ಮಾಳಪ್ಪನಗುಡ್ಡ) ಬಂದರಿಕೆ ಅಥವಾ ಅಂಗರಿಕೆ ಗಿಡಗಳನ್ನು ಹೆಚ್ಚು ಕಾಣಬಹುದು. ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ ಭಾಗಗಳಲ್ಲಿ ಕುರುಚಲು ಗಿಡಗಳು ಹೆಚ್ಚು. ಈ ರೀತಿಯಾದ ಸಸ್ಯಗಳು ಶುಷ್ಕ ವಾತಾವರಣವನ್ನು ತಿಳಿಸುತ್ತವೆ. ಇಂದಿಗೂ ಚಳ್ಳಕೆರೆ ತಾಲೂಕು ಅತಿ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ಬಂದರಿಕೆ ಗಿಡ ಹಾಗೂ ಪೊರಕೆ ಹುಲ್ಲುಗಳಿಂದ ತಯಾರುಗೊಂಡಂತ ಪೊರಕೆಗಳನ್ನು ಹಳೆಯ ಕಾಲದಿಂದ ಬಳಸುತ್ತಿದ್ದು, ಬಹುಶಃ ಪ್ರಾಗಿತಿಹಾಸ ಕಾಲದಲ್ಲಿಯು ಈ ರೀತಿಯಾದ ಪೊರಕೆಗಳನ್ನು ಬಳಸುವ ಸಂಪ್ರದಾಯ ಇರುವ ಸಾಧ್ಯತೆಗಳಿವೆ.

ತುರುವನೂರು, ಹುಣಸೆಕಟ್ಟೆ, ಆಡನೂರು, ಕೂನಬೇವು, ಕಡಬನಕಟ್ಟೆ, ಈಚಗಟ್ಟ, ನೆಲ್ಲಿಕಟ್ಟೆ, ನವಣೆಕೆರೆ, ಮಾವಿನಕಟ್ಟೆ, ಬೇವಿನಹಳ್ಳಿ, ಹುಲ್ಲುಕಟ್ಟೆ, ದೊಡ್ಡಬ್ಯಾಲದಕೆರೆ ಈ ರೀತಿಯಾದ ಗ್ರಾಮಗಳ ಹೆಸರು ಪಶುಸಂಗೋಪನೆ ಹಾಗೂ ಸಸ್ಯ ಸಂಪತ್ತಿನಿಂದ ಬಂದಿರುವಂತವುಗಳು. ಪಶುಸಂಗೋಪನೆಯಿಂದ ಹೆಸರು ಬಂದ ಗ್ರಾಮ ಪರಿಸರದಲ್ಲಿ

ಪ್ರಾಗೈತಿಹಾಸಿಕ ಕುರುಹುಗಳನ್ನು ಕಾಣಬಹುದು. ತುರುವನೂರಿನಲ್ಲಿ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳಿರುವುದು ಅದಕ್ಕೆ ಸಾಕ್ಷಿ.

೨.೨.೮. ಪ್ರಾಣಿಸಂಪತ್ತು:

ಪ್ರಾಗಿತಿಹಾಸದಲ್ಲಿ ಬೇಟೆಗಾರಿಕೆಯಿದ್ದು, ಪ್ರಾಣಿಗಳನ್ನು ಮಾಂಸಕ್ಕಾಗಿ ಅಥವಾ ಸಾಕುವುದಕ್ಕಾಗಿ ಬಳಸುತ್ತಿದ್ದರು. ಆ ಕಾರಣದಿಂದ ಪ್ರಾಣಿಗಳ ತಿಳಿವಳಿಕೆ ಅತ್ಯವಶ್ಯಕ. ಪಳುಯುಳಿಕೆ, ವರ್ಣಚಿತ್ರ ಹಾಗೂ ಗೀರುಚಿತ್ರಗಳ ಮೂಲಕ ಅಂದಿನ ಪ್ರಾಣಿಸಂಪತ್ತು ತಿಳಿಯಲು ಸಾಧ್ಯ

ಹಳೆ ಶಿಲಾಯುಗದಲ್ಲಿ ಕಂಡುಬಂದಿದ್ದ ಪ್ರಾಣಿಗಳ ಪಳಯುಳಿಕೆಗಳು ಕೃಷ್ಣ, ಘಟಪ್ರಭ, ಮಲಪ್ರಭಕೊಳ್ಳದಲ್ಲಿ ದೊರೆತಿವೆ. ಅವುಗಳಲ್ಲಿ ಕಾಡುಕತ್ತೆ, ಕಾಡುದನ, ಎತ್ತು, ಕುದುರೆ, ಆನೆ, ಜಿಂಕೆ, ಆಮೆಯಂತಹ ಪ್ರಾಣಿಗಳು ಮುಖ್ಯವಾದವುಗಳು[೮೧]. ಅಂತ್ಯ ಹಳೆಶಿಲಾಯುಗದಲ್ಲಿ ವರ್ಣಚಿತ್ರಗಳು ಆರಂಭಗೊಂಡಿದ್ದು[೮೨], ಈ ಕಾಲದಿಂದಲೇ ಪ್ರಾಣಿಗಳನ್ನು ಗುರುತಿಸುವಿಕೆ ವರ್ಣಚಿತ್ರಗಳ ಮೂಲಕ ಆಗಿರುವುದು.

ಸೂಕ್ಷ್ಮ ಶಿಲಾಯುಗದಲ್ಲಿ ವರ್ಣಚಿತ್ರಗಳ ರಚನೆಯಲ್ಲಿ ಪ್ರಾಣಿಗಳ ಸಂಖ್ಯೆಯ ಪ್ರಮಾಣದಲ್ಲಿ ಹೆಚ್ಚು. ಮೀನು ಹಿಡಿಯುವುದು, ಬೇಟೆಗಾರಿಕೆಗೆ ನಾಯಿಯನ್ನು ಬಳಸಿಕೊಳ್ಳಲಾಗಿದೆ[೮೩]. ಆದ್ದರಿಂದ ನಾಯಿ ಮೊದಲ ಸಾಕು ಪ್ರಾಣಿ ಎಂದು ನಿರ್ಧರಿಸಬಹುದು. ಕೆಲವು ಉತ್ಖನನದಿಂದ ಹಂದಿ, ದನ, ಸಂಬಾರ, ಚಿರತೆ, ನೀಲ್ಗಾಯ್, ಜಿಂಕೆ, ನರಿ ಮೊದಲಾದ ಪ್ರಾಣಿಗಳಿದ್ದವೆಂಬುದು ಪ್ರಮುಖ ವಿಚಾರ[೮೪].

ನವ ಶಿಲಾಯುಗವು ಕೃಷಿ ಸಂಸ್ಕೃತಿಯನ್ನು ಪ್ರತಿನಿಧಿಸುವುದು. ಬೇಟೆಗಾರಿಕೆಯು ಮುಖ್ಯ ಕಸುಬಾಗಿತ್ತು. ಪಶು ಸಂಗೋಪನೆಯಲ್ಲಿ ಅಭಿವೃದ್ಧಿಯ ಹಂತವಿದು. ಪ್ರಸ್ತುತ ಪರಿಸರ ಒಳಗೊಂಡಂತೆ ಕರ್ನಾಟಕದಲ್ಲಿ ಮೇಕೆ, ಕುರಿ, ಕಾಡೆಮ್ಮೆ, ಕೋಳಿ[೮೫], ಜಿಂಕೆ, ದನ, ಹುಲಿ, ಆನೆ, ಕುದುರೆ, ಮೊದಲಾದ ಪ್ರಾಣಿಗಳು ಇದ್ದವು.

ಬೃಹತ್ ಶಿಲಾಯುಗವು ಕಬ್ಬಿಣದ ಆವಿಷ್ಕಾರ ಹಾಗೂ ಶವಸಂಸ್ಕಾರ ಪದ್ಧತಿಯ ಕಾಲವಿದು. ಬಯಲು ಬಂಡೆಚಿತ್ರಗಳು ಹೆಚ್ಚು ರಚಿತಗೊಂಡಿವೆ. ಎತ್ತು, ಗೂಳಿ, ಎಮ್ಮೆ, ಕುರಿ, ಮೇಕೆ, ಕುದರೆ, ಹಂದಿ ಮೊದಲಾದ ಪ್ರಾಣಿಗಳ ಜೊತೆಗೆ ಪಕ್ಷಿಗಳನ್ನು ಬಯಲು ಬಂಡೆಚಿತ್ರಗಳಲ್ಲಿ ಕಾಣಬಹುದು. ಈ ಎಲ್ಲಾ ಪ್ರಾಣಿಗಳನ್ನು ಇಂದು ಕಾಣುತ್ತೇವೆ.

ಅಡಿಟಿಪ್ಪಣಿ

೧. ತಂಬಂಡ ವಿಜಯ್ ಪೂಣಚ್ಚ(ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೪, ೨೦೦೧, ಪು-೭೧.
೨. ಅದೇ, ಪು-೭೧.
೩. ಅದೇ, ಪು-೭೧.
೪. ಅದೇ, ಪು-೭೧.
೫. ಅದೇ, ಪು-೭೪.
೬. ಅದೇ, ಪು-೭೪.
೭. ಅದೇ, ಪು-೭೫.
೮. ಅದೇ, ಪು-೭೨.
೯. ಅದೇ, ಪು-೭೫.
೧೦. ಅದೇ, ಪು-೭೮.
೧೧. ಇರ್ಫಾನ್ ಹಬೀಬ್, ಪೂರ್ವೈತಿಹಾಸ, ೨೦೦೮, ಪು-೫೨.
೧೨. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು-೭೬.
೧೩. ಅದೇ, ಪು-೭೬.
೧೪. ಇರ್ಫಾನ್ ಹಬೀಬ್, ಪೂರ್ವೋಕ್ತ, ೨೦೦೮, ಪು-೫೨.
೧೫. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು-೭೬.
೧೬. ಇರ್ಫಾನ್ ಹಬೀಬ್, ಪೂರ್ವೋಕ್ತ, ೨೦೦೮, ಪುಟ-೫೨.
೧೭. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು-೭೬.
೧೮. ದಿವಾಕರ ಆರ್.ಆರ್(ಸಂ), ಕರ್ನಾಟಕ ಪರಂಪರೆ-ಸಂಪುಟ ೧, ೨೦೦೬, ಪು-೧೬.
೧೯. ಅದೇ, ಪು-೧೩.
೨೦. ಮಂಜುನಾಥ ನಾಯಕ್.ಕೆ, ಚಿತ್ರದುರ್ಗ ಜಿಲ್ಲಾದರ್ಶನ, ೨೦೧೫, ಪು-೩೪.
೨೧. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೧೬.
೨೨. ಚಿತ್ರದುರ್ಗ ಜಿಲ್ಲೆ ಮಾನವ ಅಭಿವೃದ್ಧಿ ವರದಿ-೨೦೧೪, ಪು-೩೫.
೨೩. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೩-೧೪, ಪು-೧೬.

೨೪. ಮಹಂತೇಶ್ ಎನ್. ಎಸ್, ಹೊಸದುರ್ಗ ತಾಲೂಕು ಪರಿಸರ ಸಾಂಸ್ಕೃತಿಕ ಅಧ್ಯಯನ, (ಅಪ್ರಕಟಿತ ಮಹಾಪ್ರಬಂಧ), ೨೦೧೨, ಪು-೨೦.

೨೫. ಮಂಜುನಾಥ್ ನಾಯಕ್.ಕೆ, ಪೂರ್ವೋಕ್ತ, ೨೦೧೫, ಪು-೦೧.

೨೬. ಅದೇ, ಪು-೪೦.

೨೭. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ ೨೦೧೩-೧೪, ಪು-೧೬.

೨೮. ಶೇಷಾದ್ರಿ .ಎಂ, ಜಡೇಗನಾಹಳ್ಳಿ ವರದಿ-೧೯೫೭, ೧೯೬೦, ಪುಟ-೦೮.

೨೯. ಮಹಂತೇಶ್ ಎನ್. ಎಸ್, ಪೂರ್ವೋಕ್ತ, ೨೦೧೨, ಪು-೨೦.

೩೦. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೧೨.

೩೧. ಹೊನ್ನಯ್ಯ, ಭಾರತದ ಭೂಗೋಳಶಾಸ್ತ್ರ, ೨೦೧೦, ಪು-೦೨.

೩೨. ಅದೆ, ಪು-೦೨.

೩೩. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪುಟ-೧೩.

೩೪. ಅದೇ, ಪು-೧೩.

೩೫. ಮಹಂತೇಶ ಎನ್. ಎಸ್, ಪೂರ್ವೋಕ್ತ, ೨೦೧೨, ಪು-೧೧೯.

೩೬. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೧೦೭,೧೦೮.

೩೭. ಇತಿಹಾಸ ದರ್ಶನ ಸಂಪುಟ-೨೭, ೨೧೦೨, ಪು-೦೮.

೩೮. ಮಹಂತೇಶ್ ಎನ್. ಎಸ್, ಪೂರ್ವೋಕ್ತ, ೨೦೧೨, ಪು-೧೦೩.

೩೯. ಎನ್ಷಿಯಂಟ್ ಇಂಡಿಯ(ಐ,ಎ ನಂ.೪), ೧೯೮೪, ಪು-೨೫೦.

೪೦. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೨೩.

೪೧. ಹೊನ್ನಯ್ಯ, ಪೂರ್ವೋಕ್ತ, ೨೦೧೦, ಪು-೮೨.

೪೨. ಅದೇ, ಪು-೮೨.

೪೩. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೩೧೦.

೪೪. ಅದೇ, ಪು-೩೧೦

೪೫. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೭.

೪೬. ಜಯಣ್ಣ.ಯು, ಪೂರ್ವೋಕ್ತ, ೨೦೦೨, ಪು-೨೪.

೪೭ ಅದೇ, ಪು- ೨೪.

೪೮. ರಾಮದಾಸರೆಡ್ಡಿ ಎಸ್. ಜಿ, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ, ೨೦೦೯, ಪು ೧೪೭

೪೯. ಅದೇ, ಪು-೧೦೮.

೫೦. ಅದೇ, ಪು-೧೦೮.

೫೧. ಮಹಂತೇಶ್ ಎನ್. ಎಸ್, ಪೂರ್ವೋಕ್ತ, ೨೦೧೨, ಪು-೧೦೮.

೫೨. ರಾಮದಾಸರೆಡ್ಡಿ ಎಸ್. ಜಿ, ಪೂರ್ವೋಕ್ತ, ೨೦೦೯, ಪು-೧೫೦.

೫೩. ಇತಿಹಾಸ ದರ್ಶನ ಸಂಪುಟ ೧೯, ೨೦೦೪, ಪು-೦೨.

೫೪. ರಾಮದಾಸರೆಡ್ಡಿ ಎಸ್. ಜಿ, ಪೂರ್ವೋಕ್ತ, ೨೦೦೯, ಪು-೧೫೫.

೫೫. ಕರ್ನಾಟಕ ಪರಂಪರೆ-ಸಂಪುಟ ೧, ಪೂರ್ವೋಕ್ತ, ೨೦೦೬, ಪು-೨೩.

೫೬. ಗಿರಿಜಾ.ಟಿ, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು-೭೨.

೫೭. ಅ.ಸುಂದರ, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, ೧೯೭೩, ಪು-೩೬.

೫೮. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೨೪.

೫೯. ಜಯಣ್ಣ .ಯು, ಮೊಳಕಾಲ್ಮೂರು ತಾಲೂಕಿನ ಪುರಾತತ್ತ್ವೀಯ ಪರಿಸರ (ಅಪ್ರಕಟಿತ ಮಹಾಪ್ರಬಂಧ), ೨೦೦೨, ಪುಟ-೨೦.

೬೦. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೧೦೪.

೬೧. ಕನ್ನಡ ವಿಶಯ ವಿಶ್ವಕೋಶ, ಸಂಪುಟ ೧, ೨೦೦೫, ಪು-೯೬೭.

೬೨. ಅ.ಸುಂದರ, ಪೂರ್ವೋಕ್ತ, ೧೯೭೩, ಪುಟ-೪೫.

೬೩. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೨೪.

೬೪. ಮಹಂತೇಶ್ ಎನ್. ಎಸ್, ಪೂರ್ವೋಕ್ತ, ೨೦೧೨, ಪು-೨೧.

೬೫. ಸಂತೋಷ ಕೆ.ವಿ, ಹೊಳಲ್ಕೆರೆ ತಾಲೂಕು ದರ್ಶನ, ೨೦೧೬, ಪು-೦೩.

೬೬. ಗೂಗಲ್ ಜಾಲ ತಾಣದಲ್ಲಿ ದೊರೆತ ಮಾಹಿತಿ.

೬೭. ಅದೇ,

೬೮. ಅ.ಸುಂದರ, ಇತಿಹಾಸ ಪೂರ್ವ ಕರ್ನಾಟಕ ಅಥವಾ ಕರ್ನಾಟಕ ಪ್ರಾಗೈತಿಹಾಸಿಕ, ೧೯೭೧, ಪು-೮೧.

೬೯. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೫.

೭೦. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬, ಪು-೨೫.

೭೧. ಮಹಂತೇಶ್ ಎನ್. ಎಸ್, ಪೂರ್ವೋಕ್ತ, ೨೦೧೨, ಪು-೨೧.

೭೨. ಹೊನ್ನಯ್ಯ, ಪೂರ್ವೋಕ್ತ, ೨೦೧೦, ಪು-೨೦೧.

೭೩. ದಿವಾಕರ ಆರ್.ಆರ್(ಸಂ), ಪೂರ್ವೋಕ್ತ, ೨೦೦೬; ಪು-೨೯.

೭೪. ಅದೇ, ಪು-೨೯.

೭೫. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೮.

೭೬. ಅದೇ, ಪು-೩೮.

೭೭. ಜಯಣ್ಣ.ಯು, ಪೂರ್ವೋಕ್ತ, ೨೦೦೨, ಪು-೨೨. .

೭೮. ದುರ್ಗದಕೂಗು ದಿನಪತ್ರಿಕೆ, ೧೨.೦೮.೨೦೦೯, ಪು-೦೨.

೭೯. ಚಿತ್ರದುರ್ಗ ಜಿಲ್ಲೆ ಮಾನವ ಅಭಿವೃದ್ಧಿ ವರದಿ-೨೦೧೪, ಪು-೩೯.

೮೦. ಚಿತ್ರದುರ್ಗ ಜಿಲ್ಲೆ ಮಾನವ ಅಭಿವೃದ್ಧಿ ವರದಿ-೨೦೧೪, ಪು-೩೭.

೮೧. ಬಾಲಸುಬ್ರಮಣ್ಯ(ಲೇ), ಕನ್ನಡ ವಿ.ವಿ ದೂ.ಶಿ. ಪಾಠಗಳು(ಪುರಾತತ್ವ), ೨೦೦೨, ಪು-೩-೫.

೮೨. ಸೂರ್ಯನಾಥ್.ಯು.ಕಾಮತ್, ಕರ್ನಾಟಕ ಗ್ಯಾಸೆಟಿಯರ್ ಭಾಗ-೧, ೧೯೮೨, ಪು-೧೯೮.

೮೩. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು-೭೮.

೮೪. ಅ.ಸುಂದರ ಮತ್ತು ಷೇಕ್ಅಲಿ, ಕರ್ನಾಟಕ ಚರಿತ್ರೆ ಸಂಪುಟ-೧, ೧೯೯೪, ಪು-೧೨೯.

ಅಧ್ಯಾಯ ಮೂರು : ಪ್ರಾಗೈತಿಹಾಸಿಕ ನೆಲೆಗಳು

ಅಧ್ಯಾಯ–ಮೂರು

ಪ್ರಾಗೈತಿಹಾಸಿಕ ನೆಲೆಗಳು

೩.೧ ಪ್ರಾಗೈತಿಹಾಸಿಕ ನೆಲೆಗಳು:

ಶಿಲಾಯುಗದಲ್ಲಿ ಮಾನವರು ಗವಿ, ಕಲ್ಲಾಸರೆಯಲ್ಲಿ, ಬೆಟ್ಟದ ತಪ್ಪಲು, ನದಿ ಮತ್ತು ಹಳ್ಳ ದಂಡೆಗಳ ಮೇಲೆ ಹಾಗೂ ಸಂಪನ್ಮೂಲಗಳು ಸಿಗುವ ಕಡೆ ವಾಸವಾಗಿದ್ದರು. ಶಿಲಾಯುಧಗಳು, ಮಡಕೆ, ಕಲ್ಲಿನ ಉಪಕರಣ, ಮೂಳೆ ಅವಶೇಷಗಳು ಸಿಗುವ ಪ್ರದೇಶವನ್ನು ವಸತಿನೆಲೆಯೆಂದು ಕರೆಯಬಹುದು. ಹಿರಿಯೂರು ತಾಲೂಕಿನ ಮಾಳಪ್ಪನಗುಡ್ಡದಲ್ಲಿ ಕಲ್ಲಿನ ಮಣಿ ಮತ್ತು ಕಚ್ಚಾವಸ್ತುಗಳು ದೂರೆತಿರುವ ಕಾರಣ ಉದ್ದಿಮೆ ನೆಲೆಯಾಗಿದೆ ಎಂದು ನಿರ್ಧರಿಸಲಾಗಿದೆ. ಇದೇ ರೀತಿ ಯಾದಲಗಟ್ಟೆ ಮತ್ತು ಗಟ್ಟಿಹೊಸಹಳ್ಳಿಯಲ್ಲಿ ಕಬ್ಬಿಣ ತಯಾರಿಕೆಗೆ ಬೇಕಾದ ಕಚ್ಚಾವಸ್ತುಗಳು ದೊರೆತಿವೆ. ಕೂನಬೇವು, ಸಂಗೇನಹಳ್ಳಿಕೆರೆ, ಜಾನಕಲ್ಲು, ತಾಳ್ಯಗಳಲ್ಲಿ ಹಳೆ ಶಿಲಾಯುಗದ ಆಯುಧಗಳು ಕಂಡುಬಂದಿವೆಯಾದರೂ ಇವು ಮೂಲ ನೆಲೆಗಳಲ್ಲ. ಆದರೆ ಹಳೆ ಶಿಲಾಯುಗದ ಮಾನವರು ಸಂಚರಿಸಿದ್ದಾರೆಂದು ಹೇಳಬಹುದು. ಎನ್.ಗೌರಿಪುರ, ರಾಮಗಿರಿಯಲ್ಲಿ ಶೋಧಗೊಂಡಿರುವ ಬೂದಿದಿನ್ನೆಗಳು ನವ ಶಿಲಾಯುಗದ ಜನರು ವಾಸವಾಗಿದ್ದರೆಂಬುದಕ್ಕೆ ಸಾಕ್ಷಿಗಳಾಗಿವೆ. ಬ್ರಹ್ಮಗಿರಿ, ಸಂಗೇನಹಳ್ಳಿಕೆರೆ, ಹಾನಗಲ್ಲು ವಸತಿನೆಲೆ ಪಕ್ಕದಲ್ಲಿರುವ ಶಿಲಾಸಮಾಧಿಗಳ ಸ್ಥಳವನ್ನು ಬೃಹತ್ ಶಿಲಾಯುಗದ ಸಮಾಧಿನೆಲೆಗಳೆಂದು ಕರೆಯಲಾಗುತ್ತಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಳೆ ಶಿಲಾಯುಗದ ೬, ಸೂಕ್ಷ್ಮ ಶಿಲಾಯುಗದ ೨೧, ನವ ಶಿಲಾಯುಗದ ೧೦೭, ಬೃಹತ್ ಶಿಲಾಯುಗದ ೨೧೭ ನೆಲೆಗಳಿವೆ. ಒಟ್ಟು ೨೦೧ ಕಡೆ ೩೫೧ ಪ್ರಾಗೈತಿಹಾಸದ ನೆಲೆಗಳು ಕಂಡುಬಂದಿವೆ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ

ನೆಲೆಯಲ್ಲಿ ಉತ್ಖನನವಾಗಿದ್ದು, ಜಿಲ್ಲೆಯ ಪ್ರಾಗಿತಿಹಾಸದ ಕುರಿತು ವಿಶ್ಲೇಷಿಸಲು ಪ್ರಮುಖ ಅಧಾರವಾಗಿದೆ. ದೊರೆತಿರುವ ನೆಲೆಗಳಲ್ಲಿ ಪ್ರಮುಖ ನೆಲೆಗಳ ಮಹತ್ವವನ್ನು ತಿಳಿಸಿಕೊಡಲಾಗಿದೆ.

ಸಂಗೇನಹಳ್ಳಿಕೆರೆ:

ಚಿತ್ರದುರ್ಗದಿಂದ ಹೊಸಪೇಟೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ೩೩೬ ಹೆಕ್ಟೇರ್ ವಿಸ್ತೀರ್ಣದಲ್ಲಿರುವುದೇ ಸಂಗೇನಹಳ್ಳಿಕೆರೆ. ಈ ಕೆರೆಯ ಎಡ ದಂಡೆಯ ಮೇಲೆ ಬಂದರಿಕೆ ಗಡ್ಡೆಯಿದ್ದು, ಹಾಸುಬಂಡೆಗಳಿವೆ. ಬಂಡೆಗಳ ಮೇಲೆ ರೇಖಾಚಿತ್ರಗಳನ್ನು ಕಾಣಬಹುದು. ಈ ಚಿತ್ರಗಳ ಸಮೀಪವೇ ಹಸಿರು ಮಿಶ್ರಿತ ಗಟ್ಟಿಶಿಲೆಯೊಂದು ದೊರಕಿದೆ. ಇದು ಆದಿ ಹಳೆಶಿಲಾಯುಗಕ್ಕೆ ಸೇರಿದ್ದು. ೫ಸೆ.ಮೀ. ಅಗಲ, ೧೧ಸೆ.ಮೀ. ಉದ್ದವಿರುವ ಆಯುಧದ ಮಧ್ಯಭಾಗ ಯಥಾಸ್ಥಿತಿಯಲ್ಲಿದ್ದು, ತುದಿಯಲ್ಲಿ ಸುತ್ತ ಚೆಕ್ಕೆಗಳನ್ನು ತೆಗೆದಿದ್ದಾರೆ. ದೊಡ್ಡ ದೊಡ್ಡ ಚೆಕ್ಕೆಗಳು ತೆಗೆಯುವ ಸಂದರ್ಭದಲ್ಲಿ ಆಯುಧ ಮುರಿದು ಹೋಗಿರುವುದರಿಂದ ಆಯುಧವನ್ನು ಪೂರ್ಣಗೊಳಿಸದೆ ಅರ್ಧದಲ್ಲಿಯೆ ಕೈಬಿಟ್ಟಿದ್ದಾರೆಂದು ಹೇಳಬಹುದು. ಈ ಹಿಂದೆ ಕೆರೆಯ ನಡುಗಡ್ಡೆಯಲ್ಲಿ ಲಕ್ಷ್ಮಣ್ ತೆಲಗಾವಿ ಮತ್ತು ತಂಡ ಬೂದಿದಿನ್ನೆಯನ್ನು ಶೋಧಿಸಿದ್ದರಲ್ಲದೆ, ಬಯಲುಬಂಡೆ ಚಿತ್ರಗಳನ್ನು ಶೋಧಿಸಿದ್ದರೆಂದು ಸ್ಮರಿಸಬೇಕಾಗುತ್ತದೆ.[೧] ಇತ್ತೀಚೆಗೆ ಎಸ್.ವೈ.ಸೋಮಶೇಖರ್ ಜೊತೆಗೂಡಿ ಕ್ಷೇತ್ರಕಾರ್ಯದಲ್ಲಿ ಮಧ್ಯ ಹಳೆಶಿಲಾಯುಗಕ್ಕೆ ಸೇರಿದ ಮತ್ತೊಂದು ಕಲ್ಲಿನ ಕೊಡಲಿಯನ್ನು ಶೋಧಿಸಿದ್ದೇವೆ.

ಕೆರೆ ನೀರು ಜನಿಗಿಹಳ್ಳ ಮೂಲಕ ಬಳ್ಳಾರಿ ಜಿಲ್ಲೆ ಸೇರುತ್ತದೆ. ಕೆರೆಯ ಮಧ್ಯೆ ನಡುಗಡ್ಡೆಯಿದ್ದು, ಅದು ಪ್ರಾಚೀನಕಾಲದಲ್ಲಿ ವಸತಿ ತಾಣವಾಗಿತ್ತು. ಸಂಶೋಧಕರು ಕ್ಷೇತ್ರ ಕಾರ್ಯ ಮಾಡುವಾಗ ಬೂದಿದಿನ್ನೆಯಲ್ಲಿ ಕಲ್ಲಿನ ಕೊಡಲಿ, ಬೂದುಬಣ್ಣದ ಮಡಕೆ, ಬಯಲು ಬಂಡಾ ರೇಖಾಕೃತಿಗಳನ್ನು ಶೋಧಿಸಿ ಬೆಳಕಿಗೆ ತಂದಿದ್ದಾರೆ[೨]. ನಡುಗಡ್ಡೆಯನ್ನು ಓಬಳಾಪುರವೆಂದು ಕರೆಯುತ್ತಿದ್ದರು. ಕೆರೆ ನಿರ್ಮಾಣದ ನಂತರ ನಡುಗಡ್ಡೆ ನೀರಿನಿಂದ ಆವೃತವಾಗಿದ್ದರಿಂದ ಯಳವರ್ತಿ ಮತ್ತು ಬೊಗಳೇರಹಟ್ಟಿ ಸ್ಥಳಾಂತರಗೊಂಡಿದೆ. ಸಗಣಿಯನ್ನು ೯೦೦°-೧೨೦೦°ಸೆ.ಗ್ರೆ ವರೆಗೆ ಶಾಖದಲ್ಲಿ ಸುಟ್ಟಾಗ ಬೂದಿದಿನ್ನೆ ಆಗಿದೆಯೆಂಬುದು ವೈಜ್ಞಾನಿಕ ನಿಲುವು[೩]. ಕೆರೆಯ ಎಡದಂಡೆ ಮೇಲೆ ಕಾಣಸಿಗುವ ತುಂಬಿದ ಮೈಯುಳ್ಳ ಗೂಳಿ ರೇಖಾಚಿತ್ರಗಳು ದನಸಾಕಣಿಕೆ ಮತ್ತು ಕೃಷಿ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ಕೆರೆಯಲ್ಲಿ ೩೩೬ ಹೆಕ್ಟೇರ್ ವಿಸ್ತೀರ್ಣದಲ್ಲಿ ನೀರು ಸಂಗ್ರಹಣೆಯಾಗುತ್ತದೆ. ಕೆರೆ ಏರಿಯು ೧೩೭೪ ಮೀಟರ್ ಉದ್ದವಾಗಿದ್ದು, ಜಗಳೂರು ತಾಲೂಕಿಗೆ ಸೇರಿದೆ. ಆದರೆ ಆಯಕಟ್ಟು ಪ್ರದೇಶ ಚಿತ್ರದುರ್ಗ ತಾಲೂಕಿಗೆ ಸೇರಿರುವುದು ಗಮನಾರ್ಹ. ನಡುಗಡ್ಡೆಯ ಪಶ್ಚಿಮಕ್ಕೆ ಬಂದರಿಕೆಗಡ್ಡೆಯಿದ್ದು, ಇಲ್ಲಿ ಬಯಲು ಬಂಡೆಗಳಿವೆ. ಇವುಗಳ ಮೇಲೆ ಗೀರಿದ, ಕುಟ್ಟಿದ ೪೦ಕ್ಕೂ ಹೆಚ್ಚು ರೇಖಾಚಿತ್ರಗಳನ್ನು ಅಧ್ಯಯನ ಮಾಡಲಾಗಿದೆ. ರೇಖಾಚಿತ್ರಗಳಲ್ಲಿ ಎತ್ತು, ಗೂಳಿ, ಮನುಷ್ಯ, ಹಾಗೂ ಮಂಡಲ ಚಿತ್ರಗಳು ಪ್ರಮುಖವು. ಎತ್ತುಗಳು ಮತ್ತು ಗೂಳಿಗಳನ್ನು ಚೌಕಕಾರವಾಗಿ ಮತ್ತು ಆಯತಕಾರವಾಗಿ ಕುಟ್ಟಿ ಮೂಡಿಸಿದ್ದಾರೆ. ಅಲ್ಲದೆ ಕಡ್ಡಿ ಮತ್ತು ಉತ್ಕೃಷ್ಟವಾದ ಚಿತ್ರಶೈಲಿಯನ್ನು ಅಳವಡಿಸಿ ಕೊಂಡಿರುವುದು ಗಮನಾರ್ಹ. ಎತ್ತುಗಳ ಭುಜ ಭಾಗವು ದೇಹದ ಮಧ್ಯಭಾಗದಲ್ಲಿದ್ದರೆ, ಗೂಳಿಯ ಭುಜ ಕುತ್ತಿಗೆಗೆ ಹೊಂದಿಕೊಂಡಂತೆ ಭಾಗಿ, ಕೋಡುಗಳಿಗೆ ತಾಕಿದಂತಿರುತ್ತದೆ. ಎತ್ತುಗಳ ಕೋಡುಗಳು ಸಾಮಾನ್ಯವಾಗಿ ಸಮಾನಾಂತರವಾಗಿ ಲಂಬವಾಗಿವೆ. ಎತ್ತುಗಳನ್ನು ನಿಂತಿರುವ ರೀತಿ, ಚಲಿಸುತ್ತಿರುವ ಹಾಗೆ ಮತ್ತು ಕಾದಾಡುತ್ತಿರುವಂತೆ ರಚಿಸಿದ್ದಾರೆ. ಎತ್ತು ಮತ್ತು ಗೂಳಿಗಳಿಗೆ ಕಿವಿ, ಕಣ್ಣು, ಮತ್ತು ಮೂಗನ್ನು ತೋರಿಸಿರುವುದಿಲ್ಲ. ಗೂಳಿಗೆ ಗಂಗ್‌ತೊಗಲನ್ನು ತೋರಿಸಿರುವುದು ವಿಶೇಷ. ಪಶ್ಚಿಮಾಭಿಮುಖವಾಗಿ ಇರುವ ಶಿಲೆಯ ಮೇಲೆ ೨೧ಸೆಂ.ಮೀ ಉದ್ದ ೨೧ಸೆಂ.ಮೀ ಎತ್ತರದ ಉತ್ಕೃಷ್ಟವಾದ ಗೂಳಿಯನ್ನು ಕ್ರಮಬದ್ಧತೆಯಲ್ಲಿ ಕಲ್ಲಿನಿಂದ ಕುಟ್ಟಿದ್ದಾರೆ. ಗರ್ಭಧರಿಸಿದ ಪ್ರಾಣಿ ಹಾಗೂ ಪಕ್ಷಿಯ ತಲೆ, ಮನುಷ್ಯನ ದೇಹವುಳ್ಳ ಚಿತ್ರವು ಈ ನೆಲೆಯ ಮತ್ತೊಂದು ವಿಶೇಷ. ಪ್ರಸ್ತುತ ನೆಲೆಯನ್ನು ಅಧ್ಯಯನಮಾಡಿ ಕಾಲಕ್ಕೆ ಸಂಬಂಧಿಸಿದಂತೆ ಒಂದು ನಿರ್ಧಾರಕ್ಕೆ ಬರಲಾಗಿದೆ. ಚೌಕಕಾರವಾಗಿ ವರ್ಣಚಿತ್ರ ರೀತಿ ಕಾಣುವ ಉತ್ಕೃಷ್ಟವಾದ ಎತ್ತಿನ ಸಾಲುಗಳುಳ್ಳ ಚಿತ್ರ ಬೃಹತ್ ಶಿಲಾಯುಗ ಚಿತ್ರಕ್ಕಿಂತ ಭಿನ್ನವಾಗಿದೆ. ಆದ್ದರಿಂದ ನವ ಶಿಲಾಯುಗದ ಕಾಲಕ್ಕೆ ಸೇರಿಸಬಹುದು. ಉಳಿದಂತಹ ಲೋಹದಿಂದ ಕುಟ್ಟಿರುವ ಹಾಗೂ ಕಲ್ಲಿನಿಂದ ಬಲವಾಗಿ ಹೊಡೆದು ರಚಿಸಿರುವ ಹಾಗೂ ಗೀರಿದ ಚಿತ್ರಗಳು ಬೃಹತ್ ಶಿಲಾಯುಗಕ್ಕೆ ಸೇರಿವೆ.

ಕೂನಬೇವು:

ಚಿತ್ರದುರ್ಗದಿಂದ ತುರುವನೂರಿಗೆ ಹೋಗುವ ಮಾರ್ಗದಲ್ಲಿ ಬರುವ ಗ್ರಾಮ ಕೂನಬೇವು. ಐತಿಹಾಸಿಕ ಹಿನ್ನೆಲೆ ಪಡೆದ ಗ್ರಾಮವಿದು. ಈ ಗ್ರಾಮದ ಕೋಣನದೇವಿ ಬೀಳಿನಲ್ಲಿ ಸಂಶೋಧಿಸುವಾಗ ಆದಿ ಹಳೆಶಿಲಾಯುಗದ ಆಯುಧವೊಂದು ದೊರಕಿದೆ[೪].

ಆಯುಧವು ಪೆರುಜಿನಸ್ ಶಿಲೆಯಿಂದ ರೂಪಿತಗೊಂಡಿದ್ದು, ೭ ಸೆ.ಮೀ ಅಗಲ, ೭ ಸೆ.ಮೀ ಉದ್ದದಿಂದ ವೃತ್ತಾಕಾರವಾಗಿರುವುದು. ಶಿಲೆಯ ಸುತ್ತಲೂ ತುದಿಯಲ್ಲಿ ಚಕ್ಕೆಗಳನ್ನು ಎಬ್ಬಿಸಿದ್ದಾರೆ. ಇದನ್ನು ಗಮನಿಸಿದರೆ ಜಿಗ್‌ಜಾಗ್ ಮಾಡಿದಂತೆ ಕಾಣಿಸುತ್ತದೆ. ಈ ಪರಿಸರದಲ್ಲಿ ಸಣ್ಣಿಂಗಪ್ಪರಕಟ್ಟೆ, ದಾಸನಕಟ್ಟೆ, ಕೂನಬೇವು ಗೊಲ್ಲರಹಟ್ಟಿ ಹಳ್ಳಗಳು ಹರಿಯುತ್ತಿವೆ. ಎಸ್. ನಾಗರಾಜಪ್ಪ ಕ್ಷೇತ್ರಕಾರ್ಯ ಜೊತೆಗೂಡಿ ಮಾಡುವಾಗ ಕೊಂಚೆ ಶಾಂತರುದ್ರಪ್ಪವವರ ಹೊಲದಲ್ಲಿ ನವ ಶಿಲಾಯುಗದ ಕಲ್ಲಿನ ಕೊಡಲಿ ಪತ್ತೆಯಾದವು[೫]. ನಯವಾದ ಕಲ್ಲಿನ ಕೊಡಲಿಯ ತಳಭಾಗ ಹರಿತವಾಗಿದ್ದು, ಯಾವುದೇ ಭಾಗವು ನಾಶವಾಗಿಲ್ಲ. ಕೈ ಹಿಡಿಕೆಯನ್ನು ಹೊಂದಿದೆ. ಆಯುಧವನ್ನು ಬಳಸಿದ್ದಾರೆ. ಚರ್ಮ ಕತ್ತರಿಸಲು, ಮರ ಕಡಿಯಲು ಬಳಿಸಿದ್ದರಬೇಕು. ಈ ಹಿಂದೆ ಬೃಹತ್ ಶಿಲಾಯುಗ ಗೋರಿಗಳು ಮೋರೆಯರ ಮಟ್ಟಿಯಲ್ಲಿ ಎಸ್.ವೈ.ಸೋಮಶೇಖರ್ ಮತ್ತು ಎಸ್.ತಿಪ್ಪೇಸ್ವಾಮಿ ಕ್ಷೇತ್ರ ಕಾರ್ಯದಲ್ಲಿ ಪತ್ತೆಗೊಂಡಿದ್ದವು[೬]. ಆದರೆ ಪ್ರಸ್ತುತ ಶೋಧನೆ ಬೃಹತ್ ಶಿಲಾಯುಗಕ್ಕಿಂತ ಪುರಾತನ ಕಾಲಕ್ಕೆ ಕೊಂಡೊಯ್ದಿದೆ. ಪುರಾತನ ಮಾನವರು ನವ ಶಿಲಾಯುಗದಲ್ಲಿ ಹೊಸ ಜೀವನಕ್ಕೆ ಹೆಜ್ಜೆಯಿಟ್ಟರು. ಈ ಹಿಂದೆ ಬೇಟೆಗಾರನಾಗಿ, ಪ್ರಾಣಿಗಳನ್ನು ಅವಲಂಬಿಸಿ ಬದುಕುತ್ತಿದ್ದವರು ನವ ಶಿಲಾಯುಗದಲ್ಲಿ ವ್ಯವಸಾಯ, ಪಶುಪಾಲನೆ, ಕುಶಲ ಕಲೆಗಳನ್ನು ಅಭಿವೃದ್ಧಿಪಡಿಸಿಕೊಂಡರು. ವ್ಯವಸಾಯದ ಉದ್ದೇಶದಿಂದ ಭೀಮ, ಕೃಷ್ಣ, ವೇದಾವತಿ ನದಿಗಳ ದಂಡೆಯ ಮೇಲೆ ವಾಸ ಮಾಡುತ್ತಿದ್ದರೆಂಬುದಕ್ಕೆ ಸಿಕ್ಕಂತಹ ನೆಲೆಗಳು ಆಧಾರ. ಪ್ರಸ್ತುತ ಪ್ರದೇಶ ಸಂಗೇನಹಳ್ಳಿಕೆರೆ ಮತ್ತು ಕೂನಬೇವಿನಲ್ಲಿ ದೊರೆತಿರುವ ಕುರುಹುಗಳು ಹಳ್ಳಗಳ ಪ್ರದೇಶದಲ್ಲಿ ವಾಸಮಾಡುತ್ತಿದ್ದರೆಂಬುದಕ್ಕೆ ಸಾಕ್ಷಿ.

ಈ ಪರಿಸರದಲ್ಲಿ ಪಾಂಡವರ ಬೀಳು ಮತ್ತು ಮೋರೆಯರಮಟ್ಟಿ ಎಂದು ಕರೆಯುವ ಎರಡು ನೆಲೆಗಳಿವೆ. ಕೂನಬೇವಿನಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗಮಧ್ಯೆ ಒಂದುವರೆ ಕಿ.ಮೀ ದೂರದಲ್ಲಿರುವ ಬೀಳು ಪ್ರದೇಶವೇ ಮೊರೆಯಮಟ್ಟಿ, ಈ ಮಟ್ಟಿಯ ಪಕ್ಕದಲ್ಲಿ ನ್ಯಾಕಲೋಬರ ಮಟ್ಟಿಯನ್ನು ಕಾಣಬಹುದು. ಈ ಹಿಂದೆ ಎಸ್.ವೈ.ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಜೊತೆಗೂಡಿ ೭೫ಕ್ಕೂ ಹೆಚ್ಚು ಶಿಲಾವೃತ್ತ ಗೋರಿಗಳನ್ನು ಮತ್ತು ಕಬ್ಬಿಣದ ಆಯುಧ, ಎರಡು ನೀರಿನ ಗುಡಾಣ, ಮೂರು ಕಾಲುಳ್ಳ ಐದು ಮೃತ್ಪಾತ್ರೆಗಳು, ಬಟ್ಟಲುಗಳು, ರಂಧ್ರವುಳ್ಳ ಮುಚ್ಚಳ, ಸ್ವಸ್ತಿಕಾಕಾರದ ಗೆರೆಗಳಿರುವ ಬೋಗುಣಿ, ಚಪ್ಪಟೆಯಾದ ಕಲ್ಲುಗಳು ಇನ್ನೂ ಮುಂತಾದ

ಕೆಂಪು ಮತ್ತು ಕಪ್ಪು ಬಣ್ಣದ ಮಡಕೆಗಳು ಕ್ಷೇತ್ರಕಾರ್ಯದಲ್ಲಿ ಶೋಧಿಸಿ ಬೆಳಕಿಗೆ ತಂದಿದ್ದಾರೆ[೬]. ಇವುಗಳಲ್ಲಿ ಕೆಲವು ಹಂಪಿ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿತಗೊಂಡಿವೆ. ಸಮಾಧಿಯನ್ನು ವೃತ್ತಾಕರವಾಗಿ ಬೆಣಚುಕಲ್ಲುಗಳನ್ನು ಬಳಸಿಕೊಂಡು ೫೦ಅಡಿ ವ್ಯಾಸದಲ್ಲಿ ರಚಿಸಿದ್ದಾರೆ. ಒಂದು ಶಿಲಾವೃತ್ತ ಗೋರಿಯಲ್ಲಿ ನಿಲುಗಲ್ಲಿನ ರೀತಿ ವೃತ್ತಕಾರವಾಗಿ ಜೋಡಿಸಿರುವುದು ವಿಶೇಷವಾಗಿದೆ. ಈ ರೀತಿ ಬೆಳಗಟ್ಟ ನೆಲೆಯಲ್ಲೂ ಕಾಣಬಹುದು. ನಿಧಿಗಳ್ಳರು ತೆಗೆದ ಗೋರಿಯಲ್ಲಿನ ಅಸ್ಥಿಯನ್ನು ಗಮನಿಸಿದಾಗ ದಕ್ಷಿಣಾಭಿಮುಖವಾಗಿ ಮಲಗಿಸುತ್ತಿದ್ದರೆಂದು ತಿಳಿಯಬಹುದು. ಇದೇ ಪ್ರದೇಶದಲ್ಲಿ ಕೊರೆದು ಮೂಡಿಸಿದ ಎತ್ತಿನ ಚಿತ್ರ ರಚನೆಗೊಂಡಿದ್ದು, ಅವರ ಕಲೆಯನ್ನು ಬಿಂಬಿಸುವುದು. ಮತ್ತೊಂದು ನೆಲೆಯು ಪಾಂಡವರಬೀಳು. ಕೂನಬೇವು ಗೊಲ್ಲರಹಟ್ಟಿ ಹಿಂಭಾಗದಲ್ಲಿ ೧೧ ಶಿಲಾವೃತ್ತಾ ಗೋರಿಗಳಿವೆ. ಈ ಸಮಾಧಿಗಳು ೨೫x೨೫ ಅಡಿ ಅಳತೆಯಲ್ಲಿ ನಿರ್ಮಾಣವಾಗಿವೆ. ಈ ಪಾಂಡವರಬೀಳು ನೆಲೆಯು ಹೊಸ ಶೋಧನೆಯೆಂದು ಪರಿಗಣಿಸಬಹುದು.

ಗೊಡಬನಾಳ್:

ಚಿತ್ರದುರ್ಗ ತಾಲೂಕಿನ ಗೊಡಬನಾಳ್ ಗ್ರಾಮವು ತಾಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಕಳ್ಳಹಳ್ಳಿ ದಿಬ್ಬದಲ್ಲಿ ಮಧ್ಯ ಹಳೆಶಿಲಾಯುಗದ ೨ ಆಯುಧಗಳು ಮತ್ತು ಬೃಹತ್ ಶಿಲಾಯುಗದ ೩೦ ಸಮಾಧಿಗಳು ಹಾಗೂ ವಸತಿ ನೆಲೆಯನ್ನು ಎಸ್.ನಾಗರಾಜಪ್ಪ ಶೋಧಿಸಿದ್ದಾರೆ[೮]. ಮಚ್ಚುಗತ್ತಿ ೧೧ರಿಂದ ೧೫ಸೆ.ಮೀ. ಉದ್ದ ೫ರಿಂದ ೯ಸೆ.ಮೀ. ಅಗಲವಿದ್ದು, ಅಲಗಿನ ಭಾಗವು ಜಿಗ್‌ಜಾಗ್ ಮಾದರಿಯಲ್ಲಿ ಮೊನಚಾಗಿರುವುದು. ಈ ರೀತಿಯ ಆಯುಧಗಳು ಮಧ್ಯ ಹಳೆಶಿಲಾಯುಗದ ಆಯುಧಕ್ಕಿಂತ ಭಿನ್ನವಾಗಿವೆ. ಕ್ಲಾಕ್‌ಟನ್ ವಿಧಾನದಲ್ಲಿ ಆಯುಧಗಳು ತಯಾರಾಗಿರುವುದರಿಂದ ಆದಿ ಹಳೆಶಿಲಾಯುಗದ ಆಯುಧಗಳಿರಬೇಕೆಂದು ಅಭಿಪ್ರಾಯಿಸಬಹುದು. ಚಿತ್ರದುರ್ಗ ತಾಲೂಕಿನ ಕೂನಬೇವಿನಲ್ಲಿ ದೊರೆತ ಆದಿ ಹಳೆಶಿಲಾಯುಗದ ಆಯುಧಗಳಿಗೆ ಪ್ರಸ್ತುತ ಆಯುಧಗಳು ಹೋಲಿಕೆಯಾಗುತ್ತವೆ. ಗೊಡಬನಾಳ್‌ನಲ್ಲಿ ಕಂಡುಬಂದಿರುವ ಬೃಹತ್ ಶಿಲಾಯುಗದ ಶಿಲಾಗೋರಿಗಳು ವೃತ್ತಾಕಾರವಾಗಿದ್ದು, ೩೦ಅಡಿ ವ್ಯಾಸದಲ್ಲಿ ರಚಿತಗೊಂಡಿವೆ. ಈ ರೀತಿಯಾದ ಶಿಲಾಗೋರಿಗಳು ಚಂದ್ರವಳ್ಳಿ, ಕೂನಬೇವು, ಕಡ್ಲೆಗುದ್ದು ಮೊದಲಾದ ಕಡೆ ಕಂಡುಬಂದಿವೆ. ಈ ಮೂಲಕ ಗೊಡಬನಾಳ್ ಪರಿಸರವು ಆದಿ ಹಳೆಶಿಲಾಯುಗದಿಂದ ಜನರ ಒಡನಾಟವಿತ್ತೆಂದು ತಿಳಿಯಬಹುದು.

ಚಂದ್ರವಳ್ಳಿ:

ಚಿತ್ರದುರ್ಗ ನಗರದಲ್ಲಿ ಚಂದ್ರವಳ್ಳಿ ಎಂಬ ಐತಿಹಾಸಿಕ ಸ್ಥಳ ಇದೆ. ಪೌರಾಣಿಕ ವೀರನಾದ ಚಂದ್ರಹಾಸನ ರಾಜಧಾನಿಯಾಗಿದ್ದರಿಂದ ಚಂದ್ರವಳ್ಳಿ ಎಂಬ ಹೆಸರು ಬಂದಿರಬಹುದು[೯]. ಕಣಿವೆಯು ಚಂದ್ರಾಕಾರದಲ್ಲಿರುವುದರಿಂದ ಚಂದನಾವತಿ ಎಂತಲೂ ಕ್ರಮೇಣ ಚಂದ್ರವಳ್ಳಿ ಎಂಬ ಹೆಸರು ಬಂದಿರಬೇಕು. ಚಂದ್ರವಳ್ಳಿ ತ್ರಿಕೋನಾಕಾರವಾಗಿದ್ದು, ಚಿನ್ಮೂಲಾದ್ರಿ, ಚೋಳಗುಡ್ಡ, ದವಳಪ್ಪನಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದೆ[೧೦]. ಚಂದ್ರವಳ್ಳಿ ಕಣಿವೆಯಲ್ಲಿ ಹುಲಿಗೊಂದಿ, ಬಸವನಗೊಂದಿ, ಬಾರಲಗೊಂದಿ, ನೇರಲಗೊಂದಿ ಎನ್ನುವ ಹೆಸರುಳ್ಳ ಕಣಿವೆಗಳಿವೆ. ನವ ಶಿಲಾಯುಗದ ಕಲ್ಲಿನ ಕೊಡಲಿ ದೊರಕಿದ್ದು, ಬೃಹತ್ ಶಿಲಾಯುಗದ ಅವಶೇಷಗಳನ್ನು ಕಣಿವೆಗಳಲ್ಲಿ ಕಾಣಬಹುದು. ಬಾರಲಗೊಂದಿ ಕಣಿವೆಯ ಬಳಿಯಿರುವ ಗವಿಯೊಂದರಲ್ಲಿ ಮೂಸೆಗಳು, ಕಬ್ಬಿಣದ ಕಿಟ್ಟ, ನೂತನ ಶಿಲಾಯುಗದ ಕಲ್ಲಿನ ಕೊಡಲಿಗಳು ಹಾಗೂ ಮಡಕೆ ಚೂರುಗಳು ದೊರಕಿದ್ದವು[೧೧]. ಇವುಗಳು ಬೃಹತ್ ಶಿಲಾಯುಗದಿಂದ ನವಶಿಲಾಯುಗದವರೆಗೆ ಗವಿಯಲ್ಲಿ ವಾಸವಾಗಿದ್ದರೆಂಬುದಕ್ಕೆ ಸಾಕ್ಷಿಗಳಾಗಿವೆ. ಕಲ್ಲು ಗುಡ್ಡದ ಬದಿಯಲ್ಲಿ ಬೃಹತ್ ಶಿಲಾಯುಗದ ಗೋರಿಗಳನ್ನು ೧೯೨೮ರಲ್ಲಿ ಎಂ.ಎಚ್.ಕೃಷ್ಣ ಶೋಧಿಸಿದ್ದರು. ಇಲ್ಲಿ ದೊರೆತ ಸಮಾಧಿಗಳು ಸಿಸ್ಟ್ ಮಾದರಿಯಲ್ಲಿವೆ. ೩x೨ಅಡಿ ಅಳತೆ ಹೊಂದಿರುವ ಸಿಸ್ಟ್ ಸಮಾಧಿಗಳು ಪೂರ್ವಾಭಿಮುಖವಾಗಿದ್ದು, ಸುತ್ತಲೂ ವೃತ್ತಾಕಾರವಾಗಿ ಕಲ್ಲುಗಳನ್ನು ಜೋಡಿಸಿದ್ದಾರೆ. ಸಿಸ್ಟ್‌ನ ಒಳಗಡೆ ಪಶ್ಚಿಮದ ಕಡೆ ತಲೆ, ಪೂರ್ವಕ್ಕೆ ಸೊಂಟ ಭಾಗವಿದ್ದು, ಕೈಕಾಲುಗಳನ್ನು ಮಗ್ಗುಲಾಗಿ ಮಡಿಚಿದ್ದಾರೆ[೧೨]. ಈ ರೀತಿಯಾದ ಪದ್ಧತಿಯು ಜಿಲ್ಲಾ ಪರಿಸರದಲ್ಲಿ ವಿಶೇಷವಾಗಿವೆ.

೧೯೪೭-೪೮ರಲ್ಲಿ ಚಂದ್ರವಳ್ಳಿಯಲ್ಲಿ ನಡೆದ ಉತ್ಖನನವು ಪ್ರಮುಖವಾಗಿದ್ದು ಮಾರ್ಟಿಮರ್ ವ್ಹಿಲರ್‌ರವರ ವೈಜ್ಞಾನಿಕತೆಗೆ ಒಳಪಟ್ಟಿದೆ. ಸೆಕ್ಷನ್ ಸಿ.ಹೆಚ್.೪೩ನಲ್ಲಿ ಕಂಡುಬಂದಿರುವ ಸ್ತರವಿಂಗಡಣೆಯನ್ನು ಗಮನಿಸಿದಾಗ ಎರಡು ಕಾಲಘಟ್ಟದಲ್ಲಿ ಜನರು ವಾಸವಾಗಿದ್ದಾರೆಂದು ತಿಳಿಸಬಹುದು[೧೩]. ಒಟ್ಟು ೧೩ ಸ್ತರಗಳಿದ್ದು, ಕೊನೆಯ ೨ ಸ್ತರಗಳನ್ನು ೧೩ಎನ್, ೧೩ಎನ್ಇ ಎಂದು ಗುರುತಿಸಿದ್ದಾರೆ. ಮೇಲಿನಿಂದ ೧ ರಿಂದ ೧೩ರ ಪದರಿನವರೆಗೆ ಶಾತವಾಹನರ ಅವಧಿ ಎಂದು, ೧೨ ರಿಂದ ೧೩ಎನ್‌ವರೆಗೆ ಬೃಹತ್ ಶಿಲಾಯುಗವೆಂದು ಗುರುತಿಸಲಾಗಿದೆ. ಆದರೆ ೧೩ಎನ್ ಸ್ತರದವರೆಗೆ ಶಾತವಾಹನ ಸಂಸ್ಕೃತಿ ಇತ್ತೇಂದು ಹೇಳುವುದು ಕಷ್ಟಸಾಧ್ಯ. ಸಿಸ್ಟ್

ಸಮಾಧಿಯಲ್ಲಿ ಬೃಹತ್ ಶಿಲಾಯುಗದ ಜೊತೆಗೆ ಶಾತವಾಹನರ ಸಂಸ್ಕೃತಿಯ ಅವಶೇಷಗಳು ದೊರೆತಿಲ್ಲದ ಕಾರಣ ಮೇಲಿನ ಹೇಳಿಕೆ ಸತ್ಯ. ಮೇಲಿನಿಂದ ೫ ರಿಂದ ೧೨ನೇ ಸ್ತರದವರೆಗೆ ಮಣ್ಣು ತೆಗೆದ ೨ ಗುಂಡಿಯಲ್ಲಿ ಶಾತವಾಹನರ ನಾಣ್ಯಗಳು ದೊರೆತಿವೆ. ಕೈಯಿಂದ ಮಾಡಿದ ಮಡಕೆಗಳು ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳು ಕಂಡುಬಂದಿವೆ[೧೪]. ಈ ಆಧಾರದ ಮೇಲೆ ಶಾತವಾಹನರ ಸಂಸ್ಕೃತಿಯ ಕಾಲದಲ್ಲಿ ವಿವಿಧ ಕಾಲಘಟ್ಟದ ಅವಶೇಷಗಳು ಮಿಶ್ರಣಗೊಂಡಿವೆ ಎಂದು ತೋರುತ್ತದೆ. ಈ ಮೂಲಕ ಬೃಹತ್ ಶಿಲಾಯುಗದ ಸಂಸ್ಕೃತಿಯು ಶಾತವಾಹನರ ಕಾಲಕ್ಕಿಂತ ಭಿನ್ನವಾದ ಸಂಸ್ಕೃತಿಯೆಂದು ನಿರ್ಧರಿಸಬಹುದಾಗಿದೆ.

ಚಂದ್ರವಳ್ಳಿ ನೆಲೆಯು ಶಾತವಾಹನರ ಪ್ರಮುಖ ನೆಲೆಯೆಂದು ಗುರುತಿಸಿ ಕೊಂಡಿದ್ದಲ್ಲದೆ, ನವಶಿಲಾಯುಗ ಹಾಗೂ ಬೃಹತ್ ಶಿಲಾಯುಗದಲ್ಲಿ ಪ್ರಮುಖ ವಾಸಸ್ಥಾನವಾಗಿತ್ತು. ಚಂದ್ರವಳ್ಳಿ ವಿವಿಧ ಕಾಲಘಟ್ಟಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಒಳಪಟ್ಟಿದ್ದರಿಂದ ನೆಲೆಯು ಹಾಳಾಗಿರುವುದು ಸ್ಪಷ್ಟ. ಶಾತವಾಹನರು ಬೆಟ್ಟದ ತಪ್ಪಲಿನಲ್ಲಿ ವಾಸವಾಗಿದ್ದರೆ ನವ ಶಿಲಾಯುಗದ ಮಾನವರು ಕಲ್ಲಾಸರೆಯಲ್ಲಿ ವಾಸವಾಗಿದ್ದಾರೆಂಬ ಆಧಾರವು ವಿಶೇಷ. ಚಂದ್ರವಳ್ಳಿಯಲ್ಲಿ ದೊರೆತಿರುವ ರೇಖಾಚಿತ್ರಗಳು ಶಿಲಾಯುಗದ ಮಾನವನ ಕಲೆಯ ಪ್ರತಿಬಿಂಬಕಗಳಾಗಿವೆ. ಒಟ್ಟಾಗಿ ಚಂದ್ರವಳ್ಳಿ ನೆಲೆಯು ಸಾಂಸ್ಕೃತಿಕ ತಾಣವಾಗಿತ್ತೆಂದು ಹೇಳಬಹುದು.

ಚಿಪ್ಪಿನಕೆರೆ:

ತುರುವನೂರು ಹೋಬಳಿಯಲ್ಲಿ ಬರುವ ಗ್ರಾಮ ಚಿಪ್ಪಿನಕೆರೆ. ತುರುವನೂರಿನಿಂದ ಪಶ್ಚಿಮಕ್ಕೆ ೧೦ಕಿ.ಮೀ. ಅಂತರ ಮತ್ತು ಚಂದ್ರವಳ್ಳಿಯಿಂದ ಉತ್ತರಕ್ಕೆ ೨೫ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಸುತ್ತಲೂ ಹಳ್ಳಕೊಳ್ಳ ತುಂಬಿ ಹರಿದಾಗ ಯಾವ ಕಡೆ ಹೋಗಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಚಿಪ್ಪಿನೊಳಗೆ ಉದುಗಿದ ಊರು ಎಂದು ಕರೆದಿರಬೇಕು[೧೫]. ಚಿಪ್ಪಿನಕೆರೆಯ ಕೊಡಿಹಳ್ಳ ಮತ್ತು ಜಿನಗಿಹಳ್ಳದ ದಂಡೆಯ ಮೇಲೆ ಬೂದಿ ಹೊಲಗಳೆಂದು ಕರೆಯುವ ನೆಲೆ ಇದೆ. ಈ ಬೂದಿ ಹೊಲಗಳು ೫ರಿಂದ ೮ ಎಕರೆಗಳಷ್ಟು ವಿಸ್ತಾರವಾಗಿದ್ದು, ನವ ಶಿಲಾಯುಗದಿಂದ ಶಾತವಾಹನರ ಕಾಲದವರೆಗೆ ಅವಶೇಷಗಳು ಸಿಗುತ್ತವೆ. ಈ ನೆಲೆಯಲ್ಲಿ ಬಿಳಿವರ್ಣದ ರೇಖೆಗಳ ಸಹಿತವಾದ ಹಾಗೂ ಹೊಳಪುಳ್ಳ ಕಪ್ಪು ಮತ್ತು ಕೆಂಪು ಮಡಕೆ ಚೂರುಗಳು, ವಿವಿಧ ಬಗೆಯ ಮಣಿಗಳು, ದಂತದ ಚೂರುಗಳು, ಸುಟ್ಟ ಇಟ್ಟಿಗೆಗಳನ್ನು ಮಹಾರಥಿಗಳ

ನಾಣ್ಯಗಳನ್ನು ಎಸ್.ವೈ.ಸೋಮಶೇಖರ್ ಸಂಶೋಧಿಸಿದ್ದರು[೧೬]. ಕ್ಷೇತ್ರ ಕಾರ್ಯದಲ್ಲಿ ಕೆಂಪು ಬಣ್ಣದ ಒಳಪುಳ್ಳ ಮಡಕೆ ಚೂರುಗಳು ಜೊತೆಗೆ ಸೀಸದ ನಾಣ್ಯಕೂಡ ದೊರಕಿರುತ್ತವೆ. ಈ ಹಿಂದೆ ದೊರೆತ ನಾಣ್ಯವು ೧೨ಗ್ರಾಂ ತೂಕವಿದ್ದು, ವೃತ್ತಾಕಾರವಾಗಿದೆ. ಒಂದು ಮುಖದಲ್ಲಿ ವೃಷಭ, ಅದರ ಸುತ್ತಲೂ ನಂದ ಮಹಾರಥಿಗಳೆಂದು ಬ್ರಹ್ಮಿಲಿಪಿಯಲ್ಲಿ ಬರೆದಿರುವುದು ಇನ್ನೊಂದು ಮುಖದಲ್ಲಿ ಮರದ ಚಿತ್ರವಿದೆ[೧೭]. ಈ ನೆಲೆಯಲ್ಲಿ ಹೆಚ್ಚು ಚುಟು ಮತ್ತು ನಂದಮಹಾರಥಿಗಳ ನಾಣ್ಯಗಳೇ ದೊರಕಿರುವುದರಿಂದ ಶಾತವಾಹನರ ಮಾಂಡಲಿಕರ ಆಡಳಿತ ಕೇಂದ್ರವಾಗಿತ್ತೆಂದು ಹೇಳಬಹುದು. ಕೆಂಪು ಮತ್ತು ಕಪ್ಪು ವರ್ಣದ ಮಡಕೆಗಳು ಕಂಡು ಬರುತ್ತಿರುವುದರಿಂದ ಬೃಹತ್ ಶಿಲಾಯುಗದ ಅವಶೇಷಗಳು ಸಿಗುತ್ತವೆ ಎನ್ನುವ ವಿಚಾರವನ್ನು ಅಲ್ಲಗೆಳೆಯುವಂತಿಲ್ಲ.

ಬಸ್ತಿಹಳ್ಳಿ:

ಚಿತ್ರದುರ್ಗದಿಂದ ೨೫ಕಿ.ಮೀ. ದೂರದಲ್ಲಿರುವುದು ಬಸ್ತಿಹಳ್ಳಿ ಗ್ರಾಮ. ಗ್ರಾಮದ ಹೊರವಲಯದಲ್ಲಿ ಭಗ್ನವಾಗಿರುವ ನವಶಿಲಾಯುಗ ಕಲ್ಲಿನ ಕೊಡಲಿಯನ್ನು ಎಸ್.ನಾಗರಾಜಪ್ಪ ಶೋಧಿಸಿ ಪ್ರಕಟಿಸಿದ್ದಾರೆ[೧೮]. ಆಯುಧವು ಡೋಲರೈಟ್ ಶಿಲೆಯಿಂದ ರಚಿತಗೊಂಡಿದ್ದು, ೭ಸೆಂ.ಮೀ. ಉದ್ದ ೫ಸೆಂ.ಮೀ. ಅಗಲವಿರುವುದು. ಈ ಬಗೆಯ ಕಲ್ಲಿನ ಕೊಡಲಿಗಳು ಕೂನಬೇವು, ಕುರುಮರಡಿಕೆರೆ, ಜೆ.ಎನ್.ಕೋಟೆಯಲ್ಲಿ ದೊರೆತಿರುವ ಕಲ್ಲಿನ ಕೊಡಲಿಗಳಿಗೆ ಹೋಲಿಕೆಯಾಗುತ್ತದೆ.

ಕೆನ್ನಾಡಲು:

ಚಿತ್ರದುರ್ಗ ೨೫ಕಿ.ಮೀ. ದೂರದಲ್ಲಿರುವ ಗ್ರಾಮ ಕೆನ್ನಾಡಲು. ಹಿರಿಯೂರು, ಹೊಳಲ್ಕೆರೆ, ಚಿತ್ರದುರ್ಗ ಗಡಿಭಾಗವನ್ನು ಹಂಚಿಕೊಂಡಿರುವ ಪ್ರದೇಶವಿದು. ಗ್ರಾಮದ ಹೊರವಲಯದಲ್ಲಿ ರಸ್ತೆಯ ಎಡಭಾಗಕ್ಕೆ ಗೊಲ್ಲಮ್ಮ ಎಂದು ಪೂಜಿಸುವ ಸ್ಥಳವಿದೆ. ಗೊಲ್ಲಮ್ಮ ಎಂದು ಕರೆಯಲ್ಪಡುವ ಸ್ಥಳದಲ್ಲಿ ಮರವಿದ್ದು, ಮರದ ಕೆಳಗೆ ಕಲ್ಲುಗಳನ್ನಿಟ್ಟು ಸ್ಥಳೀಯರು ಪೂಜಿಸುತ್ತಾರೆ. ಪೂಜಿಸುವ ಕಲ್ಲುಗಳಲ್ಲಿ ೧ ಕಲ್ಲು ನವ ಶಿಲಾಯುಗದಲ್ಲಿ ರಚಿತಗೊಂಡ ಶಿಲಾಕೊಡಲಿ ಇದೆ. ಕೊಡಲಿಯು ನಯವಾಗಿದ್ದು, ೯ಇಂಚು ಉದ್ದ ೨ಇಂಚು ಅಗಲದಿಂದ ಕೂಡಿರುವುದು. ಕೊಡಲಿಯನ್ನು ಡೋಲರೈಟ್ ಶಿಲೆಯಿಂದ ರಚಿಸಲಾಗಿರುವುದು. ಈ ರೀತಿಯಾದ ಶಿಲಾಕೊಡಲಿಯನ್ನು ಪಾಲವ್ವನಹಳ್ಳಿಯ ಮಾರಮ್ಮನ ಗುಡಿಯಲ್ಲಿ, ಭೀಮಸಮುದ್ರದ ಮಾರಮ್ಮನ ಗುಡಿಯಲ್ಲಿ ಇರುವುದನ್ನು

ಗಮನಿಸಲಾಗಿದೆ. ಅಂದರೆ ಶಿಲಾ ಕೊಡಲಿಯನ್ನು ಪಕ್ಕದ ಪರಿಸರದಲ್ಲಿ ನವಶಿಲಾಯುಗದ ವಸತಿ ನೆಲೆಯಿಂದ ತೆಗೆದುಕೊಂಡು ಬಂದು ಪೂಜೆಗೆ ಒಳಪಡಿಸಿದ್ದಾರೆ.

ತಮಟಕಲ್ಲು:

ಚಿತ್ರದುರ್ಗದಿಂದ ೫ ಕಿ.ಮೀ. ದೂರದಲ್ಲಿರುವುದೇ ತಮಟಕಲ್ಲು ಗ್ರಾಮ. ಗ್ರಾಮದಲ್ಲಿರುವ ಆಂಜನೇಯ ದೇವರು ಜಿಲ್ಲೆಯಲ್ಲಿ ಹೆಸರುವಾಸಿ. ಗ್ರಾಮಕ್ಕೆ ಹೊಂದಿಕೊಂಡಿರುವ ಎಡಕಲ್ಲು ಗುಡ್ಡದಲ್ಲಿ ವಸತಿ ನೆಲೆಯಿರುವುದು. ಈ ಹಿಂದೆ ನೆಲೆಯು ಶೋಧಗೊಂಡಿತ್ತು[೯]. ಪ್ರಸ್ತುತ ವಸತಿನೆಲೆಯು ೨ ಶಿಲಾಬೆಟ್ಟಗಳ ಮಧ್ಯದಲ್ಲಿದೆ. ಇಲ್ಲಿ ಬೂದಿದಿಬ್ಬ ಹಾಗೂ ಬೂದಿಮಣ್ಣಿನಲ್ಲಿ ನವಶಿಲಾಯುಗದ, ಬೃಹತ್ ಶಿಲಾಯುಗದ ಮಡಕೆ, ಶಿಲಾ ಉಪಕರಣಗಳು ದೊರೆತಿವೆ. ಈ ನೆಲೆಗೂ ಬಳ್ಳಾರಿಯ ಕುರುಗೋಡಿನ ವಸತಿನೆಲೆಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಪ್ರಾಣಿಗಳನ್ನು ಬೇಟೆಯಾಡಲು ತಮ್ಮ ಜೀವವನ್ನು ರಕ್ಷಿಸಿಕೊಳ್ಳಲು ಹಾಗೂ ಜೀವನ ಸಾಗಿಸಲು ಯೋಗ್ಯವಾದ ನೆಲೆಯಾಗಿರುವುದು ತಮಟಕಲ್ಲು ವಸತಿನೆಲೆ. ಈ ನೆಲೆಯ ಸಮೀಪದಲ್ಲಿ ಬೃಹತ್ ಶಿಲಾಯುಗದ ಬಯಲುಬಂಡೆ ಚಿತ್ರಗಳು ಇರುವುದನ್ನು ಗಮನಿಸಿದ್ದೇನೆ. ಪ್ರಸ್ತುತ ಗೀರು ಚಿತ್ರಗಳು ನಾಶವಾಗಿರುವುದರಿಂದ ಅಧ್ಯಯನ ಮಾಡಲು ಸಾಧ್ಯವಾಗಿರುವುದಿಲ್ಲ.

ಆಡುಮಲ್ಲೇಶ್ವರ:

ಚಿತ್ರದುರ್ಗದ ಜೋಗಿಮಟ್ಟಿಗೆ ಹೊಂದಿಕೊಂಡಿರುವ ಪ್ರದೇಶವೇ ಆಡುಮಲ್ಲೇಶ್ವರ. ಜಿಲ್ಲೆಯಲ್ಲಿ ಪ್ರಾಣಿಸಂಗ್ರಹಾಲಯಕ್ಕೆ ಇದು ಹೆಸರುವಾಸಿ. ಹಸಿರಿನಿಂದ ಕೂಡಿರುವ ಬೆಟ್ಟ ಪ್ರದೇಶವನ್ನು ಇಲ್ಲಿ ಕಾಣಬಹುದು. ಚಿತ್ರದುರ್ಗದಿಂದ ಆಡುಮಲ್ಲೇಶ್ವರಕ್ಕೆ ಹೋಗುವಾಗ ಬೆಟ್ಟದ ತಪ್ಪಲಿನಲ್ಲಿ ಮಠದ ಎದುರಿಗಿರುವ ಕಬ್ಬಿಣದ ಖನಿಜಾಂಶವುಳ್ಳ ಬೆಟ್ಟದ ತಪ್ಪಲಿನಲ್ಲಿ ನಿಲುಸುಗಲ್ಲು ಸಮಾಧಿಯಿದೆ. ಸ್ಥಳೀಯರು ಇದನ್ನು ನಿಲುಸುಗಲ್ಲು ಎಂದೇ ಕರೆಯುತ್ತಾರೆ. ಈ ನಿಲುಸುಗಲ್ಲನ್ನು ಲಕ್ಷ್ಮಣ್ ತೆಲಗಾವಿ ಗಮನಿಸಿದ್ದಾಗಿ ತಿಳಿಸಿದ್ದಾರೆ. ಜಿಲ್ಲೆಯಲ್ಲಿ ನಿಲುಸುಗಲ್ಲು ಸಮಾಧಿಗೆ ಆನೆ ಕಟ್ಟುವ ಕಲ್ಲು, ನಿಲುವುಗಲ್ಲು ಎಂದು ಕರೆಯುತ್ತಿರುವುದು ತಿಳಿದಿರುವ ವಿಚಾರ. ಪ್ರಸ್ತುತ ನಿಲುಸುಗಲ್ಲು ಬೆಟ್ಟದ ಪಶ್ಚಿಮ ಇಳಿಜಾರಿನಲ್ಲಿ ಪಶ್ಚಿಮಾಭಿಮುಖವಾಗಿ ಇರುವುದು. ೧೨ಅಡಿ ಎತ್ತರ, ೫ಅಡಿ ಅಗಲವಿರುವ ನಿಲುಸುಗಲ್ಲು ಗ್ರಾನೈಟ್ ಬಂಡೆಯಾಗಿರುವುದು. ಈ ಹಿಂದೆ ನೋಡಿದ್ದ ಈ ನಿಲುಸುಗಲ್ಲು ಸಮಾಧಿಯು ಮರುಪರಿಶೀಲನೆಗೆ ಹೋದಾಗ ಇಲ್ಲದಿರುವುದು

ವಿಷಾಧನೀಯ. ಇದೇ ರೀತಿ ಕುಂಚಿಗನಾಳ್, ಇಂಗಳದಾಳ್‌ನಲ್ಲಿದ್ದ ನಿಲುಸುಗಲ್ಲು, ಸಮಾಧಿಗಳು ನಾಶಗೊಂಡಿವೆ.

ಬೊಮ್ಮಕ್ಕನಹಳ್ಳಿ:

ಚಿತ್ರದುರ್ಗ ಜಿಲ್ಲಾ ಕೇಂದ್ರದಿಂದ ಭೀಮಸಮುದ್ರಕ್ಕೆ ಹೋಗುವ ರಸ್ತೆಯಲ್ಲಿ ಬೊಮ್ಮಕ್ಕನಹಳ್ಳಿ ಗ್ರಾಮ ಇರುವುದು. ಗ್ರಾಮದ ಮಧ್ಯಭಾಗದ ರಸ್ತೆಯ ಪಕ್ಕದಲ್ಲಿ ಆಲದ ಮರವಿದ್ದು, ಈ ಮರದ ಕೆಳಗೆ ನಯವಾದ ಕಲ್ಲಿನ ಕೊಡಲಿ ಪೂಜಿಸಲ್ಪಟ್ಟಿವೆ. ಕಲ್ಲಿನ ಕೊಡಲಿಯನ್ನು ಕೇತ್ರಕಾರ್ಯದಲ್ಲಿ ಶೋಧಿಸಿದ್ದೇನೆ. ಮರದ ಸುತ್ತಲೂ ರಕ್ಷಣಾಗೋಡೆ ನಿರ್ಮಾಣ ಮಾಡಿರುವುದರಿಂದ ಶಿಲಾ ಕೊಡಲಿಗಳು ಹಾಳಾಗದೆ ಉಳಿದುಕೊಂಡಿವೆ. ಇದೇ ರೀತಿ ಚಿತ್ರದುರ್ಗದ ಹಲವು ಭಾಗಗಳಲ್ಲಿ ಶಿಲಾ ಕೊಡಲಿಗಳು ಪೂಜೆಗೆ ಒಳಪಟ್ಟಿವೆ. ಶಿಲಾಕೊಡಲಿಗಳಲ್ಲಿ ೧ ಚಿಕ್ಕದು ಮತ್ತೊಂದು ೧೭ಸೆ.ಮೀ. ಉದ್ದ, ೫ಸೆ.ಮೀ. ಅಗಲ, ೨ಸೆ.ಮೀ. ಹಿಡಿಕೆಯ ಭಾಗ, ೪.೫ಸೆ.ಮೀ. ಕೆಳಭಾಗವು ಅಗಲವಾಗಿದ್ದು, ತುಂಬಾ ಹರಿತವಾಗಿದೆ. ಸ್ವಲ್ಪ ಭಾಗ ತುಂಡಾಗಿರುವುದನ್ನು ಗಮನಿಸಿದರೆ ನವಶಿಲಾಯುಗದ ಜನರು ಬಳಸಿದುದಾಗಿ ಹೇಳಬಹುದು. ೨ ಕೊಡಲಿಗಳು V ಆಕಾರದಲ್ಲಿದ್ದು, ನವಶಿಲಾಯುಗದ ಸಂಸ್ಕೃತಿಯನ್ನು ಬಿಂಬಿಸುತ್ತವೆ.

ಜಂಪಣ್ಣನಾಯಕನ ಕೋಟೆ:

ಚಿತ್ರದುರ್ಗದಿಂದ ದೊಡ್ಡಸಿದ್ದವ್ವನಹಳ್ಳಿ ಮಾರ್ಗದ ಮೂಲಕ ಸಾಗಿದರೆ ಜಂಪಣ್ಣನಾಯಕನ ಕೋಟೆ ಗ್ರಾಮ ಸಿಗುವುದು. ಗ್ರಾಮದ ಪೂರ್ವಕ್ಕೆ ರಸ್ತೆಯ ಎಡಭಾಗದಲ್ಲಿ ಬೃಹತ್ ಶಿಲಾಯುಗದ ಕೇರ್ನೈನ್ ಮಾದರಿಯ ಸಮಾಧಿಗಳನ್ನು ೧೯೭೭-೭೮ರಲ್ಲಿ ಕೆ.ವೆಂಕಟೇಶ್ವರರಾವ್ ಶೋಧಿಸಿದ್ದರು[೨೦]. ತರುವಾಯ ನಾಗರಾಜಪ್ಪ.ಎಸ್, ಬಿ.ಟಿ.ಚಾರುಲತಾ ಮತ್ತು ಎಸ್.ವೈ.ಸೋಮಶೇಖರ್ ನವ ಶಿಲಾಯುಗದ ಕೈಕೊಡಲಿಗಳನ್ನು ೨೦೦೮ರಲ್ಲಿ ಶೋಧಿಸಿದ್ದಾರೆ[೨೧]. ನಾಗರಾಜಪ್ಪ.ಎಸ್ ಜೊತೆಗೂಡಿ ಕ್ಷೇತ್ರಕಾರ್ಯ ಮಾಡುವಾಗ ಆದ ನಾವುಗಳು ಹಳ್ಳದ ಬಯಲಿನಲ್ಲಿ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು ಶೋಧಿಸಿದ್ದು ಆಂಜನೇಯ ದೇವಸ್ಥಾನದ ಸಮೀಪ ಬೂದಿ ಹೊಲದಲ್ಲಿ ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಮಡಕೆ, ಕಲ್ಲಿನ ಉಪಕರಣಗಳು ದೊರೆತಿವೆ. ಈ ಮೂಲಕ ಜಂಪಣ್ಣನಾಯಕನ ಕೋಟೆ ಸೂಕ್ಷ್ಮ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗಿನ ವಸತಿ ನೆಲೆಯಾಗಿತ್ತೆಬುಂದು ಸ್ಪಷ್ಟವಾಗುತ್ತಾದೆ.

ಸೂಕ್ಷ್ಮವಾದ ಶಿಲಾ ಉಪಕರಣಗಳಲ್ಲಿ ಚರ್ಟ್, ಅಗೇಟ್, ಕ್ವಾಡ್ಜ್ ಶಿಲೆಯಲ್ಲಿ ರಚಿತಗೊಂಡಿವೆ. ೧ಇಂಚಿನಿಂದ ೩ಇಂಚಿನವರೆಗೆ ಉದ್ದದ ಪ್ರಮಾಣವನ್ನು ಹೊಂದಿವೆ. ಶಿಲಾ ಉಪಕರಣಗಳಲ್ಲಿ ಬಾಣದ ಮೊನೆ, ಅರ್ಧ ಚಂದ್ರಾಕೃತಿ, ಕೊರೆಯುವ ಸೂಕ್ಷ್ಮ ಆಯುಧಗಳು ಪ್ರಮುಖವು. ಸೂಕ್ಷ್ಮ ಉಪಕರಣಗಳ ಮೂಲಕ ಅಂದಿನ ಮಾನವನಿಗೆ ಮಾಂಸವನ್ನು ಕತ್ತರಿಸಲು ಸಹಾಯಕವಾಗಿದ್ದಿರಬೇಕೆಂದು ಹೇಳಬಹುದು.

ಅಂಜನೇಯ ದೇವಸ್ಥಾನ ಸಮೀಪ ಇರುವ ಬೂದಿಹೊಲದಲ್ಲಿ ಮಡಕೆ ಅವಶೇಷಗಳು ಕಂಡುಬಂದಿವೆ. ೩ ಎಕರೆ ವಿಸ್ತೀರ್ಣವಾಗಿರುವ ಬೂದಿ ಹೊಲವು ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದ ವಸತಿ ನೆಲೆಯಾಗಿದೆ. ನೆಲೆಯ ಮೇಲ್ಮೈಯಲ್ಲಿ ಸಿಗುವ ಅವಶೇಷಗಳನ್ನು ಸಂಗ್ರಹಿಸಿದ್ದೇನೆ. ಕೆಂಪು, ಕಪ್ಪು, ಬೂದುಬಣ್ಣದ ಮಡಕೆ ಚೂರುಗಳು ದೊರೆತಿವೆ. ಮಡಕೆಯ ತಯಾರಿಕಾ ಸಂದರ್ಭದಲ್ಲಿ ಸಿಲಿಕಾಸಿಸ್ ಪುಡಿಯನ್ನು ಬಳಸಿಕೊಂಡಿದ್ದಾರೆ. ನಯವಾದ ಕಪ್ಪು ಮತ್ತು ಕೆಂಪು ಮಡಕೆ ಹಾಗೂ ರಸೆಟ್ ಕೋಟೆಡ್ ಮಡಕೆಗಳು ಕಂಡುಬಂದಿವೆ. ಚಿಕ್ಕಗುಡಾಣ, ಚಿಕ್ಕಪಾತ್ರೆಗಳು, ದೊಡ್ಡ ಪಾತ್ರೆಗಳು, ಬಟ್ಟಲುಗಳು ಬಳಕೆಯಾಗಿವೆ. ಕಲ್ಲಿನ ಉಪಕರಣಗಳಲ್ಲಿ ತಯಾರಿಕಾ ಹಂತದಲ್ಲಿರುವ ನಯವಾದ ಕಲ್ಲಿನ ಕೊಡಲಿ, ವೃತ್ತಾಕಾರದ ಕಲ್ಲಿನ ಬಿಲ್ಲೆ, ಉಜ್ಜುವ ಕಲ್ಲು, ರುಬ್ಬುವ ಕಲ್ಲು, ಕವಣೆ ಕಲ್ಲು, ಮುರಿದ ಆಯುಧಗಳು ಪ್ರಮುಖವಾಗಿದ್ದು, ಕಬ್ಬಿಣದ ಕಿಟ್ಟ, ಸುಟ್ಟ ಮಣ್ಣಿನ ಉಂಡೆ ದೊರಕಿರುವುದು ವಿಶೇಷ.

ಹೊಸದ್ಯಾಮವ್ವನಹಳ್ಳಿ:

ಚಿತ್ರದುರ್ಗದಿಂದ ಗೊನೂರಿಗೆ ಹೋಗುವ ಮಾರ್ಗದ ಬಲಭಾಗಕ್ಕೆ ಬರುವ ಗ್ರಾಮ ಹೊಸದ್ಯಾಮವ್ವನಹಳ್ಳಿ. ಗ್ರಾಮದಲ್ಲಿ ವಿಚಾರಿಸುವಾಗ ಪೂರ್ವಕ್ಕೆ ಜಾಲಿ ಪೊದೆಯಲ್ಲಿ ಬೂದಿದಿನ್ನೆಯಿದೆ ಎಂಬ ಮಾಹಿತಿ ತಿಳಿಯಿತು. ತಕ್ಷಣ ಬೂದಿದಿನ್ನೆಗೆ ಹೋಗಿ ಕ್ಷೇತ್ರಕಾರ್ಯವನ್ನು ಮಾಡಿದ್ದೇವೆ. ನೆಲೆಯೂ ೫ಎಕರೆಯಷ್ಟು ವಿಸ್ತೀರ್ಣವಾಗಿದೆ. ಸ್ಥಳೀಯರು ಬೂದಿ ಮಣ್ಣನ್ನು ಮನೆಗೆ ತೆಗೆದುಕೊಂಡು ಹೋಗುತ್ತಿರುವುದರಿಂದ ಪ್ರಾಚೀನ ನೆಲೆ ಹಾಳಾಗುತ್ತಿದೆ. ನೆಲೆಯ ಮೇಲ್ಮೈಯಲ್ಲಿ ಕವಣೆ ಕಲ್ಲು, ಒಳಕಲ್ಲು, ರುಬ್ಬುವಕಲ್ಲು, ಕಬ್ಬಿಣದ ಕಿಟ್ಟಗಳು, ಮಡಕೆ ಚೂರುಗಳಿವೆ. ಬೂದು, ಕೆಂಪು, ಕಪ್ಪು ಬಣ್ಣದ ಮಡಕೆಗಳು ಸಿಗುವುದಲ್ಲದೆ ಬೂದು ಬಣ್ಣದ ೨.೫ಸೆ.ಮೀ. ಅಗಲ, ೫ಸೆ.ಮೀ. ಉದ್ದದ ಇಟ್ಟಿಗೆಯ ತುಂಡು ದೊರೆತಿರುವುದು ವಿಶೇಷ. ಇಟ್ಟಿಗೆಯ ಪ್ರತಿ ಭಾಗದಲ್ಲೂ ಅಡ್ಡ ಮತ್ತು ಉದ್ದಗೆರೆಗಳನ್ನು ಕಾಣಬಹುದು. ಎಲ್ಲಾ ಅವಶೇಷಗಳನ್ನು ಗಮನಿಸಿದಾಗ

ನವ ಶಿಲಾಯುಗದಿಂದ ಮತ್ತು ಇತಿಹಾಸ ಆರಂಭ ಕಾಲದವರೆಗೆ ವಸತಿ ನೆಲೆಯಾಗಿತ್ತೆಂದು ನಿರ್ಧರಿಸಬಹುದಾಗಿದೆ.

ಕಡ್ಲೆಗುದ್ದು:

ಚಿತ್ರದುರ್ಗ ತಾಲೂಕಿನ ಜನವಸತಿ ಗ್ರಾಮವಾಗಿರುವ ಕಡ್ಲೆಗುದ್ದು, ಸಿರಿಗೆರೆಯಿಂದ ೮ ಕಿ.ಮೀ. ದೂರದಲ್ಲಿದೆ. ಗ್ರಾಮಕ್ಕೆ ಪ್ರವೇಶಿಸುವ ಮುನ್ನ ರಸ್ತೆಯ ಎಡ ಮತ್ತು ಬಲಭಾಗಕ್ಕೆ ಹೊಲಗಳಲ್ಲಿ ಪಾಂಡವರಗುತ್ತಿ ಎಂದು ಕರೆಯುವ ನೆಲೆಸಿಗುವುದು. ಪಾಂಡವರಗುತ್ತಿಯಲ್ಲಿ ಬೃಹತ್ ಶಿಲಾಯುಗದ ಶಿಲಾ ವೃತ್ತಗೋರಿಗಳಿವೆ. ಪ್ರಸ್ತುತ ೫೦ ಶಿಲಾಗೋರಿಗಳನ್ನು ಗುರುತಿಸಲಾಗಿದ್ದು, ಬಹುಶಃ ಈ ಹಿಂದೆ ೧೦೦ಕ್ಕೂ ಹೆಚ್ಚು ಶಿಲಾಗೋರಿಗಳು ಇರಬಹುದಾದ ಸಾಧ್ಯತೆಗಳಿವೆ. ಈ ನೆಲೆಯನ್ನು ಕ್ಷೇತ್ರಕಾರ್ಯದಲ್ಲಿ ಶೋಧಿಸಿದ್ದೇನೆ. ಕಡ್ಲೆಗುದ್ದು ಗ್ರಾಮದ ಪಕ್ಕದಲ್ಲಿ ಗ್ರಾನೈಟ್‌ನಿಂದ ಕೂಡಿದ ಶಿಲಾ ಬೆಟ್ಟವಿರುವುದರಿಂದ ಶಿಲಾಸಮಾಧಿಗಳನ್ನು ರಚಿಸಲು ಸುಲಭ ಸಾಧ್ಯವಾಗಿದೆ. ವೃತ್ತಾಕಾರವಾಗಿರುವ ಶಿಲಾಗೋರಿಗಳು ೧೫ರಿಂದ ೩೦ ಅಡಿ ವ್ಯಾಸವನ್ನು ಹೊಂದಿರುತ್ತವೆ. ವೃತ್ತಾಕಾರದ ಸಮಾಧಿಯ ಮಧ್ಯೆ ೧೫ ಅಡಿ ಉದ್ದದ ಬಂಡೆಯನ್ನು ದಕ್ಷಿಣೋತ್ತರವಾಗಿ ಹಾಕಿರುವುದನ್ನು ಗಮನಿಸಬಹುದು. ಇದೇ ರೀತಿಯಾದ ಸಮಾಧಿ ಮಾದರಿ ಪಕ್ಕದ ಮಿಂಚೇರಿಗುಡ್ಡದಲ್ಲಿ ಕಾಣುತ್ತೇವೆ. ಈ ಸಮಾಧಿಗಳು ಸಿಸ್ಟ್ ಅಥವಾ ಫಿಟ್ ಮಾದರಿಯಲ್ಲಿ ಇರುತ್ತವೆ. ಬಹಳಷ್ಟು ಸಮಾಧಿಗಳು ಇರುವುದರಿಂದ ಹೆಚ್ಚು ಜನ ಸಂಖ್ಯೆಯಿಂದ ಕೂಡಿದ ಪ್ರದೇಶವಾಗಿತ್ತೆಂದು ತಿಳಿಯಬಹುದು.

ದೊಡ್ಡಾಲಘಟ್ಟ:

ಚಿತ್ರದುರ್ಗ ತಾಲೂಕಿನ ದೊಡ್ಡಾಲಘಟ್ಟ ಗ್ರಾಮವು ಕಡ್ಲೆಗುದ್ದು ಗ್ರಾಮದ ಪಕ್ಕದಲ್ಲಿದೆ. ಗ್ರಾಮದಿಂದ ಕಡ್ಲೆಗುದ್ದುಗೆ ಹೋಗುವ ಮಾರ್ಗದಲ್ಲಿ ಗ್ರಾಮದ ಪಕ್ಕದಲ್ಲಿರುವ ಪಾಂಡವರಗುತ್ತಿ, ಬೃಹತ್ ಶಿಲಾಯುಗದ ಸಮಾಧಿ ನೆಲೆ. ಈ ನೆಲೆಯನ್ನು ಕ್ಷೇತ್ರಕಾರ್ಯದಲ್ಲಿ ಶೋಧಿಸಿದ್ದೇನೆ. ಪಾಂಡವರಗುತ್ತಿಯಲ್ಲಿ ೧೫ ವೃತ್ತಾಕಾರದ ಸಮಾಧಿಗಳಿದ್ದು, ಪಕ್ಕದ ಕಡ್ಲೆಗುದ್ದಿನಲ್ಲಿರುವ ಶಿಲಾಗೋರಿಗಳಿಗೆ ಹೋಲಿಕೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಈ ಪರಿಸರದಲ್ಲೂ ಶಿಲಾ ಬೆಟ್ಟವಿರುವುದರಿಂದ ಸಮಾಧಿಗಳನ್ನು ರಚಿಸಲು ಸಾಧ್ಯವಾಗಿದೆ. ಶಿಲಾ ವೃತ್ತಗೋರಿಗಳು ಶಿಲಾ ಬೆಟ್ಟದ ತಪ್ಪಲಿನಲ್ಲಿವೆ. ಸಮಾಧಿಗಳು ಸಿಸ್ಟ್ ಅಥವಾ ಫಿಟ್ ಸರ್ಕಲ್ ಮಾದರಿಯಲ್ಲಿವೆ ಎಂದು

ಹೇಳಬಹುದು. ಈ ಸಮಾಧಿ ನೆಲೆಯ ಉತ್ತರಕ್ಕೆ ಬೆಟ್ಟದ ತಪ್ಪಲಿನಲ್ಲಿ ಮನೆದೊಲ ಎಂದು ಕರೆಯುವ ಸ್ಥಳವಿದ್ದು, ಪ್ರಾಗೈತಿಹಾಸಿಕ ಅವಶೇಷಗಳು ಸಿಗುತ್ತವೆ. ಈ ನೆಲೆಯು ಬೃಹತ್ ಶಿಲಾಯುಗದಲ್ಲಿ ವಸತಿನೆಲೆಯಾಗಿದ್ದು, ಕಪ್ಪು ಮತ್ತು ಕೆಂಪು ಮಡಕೆಗಳು ಸಿಗುತ್ತವೆ. ಈ ರೀತಿಯ ಅವಶೇಷಗಳು ದೊರಕಿದ್ದವು ಎಂಬ ಮಾಹಿತಿಯು ಸ್ಥಳೀಯರಿಂದ ಲಭ್ಯವಾಗಿದೆ. ವಸತಿ ನೆಲೆಯ ದಕ್ಷಿಣಕ್ಕೆ ಸಮಾಧಿ ನೆಲೆ ಇದೆ. ಆದರೆ ರಾಮಗಿರಿ ಸಮಾಧಿ ನೆಲೆಯು ವಸತಿನೆಲೆಯ ಪೂರ್ವಕ್ಕೆ ಇರುವುದು ಗಮನಿಸಬೇಕಾದ ವಿಷಯ. ಆದ್ದರಿಂದ ಯಾವ ದಿಕ್ಕಿನಲ್ಲಿ ಸಮಾಧಿ ನೆಲೆಗಳಿರುತ್ತವೆ ಎನ್ನುವುದು ಮುಖ್ಯವಲ್ಲ. ವಸತಿನೆಲೆಯು ಹಳ್ಳದ ದಂಡೆಯ ಮೇಲೆ, ಸಮಾಧಿಗಳು ಶಿಲೆಗಳು ಸಿಗುವ ಕಡೆ ಇರುತ್ತವೆ ಎನ್ನುವುದು ಸತ್ಯ.

ತುರುವನೂರು:

ಚಿತ್ರದುರ್ಗದಿಂದ ಉತ್ತರಕ್ಕೆ ೨೩ ಕಿ.ಮೀ ದೂರದಲ್ಲಿರುವ ಹೋಬಳಿ ಕೇಂದ್ರ ತುರುವನೂರು. ಈ ಗ್ರಾಮದಿಂದ ದೊಡ್ಡಗಟ್ಟ ಮಾರ್ಗವಾಗಿ ನಾಯಕನಹಟ್ಟಿಗೆ ಹೋಗುವ ದಾರಿಯಲ್ಲಿ ಮೂಕಬಸಪ್ಪನ ದೇವಸ್ಥಾನ ಮುಂಭಾಗ ಇರುವ ಹಾಳೂರು ಎಂದು ಕರೆಯುವ ನಿಂಗಪ್ಪನ ಹೊಲದಲ್ಲಿ ೧೦ಕ್ಕು ಹೆಚ್ಚು ಶಿಲಾಗೋರಿಗಳಿವೆ. ಶಿಲಾಗೋರಿಗಳು ವೃತ್ತ ಪ್ರಕಾರಕ್ಕೆ ಸೇರಿದ್ದು, ೨೪x೨೪ಅಡಿ ಅಳತೆಯನ್ನು ಹೊಂದಿವೆ. ಈ ಹಿಂದೆ ಕೈರನ್ ವೃತ್ತ ಸಮಾಧಿಗಳನ್ನು ಎಂ.ಶೇಷಾದ್ರಿ ಶೋಧಿಸಿದ್ದರು[೨೨]. ಈ ರೀತಿಯ ಸಮಾಧಿ ಪ್ರಸ್ತುತ ಪರಿಸರದಲ್ಲಿ ಮೊದಲೆನಿಸಿದೆ. ಮತ್ತೊಂದು ನೆಲೆಯು ತುರುವನೂರಿನಿಂದ ಗಂಗಾಧರೇಶ್ವರ ದೇವಾಸ್ಥಾನಕ್ಕೆ ಹೋಗುವ ದಾರಿಯಲ್ಲಿ ಬರುವುದು. ಈ ನೆಲೆಯನ್ನು ಮೋರೆಯರಮಟ್ಟಿ ಎಂದು ಕರೆಯುತ್ತಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಮೋರೆಯರಮಟ್ಟಿಯಲ್ಲಿ ೫೨ ಶಿಲಾ ವೃತ್ತಗೋರಿಗಳು ಬೆಳಕಿಗೆ ಬಂದಿವೆ. ಒಂದೇ ಕುಟುಂಬಕ್ಕೆ ಸೇರಿರಬಹುದಾದ ಮೂರು ವೃತ್ತ ಶಿಲಾಗೋರಿಗಳು ತ್ರಿಭುಜಾಕಾರದಲ್ಲಿ ಅಕ್ಕ ಪಕ್ಕದಲ್ಲಿವೆ. ದೊಡ್ಡದಾದ ಶಿಲಾವೃತ್ತಗೋರಿ ೨೫x೨೫ ಅಡಿ ಅಳತೆಯಲ್ಲಿಯಿದ್ದರೆ, ಚಿಕ್ಕದು ೧೨x೧೨ಅಡಿ ಅಳತೆಯಲ್ಲಿ ರಚಿತಗೊಂಡಿವೆ. ಮೋರೆಯರ ಮಟ್ಟಿಯ ಸಮಾಧಿ ನೆಲೆ ಇಂದು ಜನರ ಸ್ಮಶಾನವಾಗಿದೆ. ಇದು ಹೀಗೆಯೇ ಮುಂದುವರಿದರೆ ಪ್ರಾಚೀನ ಸಮಾಧಿ ನೆಲೆ ನಾಶಗೊಳ್ಳುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಸಂರಕ್ಷಿಸುವ ಅಗತ್ಯತೆಯಿದೆ.

ಬೆಳಗಟ್ಟ:

ತುರುವನೂರಿನಿಂದ ದಕ್ಷಿಣಕ್ಕೆ ೯ ಕಿ.ಮೀ. ದೂರದಲ್ಲಿರುವ ಗ್ರಾಮವೇ ಬೆಳಗಟ್ಟ, ಹೆಸರೇ ಸೂಚಿಸುವಂತೆ ಎತ್ತರವಾದ ಪ್ರದೇಶದಲ್ಲಿ ಊರು ಬೆಳದಿರುವುದರಿಂದ ಬೆಳಗಟ್ಟವೆಂದು ಹೆಸರು ಬಂದಿರಬಹುದು. ಪಶ್ಚಿಮಕ್ಕೆ ಎತ್ತರವಾದ ಬೆಟ್ಟಗಳನ್ನು ಕಾಣಬಹುದು. ಈ ಹಿಂದೆ ಎಸ್.ವೈ.ಸೋಮಶೇಖರ್, ತಿಪ್ಪೇಸ್ವಾಮಿ.ಎಸ್ ಜೊತೆಗೂಡಿ ಮೋರೆಯರ ಮಟ್ಟಿಯಲ್ಲಿ ಬೃಹತ್ ಶಿಲಾಸಮಾಧಿಗಳನ್ನು ಶೋಧಿಸಿದ್ದರು[೨೩]. ಲಕ್ಷ್ಮಣ್ ತೆಲಗಾವಿ ಎದ್ದಲು ಬಂಡೆಯಲ್ಲಿ ಕೊರೆದ ರೇಖಾಕೃತಿಗಳನ್ನು ಪತ್ತೆಮಾಡಿದ್ದಾರೆ[೨೪]. ಬೆಳಗಟ್ಟದ ಪಶ್ಚಿಮಕ್ಕೆ ಅರ್ಧ ಕಿ.ಮೀ ದೂರದಲ್ಲಿ ಮೋರೆಯರ ಮಟ್ಟಿಯಿದ್ದು, ಮಟ್ಟಿಯ ಉತ್ತರಕ್ಕೆ ಕೆರೆಯನ್ನು ಕಾಣಬಹುದು. ಮಟ್ಟಿಯ ಮೇಲೆ ೬೦ಕ್ಕೂ ಹೆಚ್ಚು ಶಿಲಾವೃತ್ತ ಗೋರಿಗಳು ರಚನೆಗೊಂಡಿವೆ. ಶಿಲಾಸಮಾಧಿಗಳು ವೃತ್ತಾಪ್ರಕಾರಕ್ಕೆ ಸೇರಿದ್ದು, ಕ್ಯಾಪ್ ಸ್ಟೋನ್‌ನ್ನು ಗುರುತಿಸಬಹುದು. ಈ ರೀತಿಯ ಸಮಾಧಿಗೆ ವೃತ್ತಾಕಾರವಾಗಿ ಹಸಿರು ಮಿಶ್ರಿತ ಕಲ್ಲುಗಳನ್ನು ಸುತ್ತಲೂ ನಿಲ್ಲಿಸಿದ್ದಾರೆ, ಮಧ್ಯೆ ದಕ್ಷಿಣೋತ್ತರವಾಗಿ ೮ರಿಂದ ೧೦ಅಡಿ ಉದ್ದ ಮತ್ತು ೩ರಿಂದ ೪ ಅಡಿ ಅಗಲದ ಬಂಡೆಯನ್ನು ಮುಚ್ಚಿದ್ದಾರೆ. ಲೇಖಕನಾದ ನಾನು ಕ್ಷೇತ್ರಕಾರ್ಯಮಾಡಿದಾಗ ಆಂಗ್ಲ ಸಂಖ್ಯೆ ಎಂಟು(೮) ಆಕಾರದಲ್ಲಿ ಎರಡು ವೃತ್ತಗೋರಿಗಳು ಕಂಡುಬಂದಿವೆ. ಒಂದು ಶಿಲಾಗೋರಿ ೬೦ಅಡಿ ವ್ಯಾಸವನ್ನು ಹೊಂದಿರುವುದು ವಿಶೇಷ.

ಬಯಲು ಬಂಡೆರೇಖಾಕೃತಿ ನೆಲೆಯು ಬೆಳಗಟ್ಟದಿಂದ ಚಿತ್ರದುರ್ಗಕ್ಕೆ ಹೋಗುವ ಮಾರ್ಗದಲ್ಲಿ ೧ ಕಿ.ಮೀ. ಅಂತರದಲ್ಲಿ ಬಲಭಾಗಕ್ಕೆ ಎದ್ದುಲಬಂಡೆಯಲ್ಲಿದೆ. ಈ ಎದ್ದಲುಬಂಡೆ ಎಂಬುದು ತೆಲಗಿನ ಮೂಲ ಪದ. ಕನ್ನಡದಲ್ಲಿ 'ಎತ್ತುಗಳಗುಡ್ಡ' ಎಂಬ ಅರ್ಥ ಕೊಡುವುದು. ಕೊರೆದ ರೇಖಾಕೃತಿಗಳು ನೊರುಜುಶಿಲೆ, ಪೆಂಟಿಶಿಲೆ, ಮರಳುಶಿಲೆ, ಸುಣ್ಣಶಿಲೆಗಳ ಮೇಲೆ ರಚಿತಗೊಂಡಿವೆ. ಅವುಗಳ ಮೇಲೆ ಎತ್ತು, ಗೂಳಿ, ಪಾದಕೃತಿ, ಕುದುರೆ, ಮನುಷ್ಯ, ಪಕ್ಷಿ, ಕುಳಿಗಳು ರಚಿತಗೊಂಡಿವೆ. ಲೋಹದಿಂದ ಕುಟ್ಟಿದ ೬ ಇಂಚು ಎತ್ತರ, ೪ ಇಂಚು ಅಗಲದ ಪಕ್ಷಿಯ ಚಿತ್ರವು ವಿಶಿಷ್ಟವಾಗಿದ್ದು, ಪಕ್ಷಿಯ ಮುಖಕ್ಕೆ ಹೊಂದಿಕೊಂಡಂತೆ, ಗೆರೆಯನ್ನು ಕೆಳಗೆ ಲಂಬವಾಗಿ ಕುಟ್ಟಲಾಗಿದೆ. ಈ ಗೆರೆಯ ಕೆಳ ತುದಿಯಲ್ಲಿ ೩ ಬೆರಳುಗಳು, ಉಳಿದಂತೆ ೨ ಕೈಗಳಿದ್ದು, ತಲಾ ೧ ಕೈಯಲ್ಲಿ ೩ ಬೆರಳುಗಳಿವೆ. ಈ ಪಕ್ಷಿಯ ಎಡಭಾಗಕ್ಕೆ ೩ ಇಂಚು ಎತ್ತರ ೩ ಇಂಚು ಅಗಲದ ಕುದುರೆ ಚಿತ್ರವನ್ನು ಕುಟ್ಟಲಾಗಿದೆ. ವಿಶೇಷವಾಗಿ V ಆಕಾರದ ಮುಖ,

V ಆಕಾರದ ಇಣಿಯಿರುವ ಎತ್ತಿನ ಚಿತ್ರವಿರುವುದು ಕಂಡುಬಂದಿದೆ. ೭ ಇಂಚು ಉದ್ದದ ೨ ಪಾದಕೃತಿಗಳಿದ್ದು, ವಿಶೇಷ ಆಸಕ್ತಿಯನ್ನು ಮೂಡಿಸುತ್ತವೆ. ಪ್ರಸುತ್ತ ನೆಲೆಯ ಸಮೀಪ ಮೋರೆಯರ ಮಟ್ಟೆಯಲ್ಲಿ ಬೃಹತ್ ಶಿಲಾಯುಗದ ಗೋರಿಗಳಿವೆ[೨೫]. ಆದ್ದರಿಂದ ರೇಖಾಚಿತ್ರಗಳು ಬೃಹತ್ ಶಿಲಾಯುಗದವು. ಕೆಲವೊಂದು ಕುಟ್ಟು ಚಿತ್ರಗಳು ಇತಿಹಾಸ ಕಾಲಕ್ಕೆ ಸೇರಿದವು ಎಂದು ನಿರ್ಧರಿಸಲಾಗಿದೆ.

ಚಿಕ್ಕಕಬ್ಬಿಗೆರೆ:

ಈ ಗ್ರಾಮಕ್ಕೆ ಯಳಗೋಡಿನಿಂದ ಬರುವ ಮುಂಚೆ ೨ ಕಿ.ಮೀ. ದೂರದಲ್ಲಿ ರಸ್ತೆಯ ಎಡಭಾಗಕ್ಕೆ ಡಾಲ್ಮೆನ್ ಸಿಸ್ಟ್ ಸಮಾಧಿ ಸಿಗುವುದು. ಸಮಾಧಿಯು ಪೂರ್ವಕ್ಕೆ ಮುಖಮಾಡಿದ್ದು, ಸಮಾಧಿಯ ಹಿಂದೆ ನೈಸರ್ಗಿಕವಾಗಿ ರಚನೆಗೊಂಡಿರುವ ಅಥವಾ ಅಂದಿನ ಮಾನವನಿಂದ ರಚನೆಗೊಂಡಿರಬಹುದಾದ ನೀರಿನ ದೊಣೆ ಇದೆ. ಡಾಲ್ಮೆನ್ ಸಿಸ್ಟ್ ಸಮಾಧಿಗೆ ಕರಿಯಮ್ಮ ಎಂದು ಪೂಜಿಸುತ್ತಾರೆ. ಶಿಲಾ ಸಮಾಧಿ ನೆಲೆಯು ದೊಣೆ ಕರಿಯಮ್ಮ ಎಂದೇ ಪ್ರಸಿದ್ಧಿ. ಸಮಾಧಿಯನ್ನು ದಪ್ಪನೆಯ ಕಲ್ಲು ಬಂಡೆಗಳನ್ನು ಬಳಸಿಕೊಂಡು ಪೂರ್ವಭಾಗ ತೆರೆದಿರುವಂತೆ ಮೂರು ಕಡೆಯಿಂದ ನಿಲ್ಲಿಸಿ ಮುಚ್ಚಿದ್ದಾರೆ. ಈ ಬಂಡೆಗಳ ಮೇಲೆ ಕಲ್ಲು ಬಂಡೆಯನ್ನು ಹಾಸಿದ್ದಾರೆ. ಇಂದು ಸ್ಥಳೀಯರು ಪೂರ್ವಕ್ಕೆ ತೆರೆದ ಒಳಭಾಗದಲ್ಲಿ ಕಲ್ಲು ಗುಂಡುಗಳನ್ನು ಜೋಡಿಸಿ ಪೂಜಿಸುತ್ತಿದ್ದಾರೆ. ಈ ನೆಲೆಯಲ್ಲಿ ಡಾಲ್ಮೇನಾಯ್ಡ್ ಸಿಸ್ಟ್ ನೆಲದ ಮೇಲೆ ಕಂಡು ಬಂದರೆ ಬೆಳಗಟ್ಟದ ನೆಲೆಯುಲ್ಲಿ ನೆಲದ ಒಳಭಾಗದಲ್ಲಿ ನಿರ್ಮಿತಗೊಂಡಿವೆ. ಈ ಹಿಂದೆ ಎಸ್.ವೈ.ಸೋಮಶೇಖರ್ ಅವರಿಂದ ಶೋಧಿತಗೊಂಡು, ಡಾಲ್ಮೆನ್ ಸಿಸ್ಟ್ ಮಾದರಿ ಸಮಾಧಿಯೆಂದು ಗುರುತಿಸಿಕೊಂಡಿತ್ತು[೨೬]. ಸಮಾಧಿಯ ಸ್ವರೂಪ, ಐತಿಹಾಸಿಕತೆ ಇತ್ಯಾದಿ ಮಹತ್ವದ ವಿಚಾರಗಳನ್ನು ಪ್ರಕಟಿಸುವುದರ ಮುಖಾಂತರ ಪ್ರಸ್ತುತ ಪರಿಸರದ ಮೇಲೆ ಬೆಳಕು ಚೆಲ್ಲಿದ್ದಾರೆ.

ಸುಲ್ತಾನಿಪುರ:

ಹೆಸರೇ ಸೂಚಿಸುವಂತೆ ಮುಸ್ಲಿಂ ಜನಾಂಗದವರು ಹೆಚ್ಚಾಗಿ ವಾಸವಾಗಿದ್ದರಿಂದ ಸುಲ್ತಾನಿಪುರ ಎಂಬ ಹೆಸರು ಬಂದಿರಬಹುದು. ಈ ಗ್ರಾಮಕ್ಕೆ ಮೊದಲ ಹೆಸರು ಲಿಂಗದಹಳ್ಳಿ. ಈಗಲೂ ಸುತ್ತಮುತ್ತಲಿನ ಗ್ರಾಮಸ್ಥರು ಅದೇ ಹೆಸರಿನಿಂದ ಕರೆಯುವುದು ರೂಢಿ. ಸುಲ್ತಾನಿಪುರ ಏಳು ಗ್ರಾಮಗಳನ್ನು ಒಳಗೊಂಡ ಗ್ರಾಮ ಪಂಚಾಯಿತಿ ಕೇಂದ್ರ, ಚಿತ್ರದುರ್ಗದಿಂದ ೧೫ ಕಿ.ಮೀ ದೂರದಲ್ಲಿದೆ. ಸುಲ್ತಾನಿಪುರದಿಂದ ರುಮ್ಮಘಟ್ಟಕ್ಕೆ ಹೋಗುವ ಮಾರ್ಗ ಮಧ್ಯೆ ರಸ್ತೆಯ ಬಲಭಾಗಕ್ಕೆ ಇರುವುದು ಜುಂಜಪ್ಪನಮಟ್ಟಿ, ಈ

ಮಟ್ಟಿಯಲ್ಲಿ ಕಲ್ಲಿನ ಸಮೂಹಗಳನ್ನು ಗಮನಿಸಿದಾಗ ೧೧ ಶಿಲಾವೃತ್ತಗೋರಿಗಳು ಕಂಡುಬಂದವು[೨೭]. ಇವುಗಳಲ್ಲಿ ಒಂದು ಆಯಾತಕಾರವಾಗಿರುವ ಶಿಲಾಗೋರಿಯಿರುವುದು ವಿಶೇಷ. ವೃತ್ತಾಕಾರದ ಶಿಲಾಗೋರಿಗಳು ೫೦ಅಡಿ ವ್ಯಾಸವನ್ನು ಹೊಂದಿದ್ದರೆ, ಆಯಾತಾಕಾರವಾಗಿರುವ ಶಿಲಾಗೋರಿ ೧೦ಅಡಿ ಉದ್ದ ೫ಅಡಿ ಅಗಲವಾಗಿರುವುದು. ನಿಧಿಗಳ್ಳರಿಂದ ಹಾಳಾಗಿರುವ ಶಿಲಾವೃತ್ತ ಗೋರಿಯಲ್ಲಿ ಮುಚ್ಚಿರುವ ಎರಡು ಬಂಡೆಗಳನ್ನು ಇಲ್ಲಿ ಕಾಣಬಹುದು. ಈ ರೀತಿಯದ್ದು ಜೋಡಿ ಸಮಾಧಿಯನ್ನು ಪ್ರತಿನಿಧಿಸುವುದು. ಮಟ್ಟಿಯ ಸುತ್ತಮುತ್ತ ಕಾಣಸಿಗುವ ಕಲ್ಲುಗುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿ ಶಿಲಾಗೋರಿಗಳನ್ನು ನಿರ್ಮಿಸಿದ್ದಾರೆ. ಈ ಹಿಂದೆ ಶೋಧಗೊಂಡಿರುವ ನೆಲೆಗಳನ್ನು ಪಾಂಡವರ ಮನೆ, ಮೋರೆಯರ ಮಟ್ಟಿ, ಎಂಬ ಹೆಸರಿನಿಂದ ಕರೆಯುತ್ತಾರೆ ಆದರೆ ಸುಲ್ತಾನಿಪುರ ನೆಲೆಗೆ ಜುಂಜಪ್ಪನ ಮಟ್ಟಿ ಎಂದು ಕರೆದಿರುವುದು ಮೊದಲನೆನಿಸಿದೆ.

ದೊಡಗಟ್ಟ:

ತುರುವನೂರಿನಿಂದ ನಾಯಕನಹಟ್ಟಿ ಹೋಗುವ ದಾರಿಯಲ್ಲಿ ಕಾಣಸಿಗುವ ಗ್ರಾಮವೇ ದೊಡಗಟ್ಟ ಗ್ರಾಮ. ಈ ಗ್ರಾಮಕ್ಕೆ ಹೊಂದಿಕೊಂಡಿರುವ ಕೆರೆಯ ಎಡದಂಡೆಯಲ್ಲಿ ದೇವರ ಎತ್ತಿನಗುಡ್ಡವಿದ್ದು, ಗುಡ್ಡದ ಪಶ್ಚಿಮ ಇಳಿಜಾರಿನಲ್ಲಿ ಕಲ್ಲಿನ ಸಮೂಹಗಳಿವೆ. ಇವುಗಳ ಮೇಲೆ ಕುಟ್ಟಿ/ಕೊರೆದು ಮೂಡಿಸಿದ ರೇಖಾಕೃತಿಗಳು ಇರುವುದನ್ನು ಕ್ಷೇತ್ರ ಕಾರ್ಯದಲ್ಲಿ ಗುರುತಿಸಲಾಗಿದೆ[೨೮]. ಕುಟ್ಟಿ ಮೂಡಿಸಿದ ರೇಖಾಕೃತಿಗಳಲ್ಲಿ ಜೋಡಿಪಾದ, ಬರ್ಚಿಹಿಡಿದ ಮನುಷ್ಯ, ಜ್ಯಾಮಿತಿ ವಿನ್ಯಾಸ, ಎತ್ತಿನ ಸಾಲುಗಳು, ಗೂಳಿ, ಗುಳಿ ಮೊದಲಾದವುಗಳು ಪ್ರಮುಖವು. ದೊಡ್ಡ ಭುಜವಿರುವ ಗೂಳಿಯ ರೇಖಾಕೃತಿಗಳು ೪ಇಂಚಿನಿಂದ ೮ಇಂಚು ಎತ್ತರ, ೩ಇಂಚಿನಿಂದ ೧೦ಇಂಚು ಎತ್ತರವಿದೆ. ಬರ್ಚಿಹಿಡಿದಿರುವ ಮನುಷ್ಯನ ರೇಖಾಕೃತಿಯನ್ನು ಗಮನಿಸಿದಾಗ ಕಬ್ಬಿಣದ ಆಯುಧವನ್ನು ಬಳಸಿದ್ದರೆಂದು ತಿಳಿದುಬರುವುದು. ಈ ನೆಲೆಯ ಪಶ್ಚಿಮಕ್ಕೆ ತುರುವನೂರಿನ ಹಾಳೂರಲ್ಲಿ ಬೃಹತ್ ಶಿಲಾಗೋರಿಗಳು ಶೋಧಗೊಂಡಿದ್ದು, ಇಲ್ಲಿಂದ ಪಶುಪಾಲನೆಗಾಗಿ ಪ್ರಸ್ತುತ ನೆಲೆಗೆ ಬಂದಿರಬೇಕೆಂದು ಹೇಳಬಹುದು. ಆದ್ದರಿಂದ ಈ ರೇಖಾಕೃತಿಗಳು ಬೃಹತ್ ಶಿಲಾಯುಗದ ಕಾಲಕ್ಕೆ ಸೇರಿಸಲಾಗಿದೆ.

ಬಗ್ಗುಲರಂಗವ್ವನಹಳ್ಳಿ:

ಬೆಳಗಟ್ಟದಿಂದ ಹಾಯ್ಕಲ್ಲಿಗೆ ಹೋಗುವ ಮಾರ್ಗ ಮಧ್ಯೆ ಎಡಭಾಗಕ್ಕೆ ೨ಕಿ.ಮೀ ದೂರದಲ್ಲಿರುವುದೇ ಬಗ್ಗುಲರಂಗವ್ವನಹಳ್ಳಿ. ಗ್ರಾಮದ ಪಕ್ಕದಲ್ಲಿ ಮಾರಿಕಟ್ಟೆಹಳ್ಳ

ಹರಿಯುವುದು. ಹಳ್ಳದ ಎಡ ಮತ್ತು ಬಲದಂಡೆಯ ಮೇಲೆ ಕಲ್ಲಿನ ಸಮೂಹಗಳಿವೆ. ಬಯಲು ಬಂಡೆಗಳ ಮೇಲೆ ರೇಖಾಕೃತಿಗಳು ರಚಿತಗೊಂಡಿವೆ. ಪ್ರಸ್ತುತ ನೆಲೆಯು ಈ ಹಿಂದೆ ಶೋಧಗೊಂಡಿತ್ತು[೨೯]. ಬಂಡೆಗಳ ಮೇಲೆ ಆಂಗ್ಲ ವಿ(V) ಆಕಾರದ ಮತ್ತು ಯು(U) ಆಕಾರದ ಕೊಡುಗುಳುಳ್ಳ ಗೂಳಿಚಿತ್ರಗಳನ್ನು ಕುಟ್ಟಿಮೂಡಿಸಿದ್ದಾರೆ. ಎದುರು ಬದರು ನಿಂತುಕೊಂಡಿರುವ ಎತ್ತುಗಳ ಚಿತ್ರಗಳನ್ನು ಮತ್ತು ಪಾದದ ರೇಖಾಕೃತಿಯಲ್ಲಿ ಬೆರಳುಗಳನ್ನು ಕುಟ್ಟಿಮೂಡಿಸಲಾಗಿದೆ. ಎತ್ತುಗಳ ಒಳಭಾಗವನ್ನು ತೋರಿಸದಿರುವುದು ದಷ್ಟಪುಷ್ಟತೆಯಿಂದ ಕೂಡಿಲ್ಲವೆಂದು ಹೇಳಬಹುದು. ಎತ್ತಿನ ಕೂಡುಗಳ ಹಿನ್ನೆಲೆಯಲ್ಲಿ ಚಿಕ್ಕದು ದೊಡ್ಡದೆಂದು ಗುರುತಿಸಲು ಸಾಧ್ಯ. ಪ್ರಸ್ತುತ ನೆಲೆಯು ಬೆಳಗಟ್ಟ, ಹಾಯ್ಕಲ್, ಶಿಲಾಗೋರಿ ನೆಲೆಗಳ ಸಮೀಪ ಇರುವುದರಿಂದ ಕಬ್ಬಿಣಯುಗದ ರೇಖಾಕೃತಿಗಳೆಂದು ನಿರ್ಧರಿಸಲಾಗಿದೆ.

ಗೋಸಿರಪ್ಪನಗುಡ್ಡ:

ತುರುವನೂರು ಹೋಬಳಿಯ ಗೌರಮ್ಮನಹಳ್ಳಿಯಿಂದ ೩ಕಿ.ಮೀ. ದೂರದಲ್ಲಿ ತೊರಣಗಟ್ಟೆ ಗ್ರಾಮ ಸಿಗುವುದು. ಇಲ್ಲಿಂದ ಬಿದಿರಕೆರೆಗೆ ಹೋಗುವ ಮಾರ್ಗದಿಂದ ಎಡಭಾಗಕ್ಕೆ ೧ಕಿ.ಮೀ ದೂರದಲ್ಲಿ ಗೋಸಿರಪ್ಪನಗುಡ್ಡಕ್ಕೆ ಪ್ರವೇಶ ಮಾಡಬಹುದು. ಗೋಸಿರಪ್ಪ ಎಂದರೆ ಗೋವುಗಳನ್ನು ರಕ್ಷಿಸುವವ, ನೋಡಿಕೊಳ್ಳುವವ ಎಂಬುದಾಗಿದೆ. ಆದ್ದರಿಂದ ಪಶುಪಾಲನೆ ಹಿನ್ನಲೆಯಲ್ಲಿ ಗೋಸಿರಪ್ಪ ಎಂಬ ಹೆಸರು ಬಂದಿರುವುದಾಗಿ ದೃಢವಾಗುತ್ತದೆ[೩೦]. ಗುಡ್ಡಕ್ಕೆ ಪ್ರವೇಶ ಮಾಡುತ್ತಿದ್ದಂತೆ ಕರಿಯಮ್ಮದೇವರ ಮಟ್ಟಿಯಲ್ಲಿ ೩೮ಕ್ಕೂ ಹೆಚ್ಚು ಶಿಲಾವೃತ್ತಾ ಗೋರಿಗಳಿವೆ. ಇವುಗಳನ್ನು ಕ್ಷೇತ್ರಕಾರ್ಯದಲ್ಲಿ ಶೋಧಿಸಿ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ[೩೧]. ಈ ನೆಲೆಯು ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ್ದು, ಕ್ರಿ.ಪೂ. ೧೦೦೦ದಿಂದ ೨೦೦ರ ಅವಧಿಯಲ್ಲಿ ಶಿಲಾಗೋರಿಗಳು ನಿರ್ಮಾಣಗೊಂಡಿರಬೇಕು. ಸ್ಥಳೀಯವಾಗಿ ಸಿಗುವ ಕಲ್ಲುಗಳನ್ನು ಬಳಸಿಕೊಂಡು ವೃತ್ತಾಕಾರವಾಗಿ ಜೊಡಿಸಿಕೊಂಡು ಸಮಾಧಿ ನಿರ್ಮಿಸಿದ್ದಾರೆ. ಶಿಲಾಸಮಾಧಿಗಳು ವೃತ್ತಪ್ರಕಾರಕ್ಕೆ ಸೇರಿದ್ದು. ಅತ್ಯಂತ ದೊಡ್ಡದು ೬೦ಅಡಿ ವ್ಯಾಸದಲ್ಲಿದ್ದರೆ, ಚಿಕ್ಕದು ೩೦ಅಡಿ ವ್ಯಾಸದಲ್ಲಿ ನಿರ್ಮಾಣಗೊಂಡಿವೆ. ಇವುಗಳನ್ನು ಕುರಿಕಾಯುವವರು ಕಟ್ಟಿದ್ದಾರೆ ಹಾಗೂ ಕರಿಯಮ್ಮದೇವರು ಎಂಬುದಾಗಿ ಕರೆಯುತ್ತಿರುವುದು ಸ್ಥಳೀಯರು. ಕೂನಬೇವು ಮತ್ತು ತುರುವನೂರು ಪ್ರದೇಶದಲ್ಲಿ ಬೃಹತ್ ಶಿಲಾಯುಗ ಸಮಾಧಿಗಳನ್ನು ಹೋಲಿಕೆ ಕೊಡುವುದರಿಂದ ಇವುಗಳು ಬೃಹತ್ ಶಿಲಾಯುಗದಲ್ಲಿಯೇ ನಿರ್ಮಾಣಗೊಂಡಿವೆ

ಎಂಬುದು ಸ್ಪಷ್ಟ. ಬ್ರಹ್ಮಗಿರಿ ಉತ್ಖನನ ಆಧಾರದ ಮೇಲೆ ಈ ಶಿಲಾಸಮಾಧಿಗಳಲ್ಲಿ ಕಬ್ಬಿಣದ ಆಯುಧಗಳು ಮಡಕೆ ಚೂರುಗಳು, ಮಾನವನ ಮೂಳೆ ಅವಶೇಷಗಳು ಸಿಗುತ್ತವೆಂದು ಹೇಳಬಹುದು.

ಕೋತಿಗುಡ್ಡ:

ಚಿಕ್ಕಗೊಂಡನಹಳ್ಳಿಯಿಂದ ಹೊಸಪೇಟೆಗೆ ಹೋಗುವ ಮಾರ್ಗದಲ್ಲಿ ೧ಕಿ.ಮೀ. ದೂರದಲ್ಲಿರುವ ಕೊಂಚೇರಮಾಳಿಗೆ ಎದುರಿಗೆ ಇರುವುದೇ ಕೋತಿಗುಡ್ಡ. ಚಿಕ್ಕದಾದ ಈ ಗುಡ್ಡದಲ್ಲಿ ೨೬ ಶಿಲಾ ವೃತ್ತಾಗೋರಿಯನ್ನು ಶೋಧಿಸಿದ್ದೇನೆ. ಶಿಲಾ ವೃತ್ತಾಗೋರಿಗಳಿಗೆ ಸ್ಥಳೀಯರು ಪಾಂಡವರ ಕಟ್ಟೆಗಳೆಂದು ಕರೆಯುತ್ತಿದ್ದಾರೆ. ಇದೇ ರೀತಿ ಕೂನಬೇವು ಗೊಲ್ಲರಹಟ್ಟಿ ನೆಲೆಗೆ ಕರೆಯುವುದುಂಟು. ಸ್ಥಳೀಯವಾಗಿ ಸಿಗುವ ಕಲ್ಲುಗಳನ್ನು ಬಳಸಿಕೊಂಡು ವೃತ್ತಾಕಾರವಾಗಿ ಜೋಡಿಸಿ ಸಮಾಧಿಯನ್ನು ಮಾಡಿದ್ದು, ಅತ್ಯಂತ ದೊಡ್ಡದು ೨೫x೨೫ಅಡಿ ಅಳತೆಯಿಂದ ಮತ್ತು ಚಿಕ್ಕದು ೧೫x೧೫ಅಡಿ ಉದ್ದ ಅಳತೆಯನ್ನು ಹೊಂದಿವೆ. ಇಲ್ಲಿ ಕಬ್ಬಿಣದ ಮಿಶ್ರಿತ ಕಲ್ಲುಗಳು ಸಿಗುತ್ತವೆ. ಹಾಗೂ ಸಮೀಪದಲ್ಲಿ ಸಂಗೇನಹಳ್ಳಿಕೆರೆ ಇದ್ದು, ಈ ಹಿಂದೆ ಬೂದಿದಿನ್ನೆ ಪತ್ತೆಗೊಂಡಿದೆ. ಅಲ್ಲದೆ ನನ್ನ ಕ್ಷೇತ್ರ ಕಾರ್ಯದಲ್ಲಿ ಕೋತಿಗುಡ್ಡದ ಸಮೀಪದಲ್ಲಿರುವ ಹವಳೇನಹಳ್ಳಿಯ ಹಾಳೂರಿನಲ್ಲಿ ಎರಡು ಶಿಲಾವೃತ್ತಗೋರಿಗಳು ಶೋಧಿತಗೊಂಡಿವೆ. ಹಾಗಾಗಿ ಈ ಪರಿಸರ ಪ್ರಾಚೀನ ಮಾನವನ ಸಂಸ್ಕೃತಿಯ ತಾಣವಾಗಿತ್ತೆಂದು ಹೇಳಬಹುದು. ಈ ನಿವೇಶನಗಳಲ್ಲಿ ಉತ್ಖನನವಾದರೆ ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ಮಹತ್ವದ ವಿಚಾರ ತಿಳಿಯಬಹುದು.

ಹುಲ್ಲೇಹಾಳ್:

ಚಿತ್ರದುರ್ಗ ತಾಲೂಕಿನಲ್ಲಿ ಹುಲ್ಲೇಹಾಳ್ ಗ್ರಾಮವಿದೆ, ಬಿದರೆಕೆರೆಯಿಂದ ಹುಲ್ಲೇಹಾಳ್‌ಗೆ ಹೋಗುವ ಮಾರ್ಗ ಮಧ್ಯೆ ತಾಲೂಕು ಗಡಿ ಫಲಕವಿದ್ದು, ಫಲಕದ ಸಮೀಪದಲ್ಲಿ ರಸ್ತೆಯ ಎಡಭಾಗದಲ್ಲಿ ಶಿವಲಿಂಗಪ್ಪವ ಹೊಲದಲ್ಲಿ ಕಬ್ಬಿಣಯುಗದ ಶಿಲಾವೃತ್ತಗೋರಿಯನ್ನು ಮಂಜಣ್ಣ.ಪಿ.ಬಿ ಜೊತೆಗೂಡಿ ಕ್ಷೇತ್ರಕಾರ್ಯದಲ್ಲಿ ಪತ್ತೆ ಮಾಡಿದ್ದೇವೆ. ಪ್ರಸ್ತುತ ಪ್ರದೇಶದಲ್ಲಿ ಹುಲ್ಲೇಹಾಳ್ ಗ್ರಾಮ ಸೇರದಿದ್ದರೂ, ಶಿವಲಿಂಗಪ್ಪನ ಹೊಲವು ತುರುವನೂರು ಹೋಬಳಿಗೆ ಸೇರಿದೆ. ಪ್ರಸ್ತುತ ನೆಲೆಯು ಗೋಸಿರಪ್ಪನಗುಡ್ಡದ ಹಿಂಭಾಗದ ತಪ್ಪಲಿನಲ್ಲಿ ಇರುವುದರಿಂದ ಒಂದೇ ಪರಿಸರಕ್ಕೆ ಸೇರಿಸಬಹುದು.

ಶಿವಲಿಂಗಪ್ಪನ ಹೊಲದಲ್ಲಿರುವ ಶಿಲಾವೃತ್ತಾಗೋರಿ ೨೪x೨೪ಅಡಿ ವ್ಯಾಸವನ್ನು ಹೊಂದಿದ್ದು, ಸ್ಥಳೀಯ ಕಲ್ಲಿನಿಂದ ರಚಿತಗೊಂಡಿದೆ. ಗೋರಿಗೆ ಹೊಂದಿಕೊಂಡಂತೆ ಏಳು ಅಡಿ ಎತ್ತರದ ನಿಲುಸುಗಲ್ಲುಯಿದ್ದು, ಈ ಕಲ್ಲಿನ ಮೇಲೆ ಲಿಂಗಮುದ್ರೆಯಿದೆ. ಸ್ಥಳೀಯರು ಇದರೊಂದಿಗೆ ಸಮಾಧಿಯನ್ನು ಪೂಜಿಸುತ್ತಿದ್ದಾರೆ.

ಬಾಗೇನಾಳ್:

ಕೂನಬೇವಿನಿಂದ ದಕ್ಷಿಣಕ್ಕೆ ೪ಕಿ.ಮೀ ದೂರದಲ್ಲಿರುವ ಗ್ರಾಮವೇ ಬಾಗೇನಾಳ್ ಅತ್ಯಂತ ಚಿಕ್ಕದಾದ ಗ್ರಾಮವಾಗಿದ್ದರು, ಐತಿಹಾಸಿಕ ಮಹತ್ವ ಪಡೆದುಕೊಂಡಿರುವ ಪ್ರದೇಶ. ಹಾಯ್ಕಲ್ಲಿನ ಕರಿಬಂಟನ ಕಥೆಯಲ್ಲಿರುವಂತೆ ಬಾಗೇನಾಳ್ ಬಾಗೆಯೂರು ಆಗಿತ್ತು. ಕರಿಬಂಟ ತೊಣ್ಣೂರು ರಾಕ್ಷಸಿಯಿಂದ ತಪ್ಪಿಸಿಕೊಂಡು ಬಂದು, ಬಾಗೆಯೂರು ಕೋಟೆಯಲ್ಲಿ ಬಚ್ಚಿಟ್ಟುಕೊಂಡನೆಂದು ಹೇಳುವುದಲ್ಲದೆ, ಪಾಪಯ್ಯನ ಮಟ್ಟಿಯಲ್ಲಿ ಈ ಹಿಂದೆ ಜನರು ವಾಸವಾಗಿದ್ದರು ಮತ್ತು ದಾನವಾಗಿದ್ದ ಪ್ರದೇಶ ಬಾಗೇಪಟ್ಟಣವಾಗಿತ್ತೆಂದು ಅಭಿಪ್ರಾಯಪಡುತ್ತಾರೆ[೩೨]. ಪಾಪಯ್ಯನಮಟ್ಟಿಯಲ್ಲಿ ಸಾಕಷ್ಟು ಕಲ್ಲಿನ ಸಮೂಹಗಳಿದ್ದು, ಅವುಗಳ ಮೇಲೆ ಉಜ್ಜಿ ಮತ್ತು ಕುಟ್ಟಿದ ರೇಖಾಕೃತಿಗಳು ರಚಿತಗೊಂಡಿವೆ[೩೩]. ಕ್ಷೇತ್ರಕಾರ್ಯ ಮಾಡುವಾಗ ೯ಇಂಚು ಎತ್ತರವಾದ ಗೂಳಿಯನ್ನು ಕುಟ್ಟಿ ಮೂಡಿಸಿರುವುದು ಕಂಡು ಬಂದಿತು. ಗೂಳಿಯು ಬಲಿಷ್ಟವಾಗಿದ್ದು, ಗೂಳಿಯ ಕೊಂಬುಗಳು ಆಂಗ್ಲ ಪದ ವಿ(v)ಆಕಾರದಲ್ಲಿ ಮುಂದೆ ಬಾಗಿದ್ದು, ಸಿಟ್ಟಿನಿಂದ ಹಾಯಲು ಬರುತ್ತದೆ ಎಂಬಂತೆ ಕುಟ್ಟಿ ಮೂಡಿಸಿದ್ದಾರೆ. ಇಂತಹದ್ದು, ಗೋವಾರಾಜ್ಯದ ಉಸ್‌ಗಾಲಿ ಮೋಲ್ ಮತ್ತು ಕಾಜೂರ್‌ನಲ್ಲಿ ರೇಖಾಚಿತ್ರ ರಚನೆಗೊಂಡಿರುವುದಾಗಿ ಹೇಳಬಹುದು[೩೪]. ಒಂದು ಹಸಿರು ಮಿಶ್ರಿತ ಕಲ್ಲಿನ ಮೇಲೆ ಎತ್ತಿನ ಚಿತ್ರವನ್ನು ಕುಟ್ಟಿ ಮೂಡಿಸಿದ್ದಾರೆ. ನೀಳವಾದ ಕೊಡುಗಳು ಮತ್ತು ಎತ್ತಿನ ಮೇಲೆ ಮನುಷ್ಯ ಕುಳಿತಿರುವುದು ಕಾಣಬಹುದು. ಉಳಿದಂತೆ ಹಾವು, ಜ್ಯಾಮಿತಿ ಆಕಾರ, ಗುಳಿಗಳು ಇತ್ಯಾದಿ ರೇಖಾಚಿತ್ರಗಳನ್ನು ಗಮನಿಸಬಹುದಾಗಿದೆ. ಈ ಪ್ರದೇಶದ ಸುತ್ತಮುತ್ತ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳಿವೆ. ಆದ್ದರಿಂದ ಪ್ರಸ್ತುತ ರೇಖಾಚಿತ್ರಗಳನ್ನು ಬೃಹತ್‌ಶಿಲಾಯುಗಕ್ಕೆ ಸೇರಿಸಲಾಗಿದೆ.

ವೀರಮದಕರಿಪುರ:

ಚಿತ್ರದುರ್ಗದಿಂದ ಬೆಳಗಟ್ಟ ಮಾರ್ಗವಾಗಿ ೮ ಕಿ.ಮೀ ದೂರದಲ್ಲಿರುವ ಬೇಚಾರಕ್ ಗ್ರಾಮವೇ ವೀರಮದಕರಿಪುರ. ಪ್ರಸುತ್ತ ಪ್ರದೇಶದ ಪೂರ್ವಕ್ಕೆ ಹಳ್ಳದ

ಎಡ ದಂಡೆಯ ಮೇಲೆ ಗೂಗಲು ಬಂಡೆ ಎಂದು ಕರೆಯುವ ಪ್ರದೇಶವಿದೆ. ಇಲ್ಲಿ ಬೃಹತ್ ಶಿಲಾಯುಗದ ರೇಖಾಚಿತ್ರಗಳನ್ನು ಕಾಣಬಹುದು. ಈ ಹಿಂದೆ ಲಕ್ಷ್ಮಣ್ ತೆಲಗಾವಿ ಈ ನೆಲೆಯನ್ನು ಗುರುತಿಸಿದ್ದರೆಂದು ತಿಳಿದುಬಂದಿದೆ[೩೫]. ಪ್ರಮುಖವಾಗಿ ಲೋಹದಿಂದ ಕುಟ್ಟಿದ ಎತ್ತಿನ ಒಂದೆರೆಡೂ ಚಿತ್ರಗಳಿದ್ದು, ಬೇರೆ ನೆಲೆಗಳಿಗಿಂತ ಅಂತಹಷ್ಟು ಮಹತ್ವವಾದ ನೆಲೆಯಲ್ಲ. ಪ್ರಸುತ್ತ ನೆಲೆಯ ಸಮೀಪವೇ ರೇಖಾಚಿತ್ರವಿರುವ ಎದ್ದಲು ಬಂಡೆ ನೆಲೆಯಿರುವುದನ್ನು ಕಾಣಬಹುದು.

ಗೊನೂರು:

ಚಿತ್ರದುರ್ಗದಿಂದ ೪ಕಿ.ಮೀ ಅಂತರದಲ್ಲಿರುವ ಗೊನೂರು, ಐತಿಹಾಸಿಕವಾಗಿ ಪ್ರಸಿದ್ಧವಾದ ಸ್ಥಳ. ಗ್ರಾಮಕ್ಕೆ ಹೊಂದಿಕೊಂಡಿರುವ ಕರಿಮಟ್ಟಿ ಮೇಲೆ ಹಾಸು ಬಂಡೆಯಿದ್ದು, ಇದರ ಮೇಲೆ ಎತ್ತಿಗಳ ಕುಟ್ಟು ಚಿತ್ರವಿದೆಯಲ್ಲದೆ ಕುಳಿಗಳನ್ನು ಕಾಣಬಹುದು. ಈ ನೆಲೆಯನ್ನು ಲಕ್ಷ್ಮಣ್ ತೆಲಗಾವಿಯವರು ಗುರುತಿಸಿದ್ದರು[೩೬]. ನೆಲೆಯಲ್ಲಿ ಒಂದೆರಡೂ ರೇಖಾಚಿತ್ರಗಳನ್ನು ಮಾತ್ರ ಗುರುತಿಸಬಹುದಾಗಿದ್ದು, ವೀರ ಮದಕರಿಪುರದ ನೆಲೆಯಂತೆ ಮಹತ್ವವಾಗಿಲ್ಲ. ಮಟ್ಟಿಯ ಸುತ್ತಮುತ್ತ ಬಂದರಿಕೆ ಗಿಡಗಳು ಬೆಳೆದಿರುವುದನ್ನು ಗುರುತಿಸಬಹುದು. ನೆಲೆಯ ಬಲಭಾಗಕ್ಕೆ ಹಳ್ಳ ಹರಿಯುವುದರಿಂದ ಅಂದಿನ ಜನ ಜೀವನಕ್ಕೆ ಅನುಕೂಲವಾಗಿರುವ ಸಾಧ್ಯತೆಗಳಿವೆ.

ಚಿನ್ನೂರಿನ ತಿಪ್ಪಯ್ಯನಹಟ್ಟಿ:

ಪ್ರಸ್ತುತ ಪ್ರದೇಶದವು ಹಾಯ್ಕಲ್ಲಿನಿಂದ ನಾಯಕನಹಟ್ಟಿಗೆ ಹೋಗುವಮಾರ್ಗದಲ್ಲಿ ೨ ಕಿ.ಮೀ. ಅಂತರದಲ್ಲಿ ಬರುವ ಉಪ್ಪಳ್ಳದ ದಂಡೆಯ ಮೇಲೆಯಿದೆ. ಈ ಹಳ್ಳದ ಬಲದಂಡೆಯ ಮೇಲೆ ಇರುವುದೇ ವಡೇಲುನಗರ (ಬೇಚಾರಕ್ ಗ್ರಾಮ). ಇಲ್ಲಿ ೧೫ ಕ್ಕೂ ಹೆಚ್ಚು ಶಿಲಾವೃತ್ತಗೋರಿಗಳಿವೆ[೩೭]. ಅವುಗಳನ್ನು ಸಂಶೋಧಕರು ಕಬ್ಬಿಣಯುಗಕ್ಕೆ ಸೇರಿಸಿದ್ದಾರೆ. ಶಿಲಾವೃತ್ತಗೋರಿಗಳು ಕಲ್ಲುಕುಪ್ಪೆ ಸಮಾಧಿ ರೂಪದಲ್ಲಿವೆ. ಮಧ್ಯಮ ಗಾತ್ರದ ಬೆಣಚುಕಲ್ಲುಗಳಿಂದ ಸಮಾಧಿಯನ್ನು ಮುಚ್ಚಿ ನಿರ್ಮಿಸಿದ್ದಾರೆ. ಈ ರೀತಿಯ ಸಮಾಧಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಗ್ಗಲೀಪುರ ಹೋಬಳಿಯ ಗಿರಿಗೌಡನದಡ್ಡಿಯಲ್ಲಿ ಶೋಧಿತಗೊಂಡಿವೆ[೩೮]. ಪ್ರಸ್ತುತ ಶಿಲಾಸಮಾಧಿ ೨೫x೨೫ ಅಳತೆಯಲ್ಲಿ ನಿರ್ಮಾಣಗೊಂಡಿದ್ದು, ಕೃಷಿ ಕಾರ್ಯದಿಂದ ನಾಶಗೊಂಡಿವೆ. ಪೂರ್ವಜರ ನೆನಪನ್ನು ಮಾಡಿಕೊಳ್ಳಲು ಯುಗಾದಿ ಹಬ್ಬದಲ್ಲಿ ಹಿರಿಯರ ಹಬ್ಬವೆಂದು ಆಚರಣೆ

ಮಾಡುತ್ತಿದ್ದಾರೆ. ಅದೇ ಸಂಪ್ರದಾಯದ ಜನರು ತಮ್ಮ ಪೂರ್ವಿಕರ ಕಬ್ಬಿಣಯುಗದ ಶಿಲಾಸಮಾಧಿಗಳನ್ನು ನಾಶಮಾಡುತ್ತಿರುವುದು ಅವರಲ್ಲಿ ಇತಿಹಾಸದ ಅರಿವಿಲ್ಲವೆಂದು ಅರ್ಥವಾಗುತ್ತದೆ. ಈ ಸಲುವಾಗಿ ಜನಸಾಮಾನ್ಯರಿಗೆ ಪುರಾತನ ಮಾನವ ರಚಿಸಿ ಬಿಟ್ಟುಹೋದ ಸಮಾಧಿಗಳ ಬಗ್ಗೆ ಅರಿವು ಮೂಡಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ.

ಗಂಜಿಗುಂಟೆ:

ಚಳ್ಳಕೆರೆ ತಾಲೂಕಿನಿಂದ ೨೦ಕಿ.ಮೀ. ದೂರದಲ್ಲಿರುವ ಗ್ರಾಮವೇ ಗಂಜಿಗುಂಟೆ. ಈ ಗ್ರಾಮದ ಪೂರ್ವಕ್ಕೆ ಬೂದಿಹೊಲವೆಂದು ಕರೆಯುವ ನೆಲೆಯನ್ನು ಎಸ್.ಜಿ.ರಾಮದಾಸರೆಡ್ಡಿ ಶೋಧಿಸಿದ್ದರು[೩೯]. ಈ ನೆಲೆಯು ೫೦ಎಕರೆಯಷ್ಟು ವಿಸ್ತಾರವಾಗಿದ್ದು, ಬೂದಿಮಣ್ಣಿನಿಂದ ಕೂಡಿರುವುದು. ನೆಲೆಯಲ್ಲಿ ನವ ಶಿಲಾಯುಗದ, ಬೃಹತ್ ಶಿಲಾಯುಗದ ಅವಶೇಷಗಳು ಕಂಡುಬಂದಿವೆ. ದೊರೆದಂತಹ ಕಲ್ಲಿನ ಕೊಡಲಿಗಳು ೧೧ರಿಂದ ೧೪ಸೆ.ಮೀ. ಉದ್ದ, ೪ಸೆ.ಮೀ. ಅಗಲದಿಂದ ಕೂಡಿವೆ[೪೦]. ಬೃಹತ್ ಶಿಲಾಯುಗದ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು, ಕಬ್ಬಿಣದ ಕಿಟ್ಟಗಳು, ಅಲಂಕಾರಿಕ ಮಡಕೆಗಳು ದೊರೆತಿರುತ್ತವೆ[೪೧]. ಬೃಹತ್ ಶಿಲಾಯುಗದ ಸಮಾಧಿಗಳು ನೆಲೆಯ ಪೂರ್ವಕ್ಕಿದ್ದು, ಪ್ರಸ್ತುತ ನಶಿಸಿಹೋಗಿವೆ[೪೨]. ಈ ಮೂಲಕ ಗಂಜಿಗುಂಟೆ ನೆಲೆಯು ನವ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಪ್ರಮುಖ ನೆಲೆಯಾಗಿತ್ತೆಂದು ತಿಳಿಸಬಹುದು.

ಪರಶುರಾಂಪುರ:

ಚಳ್ಳಕೆರೆ ತಾಲೂಕಿನ ಹೋಬಳಿ ಕೇಂದ್ರವಾಗಿರುವ ಪರಶುರಾಂಪುರವು ಜಿಲ್ಲೆಯಲ್ಲಿ ಅತಿ ದೊಡ್ಡ ಹೋಬಳಿ. ಪರಶುರಾಂಪುರದ ಪಕ್ಕದಲ್ಲಿ ವೇದಾವತಿ ನದಿಯು ಹರಿಯುತ್ತದೆ. ಗ್ರಾಮದ ದಕ್ಷಿಣಕ್ಕೆ ಹಳೆಯ ಕೆರೆಯ ಕೆಳಗಿರುವ ವಸತಿ ನೆಲೆಯಲ್ಲಿ ಹಾಗೂ ಕೋಟೆಕೆರೆಯ ಹಾಳೂರು ನೆಲೆಯಲ್ಲಿ ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಅವಶೇಷಗಳನ್ನು ಎಸ್.ಜಿ.ರಾಮದಾಸರೆಡ್ಡಿ ಶೋಧಿಸಿದ್ದರು[೪೩]. ನೆಲೆಯಲ್ಲಿ ಬೂದಿ ಮಿಶ್ರಿತ ಕಪ್ಪುಬಣ್ಣದ ಅಲಂಕಾರಿಕ ಮಡಕೆ ಚೂರುಗಳು ಹಾಗೂ ೧೫ಸೆ.ಮೀಉದ್ದ ೪ಸೆ.ಮೀಅಗಲದ ನಯವಾದ ಕಲ್ಲಿನ ಕೊಡಲಿಗಳು ದೊರಕಿವೆ[೪೪]. ಅದರಂತೆ ಬೃಹತ್ ಶಿಲಾಯುಗದ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು ಮತ್ತು ಹಾಳಾದ ಚಪ್ಪಡಿ ಕಲ್ಲು ಸಮಾಧಿಯನ್ನು ಗುರುತಿಸಿದ್ದಾರೆ[೪೫]. ಈ ವಸತಿನೆಲೆಯು ವೇದಾವತಿ ನದಿತೀರದಲ್ಲಿ ಇರುವುದರಿಂದ ಅಂದಿನ ಜನರು ದೀರ್ಘಕಾಲದ ವಾಸವನ್ನು

ಮಾಡಿದ್ದರೆಂದು ಹೇಳಬಹುದು. ಪುರ್ಲಹಳ್ಳಿ, ಗಂಜಿಗುಂಟೆ ವಸತಿ ನೆಲೆಗಳು ಪಕ್ಕದ ಪರಿಸರದಲ್ಲಿವೆ.

ಪುರ್ಲಹಳ್ಳಿ:

ಪರಶುರಾಂಪುರ ಹೋಬಳಿಯ ಗ್ರಾಮವಾಗಿರುವ ಪುರ್ಲಹಳ್ಳಿಯು ಪ್ರಾಗ್ಯೈತಿಹಾಸಿಕ ನೆಲೆಯಾಗಿದೆ. ಪುರ್ಲಹಳ್ಳಿ ಗ್ರಾಮದಲ್ಲಿ ಹಾಳೂರು, ಬೂದಿ ಹೊಲವೆಂದು ಕರೆಯುವ ನೆಲೆಯಲ್ಲಿ ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಕುರುಹುಗಳನ್ನು ಎಸ್.ಜಿ.ರಾಮದಾಸರೆಡ್ಡಿ ಶೋಧಿಸಿದ್ದರು[೪೬]. ಗ್ರಾಮದಲ್ಲಿ ಕ್ಯಾತಪ್ಪನ ಜಾತ್ರೆಯು ಪ್ರಸ್ತುತ ಪ್ರಾಗಿತಿಹಾಸದ ವಸತಿ ನೆಲೆಯಲ್ಲಿ ನಡೆಯುತ್ತದೆ. ಮುಳ್ಳಿನಗಿಡವನ್ನು ದಿಬ್ಬವಾಗಿ ಮಾಡಿ ಕಲಶವಿರಿಸಿ ಜಾತ್ರೆ ಮಾಡುತ್ತಿದ್ದರೆಂಬುದು ಸ್ಥಳೀಯರು ಅಭಿಪ್ರಾಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪುರ್ಲಹಳ್ಳಿ ಎಂದು ಹೆಸರು ಬಂದಿರಬಹುದು. ಪರಶುರಾಂಪುರ, ಪುರ್ಲಹಳ್ಳಿ, ಗಂಜಿಗುಂಟೆ ವಸತಿನೆಲೆಗಳು ವೇದಾವತಿ ನದಿಯ ತೀರದಲ್ಲಿದ್ದು, ಹೋಲಿಕೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಪುರ್ಲಹಳ್ಳಿ ನೆಲೆಯಲ್ಲಿ ಸೂಕ್ಷ್ಮ ಆಯುಧದ ಕಚ್ಚಾವಸ್ತುಗಳು ದೊರೆತಿವೆ. ಬೂದುಬಣ್ಣದ, ಕಪ್ಪುಬಣ್ಣದ, ಕೆಂಪುಬಣ್ಣದ ಮಡಕೆ ಚೂರುಗಳು ಮತ್ತು ಕವಣೆ ಕಲ್ಲು, ಉಜ್ಜುವ ಕಲ್ಲು, ದುಂಡಾದ ಸುಟ್ಟ ಮಣ್ಣಿನ ಬಿಲ್ಲೆಗಳು ಹಾಗೂ ಹಾಳಾದ ಸಮಾಧಿಗಳನ್ನು ಕಾಣಬಹುದು.

ನೆಲಗೇತಲಹಟ್ಟಿ:

ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ ಹೋಬಳಿಯ ಗ್ರಾಮವೇ ನೆಲಗೇತಲಹಟ್ಟಿ. ನಾಯಕನಹಟ್ಟಿಯಿಂದ ಹಾಯ್ಕಲ್‌ಗೆ ಹೋಗುವ ದಾರಿಯಲ್ಲಿ ೮ಕಿ.ಮೀ ದೂರದಲ್ಲಿ ನೆಲಗೇತಲಹಟ್ಟಿ ಗ್ರಾಮವಿದೆ. ಹೆಸರು ಸೂಚಿಸುವಂತೆ ಗ್ರಾಮದಲ್ಲಿ ಹೆಚ್ಚು ನಾಯಕ ಜನಾಂಗ ವಾಸವಾಗಿದ್ದು, ಈ ಜನಾಂಗದ ಬೆಡಗು ನೆಲಗೇತಲು ಎಂದು. ಈ ಹಿನ್ನೆಲೆಯಲ್ಲಿ ನೆಲಗೇತಲಹಟ್ಟಿ ಎಂದು ಹೆಸರು ಬಂದಿರುವ ಸಾಧ್ಯತೆ ಇದೆ. ಐತಿಹಾಸಿಕವಾಗಿ ಕಿಲಾರಿ ಸಂಸ್ಕೃತಿ ಬೆಳೆದು ಬಂದಿದ್ದು, ಅದೇ ಊರಿನವರಾದ ಡಾ.ಮುತ್ತಯ್ಯ ಕಿಲಾರಿ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಗ್ರಾಮದ ಪೂರ್ವಕ್ಕೆ ಬೆಟ್ಟದ ತಪ್ಪಲಿನಲ್ಲಿ ದನಗಳನ್ನು ಕೂಡಿ ಹಾಕುವ ರೊಪ್ಪವಿದೆ. ಇದರ ಕೆಳಭಾಗದಲ್ಲಿ ವೃತ್ತಾಕಾರವಾದ ರಚನೆ ಇದೆ. ಜೊತೆಗೆ ೪ರಿಂದ ೫ಅಡಿ ವ್ಯಾಸದ ಏಳು ಕಲ್ಲು ಕುಪ್ಪೆಗಳಿವೆ. ಇವುಗಳನ್ನು ಸ್ಥಳೀಯರು ಹಿರಿಯರ ಗುಡ್ಡೆ ಎಂದು ಕರೆಯುತ್ತಾರೆ. ನಾಗರಪಂಚಮಿಯಂದು ವಿಶೇಷವಾಗಿ ಪೂಜಿಸುತ್ತಿದ್ದಾರೆ. ಈ ಪ್ರದೇಶಕ್ಕೆ ಬಂದಾಗ

ತಲೆಗೊಂದು ಕಲ್ಲಂತೆ ಹಾಕಿ ಹೊಗುತ್ತಾರೆ. ಗ್ರಾಮದ ಹಿರಿಯರು ಹೇಳುವಂತೆ ಈ ಹಿಂದೆ ನಮ್ಮ ತಾತಂದಿರ ಕಾಲದಲ್ಲಿ ಕಲ್ಲು ಕುಪ್ಪೆ ಮಾಡುವ ಸಂಪ್ರದಾಯ ಬೆಳೆದು ಬಂದಿದೆ, ಅದನ್ನೇ ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ ಎಂದಿದ್ದಾರೆ. ಈ ಹೇಳಿಕೆಯನ್ನಾಧರಿಸಿ ಹಾಗೂ ರಚನೆಯನ್ನು ಕುಲಂಕುಶವಾಗಿ ಅಧ್ಯಯನ ಮಾಡಿ ಏಳು ಕಲ್ಲು ಕುಪ್ಪೆಗಳು, ಬೃಹತ್ ಶಿಲಾಯುಗದ ಸಮಾಧಿಗಳೆಂದು ನಿರ್ಧರಿಸಲಾಗಿದೆ. ಇವುಗಳಲ್ಲಿ ಒಂದು ವೃತ್ತಾಕಾರವಾಗಿದ್ದು, ೩೦ ಅಡಿ ವ್ಯಾಸವನ್ನು ಹೊಂದಿದೆ. ಸುತ್ತಲು ಕಲ್ಲುಗಳಿಂದ ಜೋಡಿಸಲ್ಪಟ್ಟಿದೆ.

ನಾಯಕನಹಟ್ಟಿ:

ಗುರುತಿಪ್ಪೇರುದ್ರಸ್ವಾಮಿ ನೆಲೆಸಿರುವ ಪುಣ್ಯಕ್ಷೇತ್ರವೇ ನಾಯಕನಹಟ್ಟಿ. ಚಳ್ಳಕೆರೆ ತಾಲೂಕಿನ ಹೋಬಳಿ ಕೇಂದ್ರ ಹಾಗೂ ಹಟ್ಟಿ ಪಾಳೆಯಗಾರರು ಆಳಿದ ಪ್ರದೇಶವಾಗಿದೆ. ಪಾಳೆಯಗಾರನಾದ ಮಲ್ಲಪ್ಪ ನಾಯಕನ ಆಳ್ವಿಕೆಯ ಕಾಲದಲ್ಲಿ ಗುರು ತಿಪ್ಪೇರುದ್ರಸ್ವಾಮಿ ಆಶೀರ್ವಾದದಿಂದ ಚಿಕ್ಕಕೆರೆ ನಿರ್ಮಾಣಗೊಂಡಿದೆ. ಈ ಕೆರೆಯ ಎಡದಂಡೆಯ ಮೇಲೆ ಕುರುಬರು ಪೂಜಿಸುವ ದೇವರಿದ್ದು, ದೇವಸ್ಥಾನದ ಪಕ್ಕದಲ್ಲಿ ಬೃಹತ್ ಶಿಲಾಯುಗದ ಶಿಲಾವೃತ್ತಾಗೋರಿ ಇದೆ. ಈ ಗೋರಿಯು ೩೦ಅಡಿ ವ್ಯಾಸದಲ್ಲಿ ವೃತ್ತಾಕಾರವಾಗಿ ಕಲ್ಲುಗಳಿಂದ ಜೋಡಿಸಲ್ಪಟ್ಟಿದೆ. ಇತ್ತೀಚೆಗೆ ಶಿಲಾವೃತ್ತಾಗೋರಿಯ ಕಲ್ಲುಗಳಿಗೆ ಸ್ಥಳಿಯರು ಸುಣ್ಣ ಬಳಿದಿರುವುದನ್ನು ಕಾಣಬಹುದು. ಈ ರೀತಿಯಾಗಿ ಮುಂದುವರೆದರೆ ನಾಶವಾಗುವ ಸಾಧ್ಯತೆಗಳಿವೆ.

ಬೇಡರೆಡ್ಡಿಹಳ್ಳಿ:

ಚಳ್ಳಕೆರೆ ತಾಲೂಕಿನ ತಳಕು ಹೋಬಳಿಗೆ ಸೇರಿದ ಗ್ರಾಮವಾಗಿದೆ. ಗ್ರಾಮದಿಂದ ಉತ್ತರಕ್ಕೆ ಹೋಗುವ ದಾರಿಯಲ್ಲಿ ರಸ್ತೆಯ ಬಲಭಾಗಕ್ಕೆ ಹಿರಿಯರ ಗುಡ್ಡೆ ಇದೆ. ಈ ಗುಡ್ಡೆಯು ೨ಅಡಿ ಉದ್ದ, ೧ ೧/೨ಅಡಿ ಅಗಲದ ೨ಅಡಿ ಎತ್ತರದ ಬಂಡೆ ಗಲ್ಲುಗಳಿಂದ ರಚಿತಗೊಂಡಿದೆ. ಮೂರು ಕಡೆ ಬಂಡೆಗಲ್ಲುಗಳನ್ನು ಹೂಳಿದ್ದು, ಪೂರ್ವಕ್ಕೆ ಖಾಲಿ ಇದ್ದು ಮೇಲ್ಭಾಗದಲ್ಲಿ ಚಪ್ಪಡಿಗಲ್ಲನ್ನು ಹಾಕಿದ್ದಾರೆ. ಒಳಭಾಗದಲ್ಲಿ ಯಾವುದೇ ಮೂರ್ತಿಗಳಿರುವುದಿಲ್ಲ. ಸುತ್ತಲೂ ಕಲ್ಲುಗಳನ್ನು ಹೂಣಿರುವುದನ್ನು ಕಾಣಬಹುದು. ಈ ರೀತಿಯಾದ ರಚನೆಯನ್ನು ಡಾಲ್ಮೆನ್ ಸಿಸ್ಟ್ ಸಮಾಧಿಯೆಂದು ಕರೆಯುತ್ತಾರೆ. ಸಮಾಧಿಯ ಕೆಳಭಾಗದಲ್ಲಿ ಸುಟ್ಟ ಬೂದಿಯನ್ನು ಅಥವಾ ಮನುಷ್ಯನ ಮೂಳೆಗಳನ್ನು ಹೂಳಿರುವ ಸಾಧ್ಯತೆಗಳಿವೆ. ಪರಿಪಕ್ವವಾದ ಮಾಹಿತಿ ದೊರೆಯಬೇಕಾದರೆ

ಉತ್ಖನನವಾಗಬೇಕು. ಈ ಶಿಲಾಗೋರಿಯು ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ಧತಿಯಲ್ಲಿ ಒಂದಾಗಿದ್ದು, ಆ ಭಾಗದ ಪ್ರದೇಶಗಳಲ್ಲಿ ವಿಶೇಷ. ಶಿಲಾಗೋರಿಗೆ ಸ್ಥಳೀಯರು ಹಾಗೂ ಸುತ್ತಮುತ್ತಲಿನ ಜನರು ಹಿರೇರಗುಡ್ಡೆ ಎಂದು ಕರೆಯುತ್ತಾರೆ. ವರ್ಷದ ಹಬ್ಬ ಹರಿದಿನಗಳಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಅಲ್ಲದೆ ಬಹಳ ಮಹಿಮೆಯನ್ನು ಹೊಂದಿರುವ ಪ್ರದೇಶವದು ಎಂಬುದಾಗಿ ಸ್ಥಳೀಯರ ಅಭಿಪ್ರಾಯ. ಶಿಲಾಗೋರಿಯ ಮುಂಭಾಗ ವಿಶಾಲವಾದ ಜಾಗವಿದ್ದು, ಮುಂದಿನ ದಿನಗಳಲ್ಲಿ ದೇವಸ್ಥಾನವಾಗಿ ಮಾರ್ಪಾಡಾಗುವ ಸಾಧ್ಯತೆಗಳಿವೆ. ಆ ಹಿನ್ನೆಲೆಯಲ್ಲಿ ಪುರಾತತ್ವ ಇಲಾಖೆ ಸಂರಕ್ಷಿಸುವ ಅಗತ್ಯತೆ ಇದೆ.

ತೊರೆಕೋಲಮ್ಮನಹಳ್ಳಿ:

ಚಳ್ಳಕೆರೆ ತಾಲೂಕು ನಾಯಕನಹಟ್ಟಿ ಹೋಬಳಿಗೆ ಸೇರಿದ ಗ್ರಾಮವೇ ತೊರೆಕೋಲಮ್ಮನಹಳ್ಳಿ, ಈ ಗ್ರಾಮದಿಂದ ಬಿ.ಜಿ.ಕೆರೆಗೆ ಹೋಗುವ ಮಾರ್ಗದಲ್ಲಿ ೨ ಕಿ.ಮೀ ದೂರದಲ್ಲಿ ರಸ್ತೆಯ ಎಡಭಾಗ ಚಿಕ್ಕಮಟ್ಟಿ ಕಂಡುಬರುವುದು. ಮಟ್ಟಿಯ ಮೇಲೆ ಹಳ್ಳಿ ನಿರ್ಮಾಣಗೊಂಡಿದೆ. ಮಟ್ಟಿಯ ತಪ್ಪಲಿನಲ್ಲಿ ಶಿಲಾವೃತ್ತಾ ಗೋರಿಗಳನ್ನು ಕಾಣಬಹುದು[೪೬]. ಅದೇ ರೀತಿ ಮಾಳೇನಹಳ್ಳಿಗೆ ಹೋಗುವ ದಾರಿ ಪಕ್ಕದಲ್ಲಿ ಜಾಲಿಗಿಡದ ಗುಂಪಿನಲ್ಲಿ ಶಿಲಾವೃತ್ತ ಗೋರಿಗಳಿವೆ. ಸುಮಾರು ೨೦ಕ್ಕೂ ಹೆಚ್ಚು ಶಿಲಾಗೋರಿಗಳಿದ್ದು ೩೦ ಅಡಿ ವ್ಯಾಸವನ್ನು ಹೊಂದಿವೆ. ಈ ಶಿಲಾವೃತ್ತ ಗೋರಿಗಳು ಬೃಹತ್ ಶಿಲಾಯುಗ ಕಾಲಕ್ಕೆ ಸೇರಿದ್ದಾಗಿವೆ. ನೆಲೆಯ ಸಮೀಪವೇ ಜಿನಗಿಹಳ್ಳ ಹರಿಯುತ್ತದೆ. ಸುತ್ತಮುತ್ತ ಗ್ರಾನೈಟ್ ಕಲ್ಲು ಸಿಗುವುದರಿಂದ ಅಂದಿನ ಮಾನವನಿಗೆ ವಾಸಮಾಡಲು ಯೋಗ್ಯವಾದ ನೆಲೆಯಾಗಿತ್ತೆಂದು ಹೇಳಬಹುದು.

ರೇಖಲೆಗೆರೆ ಕಾವಲು:

ಚಳ್ಳಕೆರೆ ತಾಲೂಕು ನಾಯಕನಹಟ್ಟಿ ಹೋಬಳಿಗೆ ಸೇರಿದ ಗ್ರಾಮವೇ ರೇಖಲೆಗೆರೆ. ಗ್ರಾಮದಿಂದ ೨ಕಿ.ಮೀ ದೂರದಲ್ಲಿ ಬೇಚಾರ ಗ್ರಾಮವಿದೆ. ಈ ಪ್ರದೇಶದಲ್ಲಿ ಆಂಜನೇಯ ದೇವಸ್ಥಾನವಿದ್ದು, ಇತಿಹಾಸವನ್ನು ನೆನಪಿಸುತ್ತದೆ. ದೇವಸ್ಥಾನದ ಮುಂಭಾಗ ತುಸು ದೂರದಲ್ಲಿ ಪಾಳುಬಿದ್ದ ಊರಿನಲ್ಲಿ ಐತಿಹಾಸಿಕ ಕುರುಹುಗಳು ಕಾಣಸಿಗುತ್ತವೆ. ನೆಲೆಯ ಪಕ್ಕದಲ್ಲಿ ವಿಶಾಲವಾದ ಹಳ್ಳವೊಂದು ಹರಿಯುತ್ತದೆ. ಹಳ್ಳದ ಎಡದಂಡೆಯ ಮೇಲೆ ಬೃಹತ್ ಶಿಲಾಯುಗದ ನೆಲೆಯಿದೆ. ಈ ಯುಗಕ್ಕೆ ಸಂಬಂಧಿಸಿದಂತೆ ಕಬ್ಬಿಣದ ಕಿಟ್ಟಗಳು ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತವೆ. ನಾಶಗೊಂಡಿರುವ ಶಿಲಾವೃತ್ತ ಗೋರಿಗಳ

ಸಣ್ಣ ಸಣ್ಣ ದಿನ್ನೆಗಳಿರುವುದಲ್ಲದೇ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು ದೊರೆತಿರುವುದರಿಂದ ಬೃಹತ್ ಶಿಲಾಯುಗಕ್ಕೆ ಸಾಕ್ಷಿಯಾಗಿವೆ. ಇದೇ ನೆಲೆಯಲ್ಲಿ ಈ ಹಿಂದೆ ಸ್ನಾತಕೋತ್ತರ ವಿದ್ಯಾರ್ಥಿಯಾದ ತಿಪ್ಪೇಸ್ವಾಮಿ.ಓ ಎನ್ನುವಂತವರಿಗೆ ಸೂಕ್ಷ್ಮಶಿಲಾಯುಗದ ಉಪಕರಣಗಳು ದೊರೆತಿದ್ದವೆಂಬುದಾಗಿ ತಿಳಿಸಿದ್ದಾರೆ.

ಎನ್.ದೇವರಹಳ್ಳಿ:

ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ ಹೋಬಳಿಗೆ ಸೇರಿದ ಗ್ರಾಮವೇ ಎನ್.ದೇವರಹಳ್ಳಿ. ಗ್ರಾಮದ ಸಮೀಪ ಗೌರಿಪುರ, ಎನ್.ಮಹದೇವಪುರ, ಗಿಡ್ಡಾಪುರ ಗ್ರಾಮಗಳಿವೆ. ತಳಕು ರಸ್ತೆಯಿಂದ ಪ್ರವೇಶಿಸುವಾಗ ರಸ್ತೆಯ ಬಲಭಾಗಕ್ಕೆ ಹಾಳೂರು ಹೊಲವಿದೆ. ಈ ಹೊಲದಲ್ಲಿ ಕೆಂಪು, ಬೂದುಬಣ್ಣದ ಮಡಕೆ ಚೂರುಗಳು, ಕವಣೆ ಕಲ್ಲು, ರುಬ್ಬುವ ಕಲ್ಲು, ಉಜ್ಜುವ ಕಲ್ಲುಗಳು ಹಾಗೂ ಕಬ್ಬಿಣದ ಕಿಟ್ಟಗಳು ಕಾಣಸಿಗುತ್ತವೆ. ಅವಶೇಷಗಳನ್ನಾಧರಿಸಿ ನವ, ಬೃಹತ್ ಶಿಲಾಯುಗ, ಇತಿಹಾಸ ಆರಂಭಕಾಲದ ನೆಲೆಯಾಗಿದೆ ಎಂದು ನಿರ್ಧರಿಸಲಾಗಿದೆ. ನೆಲೆಯ ಸಮೀಪ ಗೌರಿಪುರದಲ್ಲಿ ನವ ಶಿಲಾಯುಗದ ಬೂದಿದಿನ್ನೆ ಶೋಧಗೊಂಡಿರುವುದು. ಈ ಹಿನ್ನೆಲೆಯಲ್ಲಿ ಎನ್.ದೇವರಹಳ್ಳಿ ನೆಲೆಯು ವಸತಿ ನೆಲೆಯಾಗಿದೆ ಎಂದು ಹೇಳಬಹುದು.

ಬೊಂಬೆರಹಳ್ಳಿ:

ಚಳ್ಳಕೆರೆ ತಾಲೂಕಿನ ನಲ್ಲೂರಹಳ್ಳಿಯ ಸಮೀಪದಲ್ಲಿರುವ ಗ್ರಾಮವಿದು. ಗ್ರಾಮಕ್ಕೆ ನಲ್ಲೂರಹಳ್ಳಿಯಿಂದ ಪ್ರವೇಶಿಸುವಾಗ ರಸ್ತೆಯ ಬಲಭಾಗಕ್ಕೆ ನಿಲುಸುಗಲ್ಲು ಸಮಾಧಿಯಿದೆ. ಈ ಸಮಾಧಿಯ ಕಲ್ಲು ಉಲ್ಪ ವಿ (Λ) ಆಕಾರದಲ್ಲಿದ್ದು, ೫ಅಡಿ ಎತ್ತರ, ೨ಅಡಿ ಅಗಲವಾಗಿದೆ. ಅದೇ ಜಮೀನಿನ ಮಾಲೀಕರು ಹೇಳುವ ಪ್ರಕಾರ ಇದೇ ರೀತಿಯಾದ ನಿಲುಸುಗಲ್ಲುಗಳು ಹೊಲದಲ್ಲಿದ್ದವೆಂದು ತಿಳಿಸಿದ್ದಾರೆ. ಹಾಗಾಗಿ ಹಲವು ನಿಲುಸುಗಲ್ಲುಗಳಿದ್ದವೆಂದು ಸ್ಪಷ್ಟಪಡಿಸಬಹುದು. ನಿಲುಸುಗಲ್ಲು ಸಮೀಪದಲ್ಲಿ ಬೃಹತ್ ಶಿಲಾಯುಗದ ನೆಲೆಯಿದೆ. ವಸತಿ ನೆಲೆಯ ಉತ್ತರಕ್ಕೆ ನಿಲುಸುಗಲ್ಲು ಸಮಾಧಿಯಿರುವುದು ವಿಶೇಷ. ಚಿತ್ರದುರ್ಗ ತಾಲೂಕಿನ ಸಂಗೇನಹಳ್ಳಿಕೆರೆಯ ನಡುಗಡ್ಡೆಯಲ್ಲಿರುವ ವಸತಿ ನೆಲೆಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಬೃಹತ್ ಶಿಲಾಯುಗದ ಸಮಾಧಿಗಳಿರುವುದನ್ನು ಗಮನಿಸಿದಾಗ ಆ ವಿಶೇಷತೆ ಸತ್ಯವೆನಿಸುತ್ತದೆ.

ಪಾಲನಾಯಕನ ಕೋಟೆ:

ಚಳ್ಳಕೆರೆ ತಾಲೂಕಿನ ಗ್ರಾಮವೇ ಪಾಲನಾಯಕನ ಕೋಟೆ. ಹೆಸರೇ ಸೂಚಿಸುವಂತೆ ಪಾಲನಾಯಕ ಎಂಬುವನು ಕೋಟೆ ಕಟ್ಟಿಕೊಂಡು ಆಳ್ವಿಕೆ ನಡೆಸಿರಬೇಕು. ಇದಕ್ಕೆ

ಸಾಕ್ಷಿಯಾಗಿ ಕೋಟೆಯ ಅವಶೇಷಗಳಿವೆ. ಆ ಕಾರಣದಿಂದ ಪಾಲನಾಯಕನ ಕೋಟೆ ಎಂದು ಹೆಸರು ಬಂದಿರಬಹುದು. ಗ್ರಾಮದ ಪಕ್ಕದಲ್ಲಿ ಹಾಳೂರು ಹೊಲವಿದ್ದು, ೫ ಎಕರೆಯಷ್ಟು ವಿಶಾಲವಾಗಿದೆ. ಗ್ರಾಮದಿಂದ ಗೌರಸಮುದ್ರಕ್ಕೆ ಹೋಗುವ ರಸ್ತೆಯಲ್ಲಿ ಎಡಭಾಗದಿಂದ ನೋಡಿದರೆ ಮರದ ಬುಡದಲ್ಲಿ ನಿರ್ಮಿತಗೊಂಡಿರುವ ದುರ್ಗಮ್ಮನ ಗುಡಿಯಿದೆ. ಈ ಗುಡಿಯು ೬ಅಡಿ ಉದ್ದ ೨.೧/೨ಅಡಿ ಅಗಲ ೩ಅಡಿ ಎತ್ತರದಿಂದ ಕೂಡಿದ್ದಾಗಿದೆ. ಮೇಲ್ಭಾಗದಲ್ಲಿ ಹಾಸು ಬಂಡೆಯನ್ನು ಹಾಕಿದ್ದಾರೆ. ಇದರ ಒಳಭಾಗ ಕಲ್ಲುಗುಂಡುಗಳನ್ನು ಇಟ್ಟು ಪೂಜಿಸುತ್ತಿದ್ದಾರೆ. ಈ ಗುಡಿಯು ಬೃಹತ್ ಶಿಲಾಯುಗ ಕಾಲದ ಚಪ್ಪಡಿಕಲ್ಲು ಸಮಾಧಿಯಾಗಿತ್ತೆಂದು ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗಿದೆ. ಇದೇ ರೀತಿ ಚಿತ್ರದುರ್ಗ ತಾಲೂಕಿನ ಚಿಕ್ಕಕಬ್ಬಿಗೆರೆಯಲ್ಲಿ ದೊಣೆ ಕರಿಯಮ್ಮ ಎಂದು ಪೂಜಿಸುವ ಶಿಲಾಸಮಾಧಿಯಿದೆ. ಪ್ರಸ್ತುತ ಸಮಾಧಿಯ ಸಮೀಪವೇ ನೆಲಮಟ್ಟದಲ್ಲಿ ಆಯತಾಕಾರವಾಗಿ ಹೂಳಿರುವ ಕಲ್ಲು ಬಂಡೆಗಳನ್ನು ಕಾಣಬಹುದು. ಇದು ೩ ಅಡಿ ಉದ್ದ ೨ ಅಡಿ ಅಗಲವಿದ್ದು ಡಾಲ್ಮೆನ್ ಸಿಸ್ಟ್ ಸಮಾಧಿ ಎಂದು ಗುರುತಿಸಬಹುದು.

ಪೇಲೂರಹಟ್ಟಿ:

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನಲ್ಲಿ ಬರುವ ಗ್ರಾಮವಿದು. ಗ್ರಾಮದಿಂದ ಒಳರಸ್ತೆಯಲ್ಲಿ ನನ್ನಿವಾಳಕ್ಕೆ ಹೋಗುವಾಗ ೨ ಕಿ.ಮೀ ಅಂತರದಲ್ಲಿರುವ ನಲ್ಲುಗಟ್ಟಲು ಎಂದು ಕರೆಯುವ ರೇಖಾಚಿತ್ರವಿರುವ ನೆಲೆಯನ್ನು ಗುರುತಿಸಿದ್ದೇನೆ. ಈ ನೆಲೆಯು ೩ ಎಕರೆಯಷ್ಟು ವಿಸ್ತೀರ್ಣವಾಗಿದ್ದು. ನೆಲೆಯಲ್ಲಿ ಕರಿಕಲ್ಲುಗಳ ಗುಂಪುಗಳಿವೆ. ಕಲ್ಲುಗಳ ಮೇಲೆ ಎತ್ತು, ಗೂಳಿ, ಮನುಷ್ಯ, ಕುದುರೆ, ಆನೆ, ಪಕ್ಷಿ ತಲೆಯುಳ್ಳ ಮನುಷ್ಯ ಚಿತ್ರಗಳು ರಚಿತಗೊಂಡಿವೆ. ಪ್ರಮುಖವಾಗಿ ನೃತ್ಯ ಚಿತ್ರಗಳು ಬಹು ಸಂಖ್ಯೆಯಲ್ಲಿ ರಚನೆಗೊಂಡಿರುವ ಚಿತ್ರಗಳು ಈ ನೆಲೆಯ ವಿಶೇಷ. ನೆಲೆಯ ಸಮೀಪ ಹಳ್ಳವಿದೆ. ನೆಲೆಯ ಮೇಲ್ಮೈಯಲ್ಲಿ ಬಂದರಿಕೆ ಗಿಡಗಳು ಬೆಳೆದು ನಿಂತಿವೆ. ಪ್ರಸುತ್ತ ನೆಲೆಯ ಸಮೀಪವೇ ನವಶಿಲಾಯುಗದ ವಸತಿ ನೆಲೆಯನ್ನು ಎಸ್.ಜಿ.ರಾಮದಾಸರೆಡ್ಡಿ ನನ್ನಿವಾಳದಲ್ಲಿ ಗುರುತಿಸಿದ್ದರು. ಇತ್ತೀಚೆಗೆ ನನ್ನ ಕ್ಷೇತ್ರಕಾರ್ಯದಲ್ಲಿ ಬೃಹತ್ ಶಿಲಾಯುಗದ ಸಮಾಧಿ ದೊರೆತಿರುವುದು ಗಮನಾರ್ಹ. ನೆಲೆಯ ಪಶ್ಚಿಮಕ್ಕೆ ಎದ್ದಲು ಬಂಡೆ ನೆಲೆಯಿರುವುದನ್ನು ಕಾಣಬಹುದು. ಆದ್ದರಿಂದ ರೇಖಾಚಿತ್ರಗಳನ್ನು ಗಮನಿಸಿ ಬೃಹತ್ ಶಿಲಾಯುಗದ ಹಾಗೂ ಚರಿತ್ರೆ ಕಾಲಕ್ಕೆ ಸೇರಿಸಲಾಗಿದೆ.

ಜನ್ನೇನಹಳ್ಳಿ:

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಗ್ರಾಮವಾಗಿದೆ. ಈ ಗ್ರಾಮಕ್ಕೆ ಸೇರಿದ ಕರಿಕಲ್ಲು ಮಟ್ಟಿಯಲ್ಲಿ ರೇಖಾಚಿತ್ರಗಳನ್ನು ನನ್ನ ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಶೋಧಿಸಿದ್ದೇನೆ. ಈ ನೆಲೆಯು ೨ ಎಕರೆಯಷ್ಟು ವಿಸ್ತೀರ್ಣವಾಗಿದ್ದು, ಕರಿಕಲ್ಲು ಗುಂಪುಗಳಿಂದ ಕೂಡಿದೆ. ಬಂಡೆಗಳ ಮೇಲೆ ಎತ್ತು, ಗೂಳಿ, ಮನುಷ್ಯನ ಚಿತ್ರಗಳನ್ನು ಕಾಣಬಹುದಾಗಿದ್ದು. ಆದರೆ ಗುಳಿಗಳು ಕಂಡುಬಂದಿರುವುದಿಲ್ಲ. ನೆಲೆ ಸಮೀಪವೆ ನನ್ನಿವಾಳ ಹಾಗೂ ಪೇಲೂರಹಟ್ಟಿ ನೆಲೆಗಳಿರುವುದು ಕಾಣಬಹುದು. ಈ ನೆಲೆಯಲ್ಲಿರುವ ರೇಖಾಚಿತ್ರಗಳಿಗೂ ಪೇಲೂರಹಟ್ಟಿಯ ರೇಖಾಚಿತ್ರಗಳಿಗೂ ಒಂದೇ ಹೋಲಿಕೆ ಇರುವುದು. ಆದ್ದರಿಂದ ಬೃಹತ್‌ಶಿಲಾಯುಗದ ಕಾಲದಲ್ಲಿ ಚಿತ್ರಗಳು ರಚಿತಗೊಂಡಿವೆ ಎಂದು ಹೇಳಬಹುದು.

ನನ್ನಿವಾಳ:

ಚಳ್ಳಕೆರೆ ತಾಲೂಕಿನ ನನ್ನಿವಾಳ ಗ್ರಾಮವು ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೬ ಕಿ.ಮೀ ದೂರದಲ್ಲಿ ಕಂಡುಬರುವುದು. ಗ್ರಾಮದಲ್ಲಿರುವ ಎತ್ತರದ ಏಕಶಿಲಾ ಬೆಟ್ಟದ ತಪ್ಪಲಿನಲ್ಲಿದೆ. ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಐತಿಹಾಸಿಕ ಮಹತ್ವ ಪಡೆದು ಗ್ರಾಮವಿದು. ಐತಿಹಾಸಿಕ ವ್ಯಕ್ತಿ ಕರಿಭಂಟನು ಪ್ರಾಣ ರಕ್ಷಣೆ ಮಾಡಿಕೊಳ್ಳಲು ಬೆಟ್ಟದಲ್ಲಿದ್ದನು ಎಂಬುದಾಗಿ ಅಲ್ಲಿನ ಜಾನಪದೀಯರ ನುಡಿ. ಏಕಶಿಲಾ ಬೆಟ್ಟದಮೇಲೆ ಶಿವಲಿಂಗವಿದೆ ಎಂದು ಸ್ಥಳೀಯರು ಹೇಳುತ್ತಾರೆ. ಇಂತಹ ಐತಿಹಾಸಿಕ ಗ್ರಾಮದಲ್ಲಿನ ಮನೆಗಳು, ಬೆಟ್ಟದ ತಪ್ಪಲಿನಲ್ಲಿ ನವ ಶಿಲಾಯುಗ ವಸತಿ ನೆಲೆಯ ಮೇಲೆ ನಿರ್ಮಿತಿಗೊಂಡಿದ್ದಾವೆ. ಈ ಹಿಂದೆ ಎಸ್.ಜಿ.ರಾಮದಾಸರೆಡ್ಡಿ ನವ ಶಿಲಾಯುಗದ ವಸತಿನೆಲೆಯಲ್ಲಿ ಅವಶೇಷಗಳನ್ನು ಪತ್ತೆಮಾಡಿ ಬೆಳಕಿಗೆ ತಂದಿದ್ದರು[೪೮]. ಇದೇ ನೆಲೆಯನ್ನು ಕ್ಷೇತ್ರ ಕಾರ್ಯ ಮಾಡಲು ಹೋದಾಗ ಸಂಪೂರ್ಣ ನೆಲೆಯು ಇತ್ತೀಚೆಗೆ ನಿರ್ಮಿಸಿರುವ ಕಟ್ಟಡ ಮನೆಗಳಿಂದ ನಾಶಗೊಂಡಿವೆ. ಇದೇ ಗ್ರಾಮದಿಂದ ಚಳ್ಳಕೆರೆಗೆ ಹೋಗುವ ದಾರಿಯ ಬಲಭಾಗದಲ್ಲಿ ಕಲ್ಲುಕ್ವಾರೆ ಕಂಡುಬರುವುದು. ಕಲ್ಲುಕ್ವಾರಿಯ ದಕ್ಷಿಣಕ್ಕೆ ಕೆರೆಯ ಸಮೀಪ ದೊರೆಗಳ ಸಮಾಧಿ ಎಂದು ಕರೆಯುವ ಪ್ರದೇಶ ಕಂಡು ಬರುವುದು. ಈ ರೀತಿಯಾಗಿ ದೊರೆಗಳ ಸಮಾಧಿಯೆಂದು ಕರೆಯುವ ರಚನೆಯು ಬೃಹತ್ ಶಿಲಾಯುಗ ಕಾಲದ್ದು. ಸಮಾಧಿಯು ವೃತ್ತಾಕಾರವಾಗಿದ್ದು ಕಲ್ಲುಗಳಿಂದ ಜೋಡಿಸಲ್ಪಟ್ಟಿದೆ. ಮಧ್ಯಭಾಗ ೨ ಅಡಿ ಎತ್ತರದ ಮಣ್ಣಿನ ದಿನ್ನೆಯಿಂದ ಕೂಡಿದ

೩೦ ಅಡಿ ವ್ಯಾಸದ ಸಮಾಧಿಯನ್ನು ಸ್ಥಳೀಯರು ಹಬ್ಬದ ದಿನಗಳಲ್ಲಿ ಬೇಟೆಯಾಡಿ ಬಂದು ಸಮಾಧಿಗೆ ಪೂಜೆ ಮಾಡುತ್ತಾರೆಂಬುದು ತಿಳಿದು ಬಂದಿರುವ ವಿಚಾರ. ಈ ರೀತಿ ನನ್ನಿವಾಳ ಪ್ರದೇಶವು ನವ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಪ್ರಮುಖ ನೆಲೆಯಾಗಿತ್ತೆಂದು ಹೇಳಬಹುದು.

ಮನ್ನೆಕೋಟೆ:

ಚಳ್ಳಕೆರೆ ತಾಲೂಕಿನಲ್ಲಿ ಬರುವ ಗ್ರಾಮವೇ ಮನ್ನೇಕೋಟೆ. ಹಿರೇಹಳ್ಳಿ ಸಮೀಪದಲ್ಲಿರುವ ಮನ್ನೇಕೋಟೆಗೆ ಬಳ್ಳಾರಿ ರಸ್ತೆಯ ಬಲಭಾಗಕ್ಕೆ ಕಂಡುಬರುವುದು. ಗ್ರಾಮಕ್ಕೆ ಪ್ರವೇಶಿಸುವ ಮುಂಚೆ ರಸ್ತೆ ಬಲಭಾಗಕ್ಕೆ ೨ ಎಕರೆ ಬೀಳು ಮತ್ತು ಹೊಲಗಳಿವೆ. ಸುಮಾರು ೫ ಎಕರೆ ವಿಸ್ತೀರ್ಣದಲ್ಲಿ ಬೃಹತ್ ಶಿಲಾಯುಗ ಸಮಾಧಿಗಳಿವೆ[೪೯]. ಈ ಸಮಾಧಿ ನೆಲೆಗೆ ಸ್ಥಳೀಯ ಪಾಂಡವರಗುತ್ತಿ ಎಂದು ಕರೆಯುತ್ತಿದ್ದಾರೆ. ಶಿಲಾಗೋರಿಗಳು ವೃತ್ತಾಕಾರವಾಗಿದ್ದು ಸುತ್ತಲೂ ಕಲ್ಲುಗಳನ್ನು ಜೋಡಿಸಿದ್ದಾರೆ. ೩೦ರಿಂದ ೬೦ ಅಡಿ ವ್ಯಾಸದಲ್ಲಿ ಸುತ್ತಳತೆಯನ್ನು ಹೊಂದಿರುವ ೨೦ಕ್ಕೂ ಹೆಚ್ಚು ಶಿಲಾ ಗೋರಿಗಳು ಕಂಡುಬಂದಿವೆ. ಶಿಲಾಗೋರಿಗಳಿರುವ ಜಮೀನಿನಲ್ಲಿ ಇವುಗಳನ್ನು ಹಾಳು ಮಾಡದೇ ಭೂಮಿ ಹಸನುಮಾಡಿ ವ್ಯವಸಾಯದಲ್ಲಿ ತೊಡಗಿದ್ದಾರೆ. ಆದರೆ ಈ ಹಿಂದೆ ಜಮೀನಿನ ಮಾಲೀಕರೊಬ್ಬರು ಕುತೂಹಲದಿಂದ ಸಮಾಧಿಯನ್ನು ಹಗೆದಿದ್ದಾರೆ. ಈ ಸಂದರ್ಭದಲ್ಲಿ ಏಳರಿಂದ ೮ ಅಡಿ ಆಳದಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳು ಹಾಗೂ ಮನುಷ್ಯನ ಅಸ್ತಿಪಂಜರಗಳು ದೊರತ್ತಿದ್ದವೆಂದು ತಿಳಿಸಿದ್ದಾರೆ.

ಎನ್.ಗೌರಿಪುರ:

ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿ ಹೋಬಳಿಯ ಒಂದು ಗ್ರಾಮ. ಗ್ರಾಮದ ಸಮೀಪ ಮಹದೇವಪುರ, ಗಿಡ್ಡಾಪುರ, ದೇವರಹಳ್ಳಿ ಕಂಡುಬರುವವು. ಗೌರಿಪುರ ಗ್ರಾಮದ ಹೊರವಲಯದಲ್ಲಿ ೨ ಎಕರೆ ವಿಶಾಲವಾದ ಬೂದಿದಿಬ್ಬವಿದೆ. ಈ ಹಿಂದೆ ವಿರೂಪಾಕ್ಷಿ ಪೂಜಾರಹಳ್ಳಿ ಶೋಧಿಸಿದ್ದರು[೫೦]. ಕ್ಷೇತ್ರ ಕಾರ್ಯದಲ್ಲಿ ನೆಲೆಯನ್ನು ಗಮನಿಸಿದಾಗ ಎಂಟು ಅಡಿ ಆಳದವರೆಗೂ ಬೂದಿ ಇರುವುದು ಕಂಡುಬಂದಿದೆ. ಇದು ನವ ಶಿಲಾಯುಗದ ಕಾಲದ್ದು. ಈ ನೆಲೆಯ ಸಮೀಪ ಎನ್.ದೇವರಹಳ್ಳಿಯಲ್ಲಿ ವಸತಿನೆಲೆ ಇರುವುದನ್ನು ಗಮನಿಸಬಹುದು. ಇದೇ ರೀತಿಯಾದ ಬೂದಿದಿಬ್ಬಗಳು ಸಂಗನೇಹಳ್ಳಿಕೆರೆ ಮತ್ತು ರಾಮಗಿರಿಯಲ್ಲಿವೆ.

ಹಳೆದೊಡ್ಡೇರಿ:

ಚಳ್ಳಕೆರೆ ತಾಲೂಕಿನಿಂದ ೫ ಕಿ.ಮೀ. ದೂರದಲ್ಲಿ ಇರುವ ಗ್ರಾಮವೇ ದೊಡ್ಡೇರಿ. ಈ ಗ್ರಾಮದ ಸಮೀಪ ೧೦ ಎಕರೆ ವಿಸ್ತೀರ್ಣವಾಗಿರುವ ವಸತಿನೆಲೆಯನ್ನು ಸ್ಥಳೀಯರು ಹಳೆದೊಡ್ಡೇರಿ ಎಂದು ಕರೆಯುತ್ತಿದ್ದಾರೆ. ಈ ನೆಲೆಯಲ್ಲಿ ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ, ಬೃಹತ್ ಶಿಲಾಯುಗದ ಅವಶೇಷಗಳನ್ನು ಎಸ್.ಜಿ.ರಾಮದಾಸ್‌ರೆಡ್ಡಿಯವರು ಬೆಳಕಿಗೆ ತಂದಿದ್ದಾರೆ[೫೧]. ಕ್ಷೇತ್ರಕಾರ್ಯದಲ್ಲಿ ಕೆಂಪು ಬಣ್ಣ, ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು, ಬಟ್ಟಲು, ಕುಡಿಕೆ, ರಂಧ್ರವಿರುವ ಮಡಕೆ ಭಾಗಗಳು ಕಂಡುಬಂದಿವೆ. ಇತಿಹಾಸ ಆರಂಭಕಾಲದ ಇಟ್ಟಿಗೆ ದೊರಕಿವೆ.

ಟಿ.ಎನ್.ಕೋಟೆ:

ಚಳ್ಳಕೆರೆ ತಾಲೂಕಿನ ಪರಶುರಾಂಪುರ ಹೋಬಳಿಯ ಗ್ರಾಮವಿದು. ಟಿ.ಎನ್.ಕೋಟೆ ಪೂರ್ಣ ಪ್ರಮಾಣದಲ್ಲಿ ತಿಮ್ಮಣ್ಣನಾಯಕನ ಕೋಟೆ ಎಂದು ಕರೆಯುತ್ತಾರೆ. ಐತಿಹಾಸಿಕ ಹಿನ್ನೆಲೆಯಿರುವ ಈ ಗ್ರಾಮದ ಸಮೀಪ ವೇದಾವತಿನದಿ ಹರಿಯುವುದು. ಅಲ್ಲದೇ ನಾಲೆಯು ಗ್ರಾಮದ ಪಕ್ಕದಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಗ್ರಾಮಕ್ಕೆ ಹೊಂದಿಕೊಂಡಂತೆ ಬೃಹತ್ ಆದ ಕೆರೆಯಿದೆ. ಇತ್ತೀಚೆಗೆ ಕ್ಷೇತ್ರಕಾರ್ಯ ಮಾಡುವಾಗ ಕೆರೆ ಏರಿಯಿಂದ ಚಳ್ಳಕೆರೆ ಕಡೆಗೆ ಹೋಗುವ ದಾರಿಯಲ್ಲಿ ೨ ಕಿ.ಮೀ. ಸಾಗಿದರೆ ಅಡ್ಡರಸ್ತೆ ಸಿಗುವುದು. ಸಂಪರ್ಕವನ್ನು ಕೊಡುವ ರಸ್ತೆ ಸಮೀಪ ಗಂಗಪ್ಪನ ಹೊಲದ ರಸ್ತೆಯ ಎಡಭಾಗದಲ್ಲಿ ೩ಅಡಿ ಎತ್ತರದ ೨ ಅಡಿ ಅಗಲದ ಗ್ರಾನೈಟ್ ಶಿಲೆಯೊಂದನ್ನು ಕಾಣಬಹುದು. ಇದನ್ನು ನಿಲುಗಲ್ಲು ಎಂದು ಕರೆಯುತ್ತಾರೆ. ಈ ನಿಲುಗಲ್ಲು ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ಧತಿಯಾಗಿದ್ದು, ವ್ಯವಸಾಯಕ್ಕೆ ನಾಶಗೊಂಡಿರುವುದಿಲ್ಲ. ಹೊಲದ ಮಾಲೀಕರು ಆ ಕಲ್ಲುಗನ್ನು ನಾವು ನಿಲ್ಲಿಸಿಲ್ಲ ನಮ್ಮ ತಾತನ ಕಾಲದಿಂದಲೂ ಇದೆ ಎಂದು ಅಭಿಪ್ರಾಯಪಡುತ್ತಾರೆ. ಅದಕ್ಕೆ ಪ್ರತಿಯಾಗಿ ಬೃಹತ್ ಶಿಲಾಯುಗದ್ದು ಎಂದು ತಿಳಿಸಿಕೊಡಲಾಗಿದೆ.

ಯಾದಲಗಟ್ಟೆ:

ಚಳ್ಳಕೆರೆ ತಾಲೂಕಿನ ತಳಕು ಹೋಬಳಿಗೆ ಸೇರಿದ ಒಂದು ಗ್ರಾಮ. ತಾಲೂಕು ಕೇಂದ್ರದಿಂದ ೩೦ಕಿ.ಮೀ ದೂರದಲ್ಲಿರುವುದು. ಗ್ರಾಮದಲ್ಲಿ ಎರಡು ಪ್ರಾಚೀನ

ನೆಲೆಗಳಿದ್ದು, ಒಂದು ಗ್ರಾಮದ ಪೂರ್ವಕ್ಕೆ ಮತ್ತೊಂದು ಗ್ರಾಮದ ದಕ್ಷಿಣಕ್ಕೆ ಸಿಡಿಲಬೊಮ್ಮಪ್ಪನ ಗುಡಿಯ ಸಮೀಪ ಇರುವುದು. ನೆಲೆಗಳು ಸಮತಟ್ಟಾದ ಭೂ ಭಾಗದಲ್ಲಿದ್ದು, ವೇದಾವತಿ ನದಿಗೆ ಹರಿದು ಹೋಗುವ ಹಳ್ಳದ ಎಡ ಮತ್ತು ಬಲ ದಂಡೆಯ ಮೇಲಿವೆ. ಈ ಪರಿಸರದಲ್ಲಿ ಅತೀ ಕಡಿಮೆ ಮಳೆ ಆಗುವುದು. ನೆಲೆಗಳಲ್ಲಿ ಅಂತ್ಯ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಬೃಹತ್ ಶಿಲಾಯುಗ ಮತ್ತು ಇತಿಹಾಸಾರಂಭ ಕಾಲದ ಅವಶೇಷಗಳನ್ನು ಎಸ್.ಜಿ. ರಾಮದಾಸರೆಡ್ಡಿ ಶೋಧಿಸಿ ಬೆಳಕಿಗೆ ತಂದಿದ್ದಾರೆ[೫೨]. ನೆಲೆಯಲ್ಲಿ ಸಿಕ್ಕಂತಹ ಆಧಾರಗಳ ಮೇಲೆ ಸೂಕ್ಷ್ಮ ಶಿಲಾಯುಗದ "ಆಯುಧ ತಯಾರಿಕೆ ನೆಲೆ", ಕಬ್ಬಿಣ ಶಿಲಾಯುಗದ "ಕಬ್ಬಿಣ ತಯಾರಿಕೆಯ ಕಾರ್ಖಾನೆಯ ಸ್ಥಳ" ಮತ್ತು ಆಯುಧ ತಯಾರಿಕಾ ಕೇಂದ್ರವಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ[೫೩].

ಸೂಕ್ಷ್ಮಶಿಲಾಯುಗದ ಚರ್ಟ್ ಮತ್ತು ಬೆಣಚುಕಲ್ಲಿನ ಚಕ್ಕೆಗಳು, ಕೋರ್‌ಗಳು, ಚಕ್ಕೆ ಕಲ್ಲಿನ ಚೂರುಗಳು ದೊರೆತಿವೆ. ದೊರೆತಿರುವ ಕವಣೆ ಕಲ್ಲು, ಕುಟ್ಟುವ ಕಲ್ಲುಗಳು, ಅರೆಯುವ ಕಲ್ಲುಗಳು, ಕೆಂಪು ಬಣ್ಣದ ಮತ್ತು ಬೂದು ಬಣ್ಣದ ಮಡಕೆಗಳು ನವಶಿಲಾ ಯುಗಕ್ಕೆ ಸೇರಿದ್ದಾಗಿವೆ. ಬೃಹತ್ ಶಿಲಾಯುಗದ ಎರಡು ನಿಲುಸುಗಲ್ಲು, ಒಂದು ಡಾಲ್ಮೆನ್ ಸಿಸ್ಟ್ ಸಮಾಧಿಗಳು ಕಂಡುಬಂದಿವೆ. "ಸಿಡಿಲಬೊಮ್ಮಪ್ಪನ ಗುಡಿ" ಹಾಳೂರು ಎಂದು ಕರೆಯುವ ನೆಲೆಯಲ್ಲಿ ಐನೂರು ಗ್ರಾಮ್ ತೂಕದಷ್ಟ ಪ್ರಮಾಣದ ಕಬ್ಬಿಣದ ಕಿಟ್ಟಗಳು, ಕಬ್ಬಿಣ ತಯಾರಿಸುವ ಕುಲುಮೆ, ಕೊಳವೆ, ಅಲಂಕಾರಿಕ ಮಡಕೆಗಳು ಕಂಡು ಬಂದಿವೆ. ವಿಶೇಷವಾಗಿ ಕಬ್ಬಿಣತಯಾರಿಸುವ ಕೊಳವೆಗಳು ೭.೫ ಇಂಚು ಸುತ್ತಳತೆಯಿಂದ ೯ ಇಂಚು ಸುತ್ತಳತೆಯ ಪ್ರಮಾಣವನ್ನು ಹೊಂದಿದ್ದು, ಒಳಭಾಗವು ೧.೫ ಇಂಚಿನಿಂದ ಕೂಡಿರುವುದು.

ಹರ್ತಿಕೋಟೆ:

ಹಿರಿಯೂರು ತಾಲೂಕಿನ ಹರ್ತಿಕೋಟೆ ಗ್ರಾಮಕ್ಕೆ ಚಳ್ಳಕೆರೆಯಿಂದ ಹಿರಿಯೂರು ಮಾರ್ಗವಾಗಿ ಬಂದು ತಲುಪಬಹುದು. ಊರಿನ ಹೆಸರಿನಲ್ಲಿಯೇ ಐತಿಹಾಸಿಕತೆ ಅಡಗಿದೆ. ಕೇರಿಗೊಂದು ದೇವಸ್ಥಾನ ಹಾಗೂ ಸ್ಮಾರಕ ಶಿಲ್ಪಗಳನ್ನು ಕಾಣಬಹುದು. ಎತ್ತುಗಳ ಜಾತ್ರೆಗೆ ವಿಶೇಷ ಆದ್ಯತೆ ನೀಡಿದ್ದಾರೆ. ಗ್ರಾಮವು ನವ ಶಿಲಾಯುಗದಿಂದ ಆಧುನಿಕದವರೆಗೂ ನಿರಂತರ ಒಡನಾಟವನ್ನು ಹೊಂದಿದೆ.

ಗ್ರಾಮದಲ್ಲಿ ಎಸ್.ಜಿ.ರಾಮದಾಸ್‌ರೆಡ್ಡಿ ಸಂಶೋಧನೆ ಕೈಗೊಳ್ಳುವಾಗ ಹಾಳೂರಿನಲ್ಲಿ ಪ್ರಾಗೈತಿಹಾಸಿಕ ಕುರುಹುಗಳು ಶೋಧಗೊಂಡಿದ್ದವು[೫೪]. ಈ ನೆಲೆಯು ಗ್ರಾಮದ

ಪೂರ್ವ ಮತ್ತು ಉತ್ತರ ದಿಕ್ಕಿಗೆ ೧೦ಎಕರೆ ವಿಸ್ತೀರ್ಣವಾಗಿದ್ದು, ನೆಲೆಯಲ್ಲಿ ಹಲವು ಅವಶೇಷಗಳನ್ನು ಕಾಣಬಹುದು. ಅಂತಹ ಅವಶೇಷಗಳು ನವ ಶಿಲಾಯುಗ, ಬೃಹತ್ ಶಿಲಾಯುಗ, ಇತಿಹಾಸ ಆರಂಭಕಾಲಕ್ಕೆ ಸೇರಿದವು. ನವ ಶಿಲಾಯುಗದ ಬೂದು ಬಣ್ಣದ, ಕೆಂಪು ಬಣ್ಣದ ಮಡಕೆ ಚೂರುಗಳು, ಕವಣೆ ಕಲ್ಲು, ಅರೆಯುವ ಕಲ್ಲು, ಕುಟ್ಟುವ ಕಲ್ಲು, ಒನಕೆ ಆಕಾರದ ಆಯುಧ, ಚೌಕಕಾರದ ಬಿಲ್ಲೆಗಳು, ಮುರಿದ ಎರಡು ಚಿಕ್ಕ ಕಲ್ಲಿನ ಕೊಡಲಿಗಳು ದೊರಕಿದ್ದವೆಂದು ದಾಖಲಾಗಿದೆ. ಇವುಗಳನ್ನು ಬ್ರಹ್ಮಗಿರಿ, ಚಂದ್ರವಳ್ಳಿ ನೆಲೆಯಲ್ಲಿ ದೊರೆತ ಅವಶೇಷಗಳಿಗೆ ಹೋಲಿಸಬಹುದು. ಬೃಹತ್ ಶಿಲಾಯುಗಕ್ಕೆ ಸೇರಿದ ಕೆಂಪು ಮತ್ತು ಕಪ್ಪು ಮಡಕೆ, ಹೂಜಿ ಮೂತಿ, ಚಿಕ್ಕ ಕುಡಿಕೆಯ ತಳಭಾಗ, ಮೂಳೆಗಳು, ಕಬ್ಬಿಣದ ಕಿಟ್ಟ, ಸುಸ್ತಿತಿಯಲ್ಲಿರುವ ಒಂದು ಶಿಲಾವೃತ್ತ ಸಮಾಧಿಯನ್ನು ಶೋಧಿಸಿದ್ದಾರೆ. ಈ ಮೂಲಕ ನೆಲೆಯು ಬೃಹತ್ ಶಿಲಾಯುಗದಲ್ಲಿ ಒಡನಾಟದಲ್ಲಿ ಇತ್ತೆಬುಂದಂತೂ ಸ್ಪಷ್ಟ.

ರಂಗನಾಥಪುರ:

ಹಿರಿಯೂರು ತಾಲೂಕಿನ ಗ್ರಾಮವಾದ ರಂಗನಾಥಪುರವು ತಾಲೂಕು ಕೇಂದ್ರದಿಂದ ೧೬ ಕಿ.ಮೀ ದೂರದಲ್ಲಿದೆ. ರಂಗನಾಥ ದೇವಸ್ಥಾನ ಇರುವುದರಿಂದ ರಂಗನಾಥಪುರ ಎಂದು ಹೆಸರು ಬಂದಿದೆ. ಈ ಹಿಂದೆ ಬೂದಿಪುರ ಎಂದು ಕರೆಯಲಾಗುತ್ತಿತ್ತು. ಗ್ರಾಮದ ಪಕ್ಕದಲ್ಲಿ ವೇದಾವತಿ ನದಿಯು ಹರಿಯುವುದು. ನದಿಯ ಬಲದಂಡೆಯ ಮೇಲೆ ೧೦ ಎಕರೆ ವಿಸ್ತೀರ್ಣದಲ್ಲಿ ಬೂದಿ ಹೊಲವನ್ನು ಕಾಣಬಹುದು. ಈ ನೆಲೆಯಲ್ಲಿ ನವ ಶಿಲಾಯುಗ, ಬೃಹತ್ ಶಿಲಾಯುಗದ ಅವಶೇಷಗಳು ದೊರೆತಿವೆ.

ನವಶಿಲಾಯುಗದ ಮಾನವನು ಬಳಸಿ ಬಿಟ್ಟ ಬೂದು ಬಣ್ಣದ ಪೂರ್ಣ ಪ್ರಮಾಣದ ೪ ಮಡಕೆಗಳು ಕಂಡುಬಂದಿವೆ. ಅವುಗಳಲ್ಲಿ ೧೫ ಸೆಂ.ಮೀ ಅಳತೆಯ ಕಂಠ ಭಾಗದಿಂದ ೨೯ ಸೆಂ.ಮೀ ಅಳತೆಯ ಕಂಠ ಭಾಗದವರೆಗೂ ಮಡಕೆಗಳು ದೊರೆತಿವೆ. ಅಣಬೆಯ ಮೊನೆ ಇರುವ ಬೂದು ಬಣ್ಣದ ಮಣ್ಣಿನ ವಸ್ತು ವಿಶೇಷವಾದಾದ್ದು. ೮ಸೆಂ.ಮೀ ಉದ್ದದ ೩ಸೆಂ.ಮೀ ತುದಿವುಳ್ಳ ಕಲ್ಲಿನ ಕೊಡಲಿ, ಮಡಕೆ ಮಾಡಲು ಬಳಸುವ ಸಾಬೂನು ಕಲ್ಲಿನ ಮೆಟ್ಟುಗೆ ದೊರೆತಿವೆ[೫೫]. ಮಡಕೆ ತಯಾರಿಸುವಾಗ ಸಾಬೂನು ಕಲ್ಲಿನ ಮೆಟ್ಟುಗೆಯನ್ನು ಬಳಸಿ ಕೊಂಡಿದ್ದಿರಬೇಕು. ಅರೆಯುವ, ಕುಟ್ಟುವ, ಕವಣೆ ಕಲ್ಲುಗಳು ಕಂಡುಬಂದಿದ್ದು, ಇವುಗಳು ನವ ಶಿಲಾಯುಗದ ಸಂಸ್ಕೃತಿಯಿಂದ ಇತಿಹಾಸ ಆರಂಭಕಾಲದವರೆಗೆ ಬಳಕೆಯಾಗಿರಬಹುದು.

ಇದೇ ನೆಲೆಯಲ್ಲಿ ಹಾಳಾದ ಮನೆಯ ತಳಪಾಯಗಳು ದೊರೆತಿವೆ ಎಂಬುದು ಸರಿಯಷ್ಟೆ. ನವ ಶಿಲಾಯುಗದಲ್ಲಿ ಗುಡಿಸಲು ಹಾಕಿಕೊಂಡು ಬದುಕುತ್ತಿದ್ದನೆಂದು ಬ್ರಹ್ಮಗಿರಿ ನೆಲೆಯಲ್ಲಿ ದೊರತಿರುವ ಗೂಟದ ರಂಧ್ರಗಳು ಸಾಕ್ಷಿ. ಆದ್ದರಿಂದ ಮನೆಯ ತಳಪಾಯ ಶಾಸನಸಿಗುವ ಇತಿಹಾಸ ಕಾಲದಲ್ಲಿ ರಚಿತವಾಗಿವೆ. ಅಲ್ಲಿನ ಸ್ಥಳೀಯರಾದ ಗೋವಿಂದರಾಜ್ ವ್ಯವಸಾಯ ಮಾಡುವಾಗ ಕಣಜಗಳು ದೊರೆತಿದ್ದವೆಂದು ಹೇಳಿರುತ್ತಾರೆ. ಆದರೆ ನವ ಶಿಲಾಯುಗದಲ್ಲಿ ಮಡಕೆಯಿಂದ ಮಾಡಿದ ದೊಡ್ಡ ಗುಡಾಣಗಳಲ್ಲಿ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದರೆಂದು ಹಲವು ಉತ್ಖನನಗಳಿಂದ ಸಾಭೀತಾಗಿರುವ ವಿಷಯ. ದೊರೆತಿದ್ದ ಕಣಜಗಳು ಶಾಸನವುಳ್ಳ ಇತಿಹಾಸ ಕಾಲದಲ್ಲಿ ನಿರ್ಮಾಣಗೊಂಡಿರಬಹುದೆಂದು ಹೇಳಬಹುದು.

ಬೃಹತ್ ಶಿಲಾಯುಗದಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳು, ಕಬ್ಬಿಣದ ಕಿಟ್ಟಗಳು, ಮೂಳೆಗಳು, ಹಾಳಾದ ಸಮಾಧಿ, ರಂಧ್ರವಿರುವ ಬಿಲ್ಲೆಗಳು ಕಂಡುಬಂದಿವೆ. ೪ಸೆಂ.ಮೀ ಉದ್ದದ ಬಾಣದ ಮೊನೆಯಾಕಾರದ ಕೆಂಪು ಬಣ್ಣದ ವಸ್ತು ದೊರಕಿದ್ದು, ಇದನ್ನು ತೂಗುಗುಂಡಿನ ಸಾಧನವೆಂದು ಗುರುತಿಸಿದ್ದಾರೆ[೫೬]. ಈ ಸಾಧನವು ಸಮಾಧಿ ರಚನೆಗಳಲ್ಲಿ ಬಳಕೆಯಾಗಿರಬಹುದು. ದಾಖಲಿಸಿರುವ ಅಲಂಕಾರಿಕ ಮಡಕೆಗಳು ಬೃಹತ್ ಶಿಲಾಯುಗದ ಕಾಲದ್ದಲ್ಲ. ಇವುಗಳು ಶಾತವಾಹನರ ಕಾಲದಲ್ಲಿ ರಚಿತಗೊಂಡಿವೆ.

ತವಂದಿ:

ಹಿರಿಯೂರು ತಾಲೂಕಿನ ಒಂದು ಗ್ರಾಮವೇ ತವಂದಿ. ಐತಿಹಾಸಿಕ ಕುರುಹುಗಳುಳ್ಳ ಗ್ರಾಮವಿದು. ವಿ.ವಿ.ಪುರಕ್ಕೆ ಹೋಗುವ ಮಾರ್ಗಮಧ್ಯೆ ಬಲಭಾಗಕ್ಕೆ ೪ ಕಿ.ಮೀ. ದೂರದಲ್ಲಿ ಕಂಡುಬರುವುದು. ಗ್ರಾಮದಲ್ಲಿ ಸ್ಮಾರಕ ಶಿಲ್ಪಗಳಿದ್ದು, ಐತಿಹಾಸಿಕ ಕೆರೆಯನ್ನು ಗಮನಿಸಬಹುದು. ಗ್ರಾಮದ ಪಕ್ಕದಲ್ಲಿ ಹಳ್ಳವು ಹರಿಯುತ್ತದೆ. ಹಳ್ಳದ ಎಡದಂಡೆಯ ಮೇಲೆ ಮೇಟಿಕುರ್ಕೆಗೆ ಹೋಗುವ ದಾರಿ ಮಧ್ಯದಲ್ಲಿ ಬೂದಿಗಡ್ಡೆಯಿರುವುದು. ಈ ಪ್ರದೇಶವು ೫ ಎಕರೆಯಷ್ಟು ವಿಸ್ತೀರ್ಣವಾಗಿದ್ದು, ಪ್ರಾಗೈತಿಹಾಸಿಕ ಅವಶೇಷಗಳು ಹರಡಿವೆ. ಕ್ಷೇತ್ರ ಕಾರ್ಯದಲ್ಲಿ ಪ್ರಸ್ತುತ ನೆಲೆಯು ಬೆಳಕಿಗೆ ಬಂದಿದ್ದು, ನವ ಶಿಲಾಯುಗ, ಬೃಹತ್ ಶಿಲಾಯುಗದ ನೆಲೆಯಿದು. ನೆಲೆಯಲ್ಲಿ ಉಜ್ಜುವ ಕಲ್ಲು, ಅರೆಯುವಕಲ್ಲು, ಕವಣೆಕಲ್ಲು, ಮುರಿದ ಕಲ್ಲಿನ ನಯವಾದ ಕೊಡಲಿಯೊಂದು ದೊರೆತಿವೆ. ಅಲ್ಲದೆ ಅಗೇಟ್ ಶಿಲೆಯಿಂದ ಮಾಡಲ್ಪಟ್ಟ ಸೂಕ್ಷ್ಮ ಉಪಕರಣಗಳ ಕೋರ್ ದೊರೆತಿವೆ. ಮುಖ್ಯವಾಗಿ ಮಾಸಿದ ಕೆಂಪು ಬಣ್ಣದ ಮಡಕೆ ಚೂರುಗಳು

ಸಿಲಿಕಾಸಿಸ್ ಮಿಶ್ರಣವಿರುವ ಬೂದು ಬಣ್ಣದ ಮಡಕೆ ಚೂರುಗಳು ಕಂಡುಬಂದಿದ್ದು, ಇವುಗಳು ನವ ಶಿಲಾಯುಗದ ಕಾಲಕ್ಕೆ ಸೇರಿದ್ದಾಗಿವೆ. ಬೃಹತ್ ಶಿಲಾಯುಗದ ಅವಶೇಷಗಳಾದ ಕಬ್ಬಿಣದ ಕಿಟ್ಟಗಳು, ನೆಲೆಯಲ್ಲಿ ಹರಡಿವೆ. ದೊರೆತಂತಹ ಸಣ್ಣ ಗಾತ್ರದಿಂದ ೨ಕೆ.ಜಿ. ತೂಕವಿರುವಂತಹ ಕಿಟ್ಟಗಳ ಆಧಾರದಿಂದ ಪ್ರಸ್ತುತ ನೆಲೆಯಲ್ಲಿ ಕಬ್ಬಿಣದ ಉಪಕರಣಗಳನ್ನು ತಯಾರು ಮಾಡುತ್ತಿದ್ದರೆಂದು ಸ್ಪಷ್ಟಪಡಿಸಬಹುದು. ಉತ್ಖನನವಾದರೆ ಮಣ್ಣಿನ ಮೂಸೆಗಳು ದೊರಕಬಹುದು. ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು, ಕಂಠಭಾಗದ ಮಡಕೆ ವಸ್ತುಗಳು ಬೃಹತ್ ಶಿಲಾಯುಗಕ್ಕೆ ಸೇರಿದ್ದು. ಮುಂದುವರಿದು ಇತಿಹಾಸ ಆರಂಭಿಕಕಾಲದ ಅವಶೇಷಗಳು ಸಿಗುತ್ತವೆ.

ಭೀಮನಬಂಡೆ:

ಹಿರಿಯೂರಿನಿಂದ ಧರ್ಮಪುರ ಮಾರ್ಗವಾಗಿ ಬರುವಾಗ ಭೀಮನಬಂಡೆ ಪ್ರದೇಶವು ಸಿಗುವುದು. ರಸ್ತೆಯ ಎಡಭಾಗಕ್ಕೆ ಹೊಲದಲ್ಲಿ ೧೦ ಅಡಿ ಎತ್ತರದ ಅರ್ಧ ಗುಂಟೆ ವಿಸ್ತೀರ್ಣವಾದ ಗ್ರಾನೈಟ್ ಏಕ ಶಿಲಾಬಂಡೆ ಇರುವುದು. ಇದನ್ನು ಜನರು ಭೀಮನಬಂಡೆ ಎಂದು ಕರೆಯುತ್ತಾರೆ. ಸ್ಥಳೀಯರನ್ನು ವಿಚಾರಿಸಿದಾಗ ಬಂಡೆಯ ಮೇಲೆ ಕುದುರೆ ಹೆಜ್ಜೆ, ಭೀಮನ ಪಾದ, ತಟ್ಟೆಯಾಕೃತಿಗಳು ಇದ್ದವೆಂದು ತಿಳಿಸಿದ್ದಾರೆ. ಇತ್ತೀಚೆಗೆ ನಶಿಸಿಹೋಗಿವೆ. ಕೆಲವು ಐತಿಹ್ಯಗಳ ಪ್ರಕಾರ ಭೀಮನು ವ್ಯವಸಾಯ ಮಾಡುತ್ತಿದ್ದಾಗ ಬೇಸಾಯದ ಕುಳ ಕಲ್ಲಿಗೆ ಸಿಕ್ಕಿಕೊಂಡು ಮುರಿದು ಹೋಯಿತೆಂದು ಹೇಳುತ್ತಾರೆ. ಜನರು ತೋರಿಸುವ ಬಂಡೆಯ ದಕ್ಷಿಣ ತುದಿಯಲ್ಲಿ ೨ ಅಡಿ ಅಗಲ ೩ ಅಡಿ ಉದ್ದದ ರಂಧ್ರವು ಭೀಮನಕುಳಕ್ಕೆ ಸಿಕ್ಕಿಕೊಂಡ ರಚನೆಯೆಂಬುದು ಅಭಿಪ್ರಾಯ. ಆ ಬಂಡೆಯು ನೈಸರ್ಗಿಕವಾಗಿದ್ದರು ಕೆಲವು ಐತಿಹ್ಯಗಳು ತಳಕು ಹಾಕಿಕೊಂಡಿರುವುದು ಸತ್ಯ. ಭೀಮನಬಂಡೆಯ ಸುತ್ತ ಮುತ್ತ ಹೊಲದಲ್ಲಿ ನವ ಶಿಲಾಯುಗದ ಬೂದು ಬಣ್ಣದ ಮಡಕೆ ಚೂರುಗಳು, ಸೂಕ್ಷ್ಮ ಉಪಕರಣಗಳು, ಅಲ್ಪಪ್ರಮಾಣದಲ್ಲಿ ದೊರತಿವೆ. ಈ ನೆಲೆಯು ಮೂಲ ನೆಲೆಯಾಗದಿದ್ದರು ತವಂದಿ ನೆಲೆಗೆ ಸಮೀಪದಲ್ಲಿದೆ. ಆ ಭಾಗದಿಂದ ಪ್ರಾಗೈತಿಹಾಸಿಕ ಜನರು ಈ ಭೀಮನಬಂಡೆಗೆ ಬಂದು ಹೋಗಿರುವ ಸಾಧ್ಯತೆಗಳಿವೆ. ಅದಕ್ಕೆ ದೊರಕಿರುವ ಅವಶೇಷಗಳೇ ಸಾಕ್ಷಿ. ಭೀಮನಪಾದ ಚಿತ್ರವಿರುವ ಚಿತ್ರದುರ್ಗ ತಾಲೂಕಿನ ಭೀಮಸಮುದ್ರ ಹಾಗೂ ತುರುವನೂರು ಭಾಗಗಳಲ್ಲಿ ಕಾಣಬಹುದು. ಈ ಮೂಲಕ ಚಿತ್ರದುರ್ಗ ಜಿಲ್ಲೆಯಲ್ಲಿ ಭೀಮನ ಹೆಸರಿನಿಂದ ಕೂಡಿರುವ ನೆಲೆಗಳು ಪ್ರಾಗೈತಿಹಾಸಿಕ ಕಾಲದವು.

ಅಬ್ಬಿನಹೊಳೆ:

ಹಿರಿಯೂರು ತಾಲೂಕಿನ ಅಬ್ಬಿನಹೊಳೆ ಗ್ರಾಮವು ಐತಿಹಾಸಿಕ ರಂಗನಾಥ ದೇವಸ್ಥಾನ ಹೊಂದಿರುವ ಸ್ಥಳ. ಗ್ರಾಮದಲ್ಲಿ ಶಾಸನಗಳು, ಸ್ಮಾರಕ ಶಿಲ್ಪಗಳು, ಐತಿಹಾಸಿಕ ಕೆರೆಯನ್ನು ಕಾಣಬಹುದು. ಕೆರೆಯ ಏರಿಯ ಮುಂಭಾಗ ರಂಗನಾಥ ದೇವಾಲಯದ ಸಮೀಪ ಸುಮಾರು ೧೦ ಎಕರೆ ವಿಸ್ತೀರ್ಣದಲ್ಲಿ ಬೂದಿ ಹೊಲವಿದ್ದು, ಸಾಕಷ್ಟು ಪ್ರಾಚೀನ ಅವಶೇಷಗಳು ಹರಡಿವೆ. ಬೂದಿ ಹೊಲವನ್ನು ಪ್ರಾಚೀನ ಕಾಲದಿಂದಲೂ ಅರ್ಜುನಾಪುರವೆಂದು ಕರೆಯುತ್ತಿದ್ದರೆಂಬುದು ಸ್ಥಳೀಯರ ಅಭಿಪ್ರಾಯ. ಅರ್ಜುನಾಪುರದ ನೆಲೆಯಲ್ಲಿ ನವ ಶಿಲಾಯುಗದ ಕೈಯಿಂದ ಮಾಡಿದ ಕೆಂಪು ಬಣ್ಣದ ಮಡಕೆ, ರಸ್ಟಿಕೇಟೆಡ್ ಮಡಕೆ, ಸಿಲಿಕಾಸಿಸ್ ಅಂಶವಿರುವ ಮಡಕೆ ಚೂರುಗಳು, ಸೂಕ್ಷ್ಮ ಉಪಕರಣಗಳು ಕಂಡುಬಂದಿವೆ. ಬೃಹತ್ ಶಿಲಾಯುಗದ ಜನರು ನವ ಶಿಲಾಯುಗದ ನಂತರ ಇದೇ ನೆಲೆಯಲ್ಲಿ ವಾಸವಾಗಿದ್ದಕ್ಕೆ ಆಧಾರಗಳು ಸಿಕ್ಕಿವೆ. ಅವುಗಳಲ್ಲಿ ಕಪ್ಪು ಮತ್ತು ಕೆಂಪು ಮಡಕೆಯ ಕಬ್ಬಿಣದ ಕಿಟ್ಟಗಳು, ಮಣ್ಣಿನ ಬಿಲ್ಲೆಗಳು ಪ್ರಮುಖವಾಗಿವೆ. ನೆಲೆಯ ಸಮೀಪ ೫ ಅಡಿ ಎತ್ತರ ೨ವರೆಅಡಿ ಅಗಲದ ಮತ್ತು ೧ ಅಡಿ ದಪ್ಪದ ಕರಿ ಕಲ್ಲಿನ ಶಿಲೆಯೊಂದನ್ನು ನಿಲ್ಲಿಸಿರುವುದು ಕಾಣುತ್ತೇವೆ. ಈ ಶಿಲೆಯನ್ನು ಜನರು ನಿಲುಸುಗಲ್ಲು ಎಂದು ಕರೆಯುತ್ತಿದ್ದಾರೆ. ಪ್ರಸ್ತುತ ನಿಲುಸುಗಲ್ಲು ಬೃಹತ್ ಶಿಲಾಯುಗದ ಸಮಾಧಿ ಎಂದು ಗುರುತಿಸಲಾಗಿದೆ. ಸಮಾಧಿಕಲ್ಲು ಪಶ್ಚಿಮಾಭಿಮುಖವಾಗಿದ್ದು, ಈ ರೀತಿ ಸುತ್ತ ಮುತ್ತ ಪರಿಸರದಲ್ಲಿ ಸಿಗುವುದು ವಿರಳ. ಇಂತಹ ಐತಿಹಾಸಿಕವುಳ್ಳ ನೆಲೆಯನ್ನು ಕ್ಷೇತ್ರ ಕಾರ್ಯದಲ್ಲಿ ಬೆಳಕಿಗೆ ತರಲಾಗಿದೆ.

ಕರಿಓಬನಹಳ್ಳಿ:

ಹಿರಿಯೂರು ತಾಲೂಕಿನ ಕರಿಓಬನಹಳ್ಳಿ ಗ್ರಾಮವು ಹರ್ತಿಕೋಟೆ ಸಮೀಪವಿದೆ. ಹಿರಿಯೂರಿನಿಂದ ಹರ್ತಿಕೋಟೆಗೆ ಹೋಗುವಾಗ ಕರಿಓಬನಹಳ್ಳಿ ಗೇಟ್ ಸಿಗುವುದು. ಮುಖ್ಯ ರಸ್ತೆಯಿಂದ ಒಳ ಪ್ರವೇಶಿಸುವಾಗ ಸಿಗುವ ಹೊಲದಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು ಸಿಗುತ್ತವೆ. ಈ ನೆಲೆಯನ್ನು ಬೂದಿಹೊಲ ಎಂದು ಕರೆಯುತ್ತಾರೆ. ಹೊಲದಲ್ಲಿ ಸರ್ವೇಕ್ಷಣೆ ಮಾಡಿದಾಗ ಹಳ್ಳದ ಎಡದಂಡೆಯ ಮೇಲೆ ನವ ಶಿಲಾಯುಗದ ಕೆಂಪು ಮಡಕೆ, ಬಫ್‌ವೇರ್, ಉದ್ದ ಕತ್ತುವುಳ್ಳ ಬೂದು ಬಣ್ಣದ ಮಡಕೆ ಚೂರುಗಳು ಹಾಗೂ ಮುರಿದು ಹೋಗಿರುವ ಕಲ್ಲಿನ ಕೊಡಲಿಗಳು ಸಿಕ್ಕಿವೆ. ದೊರಕಿರುವ ಕಬ್ಬಿಣದ

ಕಿಟ್ಟಗಳು ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು, ಕವಣೆ ಕಲ್ಲುಗಳು ಬೃಹತ್ ಶಿಲಾಯುಗದವು. ಈ ನೆಲೆಯಲ್ಲಿ ದೊರೆತ ಮಡಕೆಗಳು ಕೈಯಿಂದ ಮತ್ತು ಚಕ್ರದ ಸಹಾಯದಿಂದ ಮಾಡಿದ್ದಾಗಿವೆ. ಮುಂದುವರಿದು ಶಾತವಾಹನರ ಅವಶೇಷಗಳು ಸಿಗುತ್ತವೆ. ಈ ಮೂಲಕ ಕ್ಷೇತ್ರ ಕಾರ್ಯದಲ್ಲಿ ದೊರೆತಿರುವ ಕರಿಓಬನಹಳ್ಳಿ ನೆಲೆಯು ನವಶಿಲಾಯುಗದಿಂದ ಶಾತವಾಹನರ ಕಾಲದವರೆಗೆ ಪ್ರಮುಖ ನೆಲೆಯಾಗಿತ್ತೆಂದು ಹೇಳಬಹುದು.

ನೊಣಬಿಪಟ್ಟಣ:

ಹಿರಿಯೂರು ತಾಲೂಕಿನ ಐಮಂಗಲ ಹೋಬಳಿಯ ಪ್ರಮುಖ ನೆಲೆಯಿದು. ಐಮಂಗಲದಿಂದ ಬಂಡ್ಲೂರುಹಟ್ಟಿಗೆ ಹೋಗುವ ದಾರಿ ಮಾರ್ಗದಲ್ಲಿ ಸುಮಾರು ೨೦ ಎಕರೆ ವಿಸ್ತೀರ್ಣವಾಗಿರುವ ಸ್ಥಳವೇ ನೊಣಬಿಪಟ್ಟಣ. ಈ ಪಟ್ಟಣದ ಸಮೀಪ ಬಸಪ್ಪನಮಾಳಿಗೆ, ಎಂ.ಡಿ.ಕೋಟೆ ಗ್ರಾಮಗಳು ಕಾಣಸಿಗುತ್ತವೆ. ಪ್ರಸ್ತುತ ನೆಲೆಯು ಈ ಹಿಂದೆ ಶೋಧಗೊಂಡಿತ್ತು[೫೭]. ವಸತಿ ನೆಲೆಯಲ್ಲಿ ಬೂದು ಮಣ್ಣು ಹೇರಳವಾಗಿದ್ದು, ಅವಶೇಷಗಳನ್ನು ಅಡಗಿಸಿಕೊಂಡಿದೆ. ಈ ನೆಲೆಯಲ್ಲಿ ಒಂದು ಏಕಶಿಲಾ ಬಂಡೆ ಇದ್ದು, ಜನರು ಅದನ್ನು ಹತ್ತಿರಾಶಿಕಲ್ಲು ಎಂದು ಕರೆಯುತ್ತಾರೆ. ಸ್ಥಳೀಯರ ಪ್ರಕಾರ ಪ್ರಾಚೀನ ಕಾಲದಲ್ಲಿ ಹತ್ತಿಯನ್ನು ಒಂದು ಕಡೆ ಸಂಗ್ರಹಿಸಿದ್ದಾಗ ಸುಟ್ಟುಹೋಗಿ ಕಲ್ಲಾಗಿರಬೇಕೆಂದು ತಿಳಿಸುತ್ತಾರೆ. ರುಬ್ಬುವ ಕಲ್ಲು, ರುಬ್ಬುವ ಬಂಡೆ ಮತ್ತಿತರ ಉಪಕರಣಗಳು ಕಾಣಸಿಗುತ್ತವೆ. ನೊಳಂಬಪಲ್ಲವರು ಈ ಪ್ರದೇಶವನ್ನು ಆಳ್ವಿಕೆ ಮಾಡಿದ್ದರಿಂದ ನೆಲೆಗೆ ನೊಣಬಿಪಟ್ಟಣ ಎಂದು ಕರೆಯುವುದು ಸತ್ಯ. ೯x೯ಇಂಚು ಅಳತೆಯ ಚೌಕಾಕಾರದ ಕೆಂಪು ಇಟ್ಟಿಗೆ ಕಂಡುಬಂದಿದೆ. ಆದ್ದರಿಂದ ನೆಲೆಯಲ್ಲಿ ಇಟ್ಟಿಗೆ ಕಟ್ಟಡ ದೊರಕುವ ಸಾಧ್ಯತೆಗಳಿವೆ. ನೆಲೆಯ ಸುತ್ತಮುತ್ತ ಕ್ಷೇತ್ರ ಕಾರ್ಯಮಾಡಿದಾಗ ಜಾಲಿಗಿಡಗಳ ಪೊದೆಯಲ್ಲಿ ಕಬ್ಬಿಣದ ಕಿಟ್ಟಗಳು, ಸೂಕ್ಷ್ಮ ಕಲ್ಲಿನ ಉಪಕರಣಗಳು ಕಂಡುಬಂದಿವೆ.

ನವ ಶಿಲಾಯುಗದಲ್ಲಿ ಪ್ರಮುಖ ನೆಲೆಯಾಗಿರುವ ನೂಣಬಿಪಟ್ಟಣದಲ್ಲಿ ಬೂದು ಬಣ್ಣದ, ಕೆಂಪು ಬಣ್ಣದ ಮಡಕೆ ಚೂರುಗಳು ಸಾಮಾನ್ಯವಾಗಿದ್ದು, ಕಂದುಬಣ್ಣದ ಮಡಕೆ ಚೂರು ದೊರೆತಿರುವುದು ವಿಶೇಷ. ಬೂದು ಬಣ್ಣದ ಮಡಕೆ ಚೂರಿನ ಒಳಭಾಗ ಅಡ್ಡಗೆರೆಗಳನ್ನು ಕಾಣಬಹುದು. ಹಳ್ಳದ ದಂಡೆಯ ಮೇಲೆ ಸಿಗುವ ಸೂಕ್ಷ್ಮ ಕಲ್ಲಿನ ಉಪಕರಣಗಳು ನವ ಶಿಲಾಯುಗದಲ್ಲಿ ಬಳಕೆಯಾಗಿದ್ದಿರಬೇಕೆಂದು ತಿಳಿಸಲಾಗಿದೆ.

ಬೃಹತ್ ಶಿಲಾಯುಗದ ಸಂಸ್ಕೃತಿಯನ್ನು ಬಿಂಬಿಸುವ ಕಪ್ಪು ಮತ್ತು ಕೆಂಪು ಮಡಕೆ, ಬಟ್ಟಲು, ಕಬ್ಬಿಣದ ಕಿಟ್ಟಗಳು ಕಂಡುಬಂದಿವೆ. ಈ ನೆಲೆಯ ಸಮೀಪ ೫ಕಿ.ಮೀ ದೂರ ಸಾಗಿದರೆ ಮರಡಿಹಳ್ಳಿ ಬಳಿ ಬೃಹತ್ ಶಿಲಾಯುಗದ ಸಮಾಧಿಗಳು ಕಂಡು ಬಂದಿರುತ್ತವೆ. ಈ ಮೂಲಕ ಬೃಹತ್ ಶಿಲಾಯುಗದ ಮಾನವನ ಒಡನಾಟ ಬಹುವಿಸ್ತಾರವಾಗಿತ್ತೆಂದು ಹೇಳಬಹುದು.

ಪಾಲವ್ವನಹಳ್ಳಿ:

ಹಿರಿಯೂರು ತಾಲೂಕಿನ ಪಾಲವ್ವನಹಳ್ಳಿ ಗ್ರಾಮವು ಚಿತ್ರದುರ್ಗದಿಂದ ೧೩ಕಿ.ಮೀ. ದೂರವಿದೆ. ಗ್ರಾಮದ ಪೂರ್ವದಲ್ಲಿ ರಾಷ್ಟ್ರೀಯ ಹೆದ್ದಾರಿ ೪ ಹಾದು ಹೋಗಿರುವುದು. ಐತಿಹಾಸಿಕವಾಗಿ ಪಾಳೆಯಗಾರರ ಕಾಲದಲ್ಲಿ ನಿರ್ಮಾಣಗೊಂಡ ಲಕ್ಷ್ಮೀನರಸಿಂಹ ದೇವಸ್ಥಾನವಿದ್ದು, ಇದನ್ನು ಹೊರಗಿನಗುಡಿ ಎಂದು ಕರೆಯುತ್ತಿದ್ದಾರೆ. ಪಾಲವ್ವ ಎನ್ನುವ ನಾಗತಿ ಇದ್ದಿರಬಹುದಾದ ಕಾರಣ ಊರಿಗೆ ಪಾಲವ್ವನಹಳ್ಳಿ ಎಂದು ಹೆಸರು ಬಂದಿರಬೇಕು.

ಪಾಲವ್ವನಹಳ್ಳಿ ಒಳಭಾಗದಲ್ಲಿ ಮಾರಮ್ಮನ ಚಿಕ್ಕಗುಡಿ ನಿರ್ಮಾಣಗೊಂಡಿದೆ. ಒಂದು ಗರ್ಭಗೃಹ ಮಾತ್ರವಿದ್ದು, ಮೂರ್ತಿಯ ಪಕ್ಕದಲ್ಲಿ ಕಲ್ಲಿನ ಕೊಡಲಿಗಳನ್ನು ಪೂಜೆ ಮಾಡುತ್ತಿದ್ದಾರೆ. ಈ ಕಲ್ಲಿನ ಕೊಡಲಿಯನ್ನು ಕೇತ್ರಕಾರ್ಯದಲ್ಲಿ ಗುರಿತಿಸಿದ್ದೇನೆ. ಈ ಕಲ್ಲಿನ ಕೊಡಲಿಗಳು ೧೧ಇಂಚು ಉದ್ದ, ೨ವರೆ ಇಂಚು ಅಗಲವಾಗಿದ್ದು, ಕೆಳಭಾಗದಲ್ಲಿ ಅರ್ಧಚಂದ್ರಾಕೃತಿಯಲ್ಲಿವೆ. ಇಂತಹ ಕೊಡಲಿಗಳು ನವ ಶಿಲಾಯುಗ ಕಾಲದಲ್ಲಿ ರಚಿತಗೊಂಡಿವೆ[೫೮]. ಈ ಗ್ರಾಮದಿಂದ ಪೂರ್ವಕ್ಕೆ ಇರುವ ವಸತಿ ನೆಲೆಯಿಂದ ಕಲ್ಲಿನ ಕೊಡಲಿಯನ್ನು ಸಂಗ್ರಹಿಸಿ ಪೂಜೆಗೆ ಇಟ್ಟಿರುವ ಸಾಧ್ಯತೆಗಳಿವೆ. ಈ ಆಯುಧಗಳು ತಯಾರಿಕೆಯ ೨ನೇ ಹಂತದಲ್ಲಿವೆ.

ಗ್ರಾಮದ ಪೂರ್ವಕ್ಕೆ ಇರುವ ಬೂದಿ ಹೊಲವು ಪ್ರಾಚೀನ ಕಾಲದ ವಸತಿ ನೆಲೆಯಾಗಿದೆ. ಈ ನೆಲೆಯನ್ನು ಎಸ್.ವೈ. ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಶೋಧಿಸಿದ್ದರು[೫೯]. ಇವರು ನವ ಶಿಲಾಯುಗ, ಬೃಹತ್ ಶಿಲಾಯುಗ, ಶಾತವಾಹನರ ಮತ್ತು ಮಧ್ಯಕಾಲದ ಐತಿಹಾಸಿಕ ಅವಶೇಷಗಳನ್ನು ಬೆಳಕಿಗೆ ತಂದ್ದಿದ್ದಾರೆ. ಇದರಿಂದ ನೆಲೆಯಲ್ಲಿ ಮಾನವನ ವಾಸ್ತವ್ಯವು ಮಧ್ಯ ಕಾಲದವರೆಗೂ ಮುಂದುವರಿದ್ದುದನ್ನು ಗಮನಿಸಬಹುದು. ಸುಮಾರು ೧೦ ಎಕರೆ ವಿಸ್ತಾರವಾಗಿರುವ ನೆಲೆಯು ಕಲ್ಲುಕ್ವಾರೆಯಿಂದ ಅರ್ಧ ಎಕರೆಗೆ ಮಿತಿಗೊಂಡಿದೆ. ಇನ್ನು ಕೆಲವು ದಿನಗಳಲ್ಲಿ ಸಂಪೂರ್ಣವಾಗಿ ನಶಿಸಿ

ಹೋಗುವ ಸಾಧ್ಯತೆಗಳಿವೆ. ಪ್ರಮುಖವಾಗಿ ಮಡಕೆ ಚೂರುಗಳನ್ನು, ಕಲ್ಲಿನ ಉಪಕರಣಗಳನ್ನು ಕಬ್ಬಿಣದ ಕಿಟ್ಟಗಳನ್ನು, ಮೂಳೆ ಅವಶೇಷಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವಸತಿ ನೆಲೆಯ ಉತ್ತರಕ್ಕೆ ಇರುವ ಪಾಂಡವರಮಟ್ಟಿಯ ಪೂರ್ವ ತಪ್ಪಲಲ್ಲಿ ಬೃಹತ್ ಶಿಲಾಯುಗದ ಬಳೆಯಾಕಾರದ ಶಿಲಾಗೋರಿಗಳಿವೆ. ಈ ನೆಲೆಯನ್ನು ಎಸ್.ವೈ.ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಶೋಧಿಸಿದ್ದರು[೬೦]. ಈ ನೆಲೆಯ ಪಶ್ಚಿಮಕ್ಕೆ ಕುರುಮರಡಿಕೆರೆಯ ಮುಂಭಾಗ ಬೆಟ್ಟಗಳ ತಪ್ಪಲಿನಲ್ಲಿ ಮತ್ತೊಂದು ಸಮಾಧಿ ನೆಲೆಯನ್ನು ಗುರುತಿಸಿದ್ದೇನೆ. ಪ್ರಸ್ತುತ ವಸತಿ ನೆಲೆಯ ಉತ್ತರಕ್ಕಿರುವ ಬೃಹತ್ ಶಿಲಾಯುಗದ ಗೋರಿಗಳು ಪಾಂಡವರ ಮಟ್ಟಿಯಲ್ಲಿವೆ. ೬೨ಕ್ಕೂ ಹೆಚ್ಚು ಬಳೆಯಾಕಾರದ ಶಿಲಾಗೋರಿಗಳು. ೩೦, ೫೦, ೬೦, ೧೨೦ ಅಡಿ ವ್ಯಾಸದಲ್ಲಿ ನಿರ್ಮಿತಿಗೊಂಡಿವೆ. ಸುಮಾರು ೩೦ ಗೋರಿಗಳನ್ನು ದಕ್ಷಿಣೋತ್ತರವಾಗಿ ಒಂದೇ ಸಾಲಿನಲ್ಲಿ ಬರುವಂತೆ ನಿರ್ಮಿಸಿದ್ದಾರೆ. ಒಂದು ಗೋರಿಯಿಂದ ಮತ್ತೊಂದು ಗೋರಿಗೆ ೬ರಿಂದ ೯ಅಡಿ ಅಂತರವಿದೆ. ೨೫x೨೫ಅಡಿ ಅಳತೆಯ ಶಿಲಾ ಗೋರಿಯ ಕಲ್ಲುಗಳನ್ನು ಎಣಿಕೆ ಮಾಡಿದಾಗ ೨೫ರಿಂದ ೨೮ರವರೆಗೆ ಕಲ್ಲುಗಳು ಲೆಕ್ಕಕ್ಕೆ ಸಿಗುತ್ತವೆ. ಮತ್ತೊಂದು ೩೦x೩೦ಅಡಿ ಅಳತೆಯ ಶಿಲಾಗೋರಿಯ ಕಲ್ಲುಗಳು ೩೦ರಿಂದ ೩೬ರವರೆಗೆ ಕಲ್ಲುಗಳು ಲೆಕ್ಕಕ್ಕೆ ದೊರಕಿವೆ. ಆದ್ದರಿಂದ ೨೫x೨೫ಅಡಿ ಅಳತೆ ಇರುವುದೆಂದು ನಿರ್ಧಾರಕ್ಕೆ ಬರುವುದಾದರೆ ೨೫+೫ರವರೆಗೆ ಎಣಿಕೆ ಮಾಡಬಹುದು. ಇದಕ್ಕಿಂತೆ ಹೆಚ್ಚಿದ್ದರೆ ಮುಂದಿನ ಅಳತೆಯನ್ನು ಸೂಚಿಸುವುದು. ೩ ಗೋರಿಗಳು ಒಂದೇ ಸಾಲಿನಲ್ಲಿ ಸರಪಣಿಯಂತೆ ಒಂದಕ್ಕೊಂದು ಜೋಡಣೆಗೊಂಡಂತಿವೆ. ನೆರೆನಾಳ್‌ನಲ್ಲಿ ಕಂಡು ಬಂದಿರುವ ೩ ಶಿಲಾಗೋರಿಗಳು ಒಂದರ ಪಕ್ಕದಲ್ಲಿದ್ದು, ಪಾಲವ್ವನಹಳ್ಳಿ ನೆಲೆಗಿಂತ ಭಿನ್ನ. ಈ ರೀತಿಯ ಸಮಾಧಿಗಳ ರಚನೆ ಕುಟುಂಬದ ಮುಖ್ಯಸ್ಥರನ್ನು ಹಾಗೂ ರಕ್ತಸಂಬಂಧವನ್ನು ಸೂಚಿಸುವವು.

ನೆರೇನಾಳ್:

ಹಿರಿಯೂರು ತಾಲೂಕಿನ ಗಡಿಗ್ರಾಮವಾಗಿರುವ ನೆರೇನಾಳ್ ಪಾಲವ್ವನಹಳ್ಳಿ ಸಮೀಪದಲ್ಲಿದೆ. ಊರಿನ ಹೆಸರಿನಲ್ಲಿ ಹಾಳು ಎನ್ನುವ ಪದವು ಪಾಳು ಬಿದ್ದ ಊರನ್ನು ಸೂಚಿಸುತ್ತದೆ. ಈ ಹಿಂದೆ ಹಾಳಾದ ಊರಿದ್ದು, ನಂತರ ಇತ್ತೀಚೆಗೆ ಮನೆಗಳು ನಿರ್ಮಾಣಗೊಂಡಿವೆ. ಗ್ರಾಮದ ಈಶಾನ್ಯಕ್ಕೆ ಮತ್ತು ದಕ್ಷಿಣಕ್ಕೆ ಒಟ್ಟು ಎರಡು ಸಮಾಧಿ ನೆಲೆಗಳಿವೆ. ಮರಡಿಹಳ್ಳಿಗೆ ಹೋಗುವ ದಾರಿಯಲ್ಲಿ ರಸ್ತೆಯ ಎಡ-ಬಲ ಭಾಗಕ್ಕೆ ಹಳ್ಳದ

ದಂಡೆಯ ಮೇಲೆ ಬೃಹತ್‌ಶಿಲಾಯುಗದ ೨೨ ಶಿಲಾಗೋರಿಗಳು ಇವೆ. ಈ ಎರಡು ನೆಲೆಯನ್ನು ಎಸ್.ವೈ.ಸೋಮಶೇಖರ್ ಮತ್ತು ಎಸ್.ತಿಪ್ಪೇಸ್ವಾಮಿ ಶೋಧಿಸಿದ್ದರು[೬೧]. ಇವು ಬಳೆಯಾಕಾರದಲ್ಲಿದ್ದು, ನಶಿಸಿ ಹೋಗುವ ಹಂತದಲ್ಲಿವೆ. ಸಮಾಧಿಗಳು ೫೦, ೬೦ ಅಡಿ ವ್ಯಾಸದಲ್ಲಿ ರಚಿತಗೊಂಡಿದ್ದು, ಅತ್ಯಂತ ಚಿಕ್ಕದು ೧೨ ಅಡಿ ವ್ಯಾಸದಲ್ಲಿ ರಚಿತಗೊಂಡಿರುವುದು ವಿಶೇಷ. ಈ ಚಿಕ್ಕದಾದ ಗೋರಿಯು ಮಗುವಿನ ಸಮಾಧಿ ಇರಬಹುದು. ಸಮಾಧಿ ಕಲ್ಲುಗಳ ಮೇಲೆ ಪೀರಲ ದೇವರ ಚಿತ್ರಗಳನ್ನು ರಚಿಸಿರುವುದನ್ನು ಕಾಣಬಹುದು. ಈ ಚಿತ್ರಗಳು ಆಧುನಿಕ ಕಾಲದವು. ೩ ಸಮಾಧಿಗಳು ಒಂದರ ಪಕ್ಕದಲ್ಲೊಂದು ರಚನೆಗೊಂಡಿರುವುದು ಈ ನೆಲೆಯ ವಿಶೇಷ. ವಸತಿ ನೆಲೆಯಲ್ಲಿ ಕವಣೆಕಲ್ಲುಗಳು, ಮುರಿದ ಕಲ್ಲಿನ ಕೊಡಲಿ, ಬೂದು ವರ್ಣದ ಮತ್ತು ಕಪ್ಪು, ಕೆಂಪು ವರ್ಣದ ಮಡಕೆಗಳು ಹಾಗೂ ಮೂಳೆ ಅವಶೇಷಗಳನ್ನು ಕಾಣಬಹುದು. ಒಟ್ಟಿನಲ್ಲಿ ನೆರೇನಾಳ್ ಪರಿಸರದಲ್ಲಿ ಕಂಡುಬಂದಿರುವ ಶಿಲಾಸಮಾಧಿಗಳೂ ಹಾಗೂ ನವ ಮತ್ತು ಬೃಹತ್ ಶಿಲಾಯುಗದ ಜನರ ವಾಸ್ತವ್ಯಗಳಿಂದ ಅಂದಿನ ಜನಜೀವನವನ್ನು ಅರಿತಿಕೊಳ್ಳಲು ಸಾಧ್ಯವಾಗಿದೆ. ಪ್ರಸ್ತುತ ನೆಲೆಯೂ ಸೇರಿ ಪಾಲವ್ವನಹಳ್ಳಿ ಮತ್ತು ಮರಡಿಹಳ್ಳಿ ಸಮೀಪವಿರುವ ಸಮಾಧಿ ನೆಲೆಗಳು ಮೂರು ಕಿಲೋಮಿಟರ್ ಅಂತರದಲ್ಲಿ ಕಂಡುಬಂದಿರುವುದರಿಂದ ಬೃಹತ್ ಶಿಲಾಯುಗದ ಮಾನವರ ಚಲನವಲನ ತಿಳಿಯಲು ಸಾಧ್ಯವಾಗಿದೆ.

ಮಾಳಪ್ಪನಗುಡ್ಡ:

ಹಿರಿಯೂರು ತಾಲೂಕು ಕೇಂದ್ರದಿಂದ ಹುಳಿಯಾರ್ ರಸ್ತೆಯಲ್ಲಿ ೮ ಕಿಮೀ ದೂರಸಾಗಿದರೆ ನವೋದಯ ಶಾಲೆ ಎದುರಿಗೆ ದಕ್ಷಿಣೋತ್ತರವಾಗಿ ಬೆಟ್ಟವು ಹಬ್ಬಿಕೊಂಡಿದೆ. ಬೆಟ್ಟವನ್ನು ಸ್ಥಳೀಯರು ಮಾಳಪ್ಪನಗುಡ್ಡ ಎಂದು ಕರೆಯುತ್ತಿದ್ದಾರೆ. ಈ ಗುಡ್ಡದ ಪಶ್ಚಿಮಕ್ಕೆ ಪ್ರಾಚೀನ ನೆಲೆಯಾದ ಇದ್ದಿಲನಾಗೇನಹಳ್ಳಿ, ಪರಮೇನಹಳ್ಳಿ, ಗ್ರಾಮಗಳಿವೆ. ಬೆಟ್ಟವು ವಿಶಾಲವಾಗಿದ್ದು, ಬಂದರಿಕೆ ಗಿಡಗಳಿಂದ ಕೂಡಿದ ಚಿಕ್ಕ ಕಾಡು. ಕಾಡು ಪ್ರಾಣಿಗಳ ರಕ್ಷಣೆಗೆ ಅನುಕೂಲಕರವಾದ ಬೆಟ್ಟವಾಗಿದೆ. ಬೆಟ್ಟಕ್ಕೆ ನವೋದಾಯ ಶಾಲೆಯಿಂದ ಪ್ರವೇಶಿಸುವುದು ಉತ್ತಮ. ಬೆಟ್ಟವನ್ನು ಪ್ರವೇಶಿಸಿ ಮೇಲಕ್ಕೆ ಹೋದಂತೆ ಬೃಹತ್ ಹುಟ್ಟು ಬಂಡೆಗಳು ಸಿಗುತ್ತವೆ. ಈ ಬಂಡೆಗಳ ಮೇಲೆ ರೇಖಾಚಿತ್ರಗಳನ್ನು ಕಾಣಬಹುದು. ಬಂಡೆಗಳನ್ನು ದಾಟಿ ಮೇಲಕ್ಕೆ ಹೋದಾಗ ಕಾವಲುಗೋಪುರ, ಭೈರವನಮೂರ್ತಿ ಇರುವ ಚಿಕ್ಕ ಗುಡಿ ಇದೆ. ಗುಡ್ಡದ ತಪ್ಪಲಿನಲ್ಲಿ ಸಾಕಷ್ಟು

ಪ್ರಾಗಿತಿಹಾಸದ ಕುರುಹುಗಳು ಸಿಗುತ್ತವೆ. ಈ ಹಿಂದೆ ಮುತ್ತುರಾಜ್ ರೇಖಾಚಿತ್ರಗಳನ್ನು ಶೋಧಿಸಿದ್ದರು[೬]. ಅಲ್ಲದೆ ನವ ಶಿಲಾಯುಗದ ಕಲ್ಲಿನ ಕೊಡಲಿಗಳು, ಬೃಹತ್ ಶಿಲಾಯುಗದ ಸಮಾಧಿಗಳನ್ನು ಬೆಳಕಿಗೆ ತಂದಿದ್ದರು. ಕ್ಷೇತ್ರ ಕಾರ್ಯದಲ್ಲಿ ಕೃಷ್ಣಪ್ಪ.ಬಿ ಮತ್ತು ಸ್ನೇಹಿತರು ಜೊತೆಗೂಡಿ ಮರುಪರಿಶೀಲಿಸಿದಾಗ ಮತ್ತಷ್ಟು ವಿಶೇಷತೆಗಳು ಹಾಗೂ ಸ್ಪಷ್ಟತೆ ದೊರತಿವೆ.

ಬಂಡೆಗಳ ಮೇಲೆ ಇರುವ ೫೦ಕ್ಕೂ ಹೆಚ್ಚು ರೇಖಾಚಿತ್ರಗಳನ್ನು ಕುಟ್ಟಿ, ಕೊರೆದು ಮೂಡಿಸಲಾಗಿರುವುದು. ಬಂಡೆಯ ಮೇಲೆ ಚಿತ್ರ ಸಮೂಹಗಳಿವೆ. ಎತ್ತು, ಗೂಳಿ, ಮಂಡಲದ ಚಿತ್ರಗಳು ಸಾಮಾನ್ಯವಾಗಿದ್ದು, ಜಿಂಕೆ, ಕೃಷ್ಣಮೃಗ, ನವಿಲು, ಶುಕದ ಚಿತ್ರಗಳು ವಿಶೇಷವಾಗಿವೆ. ಬೆಟ್ಟದ ನಕ್ಷೆ, ರಥದ ಚಿತ್ರಗಳು, ನಕ್ಷೆಯ ಜ್ಞಾನವನ್ನು ತೋರಿಸುವುದು. ೪ ಕಡೆಗಳಲ್ಲಿ ಜೋಡಿ ಪಾದ ಮತ್ತು ನಕ್ಷತ್ರ ಇರುವುದು ಧಾರ್ಮಿಕ ಮಹತ್ವವನ್ನು ಸಾರುತ್ತವೆ. ೩ ಇಂಚಿನಿಂದ ೧೧ ಇಂಚಿನವರೆಗೆ ಎತ್ತು ಮತ್ತು ಗೂಳಿಯ ಚಿತ್ರಗಳು ರಚಿತಗೊಂಡಿವೆ. ೩ಇಂಚು ಇರುವ ಎತ್ತಿನ ಚಿತ್ರವು ಚೌಕಾಕಾರದ ದೇಹವಿದ್ದು, ಚಿತ್ರದುರ್ಗ ತಾಲೂಕಿನ ಸಂಗೇನಹಳ್ಳಿಯಲ್ಲಿ ದೊರೆತ ಚೌಕಾಕಾರದ ಎತ್ತಿನ ಚಿತ್ರಗಳನ್ನು ಹೊಲುತ್ತವೆ. ಇಂತಹ ಚಿತ್ರಗಳು ನವ ಶಿಲಾಯುಗದ ಅಂತ್ಯ ಕಾಲದಲ್ಲಿ ರಚಿತಗೊಂಡವುಗಳು. ೩ ಇಂಚಿನ ಚಿತ್ರವು ಅಂದಿನ ಚಿತ್ರಕಾರನ ಹಿಡಿತವನ್ನು ತೋರಿಸುವುದು. ಬೆರಳುಗಳು, ಕಾಲು ಹಾಗೂ ಉದರವನ್ನು ತೋರಿಸಿರುವ ಮನುಷ್ಯನ ಚಿತ್ರವು ನೃತ್ಯ ಭಂಗಿಯಲ್ಲಿದೆ. ಎತ್ತಿನ ಕೋಡುಗಳು ೧೧ ಇಂಚಿನವರೆಗೂ ನೀಳವಾಗಿ ಬಾಗಿದಂತಿವೆ. ಬಹುತೇಕ ಎತ್ತಿನ ಚಿತ್ರಗಳು ಉದ್ದವಾದ ದೇಹರಚನೆಯನ್ನು ಹೊಂದಿವೆ. ಎತ್ತಿನ ಬಾಲಗಳ ಕೆಳಗೆ ಕೂದಲನ್ನು ಕುಟ್ಟಿ ಮೂಡಿಸಿದ್ದಾರೆ. ೨ ಇಂಚಿನವರೆಗೂ ಉದ್ದವಾದ ಶಿಷ್ನವನ್ನು ತೋರಿಸಿದ್ದು, ಲೈಂಗಿಕ ಪ್ರಕ್ರಿಯೆಯನ್ನು ತಿಳಿಸುವುದು. ಗೂಳಿಯ ಕೋಡುಗಳು ಮುಂದಕ್ಕೆ ಬಾಗಿದ್ದು, ಇಣಿಯ ಭಾಗವು ಹಿಂದಕ್ಕೆ ಬಾಗಿದೆ. ಈ ರೀತಿಯಾಗಿ ಎತ್ತು ಮತ್ತು ಗೂಳಿಯ ರೇಖಾಚಿತ್ರಗಳ ವ್ಯತ್ಯಾಸವನ್ನು ಗುರುತಿಸಬಹುದು.

ರೇಖಾಚಿತ್ರಗಳನ್ನು ಗಮನಿಸಿದಾಗ ಮಹತ್ತರವಾದ ವಿಚಾರಗಳು ತಿಳಿದು ಬರುತ್ತವೆ. ಶಿಲಾಯುಗದ ಮಾನವನು ವ್ಯವಸಾಯ ಮಾಡಿಕೊಂಡು ದನಕರುಗಳನ್ನು ಸಾಕುತ್ತಿದ್ದರು. ದನ ಕಾಯುವಾಗ ಹಲವು ಪ್ರಾಣಿ ಪಕ್ಷಿಗಳನ್ನು ಗಮನಿಸಿದ್ದಾರೆ. ದನಗಳು ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವುದನ್ನು ಗಮನಿಸಿ, ಅದರ ಪ್ರಭಾವಕ್ಕೆ

ಒಳಗಾಗಿದ್ದಾನೆ. ಬೆಟ್ಟದ ನಕ್ಷೆ ರಚಿಸಿರುವುದು ನಕ್ಷೆಯ ಪ್ರಜ್ಞೆಯನ್ನು ತೋರಿಸುತ್ತದೆ. ೩ ಇಂಚಿನ ಚಿತ್ರವು ಸೂಕ್ಷ್ಮತೆ ಮತ್ತು ತಾಳ್ಮೆಗೆ ಆಧಾರ. ಅಂದಿನ ಕಾಲದ ಧಾರ್ಮಿಕ ಬದುಕನ್ನು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಚಿತ್ರಗಳ ಮೂಲಕ ತಿಳಿಯಬಹುದು. ಉದ್ದೇಶ ಪೂರ್ವಕವಾಗಿ ಹಾಗೂ ಸಮಯ ಕಳೆಯಲು ರೇಖಾಚಿತ್ರಗಳನ್ನು ರಚಿಸಿದ್ದಾನೆ. ಈ ರೀತಿಯಾದ ಹಲವು ಪ್ರಮುಖ ಅಂಶಗಳು ತಿಳಿದು ಬಂದಿರುತ್ತವೆ. ರೇಖಾಚಿತ್ರಗಳನ್ನು ಶಿಲೆ ಮತ್ತು ಲೋಹಗಳಿಂದ ರಚಿಸಿದ್ದು, ಬದುಕಿನ ಚಿತ್ರಗಳು ಅನಾವರಣಗೊಂಡಿವೆ. ಬೆಟ್ಟದಲ್ಲಿ ದೊರೆತಿರುವ ಕಲ್ಲಿನ ಮಣಿಗಳು ಕೆಲವು ತಯಾರು ಹಂತದಲ್ಲಿದ್ದು, ಬಂಡೆಗಳ ಮೇಲೆ ಚಿಕ್ಕ ರಂಧ್ರಗಳಿವೆ. ಈ ಮೂಲಕ ಬೆಟ್ಟದಲ್ಲಿ ಮಣಿಗಳನ್ನು ತಯಾರು ಮಾಡುವ ಕೈಗಾರಿಕಾ ಪ್ರದೇಶವಾಗಿತ್ತೆಂದು ತೊರುವುದು. ಮುತ್ತುರಾಜ್ ಅವರು ಬೆಟ್ಟದ ಮೇಲೆ ೨ ಬೃಹತ್ ಶಿಲಾಗೋರಿಗಳನ್ನು ಗುರುತಿಸಿರುವುದು ಸರಿಯಷ್ಟೆ. ಆದರೆ ಅವು ಪಾಳೆಯಗಾರರ ಕಾಲದಲ್ಲಿ ಕಾವಲು ಗೋಪುರಗಳಾಗಿದ್ದವು ಎನ್ನುವುದು ಸತ್ಯ. ಬೃಹತ್ ಶಿಲಾಯುಗದ ಮಾನವನು ಗೋರಿಗಳ ಒಳಭಾಗದಲ್ಲಿ ಕಲ್ಲು ಕಟ್ಟಡವನ್ನು ಕಟ್ಟುತ್ತಿದ್ದನು. ಅದರ ಹೊರತಾಗಿ ಭೂಮಿಯ ಮೇಲ್ಭಾಗದಲ್ಲಿ ವೃತ್ತಾಕಾರವಾಗಿ ಕಲ್ಲು ಕಟ್ಟಡ ನಿರ್ಮಾಣ ಮಾಡುತ್ತಿರಲಿಲ್ಲವೆಂದು ಹೇಳಬಹುದು.

ರಾಮಗಿರಿ:

ಹೊಳಲ್ಕೆರೆ ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವೇ ರಾಮಗಿರಿ. ಈ ಗ್ರಾಮದಲ್ಲಿರುವ ಬೆಟ್ಟದಲ್ಲಿ ಕರಿಸಿದ್ದೇಶ್ವರ ದೇವಸ್ಥಾನವಿದ್ದು, ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಈ ಹಿಂದೆ ಶ್ರೀರಾಮ ಕೆಲಕಾಲ ಗಿರಿಯ ಮೇಲೆ ತಂಗಿದ್ದನು ಮತ್ತು ಲಿಂಗವನ್ನು ಪ್ರತಿಷ್ಟಾಪಿಸಿದನು ಎಂಬುದು ಐತಿಹ್ಯವಾಗಿದೆ. ರಾಮಗಿರಿಯು ತರೀಕೆರೆ, ಚನ್ನಗಿರಿ, ಹೊಸದುರ್ಗ, ಹೊಳಲ್ಕೆರೆಗೆ ಹೋಗಲು ಪ್ರಮುಖ ವೃತ್ತ ಕೇಂದ್ರ, ಹೋಬಳಿ ಕೇಂದ್ರವಾಗಿರುವ ರಾಮಗಿರಿಯಲ್ಲಿ ೧೦ ಎಕರೆಯಷ್ಟು ವಿಸ್ತಾರವಾಗಿರುವ ಬೂದು ಮಣ್ಣಿನಿಂದ ಕೂಡಿದ ವಸತಿನೆಲೆಯಿದೆ. ಈ ವಸತಿ ನೆಲೆಯನ್ನು ಸ್ಥಳೀಯರು ಸ್ಮಶಾನ ಮತ್ತು ಬೂದಿಮಾರಲು ಎಂದು ಕರೆಯುತ್ತಿದ್ದಾರೆ. ಈ ನೆಲೆಯಲ್ಲಿ ನವ ಶಿಲಾಯುಗ, ಬೃಹತ್ ಶಿಲಾಯುಗ, ಇತಿಹಾಸ ಆರಂಭಕಾಲದ ಅವಶೇಷಗಳನ್ನು ಕಾಣಬಹುದು. ಈ ನೆಲೆಯನ್ನು ಕ್ಷೇತ್ರಕಾರ್ಯದಲ್ಲಿ ಶೋಧಿಸಿದ್ದೇನೆ. ಪ್ರಸ್ತುತ ನೆಲೆಯ ಪೂರ್ವಕ್ಕೆ ೮ ಅಡಿ ಎತ್ತರದ ನಿಲುಸುಗಲ್ಲು ಸಮಾಧಿ ಇದ್ದು, ಇದನ್ನು ಸ್ಥಳೀಯರು ಆನೆ ಕಟ್ಟುವ ಕಲ್ಲೆಂದು ಕರೆಯುತ್ತಿದ್ದಾರೆ. ನಿಲುಸುಗಲ್ಲು

ಸಮಾಧಿಯು ಪೂರ್ವಾಭಿಮುಖವಾಗಿ ಇರುವುದು. ವಸತಿನೆಲೆಯ ಪಕ್ಕದಲ್ಲಿ ಯಾವುದೇ ಅವಶೇಷಗಳಿಲ್ಲದ ಬೂದಿ ಕಿಟ್ಟವನ್ನು ಹೊಂದಿದ ಬೂದಿ ದಿನ್ನೆಯೊಂದನ್ನು ಕಾಣಬಹುದು. ಬೂದಿ ದಿನ್ನೆಯು ಸಗಣಿಯನ್ನು ಸುಡುವುದರಿಂದಾಗಿದೆ ಎನ್ನುವ ಮಾಹಿತಿ ಈ ಹಿಂದೆ ನಿರ್ಧರಿತವಾಗಿರುವ ವಿಷಯ. ಬೂದಿದಿನ್ನೆಯನ್ನು ಗಮನಿಸಿದರೆ ನವ ಶಿಲಾಯುಗದಲ್ಲಿ ವಸತಿನೆಲೆಯ ಪಕ್ಕದಲ್ಲಿಯೇ ಸಗಣಿಯ ಗುಡ್ಡೆಯನ್ನು ಹಾಕುತ್ತಿದ್ದರೆಂಬುದಾಗಿ ಸ್ಪಷ್ಟಪಡಿಸಬಹುದು.

ಹೊಳಲ್ಕೆರೆ ಪಟ್ಟಣ:

ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರವಾಗಿರುವ ಹೊಳಲ್ಕೆರೆಯೂ ಐತಿಹಾಸಿಕ ಪ್ರವಾಸಿತಾಣ. ಹೊಳಲ್ಕೆರೆಯನ್ನು ಚಿತ್ರದುರ್ಗ ಜಿಲ್ಲೆಯ ಮಲೆನಾಡೆಂದು ಕರೆಯಲಾಗುತ್ತಿದೆ. ಹೊಳಲ್ಕೆರೆ ಪಟ್ಟಣದಲ್ಲಿ ಹಿರೇಕೆರೆ, ಹೊನ್ನಮ್ಮ ಹಾಗೂ ಕೆಸರಘಟ್ಟೆ ಎಂದು ಕರೆಯುವ ಕೆರೆಗಳಿವೆ. ಈ ಕೆರೆಗಳ ನೀರು ಪಟ್ಟಣದ ಪಶ್ಚಿಮಕ್ಕೆ ಹರಿದು ಚನ್ನಗಿರಿ ತಾಲೂಕಿನ ಸೂಳೆಕೆರೆಗೆ ಸೇರುತ್ತದೆ. ಹಿರೇಕೆರೆಯ ಮುಂಭಾಗದಲ್ಲಿ ಮಟ್ಟಿಯ ಮೇಲೆ ರಂಗಸ್ವಾಮಿ ದೇವಸ್ಥಾನ ಪಕ್ಕದಲ್ಲಿ ದೊಡ್ಡ ಚೌಡಮ್ಮ ಎಂದು ಕರೆಯುವ ಚಿಕ್ಕಗುಡಿ ಇದೆ. ಈ ಗುಡಿಯು ೬ಅಡಿ ಉದ್ದ ೩ಅಡಿ ಅಗಲವಾಗಿದ್ದು, ಉತ್ತರಾಭಿಮುಖವಾಗಿದೆ. ಗುಡಿಯನ್ನು ೨ಅಡಿ ಎತ್ತರ, ೧ಅಡಿ ಅಗಲದ ಕಲ್ಲುಗೂಟವನ್ನು ಸುತ್ತಲೂ ಹೂಳಿದ್ದು, ಮೇಲ್ಭಾಗದಲ್ಲಿ ೧೫ಅಡಿ ವ್ಯಾಸದ ವೃತ್ತಕಾರದ ಬಂಡೆಯನ್ನು ಹಾಕಿದ್ದಾರೆ. ಈ ರೀತಿಯಾದ ನಿರ್ಮಾಣವನ್ನು ಬೃಹತ್ ಶಿಲಾಯುಗದ ಡಾಲ್ಮೆನ್ ಸಿಸ್ಟ್ ಸಮಾಧಿ ಎಂದು ಗುರುತಿಸಲಾಗಿದೆ. ಇದೇ ರೀತಿ ಡಾಲ್ಮೆನ್ ಸಿಸ್ಟ್ ಸಮಾಧಿಯು ಚಿಕ್ಕಕಬ್ಬಿಗೆರೆಯಲ್ಲಿ ಮತ್ತು ಹಾನಗಲ್‌ನಲ್ಲಿವೆ. ದೋಣೆಕರಿಯಮ್ಮ ಮತ್ತು ಪಾಂಡವರ ಮನೆಗಳು ಎಂದು ಡಾಲ್ಮೆನ್ ಸಿಸ್ಟ್ ಸಮಾಧಿಗಳನ್ನು ಪ್ರಸ್ತುತ ಜಿಲ್ಲೆಯಲ್ಲಿ ಕರೆಯುತ್ತಿದ್ದಾರೆ. ಒಟ್ಟಾಗಿ ಹೊಳಲ್ಕೆರೆ ಪಟ್ಟಣವು ಬೃಹತ್ ಶಿಲಾಯುಗದಿಂದ ವಸತಿ ತಾಣವಾಗಿತ್ತೆಂದು ಹೇಳಬಹುದು. ಮುಂದಿನ ನವ ಶಿಲಾಯುಗದ ಅವಶೇಷಗಳು ಸಿಗುವ ಸಾಧ್ಯತೆಗಳಿವೆ. ಪ್ರಸ್ತುತ ಹೊಳಲ್ಕೆರೆ ಪಟ್ಟಣದಲ್ಲಿರುವ ಡಾಲ್ಮೆನ್ ಸಿಸ್ಟ್ ಸಮಾಧಿಯು ಉತ್ತರಾಭಿ ಮುಖವಾಗಿರುವುದು ಜಿಲ್ಲೆಯಲ್ಲಿ ವಿಶೇಷ.

ಮಿಂಚೇರಿಗುಡ್ಡ:

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿಗೆ ಸೇರಿದ ಗ್ರಾಮವೇ ಮಿಂಚೇರಿ ಗುಡ್ಡ. ಸಿರಿಗೆರೆಯಿಂದ ಸಾಸಲು ಗ್ರಾಮಕ್ಕೆ ಹೋಗುವಾಗ ಮೆದಕೇರಿಪುರದಿಂದ

೨ಕಿ.ಮೀ. ದೂರದಲ್ಲಿ ರಸ್ತೆಯ ಬಲಭಾಗಕ್ಕೆ ಬೃಹತ್ ಶಿಲಾಯುಗದ ಸಮಾಧಿಗಳು ಕಂಡು ಬಂದಿವೆ. ಈ ಸಮಾಧಿನೆಲೆಗೆ ಸ್ಥಳೀಯರು ಗಾದ್ರಿಪಾಲನಾಯಕನ ಸಮಾಧಿಗಳೆಂದು ಕರೆಯುತ್ತಿರುವುದು ಐತಿಹ್ಯ. ಇದೇ ರೀತಿಯಾಗಿ ಸಮಾಧಿ ನೆಲೆಗಳಿಗೆ ಜುಂಜಪ್ಪನ ಮಟ್ಟಿ, ದೊಣೆ ಕರಿಯಮ್ಮ, ಪಾಂಡವರ ಮನೆ ಎಂದು ಕರೆಯುತ್ತಿರುವುದು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರಸ್ತುತ ಕಾಣುತ್ತೇವೆ. ಬೆಳಗಟ್ಟದಲ್ಲಿರುವ ಶಿಲಾಸಮಾಧಿಗಳ ರೀತಿ ವೃತ್ತಾಕಾರವಾಗಿ ಓರೆಯಾಗಿ ಕಲ್ಲುಚಕ್ಕೆಗಳನ್ನು ಹೂಳಿದ್ದಾರೆ. ಸಮಾಧಿಯ ಮಧ್ಯಭಾಗ ೧೫ ಅಡಿ ಉದ್ದ, ೨ ಅಡಿ ಅಗಲದ ಬಂಡೆಯನ್ನು ದಕ್ಷಿಣಾಭಿಮುಖವಾಗಿ ಹಾಕಿಸಿದ್ದಾರೆ. ಈ ಶಿಲಾಸಮಾಧಿಗಳನ್ನು ಕ್ಷೇತ್ರ ಕಾರ್ಯದಲ್ಲಿ ಹೊಸದಾಗಿ ಶೋಧಗೊಂಡಿರುವುದು ಗಮನಾರ್ಹ.

ಗೂಳಿಹೊಸಳ್ಳಿ:

ಹೊಳಲ್ಕೆರೆ ತಾಲೂಕು ಕೇಂದ್ರದಿಂದ ೨೩ಕಿ.ಮೀ. ದೂರದಲ್ಲಿರುವ ಗ್ರಾಮವೇ ಗೂಳಿಹೊಸಳ್ಳಿ[೬೩]. ಹೊಸದುರ್ಗ ಗಡಿಭಾಗವಾಗಿರುವ ಈ ಗ್ರಾಮಕ್ಕೆ ಚಿತ್ರಹಳ್ಳಿ ಗೇಟ್‌ನಿಂದಲೂ ಬರಬಹುದು. ಈ ಹಿಂದೆ ಗ್ರಾಮಕ್ಕೆ ನಂದಿನೂತನಪುರ ಎಂದು ಕರೆಯುತ್ತಿದ್ದರು[೬೪]. ಇದು ನಂತರದ ದಿನಗಳಲ್ಲಿ ಗೂಳಿಹೊಸಳ್ಳಿ ಎಂದು ಬದಲಾಗಿದೆ. ಗ್ರಾಮದ ಪಕ್ಕದಲ್ಲಿ ಗುಂಡಿಹಳ್ಳವು ಹರಿದು ವಿ.ವಿ.ಸಾಗರಕ್ಕೆ ತಲುಪುತ್ತದೆ. ಹಳ್ಳದ ದಂಡೆಯ ಮೇಲೆ ಈ ಹಿಂದೆ ಬೃಹತ್ ಶಿಲಾಯುಗದ ಸಮಾಧಿಗಳು ಶೋಧ ಗೊಂಡಿದ್ದವು[೬೫]. ಸಮಾಧಿಗಳು ವೃತ್ತಾಕಾರವಾಗಿದ್ದು, ೧೫ರಿಂದ ೩೦ ಅಡಿ ವ್ಯಾಸದಲ್ಲಿ ರಚಿತಗೊಂಡಿವೆ.

ಸಿರಾಪ್ಪನಹಳ್ಳಿ:

ಹೊಳಲ್ಕೆರೆ ತಾಲೂಕಿನ ಗ್ರಾಮವಾಗಿರುವ ಸಿರಾಪ್ಪನಹಳ್ಳಿ ಐತಿಹಾಸಿಕ ಕೇಂದ್ರ. ಈ ಹಿಂದೆ ಶಿರಾಪ್ಪನಹಳ್ಳಿ ಎಂದು ಕರೆಯಲಾಗುತ್ತಿತ್ತು[೬೬]. ಗ್ರಾಮದ ಪಕ್ಕದಲ್ಲಿ ಪಾಂಡವರಕಲ್ಲು ಎಂದು ಕರೆಯುವ ಬೃಹತ್ ಶಿಲಾಯುಗದ ೫೦ಕ್ಕೂ ಶಿಲಾಗೋರಿಗಳು ಕಾಣಸಿಗುತ್ತವೆ[೬೭]. ಪ್ರಸ್ತುತ ಶಿಲಾಗೋರಿಗಳನ್ನು ಗಮನಿಸಿದಾಗ ಸಹಜವಾದ ಕಲ್ಲು ಗುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿದ್ದು, ಮತ್ತೊಂದು ಕಲ್ಲು ಬಂಡೆಗಳನ್ನು ವೃತ್ತಕಾರವಾಗಿ ಜೋಡಿಸಲ್ಪಟ್ಟ ಸಮಾಧಿಗಳು ವಿಶೇಷ. ಬೃಹತ್ ಶಿಲಾಗೋರಿಗಳು ಸಿಸ್ಟ್ ಅಥವಾ ಫಿಟ್ ಸರ್ಕಲ್ ಮಾದರಿಯಲ್ಲಿವೆ. ೩೦ರಿಂದ ೫೦ ಅಡಿ ವ್ಯಾಸವಾಗಿರುವ ಶಿಲಾಗೋರಿಗಳು ನೆಲಮಟ್ಟದಿಂದ ೧ಅಡಿ ಎತ್ತರದಲ್ಲಿವೆ. ಮಧ್ಯಭಾಗದಲ್ಲಿ

ಮಣ್ಣಿನ ದಿನ್ನೆಯಿದ್ದು, ಸುತ್ತಲೂ ಕಲ್ಲುಗಳನ್ನು ಜೋಡಿಸಲಾಗಿರುವುದು. ಈ ಹಿಂದೆ ಪ್ರಸ್ತುತ ಗ್ರಾಮ ಪ್ರದೇಶ ಬೃಹತ್ ಶಿಲಾಯುಗದಲ್ಲಿ ವಸತಿ ನೆಲೆಯಾಗಿದ್ದಿರಬಹುದೆಂದು ಅಲ್ಲಿನ ಪ್ರಮುಖ ಆಧಾರಗಳು ತಿಳಿಸುತ್ತವೆ.

ಗಟ್ಟಿಹೊಸಹಳ್ಳಿ:

ಹೊಳಲ್ಕೆರೆಯಿಂದ ೧೬ಕಿ.ಮೀ ದೂರದಲ್ಲಿರುವ ಗ್ರಾಮವೇ ಗಟ್ಟಿಹೊಸಹಳ್ಳಿ[೬೮]. ಗ್ರಾಮದಲ್ಲಿ ಹಳ್ಳ ಹಾದುಹೋಗಿದ್ದು, ಹಳ್ಳದ ದಂಡೆಯ ಮೇಲೆ ಕಿಟ್ಟಗಳ ರಾಶಿಯನ್ನು ಕಾಣಬಹುದು. ಸ್ಥಳೀಯರು ಮನೆ ನಿರ್ಮಾಣಕ್ಕಾಗಿ ಅಡಿಪಾಯವನ್ನು ತೆಗೆದಿದ್ದು, ರಾಶಿಮಾಡಿದ ಮಣ್ಣಿನಲ್ಲಿ ಕಿಟ್ಟಗಳಿವೆ. ಕಿಟ್ಟಗಳಲ್ಲಿ ಕಬ್ಬಿಣ ಹಾಗೂ ಮ್ಯಾಂಗನೀಸ್ ಖನಿಜಾಂಶಗಳು ಮುಖ್ಯವಾಗಿವೆ. ಬೃಹತ್ ಪ್ರಮಾಣದಲ್ಲಿ ಹರಡಿರುವ ಕಿಟ್ಟಗಳ ರಾಶಿಯಲ್ಲಿ ೨ಅಡಿಯಷ್ಟು ಮ್ಯಾಂಗನೀಸ್ ಕಿಟ್ಟಗಳ ಸ್ತರವಿದ್ದು, ಇದರ ಮೇಲೆ ೨ಅಡಿಯಷ್ಟು ಕಬ್ಬಿಣದ ಕಿಟ್ಟಗಳು ಇರುವುದನ್ನು ಗುರುತಿಸಲಾಗಿದೆ. ಈ ನೆಲೆಯು ಬೃಹತ್ ಶಿಲಾಯುಗದ ಕಾಲದಲ್ಲಿ ಆಯುಧಗಳು ಹಾಗೂ ಅಲಂಕಾರಿಕ ವಸ್ತುಗಳನ್ನು ತಯಾರಿಸುವ ಕೈಗಾರಿಕಾ ಪ್ರದೇಶವಾಗಿತ್ತು. ಇದಕ್ಕೆ ಪೂರಕವಾಗಿ ಮೂಸೆಗಳು, ಮಡಕೆ ಚೂರುಗಳು ಮತ್ತು ಸಮೀಪದಲ್ಲಿರುವ ವಸತಿ ನೆಲೆಯು ಸಾಕ್ಷಿ. ಬೃಹತ್ ಶಿಲಾಯುಗದ ಕಾಲದಲ್ಲಿ ಅಲ್ಲದೇ ಇತಿಹಾಸ ಕಾಲದಲ್ಲಿಯೂ ಕೈಗಾರಿಕಾ ಪ್ರದೇಶವಾಗಿ ಮುಂದುವರಿದಿತ್ತೆಂದು ಸಿಕ್ಕಂತಹ ಆಧಾರಗಳು ಹೇಳುತ್ತವೆ. ಮೂಸೆಗಳು ಯಾದಲಗಟ್ಟೆಯಲ್ಲಿ ದೊರೆತ ಮೂಸೆಗಳಿಗೆ ಹೋಲುತ್ತವೆ. ಕಿಟ್ಟಗಳನ್ನು ಮಡಕೆ ಸುಡಲು ಬಳಸಿರುವ ಸಾಧ್ಯತೆಗಳಿವೆ. ಒಟ್ಟಿನಲ್ಲಿ ಈ ಗ್ರಾಮದಲ್ಲಿನ ನೆಲೆಯು ಬೃಹತ್ ಶಿಲಾಯುಗ ಕಾಲದಿಂದ ಇತಿಹಾಸದ ಕಾಲದವರೆಗೆ ಗಮನಸೆಳೆದಿದೆ.

ಕೊಡಗವಳ್ಳಿ:

ಹೊಳಲ್ಕೆರೆ ತಾಲೂಕಿನ ಚಿಕ್ಕಜಾಜೂರು ಸಮೀಪವಿರುವ ಗ್ರಾಮವೇ ಕೊಡಗವಳ್ಳಿ. ಈ ಗ್ರಾಮದಲ್ಲಿ ಸ್ಥಳಿಯರಾದ ನಾಗರಜ್ ಜೊತೆಗೆ ಕೇತ್ರಕಾರ್ಯ ಕೈಗೊಂಡಿದ್ದಾಗ ನವಶಿಲಾಯುಗದ ಕಲ್ಲಿನ ಕೊಡಲಿಗಳು ಇರುವ ಸ್ಥಳ ಶೋಧಗೊಂಡಿತು. ನವಶಿಲಾಯುಗದ ಕಲ್ಲಿನ ಕೊಡಲಿಗಳು ಕೆರೆಕೋಡಿಯಮ್ಮ ಗುಡಿಯಲ್ಲಿ ಪೂಜೆಗೆ ಒಳಪಟ್ಟಿವೆ. ಈ ಗುಡಿ ಪರಿಸರದಲ್ಲಿ ಹಾಳೂರು ಎಂಬ ನೆಲೆಯಿದೆ. ಇಲ್ಲಿಂದ ನಯವಾದ ಕಲ್ಲಿನ ಕೊಡಲಿಗಳನ್ನು ಪೂಜೆಗೆ ತಂದಿಟ್ಟಿರುವ ಸಾಧ್ಯತೆಗಳಿವೆ. ಇದೇ ರೀತಿ ಜಿಲ್ಲಾ ಪರಿಸರದಲ್ಲಿ ಮಾರಮ್ಮ, ಗಾಮಜ್ಜೆ ಮೊದಲಾದ ಹೆಸರಿನಿಂದ ಕರೆಯುವ ಗುಡಿಯಲ್ಲಿ

ಕಲ್ಲಿನ ಕೊಡಲಿಗಳು ಪೂಜೆಗೆ ಒಳಪಟ್ಟಿವೆ. ಪ್ರಸ್ತುತ ಗುಡಿಯಲ್ಲಿರುವ ಕಲ್ಲಿನ ಸಮೂಹದಲ್ಲಿ ನಾಲ್ಕು ಕಲ್ಲುಗಳು ನವಶಿಲಾಯುಗದಲ್ಲಿ ಬಳಕೆಗೊಂಡಿವೆ. ತ್ರಿಭುಜಾಕಾರದಲ್ಲಿರುವ ಕಲ್ಲಿನ ಕೊಡಲಿಗಳು ೪ ರಿಂದ ೭ ಇಂಚು ಎತ್ತರ ಮತ್ತು ೨ ರಿಂದ ೪ ಇಂಚು ಅಗಲವಾಗಿದ್ದು, ಸಂಶೋಧಕರನ್ನು ಗಮನಸೆಳೆಯುತ್ತವೆ. ಈ ಮೂಲಕ ಕೊಡಗವಳ್ಳಿ ಪರಿಸರದಲ್ಲಿ ನವಶಿಲಾಯುಗದ ಮಾನವರು ಚಟುವಟಿಕೆಯಲ್ಲಿದ್ದರೆಂದು ನಿರ್ಧರಿಸಬಹುದು.

ಚಿಕ್ಕಜಾಜೂರು:

ಹೊಳಲ್ಕೆರೆ ತಾಲೂಕಿನ ಚಿಕ್ಕಜಾಜೂರು ಹೋಬಳಿ ಕೇಂದ್ರವಾಗಿದೆ. ಚಿಕ್ಕಂದವಾಡಿ ಮಾರ್ಗದಲ್ಲಿ ಜಾಜೂರು ಕಾವಲ್ ಪ್ರದೇಶವಿದೆ. ಕಾವಲ್ ಮಾರ್ಗದ ರೈಲ್ವೆ ಟ್ರ್ಯಾಕ್ ಪಕ್ಕದಲ್ಲಿ ಲಿಂಗಮುದ್ರೆ ಎಂದು ಕರೆಯುವ ನಿಲುಸುಗಲ್ಲಿದೆ. ಈ ನಿಲುಸುಗಲ್ಲನ್ನು ಕೊಡಗವಳ್ಳಿ ನಾಗರಾಜ್ ಜೊತೆಗೂಡಿ ಶೋಧಿಸಿದ್ದೇವೆ. ಎರಡು ಅಡಿ ಅಗಲದ ನಾಲ್ಕು ಅಡಿ ಎತ್ತರದ ಗ್ರಾನೈಟ್ ಬಂಡೆಯನ್ನು ಹೂಳಿದ್ದಾರೆ. ಈ ನಿಲುಸುಗಲ್ಲು ಬೃಹತ್ ಶಿಲಾಯುಗದ ಸಮಾಧಿಯಾಗಿದೆ. ಇದೇ ರೀತಿ ರಾಮಗಿರಿಯಲ್ಲಿ ಕಾಣಬಹುದು. ಜಿಲ್ಲೆಯಲ್ಲಿ ನಿಲುಸುಗಲ್ಲು ಸಮಾಧಿಗಳಿಗೆ ಆನೆಕಟ್ಟುವ ಕಲ್ಲು, ನಿಲುಗಲ್ಲು ಮೊದಲಾದ ಹೆಸರಿನಿಂದ ಕರೆಯುತ್ತಿದ್ದಾರೆ. ಪ್ರಸ್ತುತ ಮಳೆ ಬಾರದಿದ್ದಾಗ ಕಲ್ಲಿಗೆ ನೀರನ್ನು ಹಾಕುವ ಪದ್ಧತಿ ಸ್ಥಳಿಯವಾಗಿ ಪ್ರಚಲಿತದಲ್ಲಿದೆ. ನಿಲುಸುಗಲ್ಲು ಸಮಾಧಿಯಿರುವುದರಿಂದ ಬೃಹತ್ ಶಿಲಾಯುಗದಲ್ಲಿ ಜಾಜೂರು ಪರಿಸರವು ಪ್ರಮುಖ ನೆಲೆಯಾಗಿತ್ತೆಂದು ಹೇಳಬಹುದು.

ಚಿಕ್ಕಂದವಾಡಿ:

ಹೊಳಲ್ಕೆರೆ ತಾಲೂಕಿನ ಚಿಕ್ಕಜಾಜೂರಿಗೆ ಸಮೀಪದಲ್ಲಿ ಚಿಕ್ಕಂದವಾಡಿ ಗ್ರಾಮವಿದೆ. ಈ ಗ್ರಾಮದಲ್ಲಿನ ಹಾಳೂರು ಆಂಜನೇಯಗಡಿಯ ಹತ್ತಿರ ನಿಲುಸುಗಲ್ಲು ಸಮಾಧಿಯಿದೆ. ಈ ಸಮಾಧಿಯನ್ನು ಕೊಡಗವಳ್ಳಿ ನಾಗರಾಜ್ ಅವರೊಂದಿಗೆ ಪತ್ತೆಮಾಡಲಾಗಿದೆ. ನಿಲುಸುಗಲ್ಲನ್ನು ಸ್ಥಳಿಯವಾಗಿ ಒಂಟಿ ಕಲ್‌ಕಂಬ ಎಂದು ಕರೆಯುತ್ತಿದ್ದಾರೆ. ಕಂಬವು ಐದು ಅಡಿ ಎತ್ತರದಿಂದ ಕೂಡಿದೆ. ಇದೇ ರೀತಿ ನಿಲುಸುಗಲ್ಲು ಸಮಾಧಿಯನ್ನು ಜಾಜೂರು ಕಾವಲ್, ರಾಮಗಿರಿ ಮೊದಲಾದ ಕಡೆಗಳಲ್ಲಿ ಕಂಡುಬಂದಿವೆ. ಪ್ರಸ್ತುತ ನಿಲುಸುಗಲ್ಲಿನ ಸಮೀಪವೇ ಹಾಳೂರಿದ್ದು, ಬೃಹತ್ ಶಿಲಾಯುಗದಿಂದ ವಾಸಮಾಡಿರುವುದಕ್ಕೆ ಆಧಾರಗಳು ಸಿಗುತ್ತವೆ. ಆದ್ದರಿಂದ ಚಿಕ್ಕದಂವಾಡಿ ಗ್ರಾಮ ಪರಿಸರದಲ್ಲಿ ಬೃಹತ್ ಶಿಲಾಯುಗದ ಜನರು ವಾಸವಾಗಿದ್ದರೆಂದು ನಿರ್ಧರಿಸಲಾಗಿದೆ.

ಜಾನಕಲ್ಲು:

ಹೊಸದುರ್ಗ ತಾಲೂಕಿನ ಗ್ರಾಮವಾದ ಜಾನಕಲ್ಲು ಗ್ರಾಮಕ್ಕೆ ಹೊಂದಿಕೊಂಡಂತೆ ಗ್ರಾನೈಟ್ ಕಲ್ಲುಬಂಡೆಯ ಬೆಟ್ಟದ ಸಾಲನ್ನು ಕಾಣಬಹುದು. ಈ ಬೆಟ್ಟದ ಪರಿಸರದಲ್ಲಿ ಈ ಹಿಂದೆ ಎಂ.ಶೇಷಾದ್ರಿಯವರು ಆದಿ ಹಳೆಶಿಲಾಯುಗದ ಆಯುಧವನ್ನು ಶೋಧಿಸಿದ್ದರು[೭೯]. ತರುವಾಯ ಬೆಟ್ಟದ ಹಿಂಭಾಗದಲ್ಲಿರುವ ನಾಯಕರಹಟ್ಟಿಯಲ್ಲಿ ಹಾಗೂ ತಪ್ಪಲಿನಲ್ಲಿ ನಿಲುಸುಗಲ್ಲು ಸಮಾಧಿ ಶೋಧಗೊಂಡಿವೆ[೮೦]. ಈ ಎರಡು ನಿಲುಸುಗಲ್ಲುಗಳು ೨೦೦ಮೀಟರ್ ಅಂತರದಲ್ಲಿದ್ದು, ಪೂರ್ವಾಭಿಮುಖವಾಗಿವೆ. ಗ್ರಾನೈಟ್ ಬಂಡೆಯಿಂದ ರಚಿತಗೊಂಡ ನಿಲುಸುಗಲ್ಲು ೧೫ಅಡಿ ಎತ್ತರ, ೫ಅಡಿ ಅಗಲದಷ್ಟಿದ್ದು, ಸ್ಥಳೀಯರು ಆನೆ ಕಟ್ಟುವ ಕಲ್ಲುಗಳೆಂದು ಕರೆಯುತ್ತಿದ್ದಾರೆ. ಈ ನಿಲುಸುಗಲ್ಲನ್ನು ಗಮನಿಸಿದಾಗ ಯಾವುದೇ ರೀತಿಯ ಕತ್ತರಿಸಿದ ಲಕ್ಷಣಗಳಿಲ್ಲದೆ ಸ್ವಾಭಾವಿಕವಾಗಿದೆ. ನಿಲುಸುಗಲ್ಲು ಸುತ್ತಮುತ್ತ ಸೂಕ್ಷ್ಮ ಶಿಲಾಯುಗದ ಸೂಕ್ಷ್ಮ ಉಪಕರಣಗಳು ಶೋಧಗೊಂಡಿದ್ದು, ಈ ಗ್ರಾಮದ ಪರಿಸರವು ಆದಿ ಹಳೆಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಪ್ರಮುಖ ಚಟುವಟಿಕೆಯ ಕೇಂದ್ರವಾಗಿತ್ತೆಂದು ಹೇಳಬಹುದು.

ದೊಡ್ಡಕಿಟ್ಟದಾಳು:

ಪ್ರಸ್ತುತ ತಾಲೂಕಿನ ದೊಡ್ಡ ಕಿಟ್ಟದಾಳು ಗ್ರಾಮವು ಬೃಹತ್ ಶಿಲಾಯುಗ ಕಾಲದಲ್ಲಿ ಆಯುಧ ತಯಾರಿಕೆಯ ಕೇಂದ್ರವಾಗಿತ್ತು. ಗ್ರಾಮದ ಒಳಭಾಗ ಹಳ್ಳದ ದಂಡೆಯ ಮೇಲೆ ದೊಡ್ಡ ಗಾತ್ರದ ಕಬ್ಬಿಣದ ಕಿಟ್ಟಗಳು ಕಂಡುಬಂದಿವೆ. ಪಕ್ಕದ ಸಣ್ಣ ಕಿಟ್ಟದಾಳಿನಲ್ಲಿಯೂ ಕಿಟ್ಟಗಳನ್ನು ಕಾಣಬಹುದು. ಕಬ್ಬಿಣದ ಕಿಟ್ಟಗಳ ಜೊತೆಗೆ ಮಡಕೆ ಚೂರುಗಳು ಹಾಗೂ ಶಿಲಾಸಮಾಧಿಗಳು ಗ್ರಾಮ ಪರಿಸರದಲ್ಲಿ ದೊರಕಿರುವುದರಿಂದ ಬೃಹತ್ ಶಿಲಾಯುಗದ ಮಹತ್ವದ ನೆಲೆಯಿದು[೮೧]. ಶಿಲಾಗೋರಿಗಳು ವೃತ್ತಾಕಾರವಾಗಿದ್ದು, ೩೦ಅಡಿ ವ್ಯಾಸವನ್ನು ಹೊಂದಿವೆ. ಕಬ್ಬಿಣದ ಕಿಟ್ಟಗಳು ಸಿಗುವ ಕಡೆಯಿಂದ ಉತ್ತರಕ್ಕೆ ಹಾಳೂರು, ದಕ್ಷಿಣಕ್ಕೆ ಬೃಹತ್ ಸಮಾಧಿಗಳಿರುವುದು ವಿಶೇಷ ಸಂಗತಿ.

ದುಗ್ಗಾವರ:

ಹೊಸದುರ್ಗ ತಾಲೂಕಿನ ಗ್ರಾಮವಾಗಿರುವ ದುಗ್ಗಾವರಕ್ಕೆ ತಾಳ್ಯದಿಂದ ಹೋಗಬಹುದು. ಗ್ರಾಮ ಪರಿಸರದಲ್ಲಿ ಜಿನಗಿಹಳ್ಳವು ಹಾದು ಹೋಗಿದ್ದು, ಈ ಹಳ್ಳದ ದಂಡೆಯ ಮೇಲೆ ನವ ಶಿಲಾಯುಗದ ಕಲ್ಲಿನ ಕೊಡಲಿ ದೊರೆತಿವೆ. ಈ ಶಿಲಾಕೊಡಲಿಯು ತ್ರಿಭುಜಾಕೃತಿಯಲ್ಲಿ ೧೯ಸೆ.ಮೀ ಉದ್ದ, ೪ಸೆ.ಮೀ ಅಗಲವಾಗಿದೆ[೮೨].

ಇದೇ ರೀತಿಯಾಗಿ ಶಿಲಾಕೊಡಲಿಗಳು ತಣಿಗೆಕಲ್ ಗವಿ ಒಳಭಾಗದಲ್ಲಿ (೧೬ಸೆ.ಮೀ ಉದ್ದ, ೬ಸೆ.ಮೀ ಅಗಲ)[೭೩], ಕಿಟ್ಬದಾಳ್‌ನಲ್ಲಿ (೧೮ಸೆ.ಮೀ ಉದ್ದ, ೪ಸೆ.ಮೀ ಅಗಲ)[೭೪], ಹಿಂಡೆದೇವರಹಟ್ಟಿಯಲ್ಲಿ ೧೯ಸೆ.ಮೀ ಉದ್ದ, ೪.೫ಸೆ.ಮೀ ಅಗಲದ ಶಿಲಾಕೊಡಲಿಗಳು ದೊರಕಿರುವುದು ಮಹತ್ವವದ ವಿಚಾರ[೭೫].

ಲಂಬಾಣಿಹಟ್ಟಿ:

ಹೊಸದುರ್ಗ ತಾಲೂಕಿನ ಗ್ರಾಮವೇ ಲಂಬಾಣಿಹಟ್ಟಿ. ಈ ಪರಿಸರದಲ್ಲಿ ಸೂಕ್ಷ್ಮ ಶಿಲಾಯುಗದ ೬೫ಕ್ಕೂ ಹೆಚ್ಚು ಸೂಕ್ಷ್ಮ ಆಯುಧಗಳು ದೊರಕಿರುವುದು ಗಮನೀಯವಾದದ್ದು[೭೬]. ಈ ಸೂಕ್ಷ್ಮ ಆಯುಧಗಳು ಚರ್ಟ್, ಅಗೇಟ್, ಜಾಸ್ಪರ್ ಶಿಲೆಗಳಿಂದ ತಯಾರುಗೊಂಡತವುಗಳು. ಈ ಎಲ್ಲಾ ಆಯುಧಗಳು ಪ್ರಸ್ತುತ ಅಧ್ಯಯನಕ್ಕೆ ಮುಖ್ಯವೆನಿಸಿವೆ.

ಬ್ರಹ್ಮಗಿರಿ:

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ಸಿದ್ದಾಪುರ ಹತ್ತಿರ ಇರುವ ಕಲ್ಲು ಬೆಟ್ಟವೆ ಬ್ರಹ್ಮಗಿರಿ. ಬ್ರಹ್ಮಗಿರಿ ಆಸುಪಾಸಿನಲ್ಲಿ ಪ್ರಾಗಿತಿಹಾಸದಿಂದ ಇತಿಹಾಸ ಆರಂಭದ ಕಾಲದವರೆಗೆ ಅವಶೇಷಗಳು ಕಾಣಸಿಗುತ್ತವೆ. ಈ ಹಿನ್ನೆಲೆಯಲ್ಲಿ ಬ್ರಹ್ಮಗಿರಿ ನೆಲೆಯು ನಾಗರಿಕತೆಯು ಉನ್ನತ ಹಂತವನ್ನು ಮುಟ್ಟಿತ್ತೆಂದು ಹೇಳಬಹುದು. ಬೆಟ್ಟದ ಪೂರ್ವ ತಪ್ಪಲಿನಲ್ಲಿ ರೊಪ್ಪ ಗ್ರಾಮದ ಸಮೀಪವಿರುವುದೇ ವಸತಿನೆಲೆ. ಈ ವಸತಿನೆಲೆಯು ೧೦ ಎಕರೆಗಳಷ್ಟು ವಿಸ್ತಾರವಾಗಿದ್ದು, ಬೆಟ್ಟದ ಇಳಿಜಾರಿನಲ್ಲಿದೆ. ಬೆಟ್ಟದಿಂದ ಬಂದಂತಹ ಜೋರಾದ ನೀರು ವಸತಿನೆಲೆಯನ್ನು ಹಾಳು ಮಾಡಿರುವ ಕಾರಣದಿಂದ ಕೆಳಗಿನ ಹೊಲಗಳಲ್ಲಿ ಪ್ರಾಗಿತಿಹಾಸದ ಕುರುಹುಗಳು ಹರಡಿವೆ. ಭೂಮೇಲ್ಮೈಯಲ್ಲಿ ಕಬ್ಬಿಣದ ಕಿಟ್ಟಗಳು, ಕಪ್ಪು ಮತ್ತು ಕೆಂಪು ಬಣ್ಣದ ಮಡಕೆ ಚೂರುಗಳು ತಿಳಿ ಕೆಂಪು, ತಿಳಿ ಕಂದು ಬಣ್ಣದ ಮಡಕೆ ಚೂರುಗಳು, ಮಣ್ಣಿನ ಬಿಲ್ಲೆಗಳು, ಮಣ್ಣಿನ ಮಣಿಗಳು, ಮೂಳೆಗಳು, ಉಜ್ಜುವ ಕಲ್ಲು, ಕವಣೆ ಕಲ್ಲು, ಕಲ್ಲಿನ ಬಿಲ್ಲೆಗಳು, ಮುರಿದ ನಯಗೊಳಿಸಿದ ಕಲ್ಲಿನ ಕೊಡಲಿ ಹೀಗೆ ಮೊದಲಾದ ಅವಶೇಷಗಳು ದೊರಕಿರುತ್ತವೆ. ಈ ಎಲ್ಲಾ ಅವಶೇಷಗಳು ಹಾಳಾದ ಸ್ಥಿತಿಯಲ್ಲಿವೆ. ಒಂದೇ ನೆಲೆಯಲ್ಲಿ ವಿವಿಧ ಕಾಲಘಟ್ಟದ ಜನರು ವಾಸವಾಗಿದ್ದರ ಪರಿಣಾಮ ಅವಶೇಷಗಳು ಹಾಳಾಗಲು ಹಾಗೂ ಮಿಶ್ರಣಗೊಳ್ಳಲು ಕಾರಣ. ಬೆಟ್ಟದ ತಪ್ಪಲಿನಲ್ಲಿ ರೊಪ್ಪ ಗ್ರಾಮಕ್ಕೆ ಹೋಗುವಾಗ ಬಲಭಾಗಕ್ಕೆ ನೀರು ಸಂಗ್ರಹ ಕುಂಟೆಯಿದೆ. ಬೆಟ್ಟಗಳ ನಡುವೆ ಮತ್ತೊಂದು ನೀರು

ಸಂಗ್ರಹಗೊಳ್ಳುವ ಹುಲಿಕುಂಟೆ ಇರುವುದು. ಈ ಎರಡು ನೀರಿನ ಸಂಗ್ರಹಗಳು ಪ್ರಾಗಿತಿಹಾಸ ಕಾಲದಲ್ಲಿ ನೀರನ್ನು ಒದಗಿಸುತ್ತಿರಬಹುದು. ಅಲ್ಲದೆ ಸಮೀಪದಲ್ಲಿ ಜಿನಗಿಹಳ್ಳ ಇರುವುದರಿಂದ ನೀರಿಗೆ ಸಮಸ್ಯೆಯಾಗಿರಲು ಸಾಧ್ಯವಿಲ್ಲ. ಬಿಸಿಲು ಮಳೆಯಿಂದ ದೇಹವನ್ನು ರಕ್ಷಿಸಿಕೊಳ್ಳಲು ಬೆಟ್ಟವು ಸಹಕಾರಿಯಾಗಿರಬೇಕು. ಬೆಟ್ಟಗಳ ನಡುವೆ ಕಲ್ಲಿನ ಆಸರೆಗಳಲ್ಲಿ ವರ್ಣಚಿತ್ರಗಳನ್ನು ಕಾಣಬಹುದು. ಬೆಟ್ಟದ ತಪ್ಪಲಿನಲ್ಲಿ ಕಲ್ಲು ಗುಂಡುಗಳಿರುವುದರಿಂದ ಬೃಹತ್ ಶಿಲಾಯುಗದಲ್ಲಿ ಶಿಲಾ ಸಮಾಧಿಗಳನ್ನು ರಚಿಸಲು ಸಾಧ್ಯವಾಗಿರುವುದು. ವಸತಿನೆಲೆಯ ಪೂರ್ವಕ್ಕೆ ಹೊಲಗಳಲ್ಲಿ ಶಿಲಾಸಮಾಧಿಗಳು ಕಾಣಸಿಗುತ್ತವೆ. ಕಂಡುಬಂದಿರುವ ಶಿಲಾಸಮಾಧಿಗಳಲ್ಲಿ ಸಿಸ್ಟ್ ಸಮಾಧಿ, ಸಿಸ್ಟ್ ಸರ್ಕಲ್ ಸಮಾಧಿ, ನಿಲುಸುಗಲ್ಲು ಸಮಾಧಿ, ಪಿಟ್ ಸಮಾಧಿಗಳು ಪ್ರಮುಖವು. ಪ್ರಸ್ತುತ ೩೦ ಸಮಾಧಿಗಳನ್ನು ಮಾತ್ರ ಕಾಣಬಹುದಾಗಿದ್ದು, ಮುಂದಿನ ದಿನಗಳಲ್ಲಿ ನಾಶವಾಗುವ ಸಾಧ್ಯತೆಗಳಿವೆ. ಎಲ್ಲಾ ಸಮಾಧಿಗಳು ಪೂರ್ವಾಭಿಮುಖವಾಗಿವೆ. ಸಿಸ್ಟ್ ಸಮಾಧಿಯು ೬x೩ಅಡಿ ಅಗಲದಲ್ಲಿ ನಿರ್ಮಿತಿಗೊಂಡಿದ್ದು, ಗ್ರಾನೈಟ್ ಬಂಡೆಗಳನ್ನು ಹೂಳಿರುವುದು ಕಾಣಬಹುದು. ನೆಲದಿಂದ ಬಂಡೆಯ ಎತ್ತರ ಕೇವಲ ೨ ಅಡಿ ಮಾತ್ರ. ಬೇರೆ ರಾಷ್ಟ್ರಗಳಲ್ಲಿ ದೊರೆತ ಸಿಸ್ಟ್ ಸಮಾಧಿಗಳಿಗೆ ಹೋಲಿಸುವುದಾದರೆ ಚಿತ್ರದುರ್ಗ ಪರಿಸರದ ಅಥವಾ ದಕ್ಷಿಣ ಕರ್ನಾಟಕದ ಸಿಸ್ಟ್ ಸಮಾಧಿಗಳು ಚಿಕ್ಕವೆಂದು ಹೇಳಬಹುದು. ಒಂದೆರಡು ಸಿಸ್ಟ್ ಸಮಾಧಿಗಳು ಮಾತ್ರ ೧½x೧½ಅಡಿ ಅಳತೆಯಲ್ಲಿ ನಿರ್ಮಿತಗೊಂಡಿದ್ದು, ಬಹುಶಃ ಶಿಶುಗಳ ಸಮಾಧಿ ಇರಬೇಕು. ಹೀಗೆ ಹಲವು ರೀತಿಯ ಸಮಾಧಿಗಳು ಕಂಡು ಬಂದಿರುವುದರಿಂದ ಬೃಹತ್ ಶಿಲಾಯುಗದಲ್ಲಿ ಬ್ರಹ್ಮಗಿರಿಯು ಪ್ರಯೋಗ ಶಾಲೆಯಾಗಿತ್ತೆಂದು ನಿರ್ಧರಿಸಲಾಗುವುದು.

ಎಂ.ಎಚ್.ಕೃಷ್ಣ ೧೯೨೮-೨೯ರಲ್ಲಿ ಬ್ರಹ್ಮಗಿರಿಯ ನೆಲೆಯಲ್ಲಿ ಉತ್ಖನನ ಮಾಡಿದ್ದಾರೆ. ರೊಪ್ಪ ಎಂಬ ಗ್ರಾಮದ ಹತ್ತಿರ ತೋಡಿದ ಗುಂಡಿಯಲ್ಲಿ ೫ ಸ್ತರಗಳನ್ನು ಗುರುತಿಸಿದ್ದಲ್ಲದೆ, ರೊಪ್ಪಾಸಂಸ್ಕೃತಿಯೆಂದು ಕರೆದಿದ್ದಾರೆ[೬೭]. ಸೂಕ್ಷ್ಮ ಶಿಲಾಯುಗದಿಂದ ಶಾತವಾಹನರ ಕಾಲದ ಅವಶೇಷಗಳನ್ನು ಒಳಗೊಂಡಂತೆ ಚಾಲುಕ್ಯ ಕಾಲದವರೆಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಬ್ರಹ್ಮಗಿರಿ ನೆಲೆಯಲ್ಲಿ ಕಾಣಬಹುದು. ೧೯೪೭ರಲ್ಲಿ ಮಾರ್ಟಿಮರ್ ವಿಲ್ಹರ್ ಬ್ರಹ್ಮಗಿರಿ ನೆಲೆಯಲ್ಲಿ ೭ ಗುಂಡಿ, ೧೦ ಬೃಹತ್ ಶಿಲಾಯುಗ ಗೋರಿಗಳನ್ನು ಅಗೆದಿದ್ದಾರೆ. ಪ್ರಸ್ತುತ ೨೧ನೇ ಗುಂಡಿಯಲ್ಲಿ ೪ ಸ್ತರಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ಗಮನಿಸಿ ವಿಶ್ಲೇಷಿಸಲಾಗಿದೆ[೬೮]. ಕೆಳಗಿನಿಂದ ಮೊದಲನೆಯ

ಸ್ತರವು ನೂತನ ಶಿಲಾಯುಗದ ಪೂರ್ವಭಾಗ, ನೂತನ ಶಿಲಾಯುಗದ ಉತ್ತರಭಾಗ, ಬೃಹತ್ ಶಿಲಾಯುಗ, ಕೊನೆಯದಾಗಿ ಇತಿಹಾಸ ಆರಂಭಕಾಲದ ಪ್ರಮುಖ ಸ್ತರಗಳಿವೆ. ಈ ೨೧ನೇ ಗುಂಡಿಯಲ್ಲಿ ೪ ಸ್ತರಗಳಲ್ಲಿ ಒಟ್ಟು ೧೯ ಪದರಗಳನ್ನು ಗುರುತಿಸಲಾಗಿರುವುದು[೭೯]. ಮೇಲಿನಿಂದ ೧ರಿಂದ ೬ರವರೆಗೆ ಇತಿಹಾಸ ಆರಂಭಕಾಲವೆಂದು ತಿಳಿಸಲಾಗಿದ್ದು, ಕಬ್ಬಿಣದ ಅವಶೇಷ, ಲೋಹದ ವಸ್ತುಗಳು, ದಂತದ ಬಳೆಗಳು, ಮಣಿಗಳು, ಬಿಳಿಬಣ್ಣದ ರೇಖಾಚಿತ್ರವುಳ್ಳ ಕಪ್ಪು ಮತ್ತು ಕೆಂಪು ಬಣ್ಣದ ಪಾತ್ರೆಗಳು ದೊರಕಿವೆ[೮೦]. ಈ ಪದರಗಳಲ್ಲಿ ಕಂಬದ ಕುಣಿ ಇರುವುದರಿಂದ ಕುಣಿಯನ್ನು ತೆಗೆಯುವಾಗ ಬೃಹತ್ ಶಿಲಾಯುಗದ ಕಬ್ಬಿಣದ ವಸ್ತುಗಳು ಇತಿಹಾಸ ಆರಂಭಕಾಲದ ಅವಶೇಷಗಳ ಜೊತೆಗೆ ಮಿಶ್ರಣಗೊಂಡಿರುವ ಸಾಧ್ಯತೆಗಳಿವೆ. ಆದ್ದರಿಂದ ಇತಿಹಾಸ ಆರಂಭಕಾಲದ ಜನರೊಂದಿಗೆ ಬೃಹತ್ ಶಿಲಾಯುಗದ ಜನರು ಜೊತೆಗಿದ್ದರೆಂದು ಹೇಳುವುದು ತಪ್ಪಾಗುತ್ತದೆ. ಅದರ ಬದಲಾಗಿ ಬೃಹತ್ ಶಿಲಾಯುಗದ ಸಂಸ್ಕೃತಿಯನ್ನು ಇತಿಹಾಸ ಆರಂಭಕಾಲದ ಜನರು ಅನುಸರಿಸಿರುವ ಸಾಧ್ಯತೆಗಳಿವೆಯೆಂದು ಹೇಳಬಹುದು. ೭ರಿಂದ ೮ರವರೆಗಿನ ಪದರಗಳಲ್ಲಿ ಇಟ್ಟಿಗೆ ಕಟ್ಟಡ, ನಾಣ್ಯ, ಚಿತ್ರದ ಪಾತ್ರೆಗಳು ದೊರಕಿರುವುದಿಲ್ಲ. ಬದಲಾಗಿ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳು, ಕಬ್ಬಿಣದ ವಸ್ತುಗಳು, ಎಲುಬುಗಳು ಕಂಡುಬಂದಿವೆ[೮೧]. ಆದ್ದರಿಂದ ಇತಿಹಾಸ ಆರಂಭಕಾಲಕ್ಕಿಂತ ಬೃಹತ್ ಶಿಲಾಯುಗವು ಭಿನ್ನವಾಗಿತ್ತೆಂದು ಖಚಿತಪಡಿಸಬಹುದು.

೯ರಿಂದ ೧೮ರವರೆಗಿನ ಪದರಿನಲ್ಲಿ ಕೈಯಿಂದ ಮಾಡಿದ ಬೂದು ಮಣ್ಣಿನ ಮಡಕೆಗಳು, ನಯಗೊಳಿಸಿದ ಕಲ್ಲಿನ ಕೊಡಲಿ, ತಾಮ್ರ ಮತ್ತು ಕಂಚಿನ ವಸ್ತುಗಳು, ಕಲ್ಲಿನ ಚಕ್ಕೆಗಳು ಕಂಡುಬಂದಿರುವುದರ ಜೊತೆಗೆ ಶವಕುಣಿಯಲ್ಲಿ ಮೃತ್‌ಪಾತ್ರೆಗಳನ್ನು ಗುರುತಿಸಿದ್ದಾರೆ. ಈ ಕೆಳಗಿನ ಪದರಗಳಲ್ಲಿ ಚಿತ್ರವುಳ್ಳ ಮಡಕೆ ಚೂರುಗಳು ದೊರಕಿದ್ದು, ಉಜ್ಜಿದ ಕೊಡಲಿ ಸಂಸ್ಕೃತಿಗಿಂತ ಪೂರ್ವದ್ದೆಂದು ತಿಳಿಸಲಾಗಿದೆ[೮೨]. ಈ ರೀತಿಯಾದ ಸ್ತರ ವಿಂಗಡಣೆಗಳ ಮೂಲಕ ಬ್ರಹ್ಮಗಿರಿ ನೆಲೆಯಲ್ಲಿ ಕೆಳಗಿನ ಸ್ತರದಿಂದ ಮೇಲಿನ ಸ್ತರದವರೆಗೂ ಗಮನಿಸಿದಾಗ ಎಂ.ಎಚ್.ಕೃಷ್ಣ ಗುರುತಿಸಿದ ಸೂಕ್ಷ್ಮ ಶಿಲಾಯುಗ ಸ್ತರದಿಂದ ಇತಿಹಾಸ ಆರಂಭಕಾಲದವರೆಗೂ ಪದರಗಳು ಕಾಣಸಿಗುತ್ತವೆ. ಮೇಲಿನಿಂದ ಒಟ್ಟಾಗಿ ೧ರಿಂದ ೬ರವರೆಗಿನ ಪದರವನ್ನು ಇತಿಹಾಸ ಆರಂಭಕಾಲವೆಂದು, ೭ರಿಂದ ೮ರವರೆಗಿನ ಪದರವನ್ನು ಬೃಹತ್ ಶಿಲಾಯುಗವೆಂದು, ೯ರಿಂದ ೧೮ರವರೆಗಿನ ಪದರವನ್ನು ನವ ತಾಮ್ರಶಿಲಾಯುಗವೆಂದು ಗುರುತಿಸಬಹುದು.

ಕೊನಸಾಗರ:

ಮೊಳಕಾಲ್ಮೂರು ತಾಲೂಕಿನ ಆಂಧ್ರ ಗಡಿಯಲ್ಲಿರುವ ಗ್ರಾಮವೇ ಕೊನಸಾಗರ. ಈ ಗ್ರಾಮದ ಉತ್ತರಕ್ಕೆ ತಿಮ್ಮಪ್ಪನ ಗುಡ್ಡವಿದ್ದು, ಇದರ ಹಿಂಭಾಗ ಎರಡು ಗುಡ್ಡಗಳ ಕಣಿವೆಯಲ್ಲಿ ಹಾಳೂರು ಇರುವುದು. ಈ ಸ್ಥಳದಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿಗಳನ್ನು ಕಾಣಬಹುದು. ದೊರತಿರುವ ಶಿಲಾಗೋರಿಗಳಲ್ಲಿ ಸಿಸ್ಟ್ ಸಮಾಧಿ, ಸಿಸ್ಟ್ ಸರ್ಕಲ್ ಸಮಾಧಿಗಳು ಪ್ರಮುಖವು. ಸಮಾಧಿಗಳು ಅಲ್ಲಲ್ಲಿ ಕಂಡುಬರುವ ನೆಲಮಟ್ಟದಿಂದ ೪ಅಡಿ ಎತ್ತರದಲ್ಲಿರುವ ದಿನ್ನೆಗಳ ಮೇಲಿರುವುದು ವಿಶೇಷ. ೬ಅಡಿ ಉದ್ದ ೩ಅಡಿ ಅಗಲವಾದ ಸಿಸ್ಟ್ ಸಮಾಧಿಗಳನ್ನು ಪೂರ್ವಾಭಿಮುಖವಾಗಿ ನಿರ್ಮಿಸಿದ್ದು, ಕತ್ತರಿಸಿದ ಬಂಡೆಗಳನ್ನು ಹೂಳಿದ್ದಾರೆ. ಸಮಾಧಿಯ ಮೇಲ್ಭಾಗದಲ್ಲಿ ಯಾವುದೇ ಚಪ್ಪಡಿ ಕಲ್ಲು ಇರುವುದಿಲ್ಲ. ಈ ನೆಲೆಯಲ್ಲಿ ಒಂದೆರಡೂ ಸಮಾಧಿಗಳು ೧½ಅಡಿ ಅಗಲ ೧ಅಡಿ ಉದ್ದದಲ್ಲಿ ರಚಿತಗೊಂಡಿದ್ದು, ಪ್ರಸ್ತುತ ನೆಲೆಯಲ್ಲಿ ಅತ್ಯಂತ ಚಿಕ್ಕದಾದ ಸಮಾಧಿಯಾಗಿರುವುದು. ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ಭಾಗಗಳಲ್ಲಿ ದೊರೆತಿರುವ ಬಹುತೇಕ ಸಮಾಧಿಗಳು ಸ್ವಾಭಾವಿಕವಾಗಿದ್ದು, ಈ ನೆಲೆಯು ಮತ್ತು ಬ್ರಹ್ಮಗಿರಿ ನೆಲೆಯಲ್ಲಿ ಕತ್ತರಿಸಿದ ಸಮಾಧಿಗಳನ್ನು ಕಾಣಬಹುದು. ಅಂದರೆ ದಕ್ಷಿಣದ ಕಡೆಯಿಂದ ಉತ್ತರದ ಕಡೆಗೆ ಜನರು ವಲಸೆ ಹೋಗಿರುವ ಸಾಧ್ಯತೆಗಳಿವೆ ಎಂದು ಅರ್ಥ.

ಹಾನಗಲ್ಲು:

ಮೊಳಕಾಲ್ಮೂರು ತಾಲೂಕಿನ ಗ್ರಾಮವೇ ಹಾನಗಲ್ಲು. ತಾಲೂಕು ಕೇಂದ್ರದಿಂದ ಹಾನಗಲ್ಲು ೫ಕಿ.ಮೀ ದೂರದಲ್ಲಿದ್ದು, ಗ್ರಾಮದ ಸುತ್ತಮುತ್ತ ಕಲ್ಲು ಬೆಟ್ಟಗಳನ್ನು ಕಾಣಬಹುದು. ಗ್ರಾಮದ ಪಕ್ಕದಲ್ಲಿರುವ ಬೆಟ್ಟದಲ್ಲಿ ಅಕ್ಕಮ್ಮನಗುಡಿಯೆಂಬ ಸ್ಥಳದಲ್ಲಿ ನವ ಶಿಲಾಯುಗದ ಆಯುಧವನ್ನು ಪೂಜಿಸುತ್ತಿರುವುದು ಗಮನಕ್ಕೆ ಬಂದಿದೆ. ಇದೇ ಗುಡಿಯ ಸಮೀಪ ಕಲ್ಲಾಸರೆಯಲ್ಲಿ ಸೂಕ್ಷ್ಮ ಶಿಲಾಯುಗದ ಆಯುಧಗಳು ದೊರಕಿದ್ದವು[೮೩]. ಬೆಟ್ಟದ ಪೂರ್ವಕ್ಕೆ ಹಳೆಕೆರೆಗೆ ಹೋಗುವ ದಾರಿಯಲ್ಲಿ ಪಾಂಡವರ ಕಲ್ಲುಗಳೆಂದು ಕರೆಯುವ ಡಾಲ್ಮೆನ್ ಸಿಸ್ಟ್ ಸಮಾಧಿಗಳಿವೆ. ವಿಶಾಲವಾದ ೧೦ ಎಕರೆಗಿಂತ ಮಿಗಿಲಾದ ಹೊಲದಲ್ಲಿ ೭-೮ ಸಮಾಧಿಗಳು ಮಾತ್ರ ಉಳಿದಿವೆ. ಉಳಿದಂತಹವುಗಳು ಸ್ಥಳೀಯರಿಂದ ನಾಶಗೊಂಡಿವೆ. ಸಮಾಧಿಗಳು ೬ಅಡಿ ಉದ್ದ ೪ಅಡಿ ಅಗಲದಲ್ಲಿ ಕಲ್ಲುಬಂಡೆಗಳನ್ನು ಹೂಳಿದ್ದಾರೆ. ಬಹುತೇಕ ಸಮಾಧಿಗಳು ಪೂರ್ವಾಭಿಮುಕವಾಗಿದ್ದು, ಆದಿ, ಕಿಂಡಿಕೋಣೆ ಮಾದರಿಯಲ್ಲಿವೆ. ನೆಲ ಮಟ್ಟದಿಂದ ೪ಅಡಿ ಎತ್ತರದಲ್ಲಿರುವ

ಬಂಡೆಯ ಮೇಲೆ ೧೦ಅಡಿ ಸುತ್ತಳತೆಯ ಬೃಹತ್ ಬಂಡೆಯನ್ನು ಮುಚ್ಚಿದ್ದಾರೆ. ಒಂದು ಸಮಾಧಿಯು ಅಂತರ್ಗತ ಸಮಾಧಿಯಾಗಿದೆ. ಉಳಿದವು ನೆಲದಿಂದ ಮೇಲೆ ಕಾಣಿಸುತ್ತವೆ. ಕಿಂಡಿ ಕೋಣೆಯು ೨ಅಡಿ ಸುತ್ತಳತೆಯಿಂದ ವೃತ್ತಕಾರವಾಗಿದೆ. ಈ ನೆಲೆಗೆ ಹೊಂದಿಕೊಂಡಂತೆ ದಾರಿಯ ಪಕ್ಕದಲ್ಲಿ ಆಯತಕಾರಾದ ಶಿಲಾಗೋರಿಯನ್ನು ಕಾಣಬಹುದ್ದಾಗಿದ್ದು, ಸ್ವಾಭಾವಿಕವಾಗಿ ಸಿಗುವ ಕಲ್ಲುಗುಂಡುಗಳನ್ನು ಸುತ್ತಲು ಇಟ್ಟಿದ್ದಾರೆ. ಈ ರೀತಿಯಾದ ಸಮಾಧಿಯನ್ನು ಕೆಳಗಳಹಟ್ಟಿಯ ಸಮೀಪ ಕಾಣಬಹುದು. ಒಟ್ಟಿನಲ್ಲಿ ಪ್ರಸ್ತುತ ನೆಲೆಯ ಪರಿಸರದಲ್ಲಿ ಅಂತರ್ಗತ ಸಿಸ್ಟ್ ಸಮಾಧಿ, ನೆಲಮಟ್ಟದ ಆಯತಕಾರದ ಸಮಾಧಿ, ನೆಲಮಟ್ಟದ ಮೇಲಿನ ಡಾಲ್ಮೆನ್ ಸಿಸ್ಟ್ ಸಮಾಧಿಯ ಮಾದರಿಗಳನ್ನು ಕಾಣುತ್ತೇವೆ.

ಸಂತೆಗುಡ್ಡ:

ಮೊಳಕಾಲ್ಮೂರು ತಾಲೂಕಿನ ಐತಿಹಾಸಿಕ ಗ್ರಾಮವೇ ಸಂತೆಗುಡ್ಡ. ಗ್ರಾಮಕ್ಕೆ ಹೊಂದಿಕೊಂಡಂತಿರುವ ಗುಡ್ಡವು ಪ್ರಾಗೈತಿಹಾಸಿಕವಾಗಿ ಮಹತ್ವದ್ದು. ಗುಡ್ಡದ ಮೇಲೆ ಬೃಹತ್ ಬಂಡೆಗಲ್ಲಿದ್ದು, ಇದರ ಕೆಳಗೆ ಪಶ್ಚಿಮಾಭಿಮುಖವಾಗಿರುವ ಕಲ್ಲಾಸರೆಯನ್ನು ಕಾಣಬಹುದು. ಸುಮಾರು ಐವತ್ತು ಜನ ಕುಳಿತುಕೊಳ್ಳಬಹುದಾದ ಸ್ಥಳಾವಕಾಶವಿದೆ. ಕಲ್ಲಾಸರೆ ಮೇಲೆ ವರ್ಣಚಿತ್ರಗಳು ತಿಳಿಕೆಂಪು ಮತ್ತು ಬಿಳಿಬಣ್ಣದಲ್ಲಿ ರಚಿತಗೊಂಡಿವೆ. ಚಿತ್ರಗಳಲ್ಲಿ ಕುದರೆ ಸವಾರಿಕೆ, ಆನೆ ಸವಾರಿಕೆ, ಯುದ್ಧಮಾಡುವ, ಒಂಟೆ ಸವಾರಿಕೆ, ಬೇಟೆಗೆ ಹೋಗುವ, ಬೇಟೆಗಾರನಿಂದೆ ಹೊರಟಿರುವ ನಾಯಿಗಳು, ಗೂಳಿ, ಮುಳ್ಳಂದಿ, ಜಿಂಕೆ, ಗೋಪುರ, ಗರುಡ, ಮಂಡಲದಂತಹವು ಪ್ರಮುಖವಾಗಿವೆ. ಚಿತ್ರಗಳನ್ನು ಅಂದಿನ ಮಾನವ ಕುಳಿತುಕೊಂಡು, ಮಲಗಿ, ನಿಂತುಕೊಂಡು ಬಿಡಿಸಿರುವ ರೀತಿಯಲ್ಲಿ ಕಾಣಿಸುವುದು. ಈ ನೆಲೆಯನ್ನು ಎಸ್.ವೈ.ಸೋಮಶೇಖರ್ ಮತ್ತು ಎಸ್. ತಿಪ್ಪೇಸ್ವಾಮಿ ಅವರು ಶೋಧಿಸಿದ್ದರು[೮೪]. ಇಲ್ಲಿ ಕಂಡುಬಂದಿರುವ ಚಿತ್ರಗಳು ನವ ಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಕಾಲದವಾಗಿವೆ. ನವ ಶಿಲಾಯುಗದ ಚಿತ್ರಗಳು ಸಣ್ಣ ಪ್ರಮಾಣದಲ್ಲಿದ್ದು, ತುಂಬಿದ ದೇಹವನ್ನು ಹೊಂದಿವೆ. ನಂತರದ ಕಾಲದವು ಕಡ್ಡಿ ಚಿತ್ರಗಳು. ತುಂಬಿದ ದೇಹವುಳ್ಳ ಗೂಳಿಚಿತ್ರದ ಎದುರಿಗೆ ಕಡ್ಡಿಚಿತ್ರದ ಗೂಳಿಯಿದೆ. ಇದು ಅನುಕರಣೀಯತೆಯನ್ನು ಸೂಚಿಸುತ್ತವೆ. ಇದೇ ರೀತಿಯಾದ ಅನುಕರಣೀಯತೆ ಸಂಗೇನಹಳ್ಳಿಕೆರೆ ಬಯಲು ಬಂಡೆಗಳ ಮೇಲಿರುವ ಕುಟ್ಟು ಚಿತ್ರಗಳಲ್ಲಿ ಕಾಣಬಹುದು. ಮನುಷ್ಯನ ಚಿತ್ರಗಳಿದ್ದು, ಬೇಟೆಗಾರನಿಗೆ, ವೀರನಾಗಿ, ಸವಾರನಾಗಿ ಪ್ರಾಣಿಗಳನ್ನು ಪಳಗಿಸಿಕೊಳ್ಳುವಿಕೆ, ಮಾಟಮಂತ್ರ ಮಾಡುವ ಚಾಣಾಕ್ಷತೆಯ ಕಲ್ಪನೆ ಚಿತ್ರಗಳಲ್ಲಿ

ಅರಳಿವೆ. ಮನುಷ್ಯನ ಬೆರುಳುಗನ್ನು ಬಿಡಿಸಿದ್ದು, ಕೈಯಲ್ಲಿ ಏಳು ಬೆರುಳುಗಳು ಇರುವುದು ವಿಶೇಷ. ಕಲ್ಲಾಸರೆಯಲ್ಲಿ ಚಿತ್ರಗಳಲ್ಲದೆ ಮಡಕೆ ಚೂರುಗಳನ್ನು ಕಾಣಬಹುದು. ಬೆಟ್ಟದ ಪೂರ್ವ ತಪ್ಪಲಿನಲ್ಲಿ ತಾಮ್ರ, ಕಬ್ಬಿಣ ತಯಾರು ಮಾಡುವಂತಹ ಪ್ರಾಚೀನ ಕುಲುಮೆಯಿದೆ.

ಒಟ್ಟಾಗಿ ಕ್ಷೇತ್ರಕಾರ್ಯದ ಮೂಲಕ ೩೬ ಕಡೆಗಳಲ್ಲಿ ಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಶೋಧಿಸಿದ್ದೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅತೀ ಹೆಚ್ಚು ಪ್ರಾಗೈತಿಹಾಸಿಕ ನೆಲೆಗಳು ದೊರೆತಿರುವುದು ಚಳ್ಳಕೆರೆ ತಾಲೂಕಿನಲ್ಲಿ. ಚಳ್ಳಕೆರೆ ತಾಲೂಕಿನಲ್ಲಿ ಅತೀ ಕಡಿಮೆ ಮಳೆಯಾದರೂ ವೇದಾವತಿ ನದಿ ಹಾದು ಹೋಗಿರುವುದರಿಂದ ಅತೀ ಹೆಚ್ಚು ನೆಲೆಗಳು ಕಂಡುಬಂದಿರುವುದು ಸತ್ಯವೆನಿಸುತ್ತದೆ. ಪ್ರಾಗೈತಿಹಾಸಿಕವಾಗಿ ಚಿತ್ರದುರ್ಗ ತಾಲೂಕು ಎರಡನೆ ಸ್ಥಾನ ಪಡೆದುಕೊಂಡಿದ್ದರೆ, ಕೊನೆಯ ಸ್ಥಾನ ಹೊಳಲ್ಕೆರೆ ತಾಲೂಕಿನದ್ದು. ಹೊಳಲ್ಕೆರೆ ತಾಲೂಕಿನಲ್ಲಿ ಶಿಲಾಯುಗದ ನೆಲೆಗಳು ಹೆಚ್ಚಿನ ಪ್ರಮಾಣದಲ್ಲಿ ಇಲ್ಲವೆಂದು ಹೇಳಲು ಅಸಾಧ್ಯ. ಆದರೆ ಮತ್ತಷ್ಟು ಸಂಶೋಧನೆಗಳಾದರೆ ನೆಲೆಗಳು ಸಿಗುವ ಸಾಧ್ಯತೆಗಳಿವೆ. ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಅವಶೇಷಗಳು ದೊರೆತಿರುವುದರಿಂದ ಬೇರೆ ಜಿಲ್ಲೆಗಿಂತ ಗಮನೀಯವಾದ ಜಿಲ್ಲೆಯಾಗಿರುವುದು ಚಿತ್ರದುರ್ಗ. ಬೃಹತ್ ಶಿಲಾಯುಗಕ್ಕೆ ಸಂಬಧಿಸಿದಂತೆ ಮತ್ತೊಂದು ಪ್ರಬಂಧ ರಚಿಸಬಹುದಾದ ಆಧಾರಗಳು ಪ್ರಸ್ತುತ ಜಿಲ್ಲೆಯಲ್ಲಿವೆ.

೩.೨ ನೆಲೆಗಳ ಸ್ವರೂಪ:

ಗುಡ್ಡದ ತಪ್ಪಲಿನ ನೆಲೆಗಳು:

ಶಿಲಾಯುಗದ ಜನರು ನೀರು, ಕಲ್ಲು, ಖನಿಜಾಂಶಗಳು ಸಿಗುವ ಕಡೆ ವಾಸವಾಗಿದ್ದರು. ಕಲ್ಲುಗಳು ಸಮಾಧಿ ರಚಿಸಲು ಮತ್ತು ಆಯುಧ ರಚಿಸಲು, ಖನಿಜಾಂಶಗಳು ವಿವಿಧ ಉಪಕರಣಗಳನ್ನು ತಯಾರಿಸಲು, ಬೆಟ್ಟದಲ್ಲಿ ಸಿಗುವ ಮಣ್ಣನ್ನು ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಹಾಗೂ ಮಳೆ-ಬಿಸಿಲಿನಿಂದ ರಕ್ಷಿಸಿಕೊಳ್ಳಲು ಬೆಟ್ಟದ ತಪ್ಪಲಿನಲ್ಲಿ ವಾಸವಾಗಿದ್ದಾರೆಂದು ಕಾಣಿಸುತ್ತದೆ. ಬ್ರಹ್ಮಗಿರಿಯ ಪೂರ್ವ ತಪ್ಪಲಿನಲ್ಲಿ, ಚಂದ್ರವಳ್ಳಿಯ ಪಶ್ಚಿಮ ತಪ್ಪಲಿನಲ್ಲಿ, ನನ್ನಿವಾಳದ ದಕ್ಷಿಣ ತಪ್ಪಲಿನಲ್ಲಿ ನವ ಶಿಲಾಯುಗದಿಂದ ಇತಿಹಾಸದ ಕಾಲದವರೆಗಿನ ಜನರ ವಾಸ್ತವ್ಯವನ್ನು ಕಾಣುತ್ತೇವೆ. ಪಾಲವ್ವನಹಳ್ಳಿಯ ಪಾಂಡವರ ಮಟ್ಟಿಯ ಪೂರ್ವ ತಪ್ಪಲಿನಲ್ಲಿ, ಜಾನುಕಲ್ಲು ಬೆಟ್ಟದ ಪೂರ್ವ ತಪ್ಪಲಿನಲ್ಲಿ, ತೊರೆಕೋಲಮ್ಮನಹಳ್ಳಿ ಮಟ್ಟಿಯ ಪೂರ್ವ

ತಪ್ಪಲಿನಲ್ಲಿ ಬೃಹತ್ ಶಿಲಾಯುಗದ ಗೋರಿಗಳು ಇರುವವು. ವಸತಿ ನೆಲೆಗಳು ಬೆಟ್ಟ-ಗುಡ್ಡಗಳ ತಪ್ಪಲಿನಲ್ಲಿ ಯಾವುದೇ ದಿಕ್ಕಿನಲ್ಲಿ ಇರಬಹುದು. ಆದರೆ ಶಿಲಾಗೋರಿಗಳು ಬೆಟ್ಟದ ಪೂರ್ವ ತಪ್ಪಲಿನಲ್ಲಿರುವುದು ಗಮನಾರ್ಹ. ಬೃಹತ್ ಶಿಲಾಯುಗದ ಶಿಲಾಗೋರಿಗಳು ಪೂರ್ವಾಭಿಮುಖವಾಗಿ ಇರುತ್ತವೆ. ಶಿಲಾಗೋರಿಗಳ ನೆಲೆಗಳು ಬೆಟ್ಟದ ಪೂರ್ವತಪ್ಪಲಿನಲ್ಲಿಯೇ ಇರಬೇಕು ಎನ್ನುವುದು ಅವರ ನಂಬಿಕೆಯಾಗಿದೆ.

ಬಯಲು ನೆಲೆಗಳು:

ಬೆಟ್ಟದ ತಪ್ಪಲನ್ನು ಬಿಟ್ಟು ಸಮತಟ್ಟಾದ ಭೂ-ಪ್ರದೇಶದ ಮೇಲೆ ವಾಸವಾಗಿರುವ ಎಲ್ಲಾ ನೆಲೆಗಳನ್ನು ಬಯಲು ನಿವೇಶನ ಎಂದು ಕರೆಯಲಾಗಿದೆ. ಬ್ರಹ್ಮಗಿರಿಯ ತಪ್ಪಲಿನ ವಸತಿ ನೆಲೆಯನ್ನು ಬಿಟ್ಟು ಪೂರ್ವಕ್ಕೆ ಬಯಲಿನಲ್ಲಿ ಇರುವಂತಹವುಗಳೇ ಶಿಲಾಗೋರಿಗಳು. ಹಾನಗಲ್ಲು ಬೆಟ್ಟದ ತಪ್ಪಲಿನ ಪೂರ್ವಕ್ಕಿರುವ ಹೊಲದಲ್ಲಿ ನವ ಶಿಲಾಯುಗದ ವಸತಿನೆಲೆ ಹಾಗೂ ಬೃಹತ್ ಶಿಲಾಯುಗದ ಶಿಲಾಗೋರಿಗಳು ಕಂಡು ಬಂದಿವೆ. ಗೋಸಿರೊಪ್ಪಗುಡ್ಡದ ಪೂರ್ವದಲ್ಲಿ ಸಂಗೇನಹಳ್ಳಿಕೆರೆ ಇದ್ದು, ಕೆರೆಯ ನಡುಗಡ್ಡೆ, ಗೌರಿಪುರ ಮತ್ತು ರಾಮಗಿರಿಯಲ್ಲಿರುವ ಬೂದಿ ದಿನ್ನೆಗಳು ಬಯಲಿನಲ್ಲಿವೆ.

ನದಿದಂಡೆಯ ನೆಲೆಗಳು:

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು, ಚಳ್ಳಕೆರೆ ತಾಲೂಕು ಮಾರ್ಗವಾಗಿ ಹೋಗುವ ಪ್ರಮುಖ ನದಿ ವೇದಾವತಿ. ವಾಣಿ ವಿಲಾಸಪುರದಲ್ಲಿ ಡ್ಯಾಂ ನಿರ್ಮಾಣಗೊಂಡಿರುವುದು. ಈ ನದಿಯು ವಿಶಾಲವಾಗಿ ಹರಿದು ಅನಂತಪುರ ಜಿಲ್ಲೆಯನ್ನು ಪ್ರವೇಶಿಸುವುದು. ಮಾಳಪ್ಪನಗುಡ್ಡ, ಪರಮೇನಹಳ್ಳಿ, ದೊಡ್ಡ ಉಳ್ಳಾರ್ತಿ, ಟಿ.ಎನ್.ಕೋಟೆ, ಜಾಜೂರು, ಪರಶುರಾಮಾಪುರ, ಬೊಂಬೇರಹಳ್ಳಿ, ನಲ್ಲೂರಹಳ್ಳಿ, ಬೇಡರೆಡ್ಡಿಹಳ್ಳಿ ಮೊದಲಾದ ಕಡೆಗಳಲ್ಲಿ ಪ್ರಾಗೈತಿಹಾಸಿಕ ಕಾಲದ ಕುರುಹುಗಳನ್ನು ಕಾಣಬಹುದು. ಚಳ್ಳಕೆರೆ ತಾಲೂಕು ನದಿದಂಡೆಯ ಮೇಲೆ ಕಂಡುಬಂದಿರುವ ನೆಲೆಗಳಲ್ಲಿ ವಸತಿ ನೆಲೆಗಳು ಹೆಚ್ಚು, ಆದರೂ ಅಲ್ಲಲ್ಲಿ ಶಿಲಾಗೋರಿಗಳು ಕಾಣಸಿಗುತ್ತವೆ. ವೇದಾವತಿ ನದಿ ದಂಡೆಯ ಪರಿಸರದಲ್ಲಿ ಪ್ರತಿಯೊಂದು ವಸತಿ ನೆಲೆಗಳಲ್ಲಿ ನವ, ಬೃಹತ್, ಶಾತವಾಹನರ ಕಾಲದ ಜನರು ಬಳಸಿ ಬಿಟ್ಟು ಹೋದ ಅವಶೇಷಗಳು ಕಾಣಸಿಗುತ್ತವೆ. ಈ ಮೂಲಕ ತಿಳಿದುಬರುವುದೇನೆಂದರೆ ಶಾತವಾಹನರ ಕಾಲದವರೆಗೂ ನದಿಯು ತುಂಬಿಹರಿಯುತ್ತಿರಬೇಕು, ಆ ಹಿನ್ನೆಲೆಯಲ್ಲಿ ಶಾತವಾಹನರ ಕಾಲದವರೆಗೆ ವಸತಿ ನೆಲೆಗಳು ಕಾಣಸಿಗುತ್ತವೆ.

ಹಳ್ಳದ ದಂಡೆಯ ಮೇಲಿನ ನೆಲೆಗಳು:

ಚಿತ್ರದುರ್ಗ ಪರಿಸರದಲ್ಲಿ ಜಿನಗಿಹಳ್ಳ, ಗುಂಡಿಹಳ್ಳವು ಪ್ರಾಗೈತಿಹಾಸಿಕ ದೃಷ್ಟಿಯಿಂದ ಪ್ರಮುಖವು. ಈ ಎರಡು ಹಳ್ಳಗಳು ವೇದಾವತಿ ನದಿಯನ್ನು ಸೇರುತ್ತವೆ. ಜಿನಗಿಹಳ್ಳವು ಹೊಳಲ್ಕೆರೆ ತಾಲೂಕಿನಿಂದ ಚಿತ್ರದುರ್ಗ ತಾಲೂಕಿನ ಮೂಲಕ ಹರಿದು ಬ್ರಹ್ಮಗಿರಿಯ ಸಮೀಪದಲ್ಲಿ ಹಾದು ಹೋಗುತ್ತದೆ. ಗುಂಡಿಹಳ್ಳ ಹೊಸದುರ್ಗ ಭಾಗದಿಂದ ಹೊಳಲ್ಕೆರೆ ತಾಲೂಕು ಮೂಲಕ ಹಿರಿಯೂರು ತಾಲೂಕಿನ ವಾಣಿವಿಲಾಸ ಸಾಗರಕ್ಕೆ ಸೇರುತ್ತದೆ. ಜಿನಗಿಹಳ್ಳದ ದಂಡೆಗಳಾದ ದುಗ್ಗಾವರ, ಲಂಬಾಣಿಹಟ್ಟಿ, ಮಿಂಚೇರಿಗುಡ್ಡ, ಚಿಪ್ಪಿನಕೆರೆ, ಸಂಗೇನಹಳ್ಳಿಕೆರೆ, ತೊರೆಕೋಲಮ್ಮನಹಳ್ಳಿ, ಕೊನಸಾಗರ, ಹಾನಗಲ್, ಬ್ರಹ್ಮಗಿರಿ ಪ್ರಮುಖ ನೆಲೆಗಳಲ್ಲಿ ಪ್ರಾಗೈತಿಹಾಸಿಕ ಕುರುಹುಗಳು ಕಂಡುಬಂದಿವೆ. ಜಿನಗಿಹಳ್ಳದ ಕೆಲವೊಂದು ನೆಲೆಗಳು ೨ಕಿ.ಮೀ. ದೂರದಲ್ಲಿದ್ದರೆ, ಬ್ರಹ್ಮಗಿರಿ, ತೊರೆಕೋಲಮ್ಮನಹಳ್ಳಿ ಮತ್ತು ಚಿಪ್ಪಿನಕೆರೆ ನೆಲೆಗಳು ಹಳ್ಳದ ಪಕ್ಕದಲ್ಲಿವೆ. ವಸತಿನೆಲೆಗಳು ಹಾಗೂ ಶಿಲಾಗೋರಿ ನೆಲೆಗಳು ದೊರೆತಿರುವುದಲ್ಲದೆ ಹಳೆ ಶಿಲಾಯುಗದ ಆಯುಧಗಳು ಕೂಡ ದೊರೆತಿರುವುದು ಗಮನಾರ್ಹ. ಈ ಮೂಲಕ ಜಿನಗಿಹಳ್ಳವು ಹಳೆ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಜೀವಂತವಾಗಿತ್ತೆಂದು ಹೇಳಬಹುದು. ಗುಂಡಿಹಳ್ಳದ ಪಕ್ಕದಲ್ಲಿರುವ ಗಟ್ಟಿಹೊಸಳ್ಳಿ, ಗೂಳಿಹೊಸಳ್ಳಿ, ದೊಡ್ಡಕಿಟ್ಟದಾಳ್, ಸಣ್ಣಕಿಟ್ಟದಾಳ್‌ನಂತಹ ಕಡೆಗಳಲ್ಲಿ ನವ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ವಸತಿ ಹಾಗೂ ಶಿಲಾಗೋರಿ ನೆಲೆಗಳಿವೆ. ಕೂನಬೇವಿನ ಮೋರೆಯರ ಮಟ್ಟಿಯಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿ, ಆದಿ ಹಳೆಶಿಲಾಯುಗದ ಆಯುಧಗಳು, ನವ ಶಿಲಾಯುಗದ ಆಯುಧಗಳು ದೊರೆತಿವೆ. ಬಗ್ಗಲುರಂಗವ್ವನಹಳ್ಳಿ, ದೊಡ್ಡಘಟ್ಟ, ಪಂಡ್ರಹಳ್ಳಿ, ಜನ್ನಿನಾಳ, ಬೆಳಗಟ್ಟ, ಪೇಲೂರಹಟ್ಟಿ, ಗೋನೂರು ಮೊದಲಾದ ಕಡೆಗಳಲ್ಲಿ ಬಯಲು ಬಂಡೆ ಚಿತ್ರಗಳಿವೆ. ಈ ಎಲ್ಲಾ ನೆಲೆಗಳು ಜಿನಗಿಹಳ್ಳದ ಪರಿಸರದಲ್ಲಿವೆ.

ಕಲ್ಲಾಸರೆ ನೆಲೆಗಳು:

ಗವಿ ಹಾಗೂ ಕಲ್ಲಾಸರೆಗಳಲ್ಲಿ ಪ್ರಾಗಿತಿಹಾಸದ ಕುರುಹುಗಳನ್ನು ಗಮನಿಸಬಹುದು. ಸಂತೇಗುಡ್ಡ, ನುಂಕೆಮಲೆ, ಜಟಂಗಿರಾಮೇಶ್ವರ, ರಾಮಸಾಗರ, ಬ್ರಹ್ಮಗಿರಿ ಹಾಗೂ ಚಿತ್ರದುರ್ಗ ಬೆಟ್ಟಗಳಲ್ಲಿ ಕಾಣಸಿಗುವ ವರ್ಣಚಿತ್ರಗಳು ಕಲ್ಲಾಸರೆಗಳಲ್ಲಿವೆ. ಚಂದ್ರವಳ್ಳಿಯ ಬಾರಲುಗೊಂದಿಯ ಕಣಿವೆಯಲ್ಲಿ ಒಂದು ಗವಿಯೊಳಗೆ ಮೂಸೆಗಳು, ಕಿಟ್ಟಗಳು, ನಯವಾದ ಕಲ್ಲಿನ ಕೊಡಲಿ ದೊರಕಿರುವುದರಿಂದ ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ಜನರು ಗವಿಯಲ್ಲಿ ವಾಸವಾಗಿದ್ದರೆಂದು ತಿಳಿದುಬರುವುದು. ಹೊಸದುರ್ಗ

ತಾಲೂಕಿನ ತಣಿಗೇಕಲ್ಲು ಬಳಿ ನವ ಶಿಲಾಯುಗದ ಅವಶೇಷಗಳು ಕಂಡುಬಂದಿರುವುದು ಗವಿಯ ಒಳಗೆ. ಈ ರೀತಿಯಾಗಿ ಗವಿ ಹಾಗೂ ಕಲ್ಲಾಸರೆಗಳಲ್ಲಿ ತನ್ನ ಕಲೆಯನ್ನು ಬಿಂಬಿಸುತ್ತ ವಿವಿಧ ಚಟುವಟಿಕೆಯಲ್ಲಿ ತೊಡಗಿದ್ದನೆಂದು ನಿರ್ಧರಿಸಬಹುದು.

ಕೈಗಾರಿಕಾ ನೆಲೆಗಳು:

ಯಾದಲಗಟ್ಟೆ, ಗಟ್ಟಿಹೊಸಹಳ್ಳಿ, ದೊಡ್ಡಕಿಟ್ಟದಾಳ್ ನೆಲೆಗಳು ಹಳ್ಳದ ದಂಡೆಯ ಮೇಲಿದ್ದು, ಕಬ್ಬಿಣ ಶಿಲಾಯುಗದಿಂದ ಮಧ್ಯಕಾಲಿನ ಇತಿಹಾಸದವರೆಗೆ ಆಯುಧಗಳ ತಯಾರಿಕೆಯ ಮತ್ತು ಉಪಕರಣಗಳ ತಯಾರಿಕೆಯ ಕೈಗಾರಿಕಾ ಕೇಂದ್ರವಾಗಿವೆ. ಈ ಎಲ್ಲಾ ನೆಲೆಗಳಲ್ಲಿ ಕಬ್ಬಿಣದ ಕಿಟ್ಟಗಳು, ಮಡಕೆ ಚೂರುಗಳು, ಮೂಸೆಗಳು ದೊರಕಿದ್ದು, ಪ್ರಮುಖವಾಗಿ ಗಟ್ಟಿಹೊಸಹಳ್ಳಿಯಲ್ಲಿ ಮ್ಯಾಂಗನೀಸ್ ಕಿಟ್ಟಗಳು ದೊರೆತಿರುವುದು ವಿಶೇಷ. ಬ್ರಹ್ಮಗಿರಿ, ಜೆ.ಎನ್.ಕೋಟೆ, ಹಾನಗಲ್ಲು, ಜಾನಕಲ್ಲು ಮೊದಲಾದ ಸೂಕ್ಷ್ಮ ಶಿಲಾಯುಗದ ನೆಲೆಗಳಲ್ಲಿ ಚರ್ಟ್, ಅಗೇಟ್, ಚಾಲ್ಸಿಡೋನಿಯಾ ಶಿಲೆಗಳಿಂದ ತಯಾರುಗೊಂಡಂತಹ ಸೂಕ್ಷ್ಮ ಉಪಕರಣಗಳು ದೊರೆತಿರುತ್ತವೆ. ಈ ಸೂಕ್ಷ್ಮ ಆಯುಧಗಳನ್ನು ತಯಾರುಮಾಡುವಂತಹ ಶಿಲೆಗಳು ಚಿತ್ರದುರ್ಗ ಪರಿಸರದಲ್ಲಿ ಸಿಗುವುದು ವಿರಳ. ಇದುವರೆಗೆ ಕಂಡುಬಂದಿರುವಂತಹ ಸೂಕ್ಷ್ಮ ಶಿಲಾಯುಗದ ನೆಲೆಗಳಲ್ಲಿ ತಯಾರು ಮಾಡುತ್ತಿದ್ದಿರಬಹುದಾದ ಕುರುಹುಗಳು ಕಾಣುವುದು ಕಷ್ಟ ಸಾಧ್ಯ. ಈ ಮೂಲಕ ಪಕ್ಕದಲ್ಲಿರುವ ಜಿಲ್ಲೆಯಾದ ಬಳ್ಳಾರಿಯ ಸಂಗನಕಲ್ಲಿನಲ್ಲಿ ಸೂಕ್ಷ್ಮ ಶಿಲಾಯುಗದ ಉಪಕರಣಗಳು, ತಯಾರುಮಾಡುವಂತಹ ವಸ್ತುಗಳು ದೊರೆತಿರುವುದರಿಂದ ಬಹುಶಃ ಸಂಗನಕಲ್ಲಿನಿಂದ ಆಯುಧಗಳನ್ನು ತರಿಸಿಕೊಂಡಿರುವ ಅಥವಾ ತಂದಿರುವ ಸಾಧ್ಯತೆಗಳಿವೆ. ಇಲ್ಲವೇ ಸೂಕ್ಷ್ಮ ಶಿಲಾಯುಗದ ಮಾನವನು ಕಾಲಾನಂತರದಲ್ಲಿ ಪ್ರಸ್ತುತ ಪರಿಸರದಲ್ಲಿ ನೆಲೆಸಿರಬೇಕು. ನವ ಶಿಲಾಯುಗದ ಮಾನವನು ಸೂಕ್ಷ್ಮ ಆಯುಧಗಳನ್ನು ಬಳಸಿರುವುದರಿಂದ ಸೂಕ್ಷ್ಮ ಶಿಲಾಯುಗದಲ್ಲಿ ಇದ್ದಂತಹ ಮಾನವರು ಯುಗಗಳು ಕಳೆದಂತೆ ನವ ಶಿಲಾಯುಗಕ್ಕೆ ಪ್ರವೇಶಿಸಿರಬಹುದೆಂದು ಹೇಳಬಹುದಾಗಿದೆ. ನವ ಶಿಲಾಯುಗದ ಮಾನವನು ತನ್ನ ನಯವಾದ ಕಲ್ಲಿನ ಕೊಡಲಿಯನ್ನು ಆತನ ನೆಲೆಗಳಲ್ಲಿಯೇ ತಯಾರಿಸಿಕೊಳ್ಳುತ್ತಿದ್ದನೆಂದು ಕ್ಷೇತ್ರಕಾರ್ಯದಿಂದ ತಿಳಿದುಬಂದಿದೆ.

ಬೆಟ್ಟದ ಮೇಲಿನ ನೆಲೆಗಳು:

ಮಾಳಪ್ಪನಗುಡ್ಡದಲ್ಲಿ ಕಲ್ಲು ಬಂಡೆಗಳ ಮೇಲೆ ಗೀರಿದ ರೇಖಾಚಿತ್ರಗಳಿವೆ. ಬೆಳಗಟ್ಟದ ಎದ್ದಲು ಬಂಡೆಯಲ್ಲಿ, ದೊಡ್ಡಘಟ್ಟದ ಎತ್ತಿನ ಗುಡ್ಡದಲ್ಲಿ ಬಯಲು ಬಂಡೆ

ಚಿತ್ರಗಳಿದ್ದು, ಇವು ನವ ಶಿಲಾಯುಗದಿಂದ ಇತಿಹಾಸದ ಕಾಲದವರೆಗಿನವುಗಳಾಗಿವೆ. ಕೋತಿಗುಡ್ಡ, ಬೆಳ್ಳಿಗುಡ್ಡ, ಕೊನಸಾಗರದ ತಿಮ್ಮಪ್ಪನಗುಡ್ಡ ಹಾಗೂ ಬ್ರಹ್ಮಗಿರಿ ಬೆಟ್ಟದಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿಗಳು ಮತ್ತು ವಸತಿ ನೆಲೆಯನ್ನು ಕಾಣಬಹುದು.

ಈ ಮೇಲಿನ ಸ್ವರೂಪವನ್ನು ಗಮನಿಸಿದಾಗ ಮಹತ್ತರವಾದ ವಿಚಾರಗಳು ತಿಳಿದುಬರುತ್ತವೆ. ನದಿಯ ದಂಡೆಯ ಮೇಲೆ, ಹಳ್ಳದ ದಂಡೆಯ ಮೇಲೆ ಬೃಹತ್ ಶಿಲಾಯುಗದ ಶಿಲಾಗೋರಿಗಳು ಇವೆ. ನವ ಶಿಲಾಯುಗದ ಮಾನವನು ಚಂದ್ರವಳ್ಳಿ ಭಾಗದ ಗವಿಯೊಂದರಲ್ಲಿ ವಾಸವಾಗಿದ್ದರಿಂದ ಬಯಲು ನಿವೇಶನಕ್ಕಿಂತ ಭಿನ್ನವಾಗಿದೆ. ಹಳ್ಳ, ಬಯಲು ನಿವೇಶನಗಳನ್ನು ಹೊರತುಪಡಿಸಿದರೆ ಬೆಟ್ಟದ ತಪ್ಪಲಿನ ನಿವೇಶನಗಳು ಕಡಿಮೆ. ಮೊಳಕಾಲ್ಮೂರು ತಾಲೂಕಿನ ಕಲ್ಲಾಸರೆಗಳಲ್ಲಿ ಬೇರೆ ತಾಲೂಕಿಗಿಂತ ವರ್ಣಚಿತ್ರಗಳು ಹೆಚ್ಚಿನ ಪ್ರಮಾಣದಲ್ಲಿವೆ. ಬೇರೆ ತಾಲೂಕುಗಳಿಗೆ ಹೋಲಿಸಿದರೆ ಚಿತ್ರದುರ್ಗ ತಾಲೂಕಿನಲ್ಲಿ ಬಯಲುಬಂಡೆ ಚಿತ್ರಗಳು ಹೆಚ್ಚು. ಈ ಬಯಲುಬಂಡೆ ಚಿತ್ರಗಳಲ್ಲಿ ಜಾನುವಾರುಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿರುವುದು. ಮೊಳಕಾಲ್ಮೂರು ತಾಲೂಕಿನಲ್ಲಿ ಹೆಚ್ಚು ಕಲ್ಲು ಗುಡ್ಡಗಳಿರುವುದರಿಂದ ಬಯಲುಬಂಡೆ ಚಿತ್ರಗಳು ಅತಿ ಕಡಿಮೆ ಪ್ರಮಾಣದಲ್ಲಿ ಕಂಡುಬಂದಿರುತ್ತವೆ. ಆದ ಕಾರಣ ಹುಲ್ಲುಗಾವಲು ಮೊಳಕಾಲ್ಮೂರು ತಾಲೂಕಿನಲ್ಲಿ ಕಡಿಮೆಯಿತ್ತೆಂದು ಅರ್ಥವಾಗುವುದು. ದೊಡ್ಡೇರಿ, ಸಂಗೇನಹಳ್ಳಿ ಕೆರೆ, ಪಾಲವ್ವನಹಳ್ಳಿ, ಬ್ರಹ್ಮಗಿರಿ, ಹಾನಗಲ್ಲುಗಳಲ್ಲಿ ಕಂಡುಬಂದಿರುವ ವಸತಿ ನೆಲೆಗಳು ೫ರಿಂದ ೧೦ ಎಕರೆಯಷ್ಟು ವಿಸ್ತಾರವಾಗಿವೆ. ಪ್ರತಿಯೊಂದು ನೆಲೆಗಳಿಗೂ ೫–೬ಕಿ.ಮೀ. ಅಂತರವಿರುತ್ತದೆ. ಶಿಲಾಗೋರಿ ನೆಲೆಗಳಲ್ಲಿ ಅತ್ಯಂತ ದೊಡ್ಡದಾದ ನೆಲೆಗಳಲ್ಲಿ ಕೂನಬೇವು, ಕಡ್ಲೇಗುದ್ದು, ನೆರೇನಾಳ್, ಬ್ರಹ್ಮಗಿರಿ ಪ್ರಮುಖವಾಗಿವೆ. ಭಾಗಶಃ ಪ್ರತಿಯೊಂದು ನೆಲೆಗಳಲ್ಲಿ ೫೦ಕ್ಕಿಂತ ಹೆಚ್ಚು ಶಿಲಾಗೋರಿಗಳು ಇರುವುದರಿಂದ ಹೆಚ್ಚಿನ ಜನಸಾಂದ್ರತೆ ಇತ್ತೆಂಬುದಕ್ಕೆ ಸಾಕ್ಷಿ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ನೆಲೆಗಳು ಹಟ್ಟಿಗಳನ್ನು ಪ್ರತಿನಿಧಿಸುತ್ತವೆಂದು ನಿರ್ಧರಿಸಬಹುದು.

೩.೩ ಸ್ಥಳನಾಮಗಳು

ಪ್ರಾಗೈತಿಹಾಸಿಕ ಮಾನವರು ಅಲೆಮಾರಿಯಾಗಿ ತಿರುಗುತ್ತಿದ್ದವರು ನವಶಿಲಾಯುಗದಲ್ಲಿ ಪಶುಸಂಗೋಪನೆ ಕಾರಣದಿಂದ ನೆಲೆಸಲು ಆರಂಭಿಸಿದರು. ಬೃಹತ್ ಶಿಲಾಯುಗದಲ್ಲಿನ ಜನರು ಪಶುಸಂಗೋಪನೆಯ ಕಾರಣದ ಜೊತೆಗೆ ಶಿಲಾಸಮೂಹ ಮತ್ತು ಖನಿಜ ಸಂಪತ್ತು ಸಿಗುವ ಕಡೆ ನೆಲೆಸಿದ್ದಾರೆ. ಜಿಲ್ಲೆಯಲ್ಲಿ ಪ್ರತಿ ೨ ಅಥವಾ

೪ಕಿ.ಮೀ ಅಂತರದಲ್ಲಿ ನೆಲೆಗಳಿರುವುದನ್ನು ಗಮನಿಸಲಾಗಿದೆ. ತುರುವನೂರು ಕೇಂದ್ರದಿಂದ ೧೦ಕಿ.ಮೀ ವ್ಯಾಪ್ತಿಯಲ್ಲಿ ೧೯ ವಸತಿ ಹಾಗೂ ಸಮಾಧಿ ನೆಲೆಗಳು ಕಂಡುಬರುವವು. ಅಲ್ಲದೆ ವಸತಿ ನೆಲೆಗಳು ೨ ಎಕರೆಯಷ್ಟು ವಿಸ್ತಾರವಾಗಿದ್ದಾರೆ, ಸಮಾಧಿ ನೆಲೆಗಳಲ್ಲಿ ೫೦ಕ್ಕೂ ಹೆಚ್ಚು ಶಿಲಾಗೋರಿಗಳು ಕಾಣಸಿಗುತ್ತಾವೆ. ಅಂದರೆ ಒಂದು ಜನಸಮೂದಾಯ ಒಟ್ಟಿಗೆ ಗುಂಪಾಗಿ ಹಟ್ಟಿಗಳ ರೀತಿ ಬದುಕುತ್ತಿದ್ದರೆಂದು ಮನಗಾಣಬಹುದು. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ನೆಲೆಯನ್ನು ಗಮನಿಸುವುದಾದರೆ ಜನರು ಪಟ್ಟಣದ ರೀತಿ ಜೀವನವನ್ನು ಅನುಭವಿಸಿದ್ದರೆಂಬುದಾಗಿ ವ್ಯಕ್ತಪಡಿಸಲಾಗಿದೆ. ಇಂದಿನ ದಿನಮಾನಗಳಲ್ಲಿ ಹಟ್ಟಿಗಳು ಪಟ್ಟಣವಾಗಿ ಹಾಗೂ ಹಳ್ಳಿಗಳು ನಗರಗಳಾಗಿ ಅಭಿವೃದ್ಧಿ ಹೊಂದುತ್ತಿವೆ. ಈ ಮಧ್ಯೆ ಬುಡಕಟ್ಟು ಸಂಪ್ರದಾಯವು ಹಟ್ಟಿಗಳಲ್ಲಿ ಉಳಿದುಕೊಂಡು ಬಂದಿರುವುದು ಪ್ರಮುಖ ವಿಚಾರ. ಜನತೆ ಒಂದು ಕಡೆ ನೆಲೆಸಿದ್ದರ ಸಂಕೇತವಾಗಿಯಲ್ಲದೆ ಪರಿಸರ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವದಿಂದ ಹಾಗೂ ಐತಿಹಾಸಿಕ ಘಟನೆಗಳ ಪ್ರಭಾವದಿಂದ ತಾವು ವಾಸವಾದ ಸ್ಥಳಕ್ಕೆ ಹೆಸರಿಟ್ಟಿದ್ದಾರೆ. ಕ್ರಮೇಣ ಜನವಸತಿ ಇರಲಿ ಇರದಿರಲಿ ಸ್ಥಳನಾಮಗಳು ಇರುತ್ತವೆ. ಸ್ಥಳನಾಮಗಳು ಹಲವು ಜನಾಂಗದ ಸಂಸ್ಕೃತಿಯನ್ನು ಶಾಶ್ವತವಾಗಿ ಬೆಸೆಯುವ ಕೊಂಡಿಯಾಗಿವೆ[೫].

ಪ್ರತಿಯೊಂದು ಪ್ರಾಗೈತಿಹಾಸಿಕ ನೆಲೆಗಳಿಗೆ ಐತಿಹ್ಯವುಳ್ಳ ಹೆಸರುಗಳಿವೆ. ಇರುವಂತಹ ಐತಿಹ್ಯದ ಹೆಸರುಗಳ ಆಧಾರದ ಮೇಲೆ ಪ್ರಾಗೈತಿಹಾಸಿಕ ನೆಲೆಗಳನ್ನು ಶೋಧಿಸಬಹುದು. ವಸತಿ ನೆಲೆಗಳಿಗೆ ಸಿದ್ಧರ ಗವಿ, ಹಾಳೂರು, ಬೂದಿಹೊಲ, ಅರ್ಜುನಾಪುರ, ಬೂದಿಗಡ್ಡೆ, ಬೂದಿದಿನ್ನೆ, ನೊಣಬಿಪಟ್ಟಣ, ಬೂದಿಮಾರಲು, ಬಾರಲಗೊಂದಿ, ಓಬಳಾಪುರ ಗಡ್ಡೆಗಳೆಂದು ವಿವಿಧ ಹೆಸರಿನಿಂದ ಕರೆಯಲಾಗುತ್ತದೆ. ಶಿಲಾ ಗೋರಿ ನೆಲೆಗಳಿಗೆ ಪಾಂಡವರ ಗುತ್ತಿ, ಪಾಂಡವರ ಮಟ್ಟಿ, ಪಾಂಡವರ ಕಲ್ಲು, ಪಾಂಡವರ ಬಂಡೆ, ಮೋರೆಯರ ಮನೆ, ಮೋರೆಯರ ಮಟ್ಟಿ ಎಂಬುದಾಗಿ ಕರೆಯುವುದು ಸರ್ವೆಸಾಮಾನ್ಯ. ಕೋತಿಗುಡ್ಡ, ಜುಂಜಪ್ಪನಮಟ್ಟಿ, ಬೆಳ್ಳಿಗುಡ್ಡ, ಬಾರಲಗೊಂದಿ, ದೊಣೆಕರಿಯಮ್ಮ, ವೀರಗಾರಲುಗುಡಿ, ಕಲ್ಲುಕುಪ್ಪೆ, ನಿಲುಸುಗಲ್ಲು ಎಂದು ಕರೆಯುವುದು ವಿಶೇಷ. ಜಾನಕಲ್ಲು ಮತ್ತು ರಾಮಗಿರಿಯಲ್ಲಿ ಕಂಡುಬಂದಿರುವ ನಿಲುಸುಗಲ್ಲು ಸಮಾಧಿ ಗಳಿಗೆ ಆನೆ ಕಟ್ಟುವ ಕಲ್ಲುಗಳು ಎಂದು ಕರೆಯುತ್ತಿದ್ದಾರೆ. ಮಿಂಚೇರಿಗುಡ್ಡದಲ್ಲಿರುವ ಶಿಲಾ ಗೋರಿಗಳನ್ನು ಐತಿಹಾಸಿಕ ವ್ಯಕ್ತಿಯಾದ ಗಾದ್ರಿಪಾಲನಾಯಕನ ಸಮಾಧಿಗಳೆಂದು ಕರೆಯುವುದು ಗಮನಾರ್ಹ. ಬಯಲುಬಂಡೆ ಚಿತ್ರಗಳ ನೆಲೆಗಳಿಗೆ ಮಾಳಪ್ಪನಗುಡ್ಡ, ದೇವರ ಎತ್ತಿನಗುಡ್ಡ, ಎದ್ದಲುಬಂಡೆ, ಬಸವನಗೊಂದಿ, ಗೋಮರಡಿ ಮೊದಲಾದ

ಹೆಸರುಗಳಿಂದ ಕರೆಯಲಾಗುತ್ತಿದೆ. ಈ ರೀತಿಯಾದ ಹೆಸರುಗಳು ಗೋವಿನ ಮಹತ್ವವನ್ನು ತೋರಿಸುವುದು. ಬೆಳಗಾವಿ, ಬಿಜಾಪುರ ಭಾಗದಲ್ಲಿ ಬೃಹತ್ ಶಿಲಾಯುಗದ ನೆಲೆಗಳಿಗೆ ಮುನಿವಾಸನ ಗುಹೆಯೆಂದು, ಧಾರವಾಡ ಪರಿಸರದಲ್ಲಿ ಸಿದ್ದರಕಟ್ಟೆ, ಭಸ್ಮದಕಟ್ಟೆಗಳೆಂದು ಕರೆಯಲಾಗುತ್ತಿರುವುದು ಪ್ರಸ್ತುತ ಪರಿಸರಕ್ಕಿಂತ ಭಿನ್ನವಾಗಿದೆ ಎಂದು ಹೇಳಬಹುದು. ಪಾಂಡವರು ಯುದ್ಧವನ್ನು ಮಾಡಿದ್ದರಿಂದ ಹೆಚ್ಚು ಜನ ಮಡಿದರು ಎಂಬುದು ಪೌರಾಣಿಕ ಆಧಾರವಾಗಿದೆ. ಐತಿಹ್ಯಗಳ ಪ್ರಕಾರ ಮೌರ್ಯರು ಮನೆಗಳನ್ನು ಕಟ್ಟಿಕೊಂಡಿದ್ದರು ಎಂಬ ಕಾರಣಕ್ಕಾಗಿ ಶಿಲಾಸಮಾಧಿ ರಚನೆಗಳಿಗೆ ಮೋರೆಯರ ಮನೆಗಳೆಂದು ಕರೆದಿರಬಹುದು. ಮೌರ್ಯರು ಪ್ರಸ್ತುತ ಪರಿಸರದಲ್ಲಿ ಬಹಳಷ್ಟು ಪ್ರಭಾವಿತರು ಎಂಬುದಕ್ಕೆ ಬ್ರಹ್ಮಗಿರಿ ಪರಿಸರದಲ್ಲಿರುವ ಶಾಸನಗಳು ಸಾಕ್ಷಿ. ಇದರಂತೆ ಪಾಂಡವರು ಇದ್ದರೆಂಬುದಕ್ಕೆ ಐತಿಹ್ಯವುಳ್ಳ ಭೀಮನ ಬಂಡೆಗಳು ಪ್ರಮುಖ ಆಧಾರ. ಈ ಎಲ್ಲಾ ಕಾರಣಗಳಿಂದ ಪ್ರಸ್ತುತ ಶಿಲಾಸಮಾಧಿಗಳಿಗೆ ಮೋರೆಯರ ಮನೆ, ಪಾಂಡವರ ಮನೆ ಎಂಬುದಾಗಿ ಕರೆಯುತ್ತಿರುವುದು ಸತ್ಯವೆನ್ನಿಸುತ್ತದೆ. ಈಗಾಗಲೇ ಬ್ರಹ್ಮಗಿರಿ ಉತ್ಖನನದಿಂದ ಕಾಲ ನಿರ್ಧಾರವಾಗಿರುವಂತೆ ಬೃಹತ್ ಶಿಲಾಯುಗದ ಶಿಲಾಸಮಾಧಿಗಳು ಕ್ರಿ.ಪೂ ೮೦೦ರಲ್ಲಿ ರಚಿತಗೊಂಡಿವೆ. ಇತಿಹಾಸ ಪುಟಗಳಲ್ಲಿ ದಾಖಲಾಗಿರುವಂತೆ ಮೌರ್ಯರ ಕಾಲವು ಕಿ.ಪೂ. ೩ನೇ ಶತಮಾನವೆಂದು ತಿಳಿದಿರುವ ವಿಚಾರವಾಗಿದೆ. ಆದ್ದರಿಂದ ಬೃಹತ್ ಶಿಲಾಯುಗದ ಶಿಲಾಸಮಾಧಿಗಳು ಮೌರ್ಯರ ಕಾಲದಲ್ಲಿ ರಚನೆಗೊಂಡಿವೆ ಎಂಬುದು ಸತ್ಯಕ್ಕೆ ದೂರವಾದದ್ದು. ಜಾನಕಲ್ಲು, ರಾಮಗಿರಿಯಲ್ಲಿ ಕಂಡುಬಂದಿರುವ ನಿಲುಸುಗಲ್ಲು ಸಮಾಧಿಗೆ ಆನೆ ಕಟ್ಟುವ ಕಲ್ಲುಗಳು ಎಂದು ಕರೆದಿರುವುದು ಬೃಹತ್ತಾದ ಕಲ್ಲುಬಂಡೆ ಮತ್ತು ಅಲ್ಲಿನ ಇತಿಹಾಸದ ಅಂಶಗಳು ಪ್ರಭಾವ ಬೀರಿವೆ ವಿನಹ ಆಗಂತ ಇತಿಹಾಸ ಕಾಲದವಲ್ಲ. ಬೃಹತ್ ಶಿಲಾಯುಗದ ಶಿಲಾಸಮಾಧಿಗಳಲ್ಲಿ ನಿಲುಸುಗಲ್ಲು ಒಂದು ಮಾದರಿ ಸಮಾಧಿ. ಈ ಮೂಲಕ ಐತಿಹ್ಯ ಹೆಸರುಳ್ಳ ಪ್ರತಿಯೊಂದು ಶೋಧಗೊಂಡಿರುವ ನೆಲೆಗಳು ಪ್ರಾಗೈತಿಹಾಸಿಕ ಕಾಲದವು ಎಂದು ಸ್ಪಷ್ಟಪಡಿಸಬಹುದು.

ಪ್ರಾಗೈತಿಹಾಸಿಕ ನೆಲೆಗಳಿಗಲ್ಲದೆ ಗ್ರಾಮನಾಮಗಳಲ್ಲಿ ಐತಿಹಾಸಿಕ ಅಂಶಗಳು ಅಡಗಿರುತ್ತವೆ. ಚಿತ್ರದುರ್ಗ, ಹೊಸದುರ್ಗ, ಸಿದ್ದೇಶ್ವರನದುರ್ಗ, ರಾಮದುರ್ಗ, ಬೆಳಗಟ್ಟ, ದೊಡಗಟ್ಟ, ದವಳಪ್ಪನಗುಡ್ಡ, ಅಕ್ಕಮನಗುಡ್ಡ, ಗೋಸಿರಪ್ಪನಗುಡ್ಡ, ರಾಮಗಿರಿ, ಬ್ರಹ್ಮಗಿರಿ ಇನ್ನೂ ಮೊದಲಾದವುಗಳು ಗಿರಿ ಕಂದಕಗಳನ್ನು ಸೂಚಿಸುವ ಸ್ಥಳನಾಮಗಳಾಗಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಪಶು, ಪಕ್ಷಿ, ಪ್ರಾಣಿ ಹಾಗೂ ವೃಕ್ಷ ಸಂಬಂಧಿತ ಸ್ಥಳನಾಮಗಳಿವೆ. ಜಾಲಿಕಟ್ಟೆ, ಗೋಸಿಕೆರೆ, ಗೂಳಿಹಳ್ಳಿ, ಗೂಳಿಹಟ್ಟಿ, ಪುರ್ಲಹಳ್ಳಿ, ಹುಲಿಕೆರೆ, ಹುಲಿಕುಂಟೆ, ದೊಡ್ಡಾಲಘಟ್ಟ, ತುರುವನೂರು, ಮತ್ಸಸಮುದ್ರ, ಆಡುಮಲ್ಲೇಶ್ವರ, ಗೊನೂರು, ಕೂನಬೇವು, ಹುಣಸೆಕಟ್ಟೆ ಮೊದಲಾದವುಗಳು ಪ್ರಮುಖವು.

ಜನತೆ ವಾಸಿಸಲು ನೀರು ಅವಶ್ಯಕ. ತಾವು ವಾಸಿಸುತ್ತಿದ್ದ ಪ್ರದೇಶಗಳಲ್ಲಿ ಕಟ್ಟೆ, ಕುಂಟೆ, ಒಡ್ಡು, ಕೆರೆಗಳನ್ನು ನಿರ್ಮಿಸಿಕೊಂಡು ನೀರನ್ನು ಸಂಗ್ರಹಿಸುತ್ತಿದ್ದರು. ಕಾಲ ಕಳೆದಂತೆ ಇದ್ದ ಸ್ಥಳಗಳಿಗೆ ಜಲಸಂಬಂಧಿತ ಹೆಸರುಗಳನ್ನು ಇಟ್ಟಿದ್ದಾರೆ. ಚಿಪ್ಪಿನಕೆರೆ, ಮದ್ದನಕುಂಟೆ, ವಿಡುಪಲಕುಂಟೆ, ಗೊರ್ಲ್ಲೂಕಟ್ಟೆ, ಬೊಮ್ಮನಕುಂಟೆ, ಸಂಗೇನಹಳ್ಳಿಕೆರೆ, ಕುರುಮರಡಿಕೆರೆ ಮೊದಲಾದವುಗಳು ಜಲಸೂಚಕ ನಾಮಗಳಾಗಿವೆ. ನಾಗಸಮುದ್ರ, ಕೋನಸಾಗರ, ದೇವಸಮುದ್ರ, ಭೀಮಸಮುದ್ರ, ರಾಮಸಾಗರ, ಭರಮಸಾಗರ ಗ್ರಾಮನಾಮಗಳಿಂದ ಕೃತಕ ಜಲಾಶಯವನ್ನು ನಿರ್ಮಿಸಿದ್ದಾರೆಂದು ತಿಳಿಯಬಹುದು. ದೊಣ್ಣೆಹಳ್ಳಿ, ಹೂವಿನಹೊಳೆ, ಚದರುಗೋಳ, ಕೆಲ್ಲೋಡು, ಅಬ್ಬಿನಹೊಳೆ ನಾಮಗಳಲ್ಲಿ ನಿಸರ್ಗಜಲಸೂಚಿ ಅಂಶಗಳು ಕಂಡುಬರುತ್ತವೆ[೮೧].

ತಮಟಕಲ್ಲು, ಜಾನಕಲ್ಲು, ಹಾನಗಲ್ಲು, ಸೂಜಿಗಲ್ಲು, ತಣಿಗೆಕಲ್ಲು ನಾಮಗಳಲ್ಲಿ ಶಿಲಾಸಂಬಂಧಿತ ಅಂಶಗಳಿವೆ. ಈ ಗ್ರಾಮಗಳು ಶಿಲಾಬೆಟ್ಟಗಳ ಪಕ್ಕದಲ್ಲಿರುತ್ತವೆ. ಅಲ್ಲದೆ ಪ್ರಾಗೈತಿಹಾಸಿಕ ಕಾಲದಿಂದ ಜನರು ವಾಸವಾಗಿದ್ದರ ಕುರುಹುಗಳು ಕಂಡುಬಂದಿವೆ.

ರಾಮಗಿರಿ, ಬ್ರಹ್ಮಗಿರಿ, ಭೀಮಸಮುದ್ರ, ರಾಮಸಾಗರ, ಪಂಡ್ರಹಳ್ಳಿ, ಪರುಶುರಾಂಪುರ, ಭೀಮನಬಂಡೆ, ಚಂದ್ರವಳ್ಳಿ, ರಾಂಪುರ ನಾಮಗಳಲ್ಲಿ ಪೌರಾಣಿಕತೆ ಅಡಗಿದೆ.

ದೇವಸಮುದ್ರ, ನಾಗಸಮುದ್ರ, ದೇವರಹಳ್ಳಿ, ರಂಗನಾಥಪುರ, ಜಟಂಗಿರಾಮೇಶ್ವರ, ಹಾಲುರಾಮೇಶ್ವರ, ಶಿವಗಂಗ, ಲಿಂಗದಹಳ್ಳಿ ಮೊದಲಾದ ಹೆಸರುಗಳಲ್ಲಿ ಧಾರ್ಮಿಕ ನಂಬಿಕೆಯಿದೆ.

ಬುಡಕಟ್ಟು ಮತ್ತು ಕುಟುಂಬ ಹಾಗೂ ವೃತ್ತಿ ನಾಮಗಳನ್ನು ತಿಳಿಸಿಕೊಡುವ ಅನೇಕ ಗ್ರಾಮಗಳಿವೆ. ಅಗಸಕಲ್ಲು, ಕುಂಬಾರಹಳ್ಳಿ, ಜೋಗಿಮಟ್ಟಿ, ಸಾದರಹಳ್ಳಿ, ಮ್ಯಾಸರಹಳ್ಳಿ, ನೆಲಗೇತಲ ಹಟ್ಟಿ, ದಂಡಿನಕುರುಬರ ಹಟ್ಟಿ, ಜುಂಜನಕುಂಟೆ, ಜುಂಜಪ್ಪನ ಮಟ್ಟಿ, ಗೊಲ್ಲರಹಟ್ಟಿ, ಲಂಬಾಣಿಹಟ್ಟಿಯಂತಹ ಸ್ಥಳನಾಮಗಳು ಪ್ರಮುಖವು.

ಚಾವಡಿ, ಅಥವಾ ಜಗಲಿ ಎನ್ನುವ ಅರ್ಥದಲ್ಲಿ ಸಾಕಷ್ಟು ಸ್ಥಳನಾಮಗಳಿವೆ. ಪಲ್ಲಾಗಟ್ಟೆ, ನಾಗರಕಟ್ಟೆ, ಹುಣಸೆಕಟ್ಟೆ, ಕುಡಿನೀರಿನಕಟ್ಟೆ, ಗಂಜಿಕಟ್ಟೆ[೮೨], ರಂಗವ್ವನಹಳ್ಳಿಕಟ್ಟೆ,

ಯಾದಲಗಟ್ಟೆ ಮೊದಲಾದವುಗಳು ನ್ಯಾಯಪಂಚಾಯ್ತಿ ಮಹತ್ವವನ್ನು ತಿಳಿಸುತ್ತವೆ.

ಕುಂಚಿಗನಾಳು, ಬಾಗೇನಾಳ್, ನೆರೆನಾಳ್, ಹುಲ್ಲೇಹಾಳ್, ಜನ್ನಿಗನಾಳ್, ದೊಡ್ಡಕಿಟ್ಟದಾಳ್, ಗೊಡಬನಾಳ್, ಇಂಗಳದಾಳ್ ಎನ್ನುವ ಸ್ಥಳನಾಮಗಳು ಪೂರ್ವದಲ್ಲಿ ಹಳೆಯ ಊರುಗಳಿದ್ದವೆಂದು ತಿಳಿಸುತ್ತವೆ.

ಬೂದಿಪುರ, ಇದ್ದಿಲನಾಗೇನಹಳ್ಳಿ, ಸಣ್ಣಕಿಟ್ಟದಾಳ್, ಕಿಟ್ಟದಹಟ್ಟಿ, ಘಟ್ಟಿಹೊಸಹಳ್ಳಿ, ಇಂಗಳದಾಳ್ ಗ್ರಾಮನಾಮಗಳು ಬೂದಿ ಹಾಗು ಖನಿಜ ಸಂಬಂಧಿತ ಸ್ಥಳನಾಮಗಳಾಗಿವೆ.

ಸಂತೆಗುಡ್ಡ, ಸಂತೇಮುದ್ದಾಪುರ ಪ್ರದೇಶಗಳು ವ್ಯಾಪಾರ ಕೇಂದ್ರಗಳಾಗಿದ್ದವೆಂದು ಸೂಚಿಸುತ್ತವೆ[೮೮]. ಈಗಲೂ ಪ್ರಾಚೀನಕಾಲದ ತಾಮ್ರ, ಕಬ್ಬಿಣದ ವಸ್ತುಗಳನ್ನು ತಯಾರಿಸುವ ಕಚ್ಚಾ ವಸ್ತುಗಳು ಸಂತೆಗುಡ್ಡದಲ್ಲಿ ಸಿಗುತ್ತಿರುವುದು ಪ್ರಮುಖ ವಿಚಾರವಾಗಿದೆ.

ಬಾರ್ಲಗೊಂದಿ, ನೆರಲಗೊಂದಿ, ಹುಲಿಗೊಂದಿ, ತವಂದಿ, ಹಾರನಕಣಿವೆ, ಮಾರಿಕಣಿವೆ ಮೊದಲಾದವುಗಳು ಕಣಿವೆಯನ್ನು ಸೂಚಿಸುತ್ತವೆ.

ಒಟ್ಟಾಗಿ ಸ್ಥಳನಾಮಗಳು ಆಯಾ ಸ್ಥಳಗಳ ಸಾಂಸ್ಕೃತಿಕ ಮಹತ್ವವನ್ನು ಹೊಂದಿವೆ. ಶಾಸನಗಳಂತೆ ಸ್ಥಳನಾಮಗಳ ಮೂಲಕ ಐತಿಹಾಸಿಕ ವಿಚಾರಗಳನ್ನು ತಿಳಿಯಬಹುದು. ಜಲ, ಬೆಟ್ಟ, ಕಣಿವೆ, ಕಂದರ, ಪೌರಾಣಿಕ, ಖನಿಜ, ಧಾರ್ಮಿಕ ಹಾಗೂ ಶಿಲೆಗಳ ಮಹತ್ವ ತಿಳಿಸುವ ಸ್ಥಳನಾಮಗಳು ಪ್ರಾಗೈತಿಹಾಸಿಕವಾಗಿ ಮುಖ್ಯವಾಗಿವೆ. ಪ್ರಾಗಿತಿಹಾಸದ ನೆಲೆಗಳಿಗಿರುವ ಸ್ಥಳನಾಮಗಳಲ್ಲಿ ಇತಿಹಾಸದನಂಟಿದೆ. ಬೃಹತ್ ಶಿಲಾಯುಗದ ಶಿಲಾಗೋರಿಗಳಿಗೆ ಮೌರ್ಯರ ಮನೆಗಳು, ಗಾದ್ರಿಪಾಲನಾಯಕನ ಸಮಾಧಿ ಎಂದು ಕರೆಯುತ್ತಿದ್ದಾರೆ. ಈ ಸ್ಥಳನಾಮಗಳಲ್ಲಿ ಐತಿಹಾಸಿಕತೆಯ ಪ್ರಭಾವವಿರುವುದು ಸತ್ಯ. ಅಲ್ಲದೆ ಶಿಲಾಗೋರಿಗಳು ಪ್ರಾಗಿತಿಹಾಸ ಕಾಲಕ್ಕೆ ಸೇರಿದವು ಎಂಬುದು ಅಷ್ಟೇ ಸತ್ಯವಾಗಿರುತ್ತದೆ.

ಸ್ಥಳನಾಮ ವಿವರ ಪಟ್ಟಿ

ಹಳ್ಳಿ	ಹಾಳ್	ಕೆರೆ
ಚಂದ್ರವಳ್ಳಿ/ಚಿತ್ರದುರ್ಗ	ಇಂಗಳದಾಳ್/ಚಿತ್ರದುರ್ಗ	ಕುರುಮರಡಿಕೆರೆ/ಹಿರಿಯೂರು
ಹವಳೇನಹಳ್ಳಿ/ಚಿತ್ರದುರ್ಗ	ಕುಂಚಿಗನಾಳ್/ಚಿತ್ರದುರ್ಗ	ಚಿಪ್ಪಿನಕೆರೆ/ ಚಿತ್ರದುರ್ಗ
ತೊರೆಕೋಲಮ್ಮನಹಳ್ಳಿ/ಚಳ್ಳಕೆರೆ	ಬಾಗೇನಾಳ್/ಚಿತ್ರದುರ್ಗ	ದೇವಿಕೆರೆ/ಚಿತ್ರದುರ್ಗ
ಪುರ್ಲಹಳ್ಳಿ/ಚಳ್ಳಕೆರೆ	ಗೊಡಬನಾಳ್/ಚಿತ್ರದುರ್ಗ	ಚಿಕ್ಕಕಬ್ಬಿಗೆರೆ / ಚಿತ್ರದುರ್ಗ
ಸಿರಪ್ಪನಹಳ್ಳಿ/ಹೊಳಲ್ಕೆರೆ	ಹುಲ್ಲೇಹಾಳ್/ಚಿತ್ರದುರ್ಗ	ಹೆಗ್ಗೆರೆ/ ಹಿರಿಯೂರು
ಗೂಳಿಹೊಸಳ್ಳಿ/ಹೊಳಲ್ಕೆರೆ	ನನ್ನಿವಾಳ/ಚಳ್ಳಕೆರೆ	ಗೋಸಿಕೆರೆ/ ಚಳ್ಳಕೆರೆ
ಘಟ್ಟಿಹೊಸಳ್ಳಿ/ಹೊಳಲ್ಕೆಎರೆ	ಜನ್ನಿಗನಾಳ್/ಚಳ್ಳಕೆರೆ	ಸಾಣೆಕೆರ/ ಚಳ್ಳಕೆರೆ
ಗೂಳಿಹಳ್ಳಿ/ಹೊಸದುರ್ಗ	ದೊಡ್ಡಕಿಟ್ಟದಾಳ್/ಹೊಸದುರ್ಗ	ಚಳ್ಳಕೆರೆ/ಚಳ್ಳಕೆರೆ
ಬೊಮ್ಮಕ್ಕನಹಳ್ಳಿ/ಮೊಳಕಾಲ್ಮೂರು	ಸಣ್ಣಕಿಟ್ಟದಾಳ್/ಹೊಸದುರ್ಗ	ಹಳೇಕೆರೆ/ ಮೊಳಕಾಲ್ಮೂರು
ಬೆನಕನಹಳ್ಳಿ/ಹೊಸದುರ್ಗ	ನರೇನಾಳ್/ಹಿರಿಯೂರು	ಹುಲಿಕೆರೆ/ಹೊಳಲ್ಕೆರೆ
ಪರಮೇನಹಳ್ಳಿ/ಹಿರಿಯೂರು		ಕೆಂಕೆರೆ/ಹೊಸದುರ್ಗ
ಮರಡಿಹಳ್ಳಿ/ಹಿರಿಯೂರು	**ದುರ್ಗ**	ಮಾಡದಕೆರೆ/ಹೊಸದುರ್ಗ
ಪಾಲವ್ವನಹಳ್ಳಿ/ಹಿರಿಯೂರು	ಚಿತ್ರದುರ್ಗ/ಚಿತ್ರದುರ್ಗ	ಸಂಗೇನಹಳ್ಳಿಕೆರೆ/ಹೊಸದುರ್ಗ
ಎನ್.ದೇವರಹಳ್ಳಿ/ಚಳ್ಳಕೆರೆ	ಹೊಸದುರ್ಗ/ಹೊಸದುರ್ಗ	
ಹೊಸದ್ಯಾಮವ್ವನಹಳ್ಳಿ/ಚಿತ್ರದುರ್ಗ	ಸಿದ್ದೇಶ್ವರನದುರ್ಗ/ಚಳ್ಳಕೆರೆ	**ಗುಡ್ಡ**
	ರಾಮದುರ್ಗ/ಚಳ್ಳಕೆರೆ	ಮಾಳಪ್ಪನಗುಡ್ಡ/ಹಿರಿಯೂರು

ಪುರ		ಮೋರ್ಲಬಂಡೆ ಗುಡ್ಡ/ ಮೊಳಕಾಲ್ಮೂರು
ರಂಗನಾಥಪುರ / ಹಿರಿಯೂರು	**ಕೋಟೆ**	ಕೈಗುಡ್ಡ/ ಮೊಳಕಾಲ್ಮೂರು
ಭರಂಪುರ/ ಹಿರಿಯೂರು	ಶಿಡ್ಲಯ್ಯನಕೋಟೆ/ ಹಿರಿಯೂರು	ಅಕ್ಕಮ್ಮನಗುಡ್ಡ/ ಮೊಳಕಾಲ್ಮೂರು
ಸುಲ್ತಾನಿಪುರ/ ಚಿತ್ರದುರ್ಗ	ಹರ್ತಿಕೋಟೆ/ ಹಿರಿಯೂರು	ಸಂತೇಗುಡ್ಡ/ ಮೊಳಕಾಲ್ಮೂರು
ವೀರಮದಕರಿಪುರ/ ಚಿತ್ರದುರ್ಗ	ಜೆ.ಎನ್.ಕೋಟೆ/ಹಿರಿಯೂರು	ಮಿಂಚೇರಿಗುಡ್ಡ/ ಹೊಳಲ್ಕೆರೆ
ಪಿ.ಮಹದೇವಪುರ./ ಚಳ್ಳಕೆರೆ	ಪಾಲನಾಯಕನಕೋಟೆ/ ಚಳ್ಳಕೆರೆ	ಗೋಸಿರಪ್ಪನಗುಡ್ಡ/ ಚಿತ್ರದುರ್ಗ
ಪರಶುರಾಂಪುರ/ ಚಳ್ಳಕೆರೆ	ತಿಮ್ಮಣ್ಣನಾಯಕನಕೋಟೆ/ ಚಳ್ಳಕೆರೆ	ದವ್ವಳಪ್ಪನಗುಡ್ಡ / ಚಿತ್ರದುರ್ಗ
ಎನ್.ಗೌರಿಪುರ / ಚಳ್ಳಕೆರೆ	ಮನ್ನೇಕೋಟೆ / ಚಳ್ಳಕೆರೆ	ಚೋಳಗುಡ್ಡ / ಚಿತ್ರದುರ್ಗ
ವೆಂಕಟಾಪುರ/ಮೊಳಕಾಲ್ಮೂರು	ಎಂ.ಡಿ.ಕೋಟೆ. / ಹಿರಿಯೂರು	ಕೋತಿಗುಡ್ಡ / ಚಿತ್ರದುರ್ಗ
ಬೈರಾಪುರ/ ಮೊಳಕಾಲ್ಮೂರು		
ಬೂದಿಪುರ/ಹೊಳಲ್ಕೆರೆ	**ಕಲ್ಲು**	**ಕಟ್ಟೆ**
ಮಲ್ಲಾಪುರ/ಹೊಸದುರ್ಗ	ತಮಟಕಲ್ಲು/ಚಿತ್ರದುರ್ಗ	ಜಾಲಿಕಟ್ಟೆ/ಚಿತ್ರದುರ್ಗ
ಕುಂಟೆ	ಜಾನಕಲ್ಲು/ಹೊಸದುರ್ಗ	ಗಂಜಿಗಟ್ಟೆ/ಹೊಳಲ್ಕೆರೆ
ಗಂಜಿಗುಂಟೆ/ಚಳ್ಳಕೆರೆ	ನಿರುವುಗಲ್ಲು/ಹೊಸದುರ್ಗ	ಯಾದಲಘಟ್ಟೆ/ಚಳ್ಳಕೆರೆ
ಮದ್ದನಕುಂಟೆ/ಚಳ್ಳಕೆರೆ	ತಣಿಗೆಕಲ್ಲು/ಹೊಸದುರ್ಗ	ರಂಗವ್ವನಹಳ್ಳಿ ಕಟ್ಟೆ/ಚಳ್ಳಕೆರೆ

ಜುಂಜನಕುಂಟೆ/ಚಳ್ಳಕೆರೆ	ಸೂಜಿಗಲ್ಲು/ಹೊಸದುರ್ಗ	ಯಲಗಟ್ಟೆ/ಚಳ್ಳಕೆರೆ
ವಿಡುಪಲಕುಂಟೆ/ಚಳ್ಳಕೆರೆ	ಹಾನಗಲ್/ಮೊಳಕಾಲ್ಮೂರು	
ಹುಲಿಕುಂಟೆ/ಮೊಳಕಾಲ್ಮೂರು		**ಗಿರಿ**
ಬೊಮ್ಮನಕುಂಟೆ/ಚಳ್ಳಕೆರೆ		ರಾಮಗಿರಿ/ಹೊಸದುರ್ಗ
		ಬ್ರಹ್ಮಗಿರಿ/ಮೊಳಕಾಲ್ಮೂರು
ಊರು	**ಹಟ್ಟಿ**	**ಈಶ್ವರ**
ತುರುವನೂರು/ಚಿತ್ರದುರ್ಗ	ನಾಯಕನಹಟ್ಟಿ/ಚಳ್ಳಕೆರೆ	ಜಟಂಗಿರಾಮೇಶ್ವರ/ಮೊಳಕಾಲ್ಮೂರು
ಬೇತೂರು/ಹಿರಿಯೂರು	ಪೇಲೂರಹಟ್ಟಿ/ಚಳ್ಳಕೆರೆ	ಆಡುಮಲ್ಲೇಶ್ವರ/ಚಿತ್ರದುರ್ಗ
ಗೋನೂರು/ಚಿತ್ರದುರ್ಗ	ನೆಲಗತ್ತಲಹಟ್ಟಿ/ಚಳ್ಳಕೆರೆ	
ಜಾಜೂರು/ಚಳ್ಳಕೆರೆ	ಪೂಜಾರಹಟ್ಟಿ/ಮೊಳಕಾಲ್ಮೂರು	**ಸಾಗರ**
ಚೌಳೂರು/ಚಳ್ಳಕೆರೆ	ಕೂನಬೇವು ಗೊಲ್ಲರಹಟ್ಟಿ/ ಚಿತ್ರದುರ್ಗ	ಭರಮಸಾಗರ/ಚಿತ್ರದುರ್ಗ
ಮೊಳಕಾಲ್ಮೂರು/ಮೊಳಕಾಲ್ಮೂರು	ಕೆಳಗಿನಹಟ್ಟಿ/ಮೊಳಕಾಲ್ಮೂರು	ಕೋನಸಾಗರ/ಮೊಳಕಾಲ್ಮೂರು
ನಂದನಹೊಸೂರು/ಹೊಳಲ್ಕೆರೆ	ಗೂಳಿಹಟ್ಟಿ/ಹೊಸದುರ್ಗ	ರಾಮಸಾಗರ/ಮೊಳಕಾಲ್ಮೂರು
	ಲಂಬಾಣಿಹಟ್ಟಿ/ ಹೊಸದುರ್ಗ	
ಘಟ್ಟ	ಅಂಚಿಬಾರಿಹಟ್ಟಿ/ಹೊಸದುರ್ಗ	**ಸಮುದ್ರ**
ಬೆಳಘಟ್ಟ /ಚಿತ್ರದುರ್ಗ		ಭೀಮಸಮುದ್ರ/ಚಿತ್ರದುರ್ಗ
ದೊಡಘಟ್ಟ/ ಚಿತ್ರದುರ್ಗ	**ಗೊಂದಿ**	ನಾಗಸಮುದ್ರ,/ಮೊಳಕಾಲ್ಮೂರು
ದೊಡ್ಡಾಲಘಟ್ಟ/ಚಿತ್ರದುರ್ಗ	ಬಾರ್ಲಗೊಂದಿ/ಚಿತ್ರದುರ್ಗ	ಬಲ್ಲಾಳ್ ಸಮುದ್ರ/ಹೊಳಲ್ಕೆರೆ

ರುಮ್ಮಾಘಟ್ಟ/ಚಿತ್ರದುರ್ಗ	ನೇರ್ಲಗೊಂದಿ/ಚಿತ್ರದುರ್ಗ	ಮತ್ಸಮುದ್ರ/ಚಳ್ಳಕೆರೆ
ದೊಡ್ಡಘಟ್ಟ/ಹೊಸದುರ್ಗ	ಹುಲಿಗೊಂದಿ/ಚಿತ್ರದುರ್ಗ	
	ತವಂದಿ/ಹಿರಿಯೂರು	

೩.೪ ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದಾಗಿ ಶೋಧಗೊಂಡಿರುವ ನೆಲೆಗಳ ಪಟ್ಟಿ

ಕ್ರ ಸಂ	ಪ್ರದೇಶ	ತಾಲೂಕು	ಅವಶೇಷ	ಸ್ಥಳನಾಮಗಳು
೧	ನನ್ನಿವಾಳ	ಚಳ್ಳಕೆರೆ	ಶಿಲಾವೃತ್ತಗೋರಿ	ದೊರೆಗಳಸಮಾಧಿ
೨	ಜನ್ನಿಗನಾಳ	ಚಳ್ಳಕೆರೆ	ಬೃಹತ್‌ಶಿಲಾಯುಗದ ಗೀರುಚಿತ್ರಗಳು	ಕರಿಕಲ್ಲು ಮಟ್ಟಿ
೩	ಮನ್ನೆಕೋಟೆ	ಚಳ್ಳಕೆರೆ	ಶಿಲಾವೃತ್ತಗೋರಿ	ಪಾಂಡವರಗುತ್ತಿ
೪	ನಾಯಕನಹಟ್ಟಿ	ಚಳ್ಳಕೆರೆ	ಶಿಲಾವೃತ್ತಗೋರಿ	ಪಾಂಡವರಮನೆ
೫	ತೊರೆಕೊಲಮ್ಮನಹಳ್ಳಿ	ಚಳ್ಳಕೆರೆ	ಶಿಲಾವೃತ್ತಗೋರಿ	ಪಾಂಡವರಮನೆ
೬	ಬೇಡರೆಡ್ಡಿಹಳ್ಳಿ	ಚಳ್ಳಕೆರೆ	ಚಪ್ಪಡಿ ಕಲ್ಲುಗೋರಿ	ಹಿರೇರಗುಡ್ಡೆ
೭	ಟಿ.ಎನ್. ಕೋಟೆ	ಚಳ್ಳಕೆರೆ	ನಿಲುಸುಗಲ್ಲು ಸಮಾಧಿ	ನಿಲುಸುಗಲ್ಲು
೮	ನಲ್ಲೂರುಹಳ್ಳಿ	ಚಳ್ಳಕೆರೆ	ನಿಲುಸುಗಲ್ಲು ಸಮಾಧಿ	ನಿಲುಸುಗಲ್ಲು
೯	ಬೊಂಬೆರಹಳ್ಳಿ	ಚಳ್ಳಕೆರೆ	ನಿಲುಸುಗಲ್ಲು ಸಮಾಧಿ	ನಿಲುಸುಗಲ್ಲು
೧೦	ರೇಖಲಗೆರೆಕಾವಲು	ಚಳ್ಳಕೆರೆ	ಬೃಹತ್‌ಶಿಲಾಯುಗದ ವಸತಿ ನೆಲೆ	ಬೇಚಾರಕ್ ಗ್ರಾಮ
೧೧	ಎನ್.ದೇವರಹಳ್ಳಿ	ಚಳ್ಳಕೆರೆ	ವಸತಿ ನೆಲೆ	ಹಾಳೂರು
೧೨	ಪಾಲನಾಯಕನ ಕೋಟೆ	ಚಳ್ಳಕೆರೆ	ಚಪ್ಪಡಿ ಕಲ್ಲು ಸಮಾಧಿ	ದುರ್ಗಮ್ಮನಗುಡಿ

೧೩	ನೆಲಗತ್ತಲಹಟ್ಟಿ	ಚಳ್ಳಕೆರೆ	ವೃತ್ತಕಾರದ ಸಮಾಧಿ	ಹಿರೇರಗುಡ್ಡೆ
೧೪	ರಂಗವ್ವನಹಳ್ಳಿಕಟ್ಟೆ	ಚಳ್ಳಕೆರೆ	ವೃತ್ತಕಾರ ಸಮಾಧಿ	ಹಾಳೂರು
೧೫	ಕೂನಬೇವು	ಚಿತ್ರದುರ್ಗ	ಆದಿ/ಮಧ್ಯ ಹಳೆಶಿಲಾಯುಗದ ಆಯುಧಗಳು ದೊರೆತಿವೆ. ನವ ಶಿಲಾಯುಗದ ಕೊಡಲಿ ದೊರೆತಿದೆ	ಕೋಣನ್‌ದೇವಿ ಬೀಳು
೧೬	ಸಂಗೇನಹಳ್ಳಿಕೆರೆ	ಚಿತ್ರದುರ್ಗ	ಆದಿ, ಮಧ್ಯ ಹಳೆಶಿಲಾಯುಗದ ಆಯುಧವೊಂದು ದೊರೆತಿದೆ	ಓಬಳಾಪುರಗಡ್ಡೆ
೧೭	ಹವಳೇನಹಳ್ಳಿ	ಚಿತ್ರದುರ್ಗ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಹಾಳೂರು
೧೮	ಸುಲ್ತಾನಿಪುರ	ಚಿತ್ರದುರ್ಗ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಜುಂಜಪ್ಪನಮಟ್ಟಿ
೧೯	ಗೊಸಿರೊಪ್ಪನಗುಡ್ಡ	ಚಿತ್ರದುರ್ಗ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಕರಿದೇವರಬಟ್ಟಿ
೨೦	ಕೋತಿಗುಡ್ಡ	ಚಿತ್ರದುರ್ಗ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಪಾಂಡವರಕಟ್ಟೆ
೨೧	ಜೆ.ಎನ್.ಕೋಟೆ	ಚಿತ್ರದುರ್ಗ	ಸೂಕ್ಷ್ಮಶಿಲಾಯುಗದ ಶಿಲಾ ಉಪಕರಣಗಳು ಮತ್ತು ನವ, ಬೃಹತ್ ಶಿಲಾಯುಗದ ಮಡಕೆ ಅವಶೇಷಗಳು ದೊರೆತಿವೆ	ಹಾಳೂರು
೨೨	ಹೊಸದ್ಯಾಮವ್ವನ ಹಳ್ಳಿ	ಚಿತ್ರದುರ್ಗ	ವಸತಿನೆಲೆ, ಶೋಧಿಸಲಾಗಿದೆ	ಬೂದಿದಿನ್ನೆ
೨೩	ಕೆನ್ನಾಡಲು	ಚಿತ್ರದುರ್ಗ	ನವಶಿಲಾಯುಗದ ಕಲ್ಲಿನಕೊಡಲಿ	ಗ್ರಾಮದಹೊರ ವಲಯ

			ಶೋಧನೆ	
೨೪	ಕಡ್ಡಲೆಗುದ್ದು	ಚಿತ್ರದುರ್ಗ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಪಾಂಡವರಗುತ್ತಿ
೨೫	ದೊಡ್ಡಾಲಘಟ್ಟ	ಚಿತ್ರದುರ್ಗ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಪಾಂಡವರಗುತ್ತಿ
೨೬	ಅಬ್ಬಿನಹೊಳೆ	ಹಿರಿಯೂರು	ವಸತಿನೆಲೆ, ನಿಲುಸುಗಲ್ಲು ಸಮಾಧಿ ದೊರೆತಿವೆ	ಅರ್ಜನಾಪರ
೨೭	ಕರಿಓಬನಹಳ್ಳಿ,	ಹಿರಿಯೂರು	ವಸತಿನೆಲೆ	ಹಾಳೂರು
೨೮	ತವಂದಿ,	ಹಿರಿಯೂರು	ವಸತಿನೆಲೆ	ಬೂದುಗಡ್ಡೆ
೨೯	ಮಾಳಪ್ಪನಗುಡ್ಡ,	ಹಿರಿಯೂರು	ಗೀರುಚಿತ್ರಗಳು, ಕಲ್ಲಿನಮಣಿಗಳು ದೊರೆತಿವೆ	ಮಾಳಪ್ಪನಗುಡ್ಡ
೩೦	ರಾಮಗಿರಿ	ಹೊಳಲ್ಕೆರೆ	ವಸತಿನೆಲೆ, ಬುದಿದಿನ್ನೆ ಕಂಡು ಬಂದಿವೆ	ಬೂದಿಮಾರಲು
೩೧	ಹೊಳಲ್ಕೆರೆ	ಹೊಳಲ್ಕೆರೆ	ಡಾಲ್ಮೆನ್‌ಸಿಸ್ಟ್ ಸಮಾಧಿಯಿದೆ	ದೊಡ್ಡಚೌಡಮ್ಮ
೩೨	ಮಿಂಚೇರಿಗುಡ್ಡ	ಹೊಳಲ್ಕೆರೆ	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಗಾದ್ರಿಪಾಲನಾಯಕನ ಸಮಾಧಿ
೩೩	ಕೊನಸಾಗರ	ಮೊಳಕಾಲ್ಮೂರು	ಬೃಹತ್ ಶಿಲಾಯುಗದ ಶಿಲಾವೃತ್ತ ಗೋರಿಗಳು	ಹಾಳೂರು
೩೪	ಕೊಡಗವಳ್ಳಿ	ಹೊಳಲ್ಕೆರೆ	ನವಶಿಲಾಯುಗದ ಕಲ್ಲಿನ ಕೊಡಲಿಗಳು	ಕೆರೆಕೋಡಿಯಮ್ಮ ಗುಡಿ
೩೫	ಚಿಕ್ಕಂದವಾಡಿ	ಹೊಳಲ್ಕೆರೆ	ಬೃಹತ್ ಶಿಲಾಯುಗದ ನಿಲಸುಗಲ್ಲು ಸಮಾಧಿ	ಒಂಟಿಕಲ್ಲು ಕಂಬ
೩೬	ಜಾಜೂರು	ಹೊಳಲ್ಕೆರೆ	ಬೃಹತ್ ಶಿಲಾಯುಗದ ನಿಲಸುಗಲ್ಲು ಸಮಾಧಿ	ಲಿಂಗಮುದ್ರೆ ಕಲ್ಲು

೩.೫ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬಂದಿರುವ ಒಟ್ಟು ನೆಲೆಗಳ ಪಟ್ಟಿ

ಚಳ್ಳಕೆರೆ ತಾಲೂಕು

ಕ್ರ ಸಂ.	ನೆಲೆಯ ಹೆಸರು	ಹಳೇ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ		ಒಟ್ಟು ನೆಲೆಗಳು
					ಗೋರಿ	ನೆಲೆ	
೧	ನನ್ನಿವಾಳ			√	√		೨
೨	ಪಿ.ಮಹದೇವಪುರ		√	√	√	√	೪
೩	ಚಿಕ್ಕಮಧುರೆ				√		೧
೪	ಪರಶ್ರಾಂಪುರ			√			೧
೫	ತೊರೆಕೋಲಮ್ಮನಹಳ್ಳಿ				√		೧
೬	ಜಿಗತನಹಳ್ಳಿ			√	√	√	೩
೭	ನಾಯಕನಹಟ್ಟಿ				√		೧
೮	ಪಿ.ಗೌರಿಪುರ			√	√	√	೩
೯	ಗಂಜಿಗುಂಟೆ		√		√		೨
೧೦	ಗೋಸಿಕೆರೆ			√		√	೨
೧೧	ಸೂರನಹಳ್ಳಿ			√	√	√	೩
೧೨	ದೇವರಮರಿಕುಂಟೆ				√	√	೨
೧೩	ತಿಪ್ಪಾರೆಡ್ಡಿಹಳ್ಳಿ			√	√	√	೩
೧೪	ದೊಡ್ಡಬೀರನಹಳ್ಳಿ			√	√	√	೩
೧೫	ಕರೀಕೆರೆ			√	√		೨

೧೬	ಜಾಜೂರು			√	√		೨
೧೭	ಲಿಂಗದಹಳ್ಳಿ			√			೧
೧೮	ಬೆನಕನಹಳ್ಳಿ			√			೧
೧೯	ದೊಡ್ಡ ಉಳ್ಳಾರ್ತಿ			√	√	√	೩
೨೦	ಹಿರೇಮಧುರೆ			√	√	√	೩
೨೧	ವಿಡಪಲಕುಂಟೆ		√	√	√	√	೪
೨೨	ಕ್ಯಾತಗೊಂಡನಹಳ್ಳಿ			√	√	√	೩
೨೩	ಬಂಡೆಹಟ್ಟಿ			√			೧
೨೪	ಟಿ.ಎನ್.ಕೋಟೆ			√	√		೨
೨೫	ಮದ್ದನಕುಂಟೆ			√			೧
೨೬	ಯೆಲಗಟ್ಟೆ			√			೧
೨೭	ಸಾಣೆಕೆರೆ				√	√	೨
೨೮	ಕನ್ನೇನಹಳ್ಳಿ				√		೧
೨೯	ಸೋಮಗುದ್ದು			√	√	√	೩
೩೦	ರೇಣುಕಾಪುರ			√	√	√	೩
೩೧	ಮತ್ಸಸಮುದ್ರ			√	√	√	೩
೩೨	ಬೊಂಬೆರೆಹಳ್ಳಿ			√	√	√	೩
೩೩	ನಲ್ಲೂರಹಳ್ಳಿ			√	√	√	೩
೩೪	ಸಿದ್ದೇಶ್ವರನದುರ್ಗ			√		√	೨
೩೫	ಎನ್.ಗೌರಿಪುರ			√			೧
೩೬	ಜುಂಜನಗುಂಟೆ			√		√	೨
೩೭	ಬೆಳಗೆರೆ			√		√	೨
೩೮	ಚೌಳೂರು			√		√	೨

೩೯	ದ್ಯಾವರಹಳ್ಳಿ			√		√	೨
೪೦	ಭರಮಸಾಗರ			√		√	೨
೪೧	ಯಾದಲಗಟ್ಟೆ	√ ಅಂತ್ಯ	√	√	√	√	೫
೪೨	ಬೊಮ್ಮನಕುಂಟೆ		√	√		√	೩
೪೩	ಪುರ್ಲಹಳ್ಳಿ		√	√	√	√	೪
೪೪	ದೊಡ್ಡೇರಿ		√	√	√	√	೪
೪೫	ಕಾಲುವೆನಹಳ್ಳಿ		√	√	√	√	೪
೪೬	ರಾಮದುರ್ಗ			√		√	೨
೪೭	ಜನ್ನಿಗನಾಳ್					√	೧
೪೮	ಪೆಲೂರಹಟ್ಟಿ					√	೧
೪೯	ಎನ್.ದೇವರಹಳ್ಳಿ					√	೧
೫೦	ಬೇಡರೆಡ್ಡಿಹಳ್ಳಿ				√		೧
೫೧	ಪಾಲನಾಯಕನಕೋಟೆ				√		೧
೫೨	ರಂಗವ್ವನಹಳ್ಳಿ				√		೧
೫೩	ಮನ್ನೇಕೋಟೆ				√		೧
೫೪	ರೇಖಲೆಗೆರೆ ಕಾವಲು				√	√	೨
೫೫	ಚಳ್ಳಕೆರೆ ನಗರ			√		√	೨
೫೬	ನಾಗಗೊಂಡನಹಳ್ಳಿ			√	√		೨
೫೭	ಬಸಾಪುರ			√			೧
೫೮	ಕೊನಿಗ್ಗಿರನಹಳ್ಳಿ			√			೧
೫೯	ಹುಲಿಕುಂಟೆ			√			೧
೬೦	ಹೆಗ್ಗರೆ			√			೧

೬೧	ನೆಲಗೇತಲಹಟ್ಟಿ				√		೧
	ಒಟ್ಟು	೧	೮	೪೫	೩೭	೩೫	೧೨೬

ಚಿತ್ರದುರ್ಗ ತಾಲೂಕು

ಕ್ರ ಸಂ.	ನೆಲೆಯ ಹೆಸರು	ಹಳೇ ಶಿಲಾಯುಗ	ಮಧ್ಯ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ		ಒಟ್ಟು ನೆಲೆಗಳು
					ಗೋರಿ	ನೆಲೆ	
೧	ಚಂದ್ರವಳ್ಳಿ ವ್ಯಾಪ್ತಿ (ನೇರ್ಲಗುಂದಿ, ಬಾರ್ಲಗುಂದಿ)		√	√	√	√	೪
೨	ಇಂಗಳದಾಳ್		√	√	√	√	೪
೩	ಚಿಕ್ಕೇನಹಳ್ಳಿ		√	√	√	√	೪
೪	ಕುರುಮರಡಿಕೆರೆ			√			೧
೫	ಚಿಪ್ಪಿನಕೆರೆ			√		√	೨
೬	ಚಿತ್ರದುರ್ಗ ನಗರವ್ಯಾಪ್ತಿ (ತಿಮ್ಮಣ್ಣನಾಯಕನ ಕೆರೆ, ದವಳಪ್ಪನ ಗುಡ್ಡ, ಚೇಳುಗುಡ್ಡ)		√	√		√	೩
೭	ಸುಲ್ತಾನಿಪುರ				√		೧
೮	ಜಾಲಿಕಟ್ಟೆ					√	೧
೯	ಜೆ.ಎನ್.ಕೋಟೆ		√	√	√	√	೪
೧೦	ತಮಟಕಲ್ಲು			√	√	√	೩
೧೧	ಬೊಮ್ಮಕ್ಕನಹಳ್ಳಿ			√			೧

	(ಭೀಮಸಮುದ್ರ)						
೧೨	ಆಡಮಲ್ಲೇಶ್ವರ				√		೧
೧೩	ಹೊಸದ್ಯಾಮವ್ವನ ಹಳ್ಳಿ			√		√	೨
೧೪	ಸಂಗೇನಹಳ್ಳಿಕೆರೆ	√ (ಆದಿ, ಮಧ್ಯ)		√		√	೩
೧೫	ಗೋಸಿರಪ್ಪನಗುಡ್ಡ				√		೧
೧೬	ಕುಂಚಿಗನಾಳು				√	√	೨
೧೭	ದೇವಿಕೆರೆ			√			೧
೧೮	ದೊಡಗಟ್ಟ					√	೧
೧೯	ಹವಳೇನಹಳ್ಳಿ				√		೧
೨೦	ಗಂಜಿಗಟ್ಟೆ				√		೧
೨೧	ಮಲ್ಲಾಪುರ				√		೧
೨೨	ತುರುವನೂರು				√		೧
೨೩	ಬಾಗೇನಹಾಳು					√	೧
೨೪	ಬೆಳಗಟ್ಟ				√		೧
೨೫	ಚಿನ್ನೂರಿನ ತಿಪ್ಪಯ್ಯನಹಟ್ಟಿ				√		೧
೨೬	ಕಲ್ಲೇನಹಳ್ಳಿ					√	೧
೨೭	ವೀರಮದಕರಿಪುರ					√	೧
೨೮	ಚಿಕ್ಕಕಬ್ಬಿಗೆರೆ				√		೧
೨೯	ಕೂನಬೇವು	√ (ಆದಿ ಮಧ್ಯ)		√	√		೩

೩೦	ಹುಲ್ಲೇಹಾಳ್				√		೧
೩೧	ಕೋತಿಗುಡ್ಡ				√		೧
೩೨	ಗೊಡಬನಹಾಳ್	√ (ಆದಿ)					೧
೩೩	ಹೊಸಕಲ್ಲಹಳ್ಳಿ			√			೧
೩೪	ಕೆಳಗಳಹಟ್ಟಿ					√	೧
೩೫	ಪಂಡ್ರಹಳ್ಳಿ					√	೧
೩೬	ಗೊನೂರು					√	೧
೩೭	ಸೊಲ್ಲಾಪುರ					√	೧
೩೮	ಕೆನ್ನಾಡಲು			√			೧
೩೯	ದೊಡ್ಡಾಲಘಟ್ಟ				√		೧
೪೦	ಕಡ್ಲೇಗುದ್ದು				√		೧
೪೧	ಬಸ್ತಿಹಳ್ಳಿ				√		೧
೪೨	ಹುಣಸೆಕಟ್ಟೆ			√			೧
	ಒಟ್ಟು	೩	೫	೧೬	೨೪	೧೭	೬೫

ಮೊಳಕಾಲ್ಮೂರು ತಾಲೂಕು

ಕ್ರ ಸಂ.	ನೆಲೆಯ ಹೆಸರು	ಹಳೇ ಶಿಲಾಯುಗ	ಮಧ್ಯ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ		ಒಟ್ಟು ನೆಲೆಗಳು
					ಗೋರಿ	ನೆಲೆ	
೧	ಜಟಂಗಿರಾಮೇಶ್ವರ			√	√	√	೩

೨	ಬ್ರಹ್ಮಗಿರಿ		√	√	√	√	೪
೩	ನುಂಕೆಮಲೆ		√	√	√		೩
೪	ಮೊಳಕಾಲ್ಮೂರು					√	೧
೫	ಹಳೆಕೆರೆ		√	√	√		೩
೬	ಹಾನಗಲ್ಲು		√	√	√		೩
೭	ಅಕ್ಕಮ್ಮನಗುಡ್ಡ				√		೧
೮	ಕೈಗುಡ್ಡ				√		೧
೯	ಮೊರ್ಲುಬಂಡೇಗುಡ್ಡ				√		೧
೧೦	ಪೂಜಾರಹಟ್ಟಿ		√		√		೨
೧೧	ಬೊಮ್ಮಕ್ಕನಹಳ್ಳಿ			√			೧
೧೨	ಕೋನಸಾಗರ			√	√		೨
೧೩	ಕೆಳಗಿನಹಟ್ಟಿ			√			೧
೧೪	ಬಸಾಪುರ			√			೧
೧೫	ವಡೇರಹಳ್ಳಿ			√	√		೨
೧೬	ಹಿರೆಕೆರೆಹಳ್ಳಿ			√	√		೨
೧೭	ವೆಂಕಟಾಪುರ			√			೧
೧೮	ಸಂತೆಗುಡ್ಡ			√	√	√	೩
೧೯	ಬಾಂಡ್ರಾವಿ			√	√		೨
೨೦	ಹನುಮನಗುಡ್ಡ			√			೧
೨೧	ದಡಗೂರು				√		೧
೨೨	ನಾಗಸಮುದ್ರ				√		೧
೨೩	ತಳವಾರಹಳ್ಳಿ				√		೧
೨೪	ಭಟ್ಟರಹಳ್ಳಿ				√		೧

೨೫	ಭೈರಾಪುರ				√		೧
೨೬	ಮೇಗಳಹಳ್ಳಿ				√		೧
೨೭	ಮೆಟ್ರಿ				√		೧
೨೮	ಯರ್ರನಹಳ್ಳಿ				√		೧
೨೯	ರಾಮಸಾಗರ				√		೧
೩೦	ಕೆ.ರಾಯಪುರ				√		೧
	ಒಟ್ಟು		೫	೧೫	೨೪	೪	೪೮

ಹಿರಿಯೂರು ತಾಲೂಕು

ಕ್ರ ಸಂ.	ನೆಲೆಯ ಹೆಸರು	ಹಳೇ ಶಿಲಾಯುಗ	ಮಧ್ಯ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ		ಒಟ್ಟು ನೆಲೆಗಳು
					ಗೋರಿ	ನೆಲೆ	
೧	ರಂಗನಾಥಪುರ			√	√	√	೩
೨	ಬಸಪ್ಪನಮಾಳಿಗೆ			√		√	೨
೩	ಕಂದೀಕೆರೆ		√	√		√	೩
೪	ಎಂ.ಡಿ.ಕೋಟೆ		√	√	√	√	೪
೫	ಹೆಗ್ಗೆರೆ			√		√	೨
೬	ಬೇತೂರು			√		√	೨
೭	ಮರಡಿಹಳ್ಳಿ			√	√		೨
೮	ನೆರೆನಾಳು				√	√	೨
೯	ನಂದಿಹಳ್ಳಿ			√		√	೨
೧೦	ಹಳೆಯನಾಡು			√	√	√	೩
೧೧	ಮಾಳಪ್ಪನಗುಡ್ಡ			√		√	೨

೧೨	ಹುಲಗುಲಕುಂಟೆ			√	√		೨
೧೩	ಶಿಡ್ಲ್ಯನಕೋಟೆ			√	√	√	೩
೧೪	ಹರ್ತಿಕೋಟೆ			√	√	√	೩
೧೫	ಕೂಡ್ಲಹಳ್ಳಿ			√	√	√	೩
೧೬	ಭರಮಪುರ				√		೧
೧೭	ಪಾಲವ್ವನಹಳ್ಳಿ			√	√	√	೩
೧೮	ರಂಗೇನಹಳ್ಳಿ			√		√	೨
೧೯	ಕುಂದರಲಗುರ			√			೧
೨೦	ಐಮಂಗಲ			√			೧
೨೧	ಅಬ್ಬಿನಹೊಳೆ			√	√	√	೩
೨೨	ಕರಿಓಬನಹಳ್ಳಿ			√		√	೨
೨೩	ತವಂದಿ			√		√	೨
೨೪	ಭೀಮನಬಂಡೆ			√			೧
೨೫	ಪರಮೇನಹಳ್ಳಿ				√		೧
೨೬	ಇದ್ದಿಲನಾಗೇನಹಳ್ಳಿ			√		√	೨
೨೭	ಸೋಮೇರನಹಳ್ಳಿ			√			೧
	ಒಟ್ಟು		೨	೨೪	೧೩	೧೯	೫೮

ಹೊಸದುರ್ಗ ತಾಲೂಕು

ಕ್ರ ಸಂ.	ನೆಲೆಯ ಹೆಸರು	ಹಳೆ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ		ಒಟ್ಟು ನೆಲೆಗಳು
					ಗೋರಿ	ನೆಲೆ	
೧	ಗರಗ			√			೧
೨	ತಣಿಗೆಕಲ್ಲು			√			೧

೩	ಕಿಟ್ಟದಾಳ್			√	√		೨
೪	ಹಿಂಡೆದೇವರಹಟ್ಟಿ			√	√		೨
೫	ದುಗ್ಗಾವರ			√	√		೨
೬	ಜಾನಕಲ್ಲು	√	√		√		೩
೭	ಕೆಂಕೆರೆ				√		೧
೮	ದೊಡ್ಡಕಿಟ್ಟದಾಳು				√		೧
೯	ಸಣ್ಣ ಕಿಟ್ಟದಾಳು				√		೧
೧೦	ಬೆನಕನಹಳ್ಳಿ				√		೧
೧೧	ಹೊನ್ನೇನಹಳ್ಳಿ				√		೧
೧೨	ವೀರನಾಗತೀಹಳ್ಳಿ				√		೧
೧೩	ಅಂಚಿಬಾರೀಹಟ್ಟಿ				√		೧
೧೪	ಕೆರೆಕೋಡಿಹಟ್ಟಿ				√		೧
೧೫	ಇಟ್ಟಿಗೆಹಳ್ಳಿ				√		೧
೧೬	ನಿರುವುಗಲ್ಲು				√		೧
೧೭	ಅತ್ತಿಮೊಗೆ				√		೧
೧೮	ಮಲ್ಲಾಪುರ				√		೧
೧೯	ಮಾಡದಕೆರೆ				√		೧
೨೦	ಬ್ಯಾಡರಹಳ್ಳಿ				√		೧
೨೧	ಬಲ್ಲಾಳಸಮುದ್ರ				√		೧
೨೨	ಹೊಸದುರ್ಗ				√		೧
೨೩	ಬನಸೇನಹಳ್ಳಿ				√		೧
೨೪	ಸೂಜಿಗಲ್ಲು				√		೧
೨೫	ಗೂಳಿಹಳ್ಳಿ				√		೧

೧೬	ಕಲ್ಲೋಡು				√		೧
೧೭	ಗೂಳಿಹಟ್ಟಿಯ ಬೋವಿಹಟ್ಟಿ				√		೧
೧೮	ದೊಡ್ಡಘಟ್ಟ				√		೧
೧೯	ಲಂಬಾಣಿಹಟ್ಟಿ				√		೧
೨೦	ಡಿ.ಮಲ್ಲಾಪುರ				√		೧
	ಒಟ್ಟು	೧	೧	೫	೧೮		೨೫

ಹೊಳಲ್ಕೆರೆ ತಾಲೂಕು

ಕ್ರ ಸಂ.	ನೆಲೆಯ ಹೆಸರು	ಹಳೇ ಶಿಲಾಯುಗ	ಸೂಕ್ಷ್ಮ ಶಿಲಾಯುಗ	ನೂತನ ಶಿಲಾಯುಗ	ಬೃಹತ್ ಶಿಲಾಯುಗ		ಒಟ್ಟು ನೆಲೆಗಳು
					ಗೋರಿ	ನೆಲೆ	
೧	ತಾಳ್ಯ	√ (ಆದಿ)			√		೨
೨	ಗೂಳಿ ಹೊಸಹಳ್ಳಿ				√		೧
೩	ಗಂಜಿಗಟ್ಟೆ				√		೧
೪	ಬೂದಿಪುರ					√	೧
೫	ರಾಮಗಿರಿ			√	√	√	೩
೬	ಸಿರಪ್ಪನಹಳ್ಳಿ				√		೧
೭	ಹುಲಿಕೆರೆ				√		೧
೮	ಹಳ್ಳಿಹಳ್ಳಿ ಲಂಬಾಣಿಹಟ್ಟಿ				√		೧
೯	ಮಿಂಚೇರಿಗುಡ್ಡ				√		೧
೧೦	ನಂದನಹೊಸೂರು				√		೧

೧೧	ಹೊಳಲ್ಕೆರೆ				√		೧
೧೨	ಗಟ್ಟಿಹೊಸಳ್ಳಿ				√	√	೨
೧೩	ಜಾಜೂರು				√		೧
೧೪	ಕೊಡಗವಳ್ಳಿ			√			೧
೧೫	ಚಿಕ್ಕಂದವಾಡಿ				√		೧
	ಒಟ್ಟು	೧		೨	೧೩	೩	೧೯

ಅಡಿಟಿಪ್ಪಣಿಗಳು

೧. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ೦೫.೦೪.೯೬.

೨. ಅದೇ,

೩. ಅ.ಸುಂದರ(ಸಂ), ಕರ್ನಾಟಕ ಚರಿತ್ರೆ ಸಂಪುಟ:೧, ೧೯೯೪, ಪು–೧೮೬,೧೮೭.

೪. ಇತಿಹಾಸ ದರ್ಶನ ಸಂಪುಟ–೨೭, ೨೦೧೨, ಪು–೮,೯.

೫. ಅದೇ, ಪು–೮,೯.

೬. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ೦೫/೦೧/೨೦೧೧.

೭. ಅದೇ.

೮. ಇತಿಹಾಸ ದರ್ಶನ ಸಂಪುಟ–೨೬, ೨೦೧೧, ಪು–೧೮.

೯. ಲಕ್ಷ್ಮಣ್ ತೆಲಗಾವಿ, ವೆಂಕಣ್ಣಾಚಾರ್ ಮತ್ತು ಹು.ಶ್ರೀ.ಜೋಯಿಸರು, ಚಿತ್ರದುರ್ಗ ಜಿಲ್ಲಾ ದರ್ಶಿನಿ, ೧೯೮೦, ಪು–೬೨.

೧೦. ಸೂರ್ಯನಾಥ್ ಯು. ಕಾಮತ್, ಕರ್ನಾಟಕ ಗ್ಯಾಸೆಟಿಯರ್:೩, ೧೯೮೬, ಪು–೪೯೯.

೧೧. ಎಸ್.ವೈ ಸೋಮಶೇಖರ್(ಸಂ), ಬ್ರಹ್ಮಗಿರಿ, ೨೦೧೦, ಪು–೪೨.

೧೨. ಏನ್ಸಿಯಂಟ್ ಇಂಡಿಯ(ಐ.ಎ.ನಂ–೪), ೧೯೮೪, ಪು–೨೭೧.

೧೩. ಅದೇ, ಪು–೨೭೨.

೧೪. ಅದೇ, ಪು–೨೭೩,೨೭೪.

೧೫. ಗಿರಿಜಾ.ಟಿ, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು–೯೭.

೧೬. ಲಕ್ಷ್ಮಣ್ ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, ೨೦೦೪, ಪು–೧೬೩.

೧೮. ಅದೇ, ಪು–೧೬೩.

೧೯. ಇತಿಹಾಸ ದರ್ಶನ ಸಂಪುಟ–೧೧, ೧೯೯೬, ಪು–೩೨.

೨೦. ಎಸ್.ಜಿ.ರಾಮದಾಸರೆಡ್ಡಿ, ಚಿತ್ರದುರ್ಗ ಜಿಲ್ಲೆ ಪ್ರಾಕ್ಚಾರಿತ್ರಿಕ, ೨೦೦೯, ಪು–೧೫೭.

೨೧. ನವಶಿಲಾಯುಗದ ಕಲ್ಲಿನ ಕೂಡಲಿ ಪತ್ತೆ, ಪ್ರಜಾವಾಣಿ, ೩೧.೦೭.೦೮.

೨೨. ಎಂ.ಎ.ಆರ್ ವರದಿ:೧೯೪೭–೫೬, ೧೯೬೪, ಪು–೩೬.

೨೩. ಪ್ರಜಾವಾಣಿ ದಿನ ಪತ್ರಿಕೆ, ೦೩.೦೮.೨೦೦೩.

೨೪. ಗೋಪಾಲ್.ಆರ್(ಸಂ), ಪೂರ್ವೋಕ್ತ, ೨೦೦೫, ಪು–೪೧.

೨೫. ಪ್ರಜಾವಾಣಿ ದಿನ ಪತ್ರಿಕೆ, ೦೩.೦೮.೨೦೦೩.

೨೬. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ೨೬.೦೧.೨೦೦೬.

೨೭. ಶರತ್ ಬಾಬು ಕೆ.ಎಸ್, ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ (ಕ.ವಿ.ವಿ. ಎಂ.ಫಿಲ್ ಪ್ರಬಂಧ), ೨೦೧೦, ಪು-೩೨.

೨೮. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ೧೨.೦೮.೦೯.

೨೯. ಇತಿಹಾಸ ದರ್ಶನ ಸಂಪುಟ-೨೨, ೨೦೦೭, ಪು-೧೫.

೩೦. ಸೋಮಶೇಖರ್ ಎಸ್.ವೈ, ಕರ್ನಾಟಕ ದೇವಾಲಯ ಕೋಶ-ಚಿತ್ರದುರ್ಗ ಜಿಲ್ಲೆ, ೨೦೧೭, ಪು-೧೧೮.

೩೧. ಜನಸಾಗರ ದಿನ ಪತ್ರಿಕೆ, ೧೦.೦೮.೧೦.

೩೨. ಗಿರಿಜಾ.ಟಿ, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು-೧೧೨.

೩೩. ಇತಿಹಾಸ ದರ್ಶನ ಸಂಪುಟ-೧೯, ೨೦೦೪, ಪು-೦೨.

೩೪. ಅ.ಸುಂದರ, ಪ್ರಾಚ್ಯವಸ್ತು ಸಂಶೋಧನೆ, ೧೯೭೨, ಪು-೨೪.

೩೫. ಇತಿಹಾಸ ದರ್ಶನ ಸಂಪುಟ-೧೯, ೨೦೦೪, ಪು-೨.

೩೬. ಅದೇ, ಪು-೨.

೩೭. ಇತಿಹಾಸ ದರ್ಶನ ಸಂಪುಟ-೨೨, ೨೦೦೭, ಪು-೧೫.

೩೮. ಇತಿಹಾಸ ದರ್ಶನ ಸಂಪುಟ-೧೪, ೧೯೯೯, ಪು-೧೩, ೧೫.

೩೯. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೫೪

೪೦. ಅದೇ, ಪು-೫೬.

೪೧. ಅದೇ, ಪು-೫೯.

೪೨. ಅದೇ, ಪು-೫೯.

೪೩. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೬೩.

೪೪. ಅದೇ, ಪು-೬೩.

೪೫. ಅದೇ, ಪು-೬೩.

೪೬. ಅದೇ, ಪು-೭೯.

೪೭. ಇತಿಹಾಸ ದರ್ಶನ ಸಂಪುಟ-೨೮, ೨೦೧೩, ಪು-೦೧.

೪೮. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೪೨.

೪೯. ಪ್ರಜಾವಾಣಿ ದಿನ ಪತ್ರಿಕೆ, ೨೬.೦೬.೨೦೧೬.

೫೦. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೪೨.

೫೧. ಅದೇ, ಪು-೧೩

೫೨. ಅದೇ, ಪು-೬೮.

೫೩. ಅದೇ, ಪು-೬೮.

೫೪. ಅದೇ, ಪು-೮೫.

೫೫. ಅದೇ, ಪು-೯೨.

೫೬. ಅದೇ, ಪು-೯೨.

೫೭. ಅದೇ, ಪು-೧೫೩.

೫೮. ದುರ್ಗದಕೂಗು ದಿನ ಪತ್ರಿಕೆ, ೨೩/೧೧/೧೦.

೫೯. ಇ.ದ.ಸಂ-೨೩, ೨೦೦೮, ಪು-೧೩.

೬೦. ಅದೇ, ಪು-೧೩.

೬೧. ಇತಿಹಾಸ ದರ್ಶನ ಸಂಪುಟ-೨೩, ೨೦೦೮, ಪು-೧೩.

೬೨. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೫೩.

೬೩. ಸಂತೋಷ ಕುಮಾರ್ ಕೆ.ವಿ, ಹೊಳಲ್ಕೆರೆ ತಾಲೂಕು ದರ್ಶನ, ೨೦೧೬, ಪು-೧೧೧.

೬೪. ಅದೇ, ಪು-೧೧೧.

೬೫. ಪ್ರಜಾವಾಣಿ ದಿನ ಪತ್ರಿಕೆ, ೦೨.೦೫.೨೦೧೦.

೬೬. ಸಂತೋಷ ಕುಮಾರ್ ಕೆ.ವಿ, ಪೂರ್ವೋಕ್ತ, ೨೦೧೬, ಪು-೧೩೭.

೬೭. ಪ್ರಜಾವಾಣಿ ದಿನ ಪತ್ರಿಕೆ, ೦೨.೦೫.೨೦೧೦.

೬೮. ಸಂತೋಷ ಕುಮಾರ್ ಕೆ.ವಿ, ಪೂರ್ವೋಕ್ತ, ೨೦೧೬, ಪು-೧೧೨.

೬೯. ಮಹಂತೇಶ ಎನ್.ಎಸ್, ಹೊಸದುರ್ಗ ತಾಲೂಕು ಪರಿಸರ: ಸಾಂಸ್ಕೃತಿಕ ಅಧ್ಯಯನ (ಕ.ವಿ.ವಿ ಮಹಾಪ್ರಬಂಧ), ೨೦೧೨, ಪು-೧೧೯.

೭೦. ಅದೇ, ಪು-೧೬.

೭೧. ಅದೇ, ಪು-೧೧೭.

೭೨. ಅದೇ, ಪು-೧೦೮.

೭೩. ಅದೇ, ಪು-೧೦೮.

೭೪. ಅದೇ, ಪು-೧೧೦.

೭೫. ಅದೇ, ಪು-೧೧೦.

೭೬. ಅದೇ, ಪು-೧೦೩.

೭೭. ಅ.ಸುಂದರ, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, ೧೯೭೩, ಪು-೧೦.

೭೮. ಅದೇ. ಪು-೨೨.

೭೯. ಅದೇ, ಪು-೨೩.

೮೦. ಅದೇ, ಪು-೨೪.

೮೧. ಅದೇ, ಪು-೨೫.

೮೨. ಅದೇ, ಪು-೨೬.

೮೩. ಎಸ್.ಜಿ.ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೫೩.

೮೪. ವಿಜಯ ಕರ್ನಾಟಕ ದಿನ ಪತ್ರಿಕೆ, ೦೩.೦೮.೨೦೦೩.

೮೫. ಲಕ್ಷ್ಮಣ್ ತೆಲಗಾವಿ(ಸಂ), ಹರತಿಸಿರಿ, ೧೯೮೨, ಪು-೪೦೭.

೮೬. ಅದೇ, ಪು-೪೨೧.

೮೭. ಅದೇ, ಪು-೪೨೨.

೮೮. ಅದೇ, ಪು-೪೨೨.

ಅಧ್ಯಾಯ ನಾಲ್ಕು : ಸಂಸ್ಕೃತಿ

ಅಧ್ಯಾಯ-ನಾಲ್ಕು

ಸಂಸ್ಕೃತಿ

ಸಂಸ್ಕೃತಿ ಎಂಬ ಶಬ್ಧವು ಇಂಗ್ಲೀಷ್‌ನ ಕಲ್ಚರ್ ಎಂಬುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ. ಸಂಸ್ಕೃತಿಯು ಮಾನವ ಸಮುದಾಯದ ಸಂಪ್ರದಾಯಗಳಿಂದ ಹಿಡಿದು ವೈಯಕ್ತಿವಾದ ಆಚರಣೆಗಳವರೆಗೂ ವ್ಯಾಪ್ತಿ ಹಬ್ಬಿದೆ. ನಡೆ, ನುಡಿ, ಆಚಾರ, ಪದ್ಧತಿಗಳು ಸಾಮಾಜಿಕ ಶಿಕ್ಷಣ, ನೈತಿಕತೆ ಮೊದಲಾದವು ಸಂಸ್ಕೃತಿಯ ಪರಿಕರಗಳು. ನಾಗರಿಕತೆಗಳು ಬೆಳೆದಿದ್ದು ಸುಸಂಸ್ಕೃತಿಯ ತಳಮಟ್ಟದಿಂದ ಎನ್ನುವುದನ್ನು ಮರೆಯುವಂತಿಲ್ಲ. ಬಟ್ಟೆಯಿಲ್ಲದೆ ಅಲೆಮಾರಿಯಾಗಿ ತಿರುಗುತ್ತಿದ್ದ ಮಾನವ ಮರದ ತೊಗಟೆ ಮತ್ತು ಪ್ರಾಣಿ ಚರ್ಮವನ್ನು ಬಟ್ಟೆಗಳಾಗಿ ತೊಡುವುದನ್ನು ಕಲಿತದ್ದು, ಬದಲಾವಣೆಯ ಸಂಸ್ಕೃತಿ. ಕಲ್ಲಿನ ಉಪಕರಣಗಳನ್ನು ಹಳೆ ಶಿಲಾಯುಗದಿಂದ ಬೃಹತ್ ಶಿಲಾಯುಗದವರೆಗೆ ಬಳಸಿಕೊಂಡು ಬಂದಿರುವುದು ಪರಂಪರೆಯ ಸಂಸ್ಕೃತಿ. ವರ್ಣಚಿತ್ರಗಳನ್ನು ಬಿಡಿಸುವುದು, ಕಲ್ಲಿನ ಕೊಡಲಿಯನ್ನು ತಯಾರಿಸುವುದು, ಆಹಾರ ಧಾನ್ಯವನ್ನು ಬೆಳೆಯುವುದು, ಲೋಹವನ್ನು ಬಳಸುವುದು, ಅಲಂಕಾರಿಕ ಮಡಕೆಗಳನ್ನು ಬಳಸುವುದು, ಶವಸಂಸ್ಕಾರ ಮಾಡುವುದು ಮುಖ್ಯವಾಗಿ ಒಂದು ಕಡೆ ನೆಲೆ ನಿಲ್ಲುವುದು ನವ ಶಿಲಾಯುಗದ ಮಾನವರ ಸಂಸ್ಕೃತಿ. ಕೃಷಿ, ಪಶುಸಂಗೋಪನೆ, ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಯ ಬಳಕೆ, ಬಂಡೆಗಳ ಮೇಲೆ ಚಿತ್ರಗಳನ್ನು ಕುಟ್ಟುವುದು, ವಿವಿಧ ರೀತಿಯ ಶವಸಂಸ್ಕಾರ ಮಾಡುವುದು ಮತ್ತು ಶಿಲಾಸಮಾಧಿಗಳ ರಚನೆಯು ನವ ಶಿಲಾಯುಗಕ್ಕಿಂತ ಬೃಹತ್ ಶಿಲಾಯುಗದ ಸಂಸ್ಕೃತಿಯು ಭಿನ್ನವಾಗಿದೆ. ನಿಜವಾದ ಸಂಸ್ಕೃತಿಯು ಆರಂಭವಾಗಿದ್ದು, ಸೂಕ್ಷ್ಮ ಶಿಲಾಯುಗದಿಂದ ಏಕೆಂದರೆ ಒಂದು ಕಡೆ ನೆಲೆಸುವುದಕ್ಕೆ

ಪ್ರಾರಂಭಿಸಿದ್ದರಿಂದ ಈ ಹೇಳಿಕೆ ಸತ್ಯವೆನಿಸುವುದು. ಪ್ರಾಗಿತಿಹಾಸಕಾಲದ ಜನಾಂಗ, ಕೃಷಿ, ಆಯುಧಗಳು, ಕಲೆ, ಶವಸಂಸ್ಕಾರ ಪದ್ಧತಿ ಮೊದಲಾದ ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

೪.೧ ಜನಾಂಗ

ದೈಹಿಕ ಲಕ್ಷಣದ ಆಧಾರದ ಮೇಲೆ ಜನಾಂಗವನ್ನು ಗುರುತಿಸಲಾಗುತ್ತದೆ. ಪ್ರಾಚೀನವಾದ ಶಿಲಾಯುಗದಲ್ಲಿದ್ದ ವಿವಿಧ ಜನಾಂಗವನ್ನು ಚರ್ಚಿಸುವುದು ಉಚಿತ. ಹಳೆ ಶಿಲಾಯುಗದಲ್ಲಿ ಹೋಮೋ ಹ್ಯಾಬಿಲಿಸ್, ಹೋಮೋ ಎರಕ್ಟಾಸ್, ನಿಯೋಂಡ್ರಾಥಾಲ್ ಮಾನವರಿದ್ದರು[೧]. ಇವರಿಗಿಂತ ಪೂರ್ವಜ ಅಸ್ಟ್ರೋಲೋಪೆಥಿಕಸ್ ಮಾನವ[೨]. ಸೂಕ್ಷ್ಮ ಶಿಲಾಯುಗದಲ್ಲಿ ಹೋಮೋ ಸೆಫಿಯನ್ಸ್[೩] ಹಾಗೂ ನವ ಮತ್ತು ಬೃಹತ್ ಶಿಲಾಯುಗದಲ್ಲಿ ಹೋಮೋ ಸೆಫಿಯನ್ಸ್ ಮಾನವರಿದ್ದರು[೪]. ಹೋಮೋ ಸೆಫಿಯನ್ಸ್ ಮಾನವನ ದೇಹ ರಚನೆಯಲ್ಲಿ ಸ್ಪಷ್ಟವಾದ ರೂಪ ಬಂದಿರುವ ಕಾರಣ ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ಜನಾಂಗೀಯ ಲಕ್ಷ್ಮಣಗಳು ಕಾಣಿಸಿಕೊಳ್ಳುತ್ತವೆ. ಈ ಹೇಳಿಕೆಗೆ ಬ್ರಹ್ಮಗಿರಿ, ಹೆಗ್ಗಡೆಹಳ್ಳಿ, ಟಿ. ನರಸೀಪುರ, ಮತ್ತಿತರ ನೆಲೆಗಳಲ್ಲಿ ನಡೆದ ಉತ್ಖನನದಲ್ಲಿ ದೊರೆತಿರುವ ಮೂಳೆ ಅವಶೇಷಗಳು ಸಾಕ್ಷಿ. ಬ್ರಹ್ಮಗಿರಿ ಉತ್ಖನನದಲ್ಲಿ ದೊರೆತ ಅಸ್ಥಿ ಅವಶೇಷಗಳು, ನವ ಶಿಲಾಯುಗದಲ್ಲಿ ಅಸ್ಟ್ರಲಾಯ್ಡ್ ಬುಡಕಟ್ಟಿನ ಜನರು ಇದ್ದರೆಂದು ತಿಳಿಸುತ್ತದೆ[೫]. ಪಿಕ್ಲಿಹಾಳ್, ತೆಕ್ಕಲಕೋಟೆ, ಟಿ. ನರಸೀಪುರದಲ್ಲಿ ದೊರೆತ ಅಸ್ಥಿ ಅವಶೇಷಗಳು ಅಸ್ಟ್ರಲಾಯ್ಡ್ ಜನರು ಇದ್ದರೆಂಬುದಕ್ಕೆ ಪೂರಕ ಮಾಹಿತಿ ಇದು[೬]. ತೆರೆದಾಳದಲ್ಲಿ ಶಿಲಾತಾಮ್ರಯುಗದ ಶವಕುಣಿಯ ಮೇಲೆ ದುಂಡಾಗಿ ಕಲ್ಲು ರಾಶಿಯನ್ನು ಏರಿಸುವ ಪದ್ಧತಿಯಿದ್ದು, ಈ ರಚನೆಯಲ್ಲಿ ಅಸ್ಟ್ರಲಾಯ್ಡ್ ಜನಾಂಗವನ್ನು ಹೊರತುಪಡಿಸಿ ಮೆಡಿಟರೇನಿಯನ್ ಬುಡಕಟ್ಟಿನವರ ಪಾತ್ರವಿರುವ ಸಾಧ್ಯತೆಗಳಿವೆ[೭]. ಅಂದರೆ ಬೃಹತ್ ಶಿಲಾಸಮಾಧಿ ರಚನೆಗಳು ಶಿಲಾ ತಾಮ್ರಯುಗದಿಂದಲೇ ಆರಂಭವಾಗಿದ್ದೆನ್ನಬಹುದು. ಕಬ್ಬಿಣಯುಗದಲ್ಲಿ ಕಬ್ಬಿಣವನ್ನು ಅರಿತಿದ್ದವರೆಂದರೆ ಸಿಥಿಯ ಮತ್ತು ಇರಾನ್ ಬುಡಕಟ್ಟಿನವರು[೮]. ಈ ಬುಡಕಟ್ಟಿನವರು ಮೆಡಿಟರೇನಿಯನ್ ಜನಾಂಗದ ಲಕ್ಷಣವನ್ನು ಹೊಂದಿದ್ದಾರೆ[೯]. ಈ ಮೂಲಕ ಬೃಹತ್ ಶಿಲಾಯುಗದ ಕಲ್ಗೋರಿಗಳನ್ನು ಮೆಡಿಟರೇನಿಯನ್ ಅಥವಾ ಸಿಥಿಯ ಇರಾನ್ ಬುಡಕಟ್ಟಿನವರು ನಿರ್ಮಾಣ ಮಾಡಿದ್ದಾರೆಂದು ಸ್ಪಷ್ಟಪಡಿಸಬಹುದು[೧೦]. ಈ ಆಧಾರಗಳು ಪ್ರಸ್ತುತ ಪರಿಸರಕ್ಕೆ ಹಾಗೂ ಕರ್ನಾಟಕಕ್ಕೆ ಸಿಥಿಯಾ, ಇರಾನ್ ಕಡೆಯಿಂದ ಸಮಾಧಿ ಕಟ್ಟುವ

ಕಲೆಯುಳ್ಳವರು ಬಂದಿರಬೇಕೆಂದು ತಿಳಿಸುತ್ತವೆ. ಆದರೆ ಸಿಥಿಯಾ, ಇರಾನ್ ಪ್ರದೇಶದಲ್ಲಿರುವ ಶಿಲಾಗೋರಿಗಳಷ್ಟು ಪ್ರಸ್ತುತ ಪರಿಸರದ ನೆಲಮಟ್ಟದ ಮೇಲಿನ ಡಾಲ್ಮೆನ್ ಸಿಸ್ಟ್ ಸಮಾಧಿಗಳು ಎತ್ತರವಾಗಿಲ್ಲ[೧೧]. ಈ ರೀತಿಯಾದ ಬದಲಾವಣೆಗೆ ಪರಿಸರವೇ ಕಾರಣ. ಟಿ. ನರಸೀಪುರ ಉತ್ಖನನದಲ್ಲಿ ಮೆಡಿಟರೇನಿಯನ್ ಮತ್ತು ಅಸ್ಟ್ರಲಾಯ್ಡ್ ಜನಾಂಗದ ಮಿಶ್ರಣವುಳ್ಳ ಅಸ್ಥಿ ಅವಶೇಷಗಳು ದೊರೆತಿವೆ[೧೨]. ೨೫ ರಿಂದ ೩೦[೧೩] ಹಾಗೂ ೩೦ ರಿಂದ ೩೫[೧೪] ವರ್ಷದ ಒಳಗಿನ ವ್ಯಕ್ತಿಗಳು ಸಾವನ್ನಪ್ಪುತ್ತಿದ್ದರು. ಅಲ್ಲದೇ ಬ್ರಹ್ಮಗಿರಿ, ಕೊನಸಾಗರದಲ್ಲಿ ಕಂಡುಬಂದಿರುವ ೧x೧ಅಡಿ ಅಳತೆಯ ಸಿಸ್ಟ್ ಸಮಾಧಿಗಳು ಮಗುವಿನ ಶವ ಇರಬಹುದಾದ ಸಾಧ್ಯತೆಗಳನ್ನು ತೋರಿಸುತ್ತವೆ. ಚಿಕ್ಕ ವಯಸ್ಸಿನಿಂದ ಮಧ್ಯ ವಯಸ್ಸಿನವರು ಹೆಚ್ಚು ಜನ ಸತ್ತಿದ್ದಾರೆಂದು ಆಶ್ಚರ್ಯಕರ ಸಂಗತಿ. ಒಟ್ಟಿನಲ್ಲಿ ಅಸ್ಟ್ರಲಾಯ್ಡ್ ಮತ್ತು ಮೆಡಿಟರೇನಿಯನ್ ಜನಾಂಗದವರು ಪ್ರಸ್ತುತ ಪರಿಸರದಲ್ಲಿದ್ದರು ಇಂದಿನ ದಿನಗಳಲ್ಲಿ ಆ ಎರಡು ಲಕ್ಷಣಗಳುಳ್ಳ ಜನರಿದ್ದಾರೆಂದು ಹೇಳಬಯಸುತ್ತೇನೆ.

೪.೨ ಕೃಷಿ

ಪ್ರಾಗೈತಿಹಾಸಿಕ ಕಾಲದಲ್ಲಿ ಬೇಟೆಯಾಡುತ್ತಿದ್ದವರು ಆಹಾರ ಸಂಗ್ರಹಣೆಗೆ ಒತ್ತು ನೀಡಿದ್ದಾರೆ. ತರುವಾಯ ಜನಸಂಖ್ಯೆ ಹೆಚ್ಚಳವಾಗಿ ಬೇಡಿಕೆಯನ್ನು ಪೂರೈಸಲು ಬೇಟೆಯಾಡುವುದನ್ನು ಕಡಿಮೆ ಮಾಡಿ ನವ ಶಿಲಾಯುಗದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಆರಂಭಿಸಿದರು. ತೆಕ್ಕಲಕೋಟೆಯಲ್ಲಿ ದೊರೆತ ಹುರುಳಿಕಾಳು, ಹಳ್ಳೂರಿನಲ್ಲಿ ಕಂಡುಬಂದ ರಾಗಿ, ಕೊಡೆಕಲ್ಲಿನಲ್ಲಿ ಬೂದಿ ದಿಬ್ಬದಲ್ಲಿ ಕಂಡುಬಂದ ಬೋರೆಹಣ್ಣಿನ ಬೀಜಗಳ ಅವಶೇಷಗಳು ನವ ಶಿಲಾಯುಗದ ಸಸ್ಯಾಹಾರದ ಕ್ರಮದ ಮೇಲೆ ಬೆಳಕು ಚೆಲ್ಲುತ್ತವೆ[೧೫]. ಕರ್ನಾಟಕದಲ್ಲಿ ಕೃಷಿ ಆರಂಭ ಕ್ರಿಪೂ. ೨೨೦೦ರಲ್ಲಿ ಎಂಬುದು ಸ್ಪಷ್ಟ. ಸಿಕ್ಕಿರುವಂತಹ ಆಹಾರಧಾನ್ಯಗಳು ಕಡಿಮೆ ಪ್ರಮಾಣದಲ್ಲಿ ದೊರೆತಿರುವುದರಿಂದ ವ್ಯವಸಾಯವು ಬೃಹತ್ ಪ್ರಮಾಣದಲ್ಲಿ ನಡೆದಿಲ್ಲವೆಂದು ಹೇಳಬಹುದು. ಆದರೆ ವಿಸ್ತಾರವಾದ ಉತ್ಖನನಗಳಾದರೆ ವ್ಯವಸಾಯದ ಕುರಿತಾದ ಮತ್ತಷ್ಟು ಮಾಹಿತಿಗಳು ತಿಳಿಸಲು ಸಾಧ್ಯ. ವರ್ಣಚಿತ್ರ, ಬಯಲುಬಂಡೆ ಚಿತ್ರಗಳಲ್ಲಿ ಪಶುಗಳ ಚಿತ್ರಗಳು ಹೆಚ್ಚು. ಟಿ.ನರಸೀಪುರದಲ್ಲಿ ದೊರೆತ ಜಾನುವಾರುಗಳ ಮೂಳೆಗಳು[೧೬] ಪಶುಸಂಗೋಪನೆಯನ್ನು ಸೂಚಿಸುತ್ತವೆ. ಅಲ್ಲದೆ ಸಂಗೇನಹಳ್ಳಿಕೆರೆ(ಚಿತ್ರದುರ್ಗ), ಎನ್.ಗೌರೀಪುರ(ಚಳ್ಳಕೆರೆ), ರಾಮಗಿರಿ(ಹೊಳಲ್ಕೆರೆ)ಯಲ್ಲಿ ಸುಟ್ಟ ಸಗಣಿಯಿಂದ ನಿರ್ಮಾಣವಾಗಿರುವ ಬೂದಿದಿಬ್ಬಗಳು ಪ್ರಮುಖ ಆಧಾರ. ಈ ಎಲ್ಲಾ ಆಧಾರಗಳು ವ್ಯವಸಾಯಕ್ಕಿಂತ ಪಶು ಸಂಗೋಪನೆಯನ್ನು

ನವ ಶಿಲಾಯುಗದ ಮಾನವರ ಮುಖ್ಯ ಕಸುಬಾಗಿತ್ತೆಂದು ತಿಳಿಸುತ್ತದೆ. ಅಲ್ಲದೆ ಪ್ರಾಗಿತಿಹಾಸ ಮಾನವರ ಬದುಕಿನಲ್ಲಿ ವ್ಯವಸಾಯ, ಬೇಟೆಗಾರಿಕೆ, ಪಶುಸಂಗೋಪನೆಗಳು ಪ್ರಮುಖ ಪಾತ್ರವಯಿಸಿವೆ. ಹುರುಳಿ, ಹೆಸರು, ನವಣೆ ಕಾಡು ತಳಿಗಳಾಗಿದ್ದು, ಪ್ರಸ್ತುತ ಪರಿಸರದಲ್ಲಿ ಬೆಳೆಯಲು ಯೋಗ್ಯವಾಗಿವೆ. ಈ ಧಾನ್ಯಗಳು ಕಡಿಮೆ ಮಳೆಯಾದರೂ ತಡೆದುಕೊಳ್ಳಲು ಶಕ್ತಿಯಿದೆ. ಇಂತಹ ಧಾನ್ಯಗಳನ್ನು ಪ್ರಾಗಿತಿಹಾಸ ಕಾಲದಲ್ಲಿ ಚಿತ್ರದುರ್ಗ ಪರಿಸರದಲ್ಲಿ ಬೆಳೆದಿರುವ ಸಾಧ್ಯತೆಗಳಿವೆ. ಬಳ್ಳಾರಿ ಪ್ರಾಂತ್ಯಲ್ಲಿ ನವ ಶಿಲಾಯುಗದ ನೆಲೆಗಳಲ್ಲಿ ಕಾಡು ತಳಿಯ ಧಾನ್ಯಗಳು ದೊರೆತಿದ್ದು, ಕ್ರಿ.ಪೂ. ೨೨೦೦ರಲ್ಲಿ ಬೆಳೆಯುತ್ತಿದ್ದಾರೆಂಬುದಕ್ಕೆ ಪ್ರಮುಖ ಆಧಾರ[೧೭]. ಹುರುಳಿ, ಹೆಸರು, ನವಣೆ, ರಾಗಿ ಧಾನ್ಯಗಳು ಮಳೆಯಾಶ್ರಿತ ಬೆಳೆಗಳಾಗಿದ್ದು, ಅಂದಿನ ದಿನಮಾನಗಳಲ್ಲಿ ನೀರಾವರಿ ಆರಂಭವಾಗಿಲ್ಲ ಎಂದು ಹೇಳಬಹುದು. ಆದರೆ ಬೃಹತ್ ಶಿಲಾಯುಗದಲ್ಲಿ ಹಳ್ಳೂರು[೧೮] ಹಾಗೂ ಹೆಗ್ಗಡೆಹಳ್ಳಿ ನೆಲೆಯಲ್ಲಿ[೧೯] ಭತ್ತದ ಹೊಟ್ಟು ದೊರೆತಿರುವುದರಿಂದ ನೀರಾವರಿ ಅಳವಡಿಸಿಕೊಂಡಿದ್ದರೆಂದು ಹೇಳಬಹುದು. ಹಳ್ಳೂರಿನ ನೆಲೆಯಲ್ಲಿ ದೊರೆತಿರುವ ಭತ್ತವು ವಾಣಿಜ್ಯ ಬೆಳೆಗೆ ಉದಾಹರಣೆಯಾಗಿದೆ[೨೦]. ಸಜ್ಜೆ, ಸಾಸಿವೆ, ಹಾರಕ, ನವಣೆ, ತೊಗರಿ, ಅವರೆ ಮೊದಲಾದ ಬೆಳೆಗಳು ಬೃಹತ್ ಶಿಲಾಯುಗದಲ್ಲಿ ಬೆಳೆದಿದ್ದಾರೆ[೨೧]. ಈ ಬೆಳೆಗಳಲ್ಲಿ ಸಜ್ಜೆ, ನವಣೆ ತರಹದ ಧಾನ್ಯಗಳನ್ನು ಆಫ್ರಿಕವು ಪರಿಚಯಿಸಿದ್ದು, ಭಾರತದ ವಿವಿಧ ಭಾಗಗಳಲ್ಲಿ ಹರಡಿವೆ[೨೨].

ಬ್ರಹ್ಮಗಿರಿ ನೆಲೆಯಲ್ಲಿ ಕಲ್ಲಿನ ಕೊಡಲಿ, ಕಲ್ಲಿನ ಬಾಚಿ, ಚರ್ಟ್, ಅಗೇಟ್‌ನಿಂದ ತಯಾರುಗೊಂಡ ಸೂಕ್ಷ್ಮಚಾಕು[೨೩], ನೆಲೆಯ ಮೇಲ್ಮೈಯಲ್ಲಿ ಕಂಡುಬಂದಿರುವ ಹರೆಯುವ, ಕುಟ್ಟುವ, ರುಬ್ಬುವ ಕಲ್ಲುಗಳು ನವ ಶಿಲಾಯುಗದ ಕೃಷಿ ಉಪಕರಣಗಳಾಗಿವೆ. ತೆಕ್ಕಲಕೋಟೆಯ ನೆಲೆಯಲ್ಲಿ ಧಾನ್ಯ ಸಂಗ್ರಹದ ಕುರುಹುಗಳು ಕಂಡುಬಂದಿರುವುದು ಆಹಾರ ಧಾನ್ಯಗಳ ಸಂಗ್ರಹಕ್ಕೆ ಸಾಕ್ಷಿ[೨೪].

ಬೃಹತ್ ಶಿಲಾಯುಗದಲ್ಲಿ ಕಬ್ಬಿಣದ ವಸ್ತುಗಳನ್ನು ಬಳಸಿಕೊಂಡು ಕೃಷಿಯನ್ನು ಮಾಡುತ್ತಿದ್ದರು. ಬ್ರಹ್ಮಗಿರಿ ಉತ್ಖನನದಲ್ಲಿ ಬಾಣದ ಮೊನೆಗಳು, ಚೂರಿ, ಚಾಕು, ಚಪ್ಪಟೆ, ಕೊಡಲಿ, ಕುಡುಗೋಲಿನ ಉಪಕರಣಗಳು ಬೃಹತ್ ಶಿಲಾಯುಗದಲ್ಲಿ ಕೃಷಿಗೆ ಬಳಸಿದ್ದಾರೆ[೨೫]. ಮುಖ್ಯವಾಗಿ ಕಬ್ಬಿಣದ ನೇಗಿಲಿನ ಕುಳ ದೊರೆತಿರುವುದು ವ್ಯವಸಾಯಕ್ಕೆ ಪ್ರಮುಖ ಆಧಾರ[೨೬]. ಈ ನೇಗಿಲಿನ ಕುಳ ದೊರೆತಿರುವುದು ಪ್ರಸ್ತುತ ಪರಿಸರದಲ್ಲಿ ಮಾತ್ರ, ಆದ್ದರಿಂದ ಸುಸಜ್ಜಿತವಾದ ವ್ಯವಸಾಯವು ಬ್ರಹ್ಮಗಿರಿಯಲ್ಲಿ ನಡೆದಿತ್ತೆಂದು ನಿರ್ಧರಿಸಬಹುದು.

೪.೩ ಕೈಗಾರಿಕೆ

ಚಿತ್ರದುರ್ಗ ಜಿಲ್ಲಾ ಪರಿಸರವು ಭೌಗೋಳಿಕ ಶ್ರೀಮಂತಿಕೆಯಿಂದ ಕೂಡಿದೆ. ಶಿಲೆ, ಖನಿಜ, ಜಿಗುಟು ಮಣ್ಣಿಗೆ ಕೊರತೆಯಿಲ್ಲ. ಡೈಕ್, ಡೋಲರೈಟ್, ಪೆರುಜಿನಸ್, ಚರ್ಟ್, ಗ್ರಾನೈಟ್, ಅಗೇಟ್, ಡಾಲಮೈಟ್, ಕ್ರೋಮೈಟ್ ಶಿಲೆಗಳು ಹಾಗು ಕಬ್ಬಿಣ, ತಾಮ್ರ, ಚಿನ್ನ, ಮ್ಯಾಂಗನೀಸ್ ಖನಿಜಗಳಲ್ಲದೆ ಬಿದಿರು, ಪೊರಕೆ ಹುಲ್ಲು, ಮೊದಲಾದವುಗಳು ಪ್ರಸ್ತುತ ಜಿಲ್ಲೆಯಲ್ಲಿ ಸಿಗುತ್ತವೆ. ಈ ಕಚ್ಚಾವಸ್ತುಗಳನ್ನು ಬಳಸಿಕೊಂಡು ಪ್ರಾಗೈತಿಹಾಸಿಕ ಮಾನವರು ಗೃಹ ಕೃತ್ಯಸಲಕರಣೆಗಳನ್ನು ತಯಾರಿಸಿಕೊಂಡಿದ್ದಾರೆ. ಸಂಗನಕಲ್ಲಿನಲ್ಲಿ–ಶಿಲಾಯುಧ ತಯಾರಿಕ ಘಟಕ, ಬ್ರಹ್ಮಗಿರಿಯಲ್ಲಿ–ಮಣಿ ತಯಾರಿಕ ಘಟಕ, ಯಾದಲಗಟ್ಟೆಯಲ್ಲಿ–ಕಬ್ಬಿಣದ ತಯಾರಿಕ ಘಟಕ, ಮಾಳಪ್ಪನಗುಡ್ಡದಲ್ಲಿ–ಶಿಲಾಮಣಿ ತಯಾರಿಕ ಘಟಕಗಳು ಪ್ರಾಗೈತಿಹಾಸಿಕ ಕಾಲದಲ್ಲಿ ಸ್ಥಾಪಿತಗೊಂಡಿವೆ. ಈ ಸಣ್ಣ ಕೈಗಾರಿಕ ಘಟಕಗಳು ಅವಶ್ಯಕತೆ ಪೂರೈಸಿಕೊಳ್ಳುವ ಹಿನ್ನಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು ಎಂಬುದಾಗಿ ಅಧ್ಯಯನದಿಂದ ತಿಳಿಯಬಹುದು. ಪ್ರಸ್ತುತ ಮಡಕೆ, ಆಯುಧಗಳು, ಲೋಹವಸ್ತುಗಳ ಕುರಿತಾಗಿ ಚರ್ಚಿಸಲಾಗಿದೆ.

ಮಡಕೆ ತಯಾರಿಕೆ:

ಶಿಲಾಯುಗದ ಸಂಸ್ಕೃತಿಯಲ್ಲಿ ಮಡಕೆಗಳು ಕಾಲವನ್ನು ನಿರ್ಧರಿಸುವಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುತ್ತವೆ. ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ಲೋಹಗಳಿಗಿಂತ ಹೆಚ್ಚು ಬಳಕೆಗೊಂಡವುಗಳೆಂದರೆ ಮಡಕೆಗಳು. ವಿವಿಧ ರೀತಿಯ ಮಡಕೆಗಳನ್ನು ಕೈಯಿಂದ, ಚಕ್ರದ ಹಾಗೂ ಮಣೆ ಸಹಾಯದಿಂದ ಮಾಡಿದಂತಹವುಗಳು. ನವ ಶಿಲಾಯುಗದಲ್ಲಿ ಕಂದು, ಕೆಂಪು, ಬೂದು, ಬೃಹತ್ ಶಿಲಾಯುಗದಲ್ಲಿ ಕಪ್ಪು ಮತ್ತು ಕೆಂಪು, ಕಪ್ಪು ಬಣ್ಣದಿಂದ ಮಡಕೆಗಳು ತಯಾರಾಗಿವೆ ಎಂಬುದು ತಿಳಿದ ವಿಚಾರ. ಮಡಕೆಗಳನ್ನು ತನ್ನ ನೆಲೆಯಲ್ಲಿ ಅಥವಾ ನೆಲೆಯಿಂದ ಹೊರಗಡೆ ಹಾಗೂ ಬೇರೆ ಕಡೆ ತಯಾರಾದ ಮಡಕೆಗಳನ್ನು ಬಳಸುತ್ತಿದ್ದರೆಂಬುದು ಚರ್ಚೆಯ ವಿಷಯ. ಪ್ರಸ್ತುತ ಎಲ್ಲಾ ವಸತಿ ನೆಲೆ ಹಾಗೂ ಬೃಹತ್ ಶಿಲಾಯುಗದ ಸಮಾಧಿಗಳಲ್ಲಿ ಮಡಕೆಗಳನ್ನು ಕಾಣುತ್ತೇವೆ. ಪ್ರತಿಯೊಂದು ನೆಲೆಗಳಲ್ಲಿ ಕಂಡು ಬಂದಿರುವ ವಿವಿಧ ಬಗೆಯ ಮಡಕೆಗಳು ಒಂದೇ ರೀತಿಯಲ್ಲಿವೆ. ಆದರೆ ಆಕಾರ ಮತ್ತು ಗಾತ್ರದಲ್ಲಿ ವ್ಯತ್ಯಾಸವಾಗಿರಬಹುದು. ಒಟ್ಟಿನಲ್ಲಿ ಈ ಅಂಶಗಳನ್ನು ಗಮನಿಸಿದಾಗ ಒಂದು

ನೆಲೆಯಿಂದ ಮತ್ತೊಂದು ನೆಲೆಗೆ ಸಂಪರ್ಕ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಮಡಕೆಗಳನ್ನು ವಸತಿನೆಲೆಗಳಲ್ಲಿ ತಯಾರಿಸಿಕೊಳ್ಳುತ್ತಿದ್ದರು ಎನ್ನುವುದಕ್ಕೆ ರಂಗನಾಥಪುರ (ಹಿರಿಯೂರು) ನೆಲೆಯಲ್ಲಿ ದೊರೆತಿರುವ ತಟ್ಟೊತ್ತಿಗೆ ಪ್ರಮುಖ ಆಧಾರ[೨೭]. ಗಟ್ಟಿಹೊಸಹಳ್ಳಿ ನೆಲೆಯಲ್ಲಿ(ಹೊಳಲ್ಕೆರೆ) ಕಬ್ಬಿಣದ ಕಿಟ್ಟಗಳ ಜೊತೆಗೆ ಬಹಳಷ್ಟು ಪ್ರಮಾಣದಲ್ಲಿ ಮಡಕೆ ಚೂರುಗಳು ಕಂಡು ಬಂದಿರುವುದರಿಂದ ನೆಲೆಯಿಂದ ಹೊರಗಡೆ ಕಬ್ಬಿಣದ ಆಯುಧಗಳನ್ನು ಮತ್ತು ಮಡಕೆ ತಯಾರಿಸುತ್ತಿದ್ದರಬೇಕು ಎಂದೆನ್ನಿಸುವುದು. ಒಟ್ಟಾಗಿ ನೆಲೆಯಲ್ಲಿ ತಯಾರಿಸಿ, ನೆಲೆಯ ಹೊರಗಡೆ ಮಡಕೆಗಳನ್ನು ಸುಡುತ್ತಿದ್ದರೆಂದು ಕ್ಷೇತ್ರ ಕಾರ್ಯದಲ್ಲಿ ತಿಳಿದುಬಂದಿರುವ ಉತ್ತರ. ಬ್ರಹ್ಮಗಿರಿಯಲ್ಲಿ ನವ ಶಿಲಾಯುಗವು ಎರಡು ಹಂತದಲ್ಲಿ ಬೆಳೆದಿತ್ತು ಅದನ್ನು ೧ಎ, ೧ಬಿ ಎಂದು ಗುರುತಿಸಲಾಗಿದೆ[೨೮]. ಸಿಕ್ಕಂತಹ ಮಡಕೆಗಳು ಕೈಯಿಂದ ಮಾಡಿದವುಗಳಾಗಿವೆ[೨೯]. ಆದರೆ ಎರಡು ಹಂತದಲ್ಲಿನ ಮಡಕೆಗಳನ್ನು ನಿಧಾನವಾಗಿ ಸುತ್ತಬಹುದಾದ ಮಣೆಯ ಮೇಲಿಟ್ಟು ಅವುಗಳಿಗೆ ಆಕಾರ ನೀಡಲಾಗಿರುವುದು[೩೦]. ಪಾತ್ರೆಗಳನ್ನು ತಯಾರಿಸುವ ಮಣ್ಣಿನಲ್ಲಿ ಅಭ್ರಕ, ಮರಳಿನಿಂದ ಕೂಡಿದ ಅಂಶಗಳಿದ್ದು, ಶುದ್ಧವಾದ ನಯವಾದ ಜಿಗುಟು ಮಣ್ಣನ್ನು ಉಪಯೋಗಿಸಿರುವುದಿಲ್ಲ[೩೧]. ಮಿಶ್ರಣವುಳ್ಳ ಮಣ್ಣಿನಿಂದ ತಯಾರಾದ ಮಡಕೆಯು ಉರುಟಾಗಿರುತ್ತದೆ. ಅದನ್ನು ರಸ್ಟಿಕೇಟೆಡ್‌ವೇರ್ ಎಂದು ಕರೆಯಲಾಗುತ್ತದೆ. ಮಡಕೆಗಳನ್ನು ಸೂರ್ಯನ ಬಿಸಿಲಿನಲ್ಲಿ ಒಣಗಿಸಿ ನಂತರ ಸುಡಲಾಗುತ್ತಿತ್ತು. ಬಹುತೇಕ ಮಡಕೆಗಳು ಜಾಸ್ತಿ ಉಷ್ಣಾಂಶದಿಂದ ಸುಟ್ಟಿರುವುದಿಲ್ಲ[೩೨]. ೧ಎ ಹಂತಲ್ಲಿ ಬಹುತೇಕ ಮಡಕೆಗಳು ತಿಳಿಬೂದು ಹಾಗೂ ಬೂದು ಬಣ್ಣದಲ್ಲಿವೆ. ಉಳಿದಂತೆ ಎಳೆಕಂದು, ಕೆಂಪುಬಣ್ಣ, ಕಪ್ಪುಬೂದು, ತಿಳಿಹಸಿರು ಬೂದು, ಜಾಕಲೇಟ್ ಬಣ್ಣದ ಲೇಪನವಿರುವ ಪಾತ್ರೆಗಳು ಕಂಡು ಬಂದಿವೆ[೩೩]. ಇದೇ ರೀತಿಯಾದ ವಿವಿಧ ಬಣ್ಣದ ಮಡಕೆ ಚೂರುಗಳು ಪ್ರಸ್ತುತ ಜಿಲ್ಲೆಯ ನವ ಶಿಲಾಯುಗದ ನೆಲೆಗಳಲ್ಲಿ ಗಮನಿಸಿದ್ದೇನೆ. ಹಿರಿಯೂರು ತಾಲೂಕಿನ ರಂಗನಾಥಪುರದ ನವ ಶಿಲಾಯುಗದ ನೆಲೆಯಲ್ಲಿ ಕಪ್ಪುಬೂದು ಬಣ್ಣದ ಪೂರ್ಣ ಮಡಕೆಗಳು ದೊರೆತಿದ್ದು, ೧೮ರಿಂದ ೨೯ಸೆ.ಮೀ ಸುತ್ತಳತೆಯನ್ನು ಹೊಂದಿದೆ[೩೪]. ದೊಡ್ಡ ಗುಡಾಣಗಳು, ಕೊಡ, ಸ್ವಲ್ಪ ಉಬ್ಬಿದ ಹೊಟ್ಟೆಯ ಮಡಕೆ, ಅಗಲ ಬಾಯಿಯ ಬಟ್ಟಲು, ಕೊಳವೆ ಆಕಾರದ ಬಾಯಿಯುಳ್ಳ ಮಡಕೆ, ತಟ್ಟೆಗಳು, ಮುಚ್ಚುಳಗಳು, ಅರ್ಧ ಗೋಲಾಕೃತಿಯ ಬಟ್ಟಲುಗಳನ್ನು ವಿವಿಧ ಉದ್ದೇಶಗಳಿಗೆ ಬಳಸಿರಬೇಕು[೩೫]. ಅರ್ಧ ಗೋಲಾಕೃತಿಯ ಬಟ್ಟಲುಗಳಲ್ಲಿ ಕೆಲವೊಂದಕ್ಕೆ ಹಿಡಿಕೆಗಳಿವೆ[೩೬]. ಪಾತ್ರೆಗಳ ಹೊರಮೈ ಮೇಲೆ ನೇರಳೆ ಬಣ್ಣದಿಂದ ಚಿತ್ರಗಳ ಮೂಲಕ ಅಲಂಕರಿಸಲಾಗಿದೆ. ಚಿತ್ರಗಳಲ್ಲಿ

ಅಡ್ಡವಾದ, ಉದ್ದವಾದ, ಓರೆಯಾದ ಮತ್ತು ಒಂದಕ್ಕೊಂದು ಭೇದಿಸುವ ಸಮನಾಂತರ ರೇಖೆಗಳು ಮತ್ತು ಡೊಂಕು ರೇಖಾಚಿತ್ರಗಳು ಬಹುಮುಖ್ಯವು[೩೭]. ಎಲೆಯ ಆಕಾರದಲ್ಲಿ ಅಡ್ಡಲಾಗಿ ಕೊರೆದಿರುವ ಚಿತ್ರ ವಿಶೇಷ[೩೮]. ಮಡಕೆ ಹಸಿ ಇರುವಾಗ ಕಡ್ಡಿಯ ಸಹಾಯದಿಂದ ಗೆರೆಗಳನ್ನು ಎಳೆದಿದ್ದು, ಸುಟ್ಟ ನಂತರ ಪಾತ್ರೆಗಳ ಬಾಯಿಯ ಅಂಚನ್ನು ಕೆಮ್ಮಣ್ಣಿನ ಬಣ್ಣದಲ್ಲಿ ಅಲಂಕರಿಸುತ್ತಿದ್ದರು[೩೯]. ಈ ರೀತಿ ಅಲಂಕರಣೆ ನವ ಶಿಲಾಯುಗದ ಆದಿಭಾಗದಲ್ಲಿ ಮಾತ್ರ ಸಿಕ್ಕಿವೆ[೪೦]. ಕ್ರಮೇಣ ಅಲಂಕರಿಸುವ ಪದ್ಧತಿ ಬಿಟ್ಟು ಹೋಗಿದ್ದು, ಮುಂದಿನ ೧ಬಿ ಹಂತದಲ್ಲಿ ಗಮನಿಸಿದರೆ ಅರ್ಥವಾಗುವುದು. ೧ಬಿಯು ೧ಎಗಿಂತ ನಂತರದ್ದು. ಬೂದು ಬಣ್ಣದ, ತಿಳಿಬೂದು ಬಣ್ಣದ, ಕಪ್ಪು ಬಣ್ಣದ ಮಡಕೆಗಳನ್ನು ಕಾಣಬಹುದು. ತಿಳಿಬೂದು ಬಣ್ಣವು ೧ಬಿ ಹಂತದಲ್ಲಿ ಸಿಗುವುದು ಹೆಚ್ಚು. ಕಪ್ಪು ಬಣ್ಣದ ನುಣುಪಾದ ಮಡಕೆಗಳು ಈ ಹಂತದ ವಿಶೇಷ. ಅಲ್ಲದೇ ಯಾವುದೇ ತರಹದ ಬಣ್ಣದ ಚಿತ್ರಗಳು ಮಡಕೆಗಳ ಮೇಲೆ ಕಂಡುಬರುವುದಿಲ್ಲ.

ಆದರೆ ಹುಲ್ಲಿನಿಂದ ಉಜ್ಜಿದ ಗೆರೆಗಳನ್ನು ಮಡಕೆಯ ಕತ್ತಿನ ಕೆಳ ಭಾಗದಲ್ಲಿ ಕಾಣಬಹುದು[೪೧]. ಅಂದರೆ ಹೆಚ್ಚಿನ ಪ್ರಮಾಣದಲ್ಲಿ ಹುಲ್ಲು, ಬಟ್ಟೆ, ಕಲ್ಲಿನಿಂದ ಉಜ್ಜಿರುವುದು ೧ಬಿ ಹಂತದಿಂದಲೇ ಎಂದು ಕಾಣುತ್ತದೆ. ಮೃತ್‌ಪಾತ್ರೆಗಳು ಕೈಯಿಂದ ಮಾಡಿದ್ದಾಗಿದ್ದು, ತಿಳಿಬೂದು ಬಣ್ಣವನ್ನು ಹೊಂದಿವೆ[೪೨]. ಇವುಗಳು ಗೋಲಾಕಾರದ ದೇಹ, ಅಗಲವಾದ ಬಾಯಿ, ವೃತ್ತಾಕಾರದ ತಳಭಾಗವನ್ನು ಹೊಂದಿದ್ದು, ೧೩ ಇಂಚಿನ ಎತ್ತರ ಮತ್ತು ೧೨ ಇಂಚು ಸುತ್ತಳತೆಯನ್ನು ಹೊಂದಿರುತ್ತವೆ[೪೩]. ಮಡಕೆಯ ಬಾಯಿಯನ್ನು ಒಳ ಮತ್ತು ಹೊರಗೆ ಮಡಚಲಾಗಿರುತ್ತದೆ[೪೪]. ಇವಲ್ಲದೇ ಉದ್ದನೆಯ ಕತ್ತುಳ್ಳ, ಕತ್ತಿಲ್ಲದ, ಅಂಡರ್ ಕಟ್ ಬಾಯಿಯನ್ನು ಹೊಂದಿರುವ ಮಡಕೆಗಳನ್ನು ಗುರುತಿಸಬಹುದು[೪೫]. ಆಳವುಳ್ಳ ಬಟ್ಟಲು, ಮಡಕೆಯ ಮಧ್ಯಭಾಗಕ್ಕೆ ಅಂಟಿಕೊಂಡಿರುವ ಚಾಲನ್‌ಮೌತ್, ರಂಧ್ರವುಳ್ಳ ಮಡಕೆಯ ಭಾಗಗಳು ವಿಶೇಷವಾಗಿವೆ[೪೬]. ಈ ರೀತಿಯ ಮಡಕೆಯ ಲಕ್ಷಣಗಳಿಂದ ೧ಎಗಿಂತ ೧ಬಿಯು ಅಭಿವೃದ್ಧಿಯನ್ನು ಹೊಂದಿದೆ ಎಂದು ಹೇಳಬಹುದು.

ಬೃಹತ್ ಶಿಲಾಯುಗದಲ್ಲಿ ನವ ಶಿಲಾಯುಗಕ್ಕಿಂತ ಅಭಿವೃದ್ಧಿ ಹೊಂದಿದ ಅಥವಾ ಸುಧಾರಿತ, ಸುಟ್ಟಂತಹ ಮಡಕೆಗಳು ಕಾಣಸಿಗುತ್ತವೆ. ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ ಉತ್ಖನನದಲ್ಲಿ ಪೂರ್ಣ ಪ್ರಮಾಣದಲ್ಲಿ ಮಡಕೆಗಳು ಕಂಡುಬಂದಿದ್ದು, ವಿಶ್ಲೇಷಿಸಲು ಸಹಾಯಕವಾಗಿವೆ. ಕಪ್ಪು ಮತ್ತು ಕೆಂಪು ವರ್ಣದ ಮಡಕೆಗಳು ಕಪ್ಪು

ಬಣ್ಣದ ಮಡಕೆಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತವೆ. ಕಪ್ಪು ವರ್ಣದ, ತಿಳಿಕೆಂಪು ವರ್ಣದ ಮಡಕೆಗಳು ಕಡಿಮೆ. ಇವೆಲ್ಲವೂ ನಿಧಾನವಾಗಿ ತಿರುಗುವ ತಿಗರಿಯಿಂದ ತಯಾರುಗೊಂಡಿವೆ[೪೭]. ಚಂದ್ರವಳ್ಳಿಯಲ್ಲಿ ಸಿಕ್ಕಿರುವ ಒಂದು ಮಡಕೆಯು ಮಸುಕು ಕಂದು ಬಣ್ಣದಲ್ಲಿದ್ದು, ಕೈಯಿಂದ ಮಾಡಿದ ಮಡಕೆಯಾಗಿದೆ[೪೮]. ಮಡಕೆಗಳು ಸಾಮಾನ್ಯವಾಗಿ ಕಪ್ಪು ಬಣ್ಣದ್ದಾಗಿದ್ದು, ಇವುಗಳ ಮೇಲೆ ಬಣ್ಣದಿಂದ ಲೇಪನ ಮಾಡಿ ಚೆನ್ನಾಗಿ ಉಜ್ಜಿರುವುದರಿಂದ ಒಳಪಾಗಿ ಹಾಗೂ ಕಪ್ಪು ಮತ್ತು ಕೆಂಪು ವರ್ಣದಲ್ಲಿ ಕಾಣಿಸುತ್ತವೆ[೪೯]. ಮಣ್ಣಿನ ಪಾತ್ರೆಗಳಲ್ಲಿ ಗುಡಾಣಗಳು, ಕೊಡ, ಚೆಂಬುಗಳು, ಗಂಟೆ ಆಕಾರದ ಬಟ್ಟಲು, ಅರ್ಧ ಗೋಳಾಕೃತಿಯ ವಿವಿಧ ರೀತಿಯ ಬಟ್ಟಲು, ನಾನಾಕಾರದ ಮುಚ್ಚಳ, ದ್ರಾಕ್ಷರಸ ಸೇವಿಸುವ ಮಾದರಿಯ ಲೋಟ, ದುಂಡಾದ ಬುಡದ ಪಾತ್ರೆಗಳು ಬಹುಮುಖ್ಯವು[೫೦]. ಮಡಕೆಗಳ ಮೇಲೆ ಹಲವು ವಿವಿಧ ಗೀಚುಗಳು ವರ್ಣಚಿತ್ರಗಳು ಇರುತ್ತವೆ. ಬ್ರಹ್ಮಗಿರಿಯಲ್ಲಿ ಕಲ್ಗೋರಿಯಲ್ಲಿ ದೊರೆತಿರುವ ಮಡಕೆಗಳ ಮೇಲೆ ಒಟ್ಟು ೨೪ ಗೀಚುಗಳು ಇವೆ. ಬ್ರಾಹ್ಮಿಲಿಪಿಯ ಅ, ಉ, ಕ. ಗ, ತ, ದ, ಮ, ರ, ಶ ಅಕ್ಷರಗಳ ರೀತಿಯಲ್ಲಿ ಗೀಚುಗಳು ಇವೆ[೫೧]. ಕೆಲವರು ಕುಂಬಾರನ ಗುರುತು, ವಸ್ತು, ಪ್ರಾಣಿಗಳ ಸಂಕೇತ, ಭಾವನೆಗಳ ಸಂಕೇತವಾಗಿದ್ದಿರಬೇಕೆಂದು ಅಭಿಪ್ರಾಯಪಡುತ್ತಾರೆ[೫೨]. ಚಂದ್ರವಳ್ಳಿಯಲ್ಲಿ ದೊರೆತ ಒಂದು ಮಡಕೆಯು ಕೈಯಿಂದ ಮಾಡಲಾಗಿದ್ದು, ಮಡಕೆಯ ಮೇಲೆ ಕತ್ತಿನ ಕೆಳಗೆ ಉಗುರಿನಿಂದ ಅಥವಾ ಇತರೆ ಸೂಕ್ತ ವಸ್ತುವಿನಿಂದ ಗೀಚಿರುವ ಚಿತ್ರವು ಜಿಗ್‌ಜಾಗ್ ಮಾದರಿಯಲ್ಲಿವೆ[೫೩]. ಹೆಗ್ಗಡೆಹಳ್ಳಿಯಲ್ಲಿ ನಡೆದ ಶಿಲಾಗೋರಿಗಳಲ್ಲಿ ದೊರೆತ ಮಡಕೆಗಳ ಮೇಲೆ ಕ್ರಿಸ್‌ಕ್ರಾಸ್, ಡಮರುಗ ರೀತಿ, ಬಾಣದ ರೀತಿ, ಬೇಲಿಗಾಗಿ ಪೋಣಿಸಿದ ರೀತಿಯಲ್ಲಿರುವುದನ್ನು ಗಮನಿಸಲಾಗಿದೆ[೫೪]. ಪ್ರಸ್ತುತ ಬ್ರಹ್ಮಗಿರಿಯಲ್ಲಿ ದೊರೆತಿರುವ ಗೀಚುಗಳು ಮತ್ತು ಹೆಗ್ಗಡೆಹಳ್ಳಿಯಲ್ಲಿ ದೊರೆತಿರುವ ಗೀಚುಗಳಿಗೆ ಹೋಲಿಕೆಯಲ್ಲಿ ಸಾಮ್ಯತೆ ಇದೆ. ಹೆಗ್ಗಡೆಹಳ್ಳಿಯ ೪ನೇ ಶಿಲಾಗೋರಿಯಲ್ಲಿ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಯ ಮೇಲೆ ಉದ್ದಗೆರೆಯುಳ್ಳ ಬಿಳಿ ಬಣ್ಣದ ಚಿತ್ರವಿರುವುದು ವಿಶೇಷ[೫೫]. ಈ ಮೂಲಕ ಬಿಳಿ ಬಣ್ಣದ ಚಿತ್ರಗಳನ್ನು ಬಿಡಿಸುವ ಪದ್ಧತಿ ಬೃಹತ್ ಶಿಲಾಯುಗದಿಂದ ಆರಂಭವಾಗಿದೆ ಎನ್ನಬಹುದು. ಬ್ರಹ್ಮಗಿರಿ, ಚಂದ್ರವಳ್ಳಿ ಮತ್ತು ಹೆಗ್ಗಡೆಹಳ್ಳಿ ವರದಿಯನ್ನು ಅಧ್ಯಯನ ಮಾಡಿ ಬೃಹತ್ ಶಿಲಾಯುಗದ ಮಡಕೆಯನ್ನು ನಾಲ್ಕು ಬಗೆಯಲ್ಲಿ ವಿಂಗಡಿಸಿ ಲಕ್ಷಣಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

೧)**ಬಾಯಿ**(Mouth or rim):

ಅಗಲವಾದ(Wide) ಆಕಾಶವನ್ನು ನೋಡುವ(Flaring mouth) ವೃತ್ತಾಕಾರದ(Rounded rim), ದಪ್ಪ ಹಾಗೂ ತೆಳುವಾದ(Thick and thin), ಮಡಕೆಯನ್ನು ತಿರುಗಿಸಿ ಮಾಡಲ್ಪಡದ ಬಾಯಿಗಳು (Without turned Mouth), ಹೊರಗೆ ಮತ್ತು ಒಳಗೆ ಮಡಚಿದ ಬಾಯಿ(Out and Incarved rim), ವೃತ್ತಾಕಾರದ ಮಣಿ ಆಕಾರದ ಬಾಯಿ (Beaded rim), ಜೀಬ್ರಾಕಟ್ಟಿಂಗ್ ಬಾಯಿ (Zibra cutting mouth). ಈ ರೀತಿಯಾದ ಲಕ್ಷಣಗಳು ಕಾಣಬಹುದು.

೨) **ಕುತ್ತಿಗೆ** (Neck):

ಒಳಸರಿದ ಕುತ್ತಿಗೆ(Cancaveneck), ಕುತ್ತಿಗೆ ಇಲ್ಲದ ಮಡಕೆ(Neckless Pot), ಒಳಗೆ ಮತ್ತು ಹೊರಗೆ ಬಾಗಿದ ಭಾಗ(In and out carved carination), ಉದ್ದವಾದ ಕುತ್ತಿಗೆ(Long neck) ಭಾಗಗಳನ್ನು ಗಮನಿಸಲಾಗಿರುವುದು.

೩) **ಮಧ್ಯಭಾಗ**(Shoulder or middle Part):

ಮಡಕೆಯ ಕುತ್ತಿಗೆ ಕೆಳಭಾಗದಲ್ಲಿರುತ್ತದೆ. ಇದು ವೃತ್ತಾಕಾರವಾಗಿ (Rounded) ಕಾರಿನೇಷನ್(Carniation body)ಗೆ ಒಳಪಟ್ಟು ಗೋಲಾಕಾರದ (Global body) ಭಾಗವನ್ನು ಹೊಂದಿರುತ್ತದೆ.

೪) **ತಳಭಾಗ**(Base):- ವೃತ್ತಾಕಾರದ(Rounded), ಸಮತಟ್ಟಾದ(Flated), ಒತ್ತಡದಿಂದ ಇಳಿಮುಖವಾಗಿ ಬಾಗಿದ ರೀತಿ(Sagged base)ಯುಳ್ಳ ತಳ, ಇಳಿಜಾರಿನ ತಳದ(Slopy base) ರೀತಿಯಲ್ಲಿರುತ್ತವೆ.

ಲೋಹಗಾರಿಕೆ:

ಶಿಲಾಯುಗದಲ್ಲಿ ತನ್ನ ಅವಶ್ಯಕತೆಯನ್ನು ಈಡೇರಿಸಿಕೊಳ್ಳಲು ಲೋಹವನ್ನು ಬಳಸಲು ಆರಂಭಿಸಿದರು. ಕ್ರಿ.ಪೂ.೪೦೦೦ ವರ್ಷಗಳ ಹಿಂದೆಯೇ ಲೋಹದ ಬಳಕೆಯಿತ್ತು[೫೬]. ತಾಮ್ರ ಮತ್ತು ಕಂಚು ಕ್ರಿ.ಪೂ. ೪೦೦೦ದಿಂದ ೧೪೦೦ರಲ್ಲಿ ಮೊದಲು ಬಳಕೆಯಾದ ಲೋಹಗಳಿವು[೫೭]. ನಂತರ ತವರ ಹಾಗೂ ಚಿನ್ನದ ಬಳಕೆಯಾದವು. ಕ್ರಿ.ಪೂ. ೧೫೦೦ರಲ್ಲಿ ಕಬ್ಬಿಣವು ಆವಿಷ್ಕಾರಗೊಂಡು ಸಮಾಧಿ ಸಂಸ್ಕೃತಿ ಬೆಳೆಯಿತು[೫೮]. ಬೆಳ್ಳಿಯು ಕ್ರಿ.ಪೂ. ೫೦೦ರ ವೇಳೆಗೆ ಪರಿಚಯವಾಗಿದ್ದು, ಕ್ರಿ.ಪೂ. ೧೨೦೦ ಅವಧಿಯಲ್ಲಿ ಮೊಟ್ಟಮೊದಲಿಗೆ ಉಕ್ಕಿನ ಆವಿಷ್ಕಾರವಾಗಿದೆ[೫೯].

ಚಿನ್ನದ ಹಾಗೂ ಬೆಳ್ಳಿಯ ಮುದ್ರಿಕೆಗಳು ಗುಜರಾತ್‌ನ ಗಣೇಶ್ವರ ಹಾಗೂ ಬಗಸ್ರ ಉತ್ಖನನದಲ್ಲಿ ದೊರತಿದೆ[೬೦]. ಈ ಮುದ್ರಿಕೆಗಳು ಲೋಹ ಗಣಿಗಾರಿಕೆಗೆ ಉತ್ತಮ ಉದಾಹರಣೆಯಾಗಿವೆ. ಸಂತೇಗುಡ್ಡದ ತಪ್ಪಲಿನಲ್ಲಿರುವ ಲೋಹಗಾರಿಕೆ ನೆಲೆಯು ನವ ಶಿಲಾಯುಗದಿಂದ ವಿಜಯನಗರ ಕಾಲದವರೆಗೆ ಪ್ರಮುಖ ತಾಮ್ರ, ಕಬ್ಬಿಣ ವಸ್ತುಗಳ ತಯಾರಿಕಾ ಸ್ಥಳವಾಗಿತ್ತು. ಇದಕ್ಕೆ ಪೂರಕವಾದ ನವ ಶಿಲಾಯುಗದ ವರ್ಣಚಿತ್ರಗಳು, ಮಡಕೆ ಅವಶೇಷಗಳು ಸಂತೇಗುಡ್ಡದ ಕಲ್ಲಾಸರೆಗಳಲ್ಲಿವೆ. ಬ್ರಹ್ಮಗಿರಿಯಲ್ಲಿ ತಾಮ್ರದ ಕೊಡಲಿ, ಕಂಚಿನ ಸಳಿ ನವ ಶಿಲಾಯುಗದ ೨ನೇ ಹಂತದಲ್ಲಿ ದೊರೆತಿವೆ[೬೧]. ತಾಮ್ರದ ಕೊಡಲಿ ಬ್ರಹ್ಮಗಿರಿಯನ್ನು ಹೊರತು ಪಡಿಸಿದರೆ ತೆಕ್ಕಲಕೋಟೆ ಮತ್ತು ಹಳ್ಳೂರಿನಲ್ಲಿ ಮಾತ್ರ ದೊರೆತಿವೆ[೬೨]. ಇತ್ತೀಚೆಗೆ ಎಸ್.ತಿಪ್ಪೇಸ್ವಾಮಿಗೆ ಇಂಗಳದಾಳ್ ಪರಿಸರದಲ್ಲಿ ತಾಮ್ರದ ಕೊಡಲಿ ದೊರತಿರುವುದು ಗಮನೀಯವಾದ ಸಂಗತಿ. ಚಿತ್ರದುರ್ಗದ ಇಂಗಳದಾಳ್‌ನಲ್ಲಿ ತಾಮ್ರದ ನಿಕ್ಷೇಪವು ಸಿಗುವುದು[೬೩]. ಬಿ.ಟಿ.ಚಾರುಲತ ಪ್ರಾಚೀನ ಕಾಲದಲ್ಲಿ ಇಂಗಳದಾಳ್‌ನಲ್ಲಿ ತಾಮ್ರದ ಗಣಿಗಾರಿಕೆ ನಡೆಯುತ್ತಿತ್ತೆಂದು ಅಭಿಪ್ರಾಯಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದ ಪ್ರಸ್ತುತ ಜಿಲ್ಲೆಯ ನವ ಶಿಲಾಯುಗದ ನೆಲೆಗಳಿಗೆ ಇಂಗಳದಾಳ್‌ನಿಂದ ತಾಮ್ರವು ಸರಬರಾಜು ಆಗಿದೆ ಎಂದು ನಿರ್ಧರಿಸಲಾಗಿದೆ. ಬೃಹತ್ ಶಿಲಾಯುಗದಲ್ಲಿ ಕಬ್ಬಿಣವು ಮಹತ್ವದ ಲೋಹವಾಗಿದೆ. ಬ್ರಹ್ಮಗಿರಿಯಲ್ಲಿ ಹಿಡಿಕೆಯುಳ್ಳ ಬಾಣದ ಮೊನೆ, ಹಲ್ಲುಗಳುಳ್ಳ ಬಾಣದ ಮೊನೆ, ಚಾಕುಗಳು, ಚೂರಿಗಳು, ೧ ಮೀಟರ್ ಉದ್ದದ ಈಟಿಗಳು, ಉಳಿಗಳು, ಕುಡುಗೋಲು, ಉದ್ದನೆಯ ಕತ್ತಿ, ಚಪ್ಪನೆಯ ಕೊಡಲಿ, ಬಳೆಯಾಕಾರದ ವಸ್ತು, ನೇಗಿಲಿನ ಕುಳ, ಉಂಗುರದ ಹಿಡಿಕೆಯುಳ್ಳ ತಟ್ಟೆಗಳು ಶವಕುಣಿಯಲ್ಲಿ ದೊರೆಕಿವೆ[೬೪]. ಈ ಲೋಹದ ವಸ್ತುಗಳನ್ನು ಕುಡುಗೋಲು, ನೇಗಿಲಿನ ಕುಳ, ಚಪ್ಪಟೆಯ ಕೊಡಲಿಗಳು ಕೃಷಿಯನ್ನು ಪ್ರತಿಬಿಂಭಿಸುತ್ತವೆ. ನೇಗಿಲಿನ ಕುಳ ಉಳುಮೆಗೆ ಉತ್ತಮ ಆಧಾರ. ಈ ರೀತಿಯ ಆಧಾರವು ಬೇರೆಲ್ಲಿಯೂ ದೊರೆತಿರುವುದಿಲ್ಲ. ೩೩ ಚಿನ್ನದ ಮಣಿಗಳು, ೧ ಶವಕುಣಿಯಲ್ಲಿ ದೊರೆತಿದ್ದು, ಚಿನ್ನದ ಲೋಹಗಾರಿಕೆಯ ಮಹತ್ವವನ್ನು ಸಾರುವುದು. ಪ್ರಸ್ತುತ ಜಿಲ್ಲೆಯಲ್ಲಿ ಹೊಸದುರ್ಗ[೬೫] ಚಿತ್ರದುರ್ಗ ತಾಲೂಕಿನಲ್ಲಿ[೬೬] ಚಿನ್ನದ ನಿಕ್ಷೇಪ ಇರುವುದರಿಂದ ಬಹುಶ: ಇಲ್ಲಿಂದ ಚಿನ್ನದ ಕಚ್ಚಾವಸ್ತುವನ್ನು ಸಾಗಿಸಿರುವ ಸಾಧ್ಯತೆ ಹೆಚ್ಚು. ಪ್ರಸ್ತುತ ಗಟ್ಟಿಹೊಸಹಳ್ಳಿಯಲ್ಲಿ ಯಾದಲಗಟ್ಟೆಯ ಮತ್ತು ದೊಡ್ಡಕಿಟ್ಟದಹಾಳ್ ನೆಲೆಯಲ್ಲಿ ರಾಶಿ ಹಾಕುವಷ್ಟು ಕಬ್ಬಿಣದ ಕಿಟ್ಟಗಳು ಹರಡಿವೆ. ಅಲ್ಲದೇ ಮಣ್ಣಿನ ಕುಲುಮೆ ಹಾಗೂ ಮಣ್ಣಿನ ಕೊಳವೆಗೆ ಅಂಟಿಕೊಂಡಿರುವ ಕಬ್ಬಿಣದ ತ್ಯಾಜ್ಯವು ಕಬ್ಬಿಣ ತಯಾರಿಕೆಯ ತಂತ್ರಗಾರಿಕೆಗೆ ಸಾಕ್ಷಿಯಾಗಿವೆ.

ಆಯುಧಗಳು:

ಶಿಲಾಯುಗದ ಮಾನವರು ತನ್ನ ರಕ್ಷಣೆಗೆ ಅವಶ್ಯಕತೆಗಳ ಪೂರೈಕೆಗೆ ಕಲ್ಲಿನಿಂದ, ಮೂಳೆಯಿಂದ, ಲೋಹದಿಂದ ಆಯುಧಗಳನ್ನು ತಯಾರಿಸಿಕೊಂಡರು. ಪ್ರತಿಯೊಂದು ಕಾಲಘಟ್ಟದಲ್ಲಿ ವಿವಿಧ ರೀತಿಯ ಆಯುಧಗಳು ಬಳಕೆಗೊಂಡಿವೆ. ಆಯುಧಗಳನ್ನು ಆಧರಿಸಿ ಸಂಸ್ಕೃತಿಯನ್ನು ರಚಿಸಲು ಸುಲಭಸಾಧ್ಯ. ಆದಿ ಹಳೆಶಿಲಾಯುಗದಲ್ಲಿ ಕೈ ಕೊಡಲಿ, ಸೀಳುಗತ್ತಿ, ಮಚ್ಚುಗತ್ತಿ, ಕೊರಗುಗತ್ತಿಗಳು ಪ್ರಮುಖ ಆಯುಧಗಳು[೭೭]. ಈ ಆಯುಧಗಳಲ್ಲಿ ಕೈ ಕೊಡಲಿಗಳು ಪ್ರಸ್ತುತ ಜಿಲ್ಲಾ ಪರಿಸರದಲ್ಲಿ ಕಂಡುಬಂದಿವೆ. ಕೂನಬೇವಿನ ಹೊರವಲಯದಲ್ಲಿ ೨ ಆಯುಧಗಳು ದೊರೆತಿವೆ. ೯.೫ ಮತ್ತು ೧೦.೫ಸೆಂ.ಮೀ.ಉದ್ದ ೪ರಿಂದ ೬ಸೆಂ.ಮೀ. ಅಗಲ ಇರುವ ೨ ಆಯುಧಗಳು ದ್ವಿಮುಖ ಕೊಡಲಿಗಳಾಗಿದ್ದು, ಆಶ್ಯೂಲಿಯನ್ ಮಾದರಿಯಲ್ಲಿವೆ[೭೮]. ಈ ಆಯುಧಗಳನ್ನು ನಾಗರಾಜಪ್ಪ.ಎಸ್ ಜೊತೆಗೂಡಿ ಕ್ಷೇತ್ರಕಾಯದಲ್ಲಿ ಶೋಧಿಸಿದ್ದೇವೆ. ಈ ಸಂಶೋಧನೆ ಬ್ರೂಸ್‌ಪೂಟ್ ಶೋಧನೆಯ ನಂತರದ್ದು. ಮತ್ತೊಂದು ಆದಿ ಹಳೆಶಿಲಾಯುಗದ ಆಯುಧವೊಂದನ್ನು ಸಂಗೇನಹಳ್ಳಿಕೆರೆ ಬಯಲಿನಲ್ಲಿ ಶೋಧಿಸಿದ್ದೇನೆ. ಈ ಆಯುಧವು ತಿಳಿಕೆಂಪು ಮಿಶ್ರಿತ ಕ್ವಾರ್ಟ್‌ಜೈಟ್ ಶಿಲೆಯಿಂದ ರಚಿತಗೊಂಡಿರುವುದು. ೧೧ಸೆಂ.ಮೀ ಉದ್ದ ೫ಸೆಂ.ಮೀ ಅಗಲವಾಗಿರುವ ಆಯುಧವು ಏಕಮುಖ ಮಚ್ಚುಗತ್ತಿ ಮಾದರಿಯಲ್ಲಿದೆ. ತಳಭಾಗವು ಹರಿತವಾಗಿದ್ದು, ಮೇಲ್ಭಾಗದಲ್ಲಿ ಹಿಡಿಕೆಯಿದೆ. ಈ ಎಲ್ಲಾ ಆಯುಧಗಳು ಆಂಗ್ಲ ಯು ಮತ್ತು ವಿ ಆಕಾರದಲ್ಲಿದ್ದು, ಕತ್ತರಿಸುವ, ಕೊಯ್ಯುವ ಅಂಚನ್ನು ಹೊಂದಿವೆ. ಏಕಮುಖ ಮಚ್ಚುಗತ್ತಿಯು ಅಬ್ಬಿವ್ಯಾಲಿಯೆನ್ ಮತ್ತು ದ್ವಿಮುಖ ಕೊಡಲಿಯು ಅಶ್ಯೂಲಿಯನ್ ಮಾದರಿಯಲ್ಲಿದ್ದು, ಆಯುಧಗಳು ಕ್ಲಾಕ್‌ಟನ್ ವಿಧಾನದಲ್ಲಿ ರಚಿತಗೊಂಡಿವೆ. ಕ್ಲಾಕ್‌ಟನ್ ವಿಧಾನವು ಕಡಿಮೆ ತೂಕದ ಕೊಡಲಿಯಾಗಿದ್ದು ದೊಡ್ಡ, ದಪ್ಪವಾದ ಚಕ್ಕೆಗಳನ್ನು ತೆಗೆಯಲಾಗಿರುತ್ತದೆ. ಸುತ್ತಲಿನ ತುದಿಯು ಉರುಟಾಗಿರುತ್ತದೆ[೭೯]. ಈ ರೀತಿಯಾದ ಲಕ್ಷಣಗಳನ್ನು ಮೇಲಿನ ಆಯುಧಗಳಲ್ಲಿ ಕಾಣಬಹುದು.

ಮಧ್ಯ ಹಳೆಶಿಲಾಯುಗದಲ್ಲಿ ಎರೆಯುವ, ಕೊರೆಯುವ ಕೈಕೊಡಲಿಗಳು ಪ್ರಮುಖ ಆಯುಧಗಳು[೮೦]. ಪ್ರಸ್ತುತ ಜಿಲ್ಲಾ ಪ್ರದೇಶದಲ್ಲಿ ಸಿಕ್ಕಂತಹ ಆಯುಧಗಳು ಎರೆಯುವ, ಕೊರೆಯುವ ಆಯುಧಗಳಾಗಿವೆ. ಕೂನಬೇವಿನಲ್ಲಿ ಹೊರವಲಯದಲ್ಲಿ ಆಕಸ್ಮಿಕವಾಗಿ ಆಯುಧ ದೊರೆತಿದೆ. ಈ ಆಯುಧವು ಕ್ವಾಡ್ಜ್‌ಜೈಟ್ ಶಿಲೆಯಿಂದ ರಚಿತಗೊಂಡಿರುವುದು. ೭ಸೆಂ.ಮಿ. ಉದ್ದ ಮತ್ತು ೭ ಸೆಂ.ಮಿ. ಅಗಲವಿದ್ದು ವೃತ್ತಾಕಾರದಲ್ಲಿದೆ. ಸುತ್ತಲೂ

ಚಕ್ಕೆಗಳನ್ನು ತೆಗೆದಿದ್ದು, ಜಿಗ್‌ಜಾಗ್ ಮಾಡಿದ ರೀತಿಯಲ್ಲಿ ಇದೆ. ಇಂತಹ ಆಯುಧಕ್ಕೆ ಹಿಡಿಕೆ ಇರುವುದಿಲ್ಲ. ಆದ್ದರಿಂದ ಇಂತಹ ಆಯುಧವನ್ನು ಎರೆಯುವುದಕ್ಕೆ ಬಳಕೆಯಾಗಿರಬಹುದು. ಆಯುಧವು ಮೂಲ ಸ್ವರೂಪದ ಶಿಲೆಯಾಗಿದ್ದು, ಅಚ್ಚುಕಟ್ಟಾಗಿ ಚಕ್ಕೆಗಳನ್ನು ತೆಗೆಯಲಾಗಿದ್ದು, ಲೆವೆಲ್ವಾ ವಿಧಾನದಲ್ಲಿ ರಚಿತಗೊಂಡಿರುವ ಸಾಧ್ಯತೆಯಿದೆ. ಮತ್ತೊಂದು ಆಯುಧವು ಸಂಗೇನಹಳ್ಳಿಕೆರೆಯ ಬಯಲಿನಲ್ಲಿ ಎಸ್. ವೈ.ಸೋಮಶೇಖರ್ ಜೊತೆಗೂಡಿ ಶೋಧಿಸಿದ್ದೇವೆ. ಈ ಆಯುಧವು ೫ಸೆಂ.ಮೀ. ಅಗಲ ಮತ್ತು ೮ ಸೆಂ.ಮೀ. ಉದ್ದವಿದ್ದು, ಆಮೆ ಆಕಾರದಲ್ಲಿದೆ. ಲೆವೆಲ್ವಾ ವಿಧಾನಕ್ಕೆ ಒಳಗಾಗಿರುವ ಆಯುಧದಲ್ಲಿ ತುದಿಯು ಮುಂಚಾಚಿದ್ದು ಕೊರೆಯುವ ಸಾಧನವಾಗಿದೆ. ಮಧ್ಯಭಾಗವು ಗೂನಾಗಿರುವ ರೀತಿಯಲ್ಲಿ ಹುಬ್ಬಿದ್ದು, ಅಕ್ಕ-ಪಕ್ಕ ಚಕ್ಕೆಗಳನ್ನು ತೆಗೆಯಲಾಗಿದೆ. ಈ ರೀತಿಯಾದ ಆಯುಧವು ಮಧ್ಯ ಹಳೆ ಶಿಲಾಯುಗದ್ದು. ಎಸ್.ನಾಗರಾಜಪ್ಪ ಗೊಡಬನಾಳ್‌ನಲ್ಲಿ ೧೧ಸೆಂ.ಮಿ ಉದ್ದ ೫ಸೆಂ.ಮೀ ಅಗಲವಾದ ಆಯುಧವನ್ನು ಶೋಧನೆಮಾಡಿರುವುದು ಸರಿಯಷ್ಟೇ[೨೧]. ಆದರೆ ಈ ಆಯುಧವು ಆದಿ ಹಳೆಶಿಲಾಯುಗದ ಲಕ್ಷಣವನ್ನು ಹೊಂದಿವೆ ಎಂಬುದು ಸ್ಪಷ್ಟ.

ಅಂತ್ಯ ಹಳೆಶಿಲಾಯುಗವು ಹಳೆಶಿಲಾಯುಗದ ಅಂತಿಮ ಹಂತ. ಈ ಯುಗದಲ್ಲಿ ಕೊರೆಯುವ, ಎರೆಯುವ, ಚೂರಿ, ರಂಧ್ರಕಾರಗಳು ಪ್ರಮುಖ ಆಯುಧಗಳು[೨೨]. ಪ್ರಸ್ತುತ ಚಳ್ಳಕೆರೆ ತಾಲೂಕಿನ ಯಾದಲಗಟ್ಟೆಯಲ್ಲಿ ಎಸ್.ಜಿ.ರಾಮದಾಸರೆಡ್ಡಿಯವರಿಗೆ ಅಂತ್ಯ ಹಳೆಶಿಲಾಯುಗದ ಆಯುಧವು ದೊರಕಿತ್ತು[೨೩]. ಕ್ಷೇತ್ರ ಕಾರ್ಯದಲ್ಲಿ ಇದೇ ಯಾದಲಗಟ್ಟೆ ನೆಲೆಯಲ್ಲಿ ಚರ್ಟ್‌ನಿಂದ ತಯಾರುಗೊಂಡ ಆಯುಧವು ದೊರತಿದೆ. ಈ ಆಯುಧವು ೪ ಸೆಮೀ ಉದ್ದ ೩ ಸೆಮೀ ಅಗಲವಿದ್ದು, ಮಧ್ಯಭಾಗದಲ್ಲಿ ನೀಳವಾದ ಚಕ್ಕೆಯನ್ನು ತೆಗೆಯಲಾಗಿರುವುದು. ತುದಿಯ ಅಂಚು ಸೂಜಿಯಂತೆ ಉದ್ದವಾಗಿದ್ದು, ಮತ್ತೊಂದು ಭಾಗ ಮೊಂಡಾಗಿದೆ. ಆಯುಧದ ಸುತ್ತ ತುದಿಯಲ್ಲಿ ಚಕ್ಕೆಯನ್ನು ತೆಗೆಯಲಾಗಿರುವುದು. ಆಯುಧವನ್ನು ಬಾಣದ ಮೊನೆಯಾಗಿ ಉಪಯೋಗಿಸಿರಬಹುದು. ಈ ರೀತಿಯಾದ ಚಕ್ಕೆಗಳನ್ನು ತೆಗೆದಿರುವುದನ್ನು ಗಮನಿಸಿದರೆ ಲೆವೆಲ್ವಾ ವಿಧಾನ ಬಳಕೆಯಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಸೂಕ್ಷ್ಮ ಶಿಲಾಯುಗದಲ್ಲಿ ಇದ್ದಂತಹ ಆಯುಧಗಳು ಸೂಕ್ಷ್ಮವಾಗಿವೆ. ಅಂತ್ಯಹಳೆ ಶಿಲಾಯುಗದ ಚಕ್ಕೆ ಆಯುಧಗಳಿಗಿಂತ ಹರಿತವಾಗಿ ಇರುವ ಆಯುಧಗಳು ಸೂಕ್ಷ್ಮ ಶಿಲಾಯುಗದವು. ದಿಬ್ಬನಹಳ್ಳಿ, ಬ್ಯಾಲಹಳ್ಳಿಯಲ್ಲಿ ದೊರೆತ ಆಯುಧಗಳು ಕ್ವಾರ್ಟ್ಜ್‌ನಿಂದ,

ಸಂಗನಕಲ್ಲಿನಲ್ಲಿ ದೊರೆತವುಗಳು ಚಾಲ್ಸಿಡೋನಿಯಾ ಹಾಗೂ ಅಗೇಟ್, ಚರ್ಟ್ ಶಿಲೆಗಳಿಂದ ರಚಿತಗೊಂಡಿರುವವು[೨೪]. ಈ ಸೂಕ್ಷ್ಮವಾದ ಆಯುಧಗಳು ತ್ರಿಕೋನ, ವಜ್ರಾಕೃತಿ, ಚಂದ್ರಾಕೃತಿ ಮತ್ತು ಸಮಭುಜಾಕೃತಿಯಲ್ಲಿರುತ್ತವೆ[೨೫]. ಆಯುಧಗಳು ಒಂದು ಕಡೆ ಮತ್ತು ಎರಡು ಕಡೆ ಹರಿತವಾಗಿದ್ದು, ಮರದ ಕೋಲಿಗೆ ಜೋಡಿಸಲ್ಪಟ್ಟು ಉಪಯೋಗಿ ಸಿರುವ ಸಾಧ್ಯತೆಗಳಿವೆ[೨೬]. ಎಂ.ಎಚ್.ಕೃಷ್ಣ ೧೯೪೦-೪೭ರಲ್ಲಿ ಬ್ರಹ್ಮಗಿರಿಯಲ್ಲಿ ಉತ್ಖನನಮಾಡಿ ಅತ್ಯಂತ ಕೆಳಗಿನ ಸ್ತರವು ಸೂಕ್ಷ್ಮ ಶಿಲಾಯುಗದ ಸಂಸ್ಕೃತಿ ಎಂಬುದಾಗಿ ಗುರ್ತಿಸಿದ್ದಾರೆ[೨೭]. ಈ ನೆಲೆಯನ್ನು ಹೊರತು ಪಡಿಸಿದರೆ ಹಾನಗಲ್, ಹಳೆಕೆರೆ, ದೊಡ್ಡೇರಿ, ಪಿ. ಮಹಾದೇವಪುರ, ಗಂಜಿಗುಂಟೆ, ಯಾದಲಗಟ್ಟೆ, ಬೊಮ್ಮನಕುಂಟೆ, ಪುರ್ಲಹಳ್ಳಿ, ಜೆ.ಎನ್. ಕೋಟೆ, ಕಾಲುವೇಹಳ್ಳಿ, ಜಾನಕಲ್ಲು ಮೊದಲಾದ ಕಡೆಗಳಲ್ಲಿ ಆಯುಧಗಳು ಶೋಧಗೊಂಡಿರುತ್ತವೆ. ಈ ನೆಲೆಯಲ್ಲಿ ದೊರೆತಿರುವ ಆಯುಧಗಳು ಮೇಲೆ ಹೇಳಿದಂತಹ ಶಿಲೆಗಳಿಂದ ರಚಿತಗೊಂಡಂತವುಗಳು. ೧ಸೆ.ಮೀ ನಿಂದ ೫ಸೆ.ಮೀ ವರೆಗೆ ಉದ್ದವಿರುವ ಆಯುಧಗಳು ಓರೆಯಾದ ಮೊನೆಯನ್ನು ಹೊಂದಿರುತ್ತವೆ.

ನವ ಶಿಲಾಯುಗದಲ್ಲಿ ಮಾನವರು ಡೋಲರೈಟ್, ಡೈಕ್ ಶಿಲೆಯಿಂದ ಅಥವಾ ದಕ್ಷಿಣ ಟ್ರಾಪ್ ಶಿಲೆಗಳಿಂದ ಕಲ್ಲಿನ ಕೊಡಲಿಯನ್ನು ರಚಿಸಿದ್ದಾರೆ[೨೮]. ಕಲ್ಲಿನ ಕೊಡಲಿಯನ್ನು ೩ ಹಂತಗಳಲ್ಲಿ ದೊಡ್ಡ ಚಕ್ಕೆಗಳನ್ನು ತೆಗೆಯುವುದು, ದೊಡ್ಡ ಚಕ್ಕೆಯ ಕಲ್ಲನ್ನು ಬಳಸಿಕೊಂಡು ಅದರ ಮೇಲ್ಭಾಗ ಸಣ್ಣ ಸಣ್ಣ ಚಕ್ಕೆಯನ್ನು ತೆಗೆಯುವುದು ನಂತರ ಕಲ್ಲಿಗೆ ಉಜ್ಜಿ ನಯಗೊಳಿಸುವುದು[೨೯]. ಈ ಕಲ್ಲಿನ ಕೊಡಲಿಗಳ ಜೊತೆಗೆ ಚರ್ಟ್, ಅಗೇಟ್, ಚಾಲ್ಸಿಡೋನಿಯಾ ಶಿಲೆಗಳಿಂದ ತಯಾರುಗೊಂಡ ಸೂಕ್ಷ್ಮ ಉಪಕರಣಗಳು ಬಳಕೆಗೊಂಡಿವೆ[೩೦]. ಸೂಕ್ಷ್ಮ ಶಿಲಾಯುಗವು ದಕ್ಷಿಣ ಭಾರತದ ಕೆಲವು ನೆಲೆಗಳಲ್ಲಿ ನವ ಶಿಲಾಯುಗದ ಗ್ರಾಮೀಣ ಮತ್ತು ಬೇಸಾಯ ಸಮುದಾಯಗಳ ಜೊತೆಗೆ ಉಳಿದುಕೊಂಡು ಬಂದಿರುವ ಉಲ್ಲೇಖ ಗಮನಾರ್ಹ[೩೧]. ಈ ಉಲ್ಲೇಖವು ನವಶಿಲಾಯುಗದ ನೆಲೆಗಳಲ್ಲಿ ದೊರೆತಿರುವ ಸೂಕ್ಷ್ಮ ಆಯುಧಗಳು ಸೂಕ್ಷ್ಮ ಶಿಲಾಯುಗದಲ್ಲಿ ರಚಿತಗೊಂಡಂತವುಗಳು ಎಂದು ಅರ್ಥೈಸುತ್ತದೆ. ಅಂತಹ ಆಯುಧಗಳನ್ನು ನವ ಶಿಲಾಯುಗದಲ್ಲಿ ಬಳಸಿದ್ದಾರೆ ಎಂದು ಹೇಳಬಹುದು. ಬ್ರಹ್ಮಗಿರಿಯಲ್ಲಿ ದೊರೆತಿರುವ ಸೂಕ್ಷ್ಮ ಆಯುಧಗಳು ನವ ಶಿಲಾಯುಗದ ೧ಎ ಮತ್ತು ೧ಬಿ ಹಂತದಲ್ಲಿ ಕಂಡುಬಂದಿವೆ[೩೨]. ಈ ಆಯುಧಗಳು ೧ಸೆಂ.ಮೀನಿಂದ ೪ಸೆಂ.ಮೀವರಗೆ ಉದ್ದವಾಗಿವೆ. ಆಯುಧಗಳು ನೀಳವಾಗಿ ಹರಿತವಾಗಿವೆ. ತ್ರಿಭುಜಾಕಾರದಲ್ಲಿ, ಸಮಭುಜ, ಅಸಮಭುಜ,

ಬಾಣದ ರೀತಿಯಲ್ಲಿ ಆಯುಧಗಳು ಇರುತ್ತವೆ. ಸೂಕ್ಷ್ಮ ಶಿಲಾಯುಗದಲ್ಲಿ ಬಿಟ್ಟು ಹೋದ ಆಯುಧಗಳನ್ನು ನವ ಶಿಲಾಯುಗದ ಮಾನವರು ಬಳಸಿರಬೇಕು ಇಲ್ಲವೇ ಸೂಕ್ಷ್ಮ ಶಿಲಾಯುಗದ ಕೈಗಾರಿಕಾ ಕೇಂದ್ರವಾಗಿರುವ ಸಂಗನಕಲ್ಲಿನಿಂದ ತಂದಿರುವ ಸಾಧ್ಯತೆಗಳಿವೆ. ನಯವಾದ ಕಲ್ಲಿನ ಕೊಡಲಿಗಳು ಬಹುತೇಕ ನವ ಶಿಲಾಯುಗದ ನೆಲೆಗಳಲ್ಲಿ ದೊರೆತಿವೆ. ಆದರೆ ಮೊದಲನೇ ಹಂತದ ಆಯುಧವು ತಮಟಕಲ್ಲಿನ ನವಶಿಲಾಯುಗದ ವಸತಿ ನೆಲೆಯಲ್ಲಿ ಮಾತ್ರ ದೊರಕಿದೆ. ಈ ಹಿನ್ನೆಲೆಯಲ್ಲಿ ನೆಲೆಯಲ್ಲಿ ಕಲ್ಲಿನ ಕೊಡಲಿಯನ್ನು ತಯಾರು ಮಾಡಿಕೊಳ್ಳುತ್ತಿದ್ದರೆಂದು ತಿಳಿಸಬಹುದು. ಬ್ರಹ್ಮಗಿರಿಯಲ್ಲಿ ಮಾರ್ಟಿಮರ್ ವೀಲ್ಹರ್ ಉತ್ಖನನ ಮಾಡಿದ ೧೮ ಮತ್ತು ೧೯ನೇ ಸ್ತರದಲ್ಲಿ ೧ಎ ಸಂಸ್ಕೃತಿಯಲ್ಲಿ ಕಲ್ಲಿನ ಕೊಡಲಿಗಳನ್ನು ತಯಾರಿಸುತ್ತಿದ್ದರೆಂಬುದಕ್ಕೆ ಪುರಾವೆಗಳು ದೊರೆತಿರುತ್ತವೆ[೮೩]. ಅಂದರೆ ಕಲ್ಲಿನ ಚಪ್ಪಟೆಯಾದ ವೇದಿಕೆ, ವೇದಿಕೆಯ ಕೆಳಗೆ ಅನುಕ್ರಮವಾಗಿ ಬಿದ್ದಿರುವ ಕಲ್ಲಿನ ಕೊಡಲಿಗಳು, ತಯಾರಿಕಾ ಸ್ಥಳವನ್ನು ಪ್ರತಿನಿಧಿಸುವುದು. ಈ ಮೂಲಕ ವಸತಿ ನೆಲೆಯಲ್ಲಿಯೇ ನವ ಶಿಲಾಯುಗದ ಮಾನವರು ಕಲ್ಲಿನ ಕೊಡಲಿಯನ್ನು ತಯಾರು ಮಾಡಿಕೊಳ್ಳುತ್ತಿದ್ದರೆಂದು ನಿರ್ಣಯಿಸಬಹುದು. ನಯವಾದ ಕಲ್ಲಿನ ಕೊಡಲಿ ತ್ರಿಭುಜಾಕಾರದಲ್ಲಿದ್ದು, ಕೆಳಭಾಗವು ಅರ್ಧಚಂದ್ರಾಕೃತಿಯಲ್ಲಿರುತ್ತದೆ. ಮೇಲ್ಭಾಗ ಹಿಡಿಕೆಯಿಂದ ಕೂಡಿದ್ದು, ಕೆಳಭಾಗವು ಹರಿತವಾಗಿರುತ್ತದೆ. ಬೇಟೆಯಾಡಿದ ಪ್ರಾಣಿಯನ್ನು ಕತ್ತರಿಸಲು ಹಾಗೂ ಗಿಡಗಳನ್ನು ಕತ್ತರಿಸಲು ಸಹಾಯಕವಾಗುತ್ತಿದ್ದವು. ಕಲ್ಲಿನ ಕೊಡಲಿಗಳು ೭ ಇಂಚು ಉದ್ದ ೪ ಇಂಚು ಅಗಲವಾದ ಅಳತೆಯನ್ನು ಸಾಮಾನ್ಯವಾಗಿ ಹೊಂದಿದ್ದು, ಇದಕ್ಕಿಂತ ಕಡಿಮೆಯಾದ ಕಲ್ಲಿನ ಕೊಡಲಿಯು ೨ ಇಂಚಿನಲ್ಲಿ ವ್ಯತ್ಯಾಸವಿರುತ್ತದೆ. ಕಲ್ಲಿನ ಕೊಡಲಿಗಳಲ್ಲದೆ, ಕಲ್ಲಿನ ಒನಕೆ, ವೃತ್ತಾಕಾರದ ಚಪ್ಪಟೆ ಕಲ್ಲು, ಕವಣೆಕಲ್ಲು, ಗುಂಡುಕಲ್ಲು, ಉಜ್ಜುವ ಕಲ್ಲುಗಳನ್ನು ೧ಬಿ ಸಂಸ್ಕೃತಿಯಲ್ಲಿ ಬಳಸುತ್ತಿದ್ದರೆಂಬುದಕ್ಕೆ ಬ್ರಹ್ಮಗಿರಿ ಉತ್ಖನನವೇ ಆಧಾರ[೮೪]. ಬ್ರಹ್ಮಗಿರಿಯಲ್ಲಿ ತಾಮ್ರದ ಕೊಡಲಿ ಹಾಗೂ ಕಂಚಿನ ಸಳಿ ದೊರೆತಿದ್ದು, ಕಡಿಮೆ ಪ್ರಮಾಣದಲ್ಲಿ ಈ ಆಯುಧಗಳು ಬಳಕೆಯಾಗಿರಬೇಕು[೮೫]. ಈ ರೀತಿಯಾಗಿ ನವ ಶಿಲಾಯುಗದಲ್ಲಿ ಶಿಲೆ, ಲೋಹವನ್ನು ಬಳಸಿಕೊಂಡು ಆಯುಧವನ್ನಾಗಿ ಬಳಸುತ್ತಿದ್ದರೆಂದು ನಿರ್ಧರಿಸಬಹುದು.

ಬೃಹತ್ ಶಿಲಾಯುಗದಲ್ಲಿ ಶಿಲೆ ಮತ್ತು ಲೋಹಗಳು ಆಯುಧಗಳಾಗಿ ಬಳಕೆಯಾಗಿವೆ. ಶಿಲೆಗಿಂತ ಕಬ್ಬಿಣದ ಲೋಹವೇ ಆಯುಧಗಳಾಗಿ ಬಳಕೆಯಾಗಿರುವುದು ಹೆಚ್ಚು. ಕಬ್ಬಿಣದ ಆವಿಷ್ಕಾರವಾಗಿದ್ದು, ಇದೇ ಕಾಲದಲ್ಲಿ. ಬಾಣದ ಮೊನೆ, ಚೂರಿ,

ಚಾಕು, ೩ಅಡಿ ಉದ್ದದ ಈಟಿ, ಮೂಳೆ, ಚಪ್ಪಟೆ ಕೊಡಲಿ, ಕುಡುಗೋಲಿನಂತಹ ಕಬ್ಬಿಣದ ಆಯುಧಗಳು ಬ್ರಹ್ಮಗಿರಿ ನೆಲೆಯಲ್ಲಿ ದೊರೆತಿವೆ[೪೬]. ಈ ರೀತಿಯಾದ ಆಯುಧಗಳು ಬೇಟೆ, ಕೃಷಿಯ ಸಲುವಾಗಿ ಬಳಸಿರುವ ಸಾಧ್ಯತೆಗಳಿವೆ. ಕಬ್ಬಿಣ ಲೋಹದ ಆಯುಧಗಳ ಜೊತೆಗೆ ಕವಣೆ ಕಲ್ಲು, ಗುಂಡುಕಲ್ಲು, ಉಜ್ಜುವ ಕಲ್ಲನ್ನು ಬಳಸುತ್ತಿದ್ದರು[೪೭]. ಧಾನ್ಯಗಳನ್ನು ಮತ್ತು ಎಲೆಯನ್ನು ಕುಟ್ಟಲು ಗುಂಡುಕಲ್ಲು, ಬೇಟೆಯಾಡಲು ಕವಣೆಕಲ್ಲು ಸಹಾಯಕವಾಗಿದ್ದಿರಬೇಕು. ಈ ರೀತಿಯಾದ ಶಿಲೋಪಕರಣಗಳು ಬೃಹತ್ ಶಿಲಾಯುಗದ ವಸತಿ ನೆಲೆಯಲ್ಲಿ ಕಂಡುಬಂದಿವೆ.

೪.೪. ಬೂದಿ ದಿನ್ನೆಗಳು

ಕರ್ನಾಟಕದಲ್ಲಿ ೪೨ ಕಡೆಗಳಲ್ಲಿ ಬೂದಿ ದಿನ್ನೆಗಳು ಕಂಡುಬಂದಿವೆ[೪೮]. ಉಳಿದಂತೆ ಚಿತ್ರದುರ್ಗ ಜಿಲ್ಲೆಯ ರಾಮಗಿರಿ, ಸಂಗೇನಹಳ್ಳಿಕೆರೆ, ಎನ್.ಗೌರೀಪುರದಲ್ಲಿ ಕಾಣಬಹುದು. ೧ ಎಕರೆಯಷ್ಟು ವಿಸ್ತಾರವಾದ ಬೂದಿದಿನ್ನೆಗಳು ಸುಟ್ಟಸಗಣಿಯ ಗುಡ್ಡೆಗಳಾಗಿವೆ. ಸಗಣಿಯನ್ನು ೯೦೦-೧೨೦೦ ಸೆಂಟಿ ಗ್ರೇಡ್‌ನಲ್ಲಿ ಸಗಣಿಯನ್ನು ಸುಟ್ಟಾಗ ಕಿಟ್ಟಗಳ ರೂಪದಲ್ಲಿ ತಾಳುತ್ತದೆ[೪೯]. ಸ್ಥಳೀಯರು ಸುಡಲ್ಪಟ್ಟ ಸಗಣಿಯ ಗುಡ್ಡೆಯನ್ನು ಬೂದಿದಿನ್ನೆ, ಬೂದುಗಡ್ಡೆ, ಅರ್ಜುನಾಪುರ ಎಂಬುದಾಗಿ ಕರೆಯುತ್ತಿದ್ದಾರೆ. ಅದರೆ ವಸತಿ ನೆಲೆಯನ್ನು ಬೂದಿದಿನ್ನೆಯೆಂದು ಕರೆಯುತ್ತಿರುವುದು ಸಾಮಾನ್ಯ. ಬೂದಿಕಿಟ್ಟಗಳು ಮಾತ್ರ ಸಿಗುವ ಪ್ರದೇಶವನ್ನು ಬೂದಿದಿನ್ನೆಯೆಂದು ಕರೆಯುವುದು ಸರಿಯಾದ ಕ್ರಮವಾಗಿರುತ್ತದೆ. ಅಂದರೆ ಸಂಶೋಧಕರು ವಸತಿ ಹಾಗೂ ಸಗಣಿಯಿಂದ ರೂಪುಗೊಂಡ ಬೂದಿಗಡ್ಡೆಯ ವ್ಯತ್ಯಾಸವನ್ನು ತಿಳಿದು ಗುರುತಿಸುವ ಅವಶ್ಯಕತೆ ಇದೆ. ಇಂತಹ ಸೂಕ್ಷ್ಮವಾದ ಅಧ್ಯಯನ ಕ್ಷೇತ್ರಕಾರ್ಯದಲ್ಲಿ ಆಗಬೇಕಾಗಿದೆ. ಹೊಳಲ್ಕೆರೆ ತಾಲೂಕಿನ ಗಟ್ಟಿಹೊಸಹಳ್ಳಿಯಲ್ಲಿ ಕಂಡುಬಂದಿರುವ ನೆಲೆಯು ಮಡಕೆ, ಆಭರಣ, ಆಯುಧಗಳನ್ನು ತಯಾರಿಸುವಾಗ ಬೂದಿರಾಶಿಯ ಗುಡ್ಡೆಯಾಗಿದೆ. ಆದರೆ ಸಗಣಿಯಿಂದಾದ ಬೂದಿಗುಡ್ಡೆಯಲ್ಲ. ೧೯೬೩-೬೪ರಲ್ಲಿ ಜಿ.ಜಿ.ಮುಜ್ಮುಮ್ದಾರ್, ಎಸ್.ಎನ್.ರಾಜಗುರುರವರು ಕಪ್ಪಗಲ್ಲಿನ ಬೂದಿಗಡ್ಡೆಯಲ್ಲಿ ಉತ್ಖನನಮಾಡಿ ದೊರೆಂತಹ ಅವಶೇಷಗಳನ್ನು ಆಧರಿಸಿ ನವ ಶಿಲಾಯುಗದಲ್ಲಿ ರೂಪುಗೊಂಡಿದೆ ಎಂದಿದ್ದಾರೆ[೫೦]. ಡಾ.ಪದ್ದಯ್ಯರವರು ಗುಲ್ಬರ್ಗ ಜಿಲ್ಲೆಯ ಬೂದಿಹಾಳದಲ್ಲಿ ಉತ್ಖನನಮಾಡಿ ದನಗಳನ್ನು ರೊಪ್ಪದ ರೀತಿ ಕೂಡಿಹಾಕುತ್ತಿದ್ದರು, ವಸತಿನೆಲೆಯ ಬಳಿಯಲ್ಲಿಯೇ ಸಗಣಿಯ ಗುಡ್ಡೆಯನ್ನು ಹಾಕಿ ಕಾಲಕಾಲಕ್ಕೆ ಸುಡುತ್ತಿದ್ದರು ಎಂಬ ತೀರ್ಮಾನಕ್ಕೆ ಬಂದಿದ್ದಾರೆ[೫೧].

ಹೊಳಲ್ಕೆರೆ ತಾಲೂಕಿನ ರಾಮಗಿರಿಯಲ್ಲಿ ಕಂಡುಬಂದಿರುವ ವಸತಿನೆಲೆಯ ಪಕ್ಕದಲ್ಲಿ ಬೂದಿಗುಡ್ಡೆ ಇರುವುದು ಪದ್ದಯ್ಯರವರು ಹೇಳಿದ ಅಭಿಪ್ರಾಯಕ್ಕೆ ಪೂರಕವಾಗಿದೆ. ರವಿ ಕೋರಿಶೆಟ್ಟರ್ ಕುಡುತಿನಿಯಲ್ಲಿ ಬೂದಿಗುಡ್ಡೆಯಲ್ಲಿ ನವ ಶಿಲಾಯುಗದ ೪ ಕಾಲಿನ ಶವಸಂಪುಟವನ್ನು ಶೋಧಿಸಿದ್ದರು[೭೨]. ಈ ಎಲ್ಲಾ ಕಾರಣಗಳಿಂದ ಶವಸಂಸ್ಕಾರ ಮಾಡುತ್ತಿದ್ದರ ಕಾರಣದಿಂದ ಬೂದಿ ದಿನ್ನೆಯಾಗಿರಬೇಕೆಂದು ನ್ಯೂಬೋಲ್ಡ್ ಅಭಿಪ್ರಾಯಪಟ್ಟಿದ್ದಾರೆ ಎಂದೆನ್ನಿಸುವುದು[೭೩]. ಇನ್ನೂ ಉಳಿದಂತೆ ಲೋಹಗಳನ್ನು ತಯಾರಿಸುವಾಗ ಪ್ರಾಣಿಗಳನ್ನು ಸುಡುವುದರಿಂದ ಬೂದಿ ದಿನ್ನೆಗಳಾಗಿವೆ ಎಂಬ ವಾದಗಳಿವೆ. ಆದರೆ ಬ್ರೂಸ್ ಫೂಟ್‌ರವರು ಗುಡ್ಡೆ ಹಾಕಿದ ಸಗಣಿ ಒಣಗಿ ಆಕಸ್ಮಿಕವಾಗಿ ಬೆಂಕಿ ತಗಲಿರಬೇಕು ಇಲ್ಲವೆ ಮತ್ತೊಂದು ಸ್ಥಳಕ್ಕೆ ಹೋಗುವಾಗ ಬೆಂಕಿ ಹಚ್ಚಿರಬೇಕೆಂಬ ಅಭಿಪ್ರಾಯವನ್ನು ಒಪ್ಪುತ್ತಾರೆ[೭೪]. ಬೂದಿದಿನ್ನೆಯ ಸೃಷ್ಟಿ ಪೌರಾಣಿಕವಾಗಿ ಮಹತ್ವದ್ದು. ಸ್ಥಳೀಯರು ವಾಲಿ ಮತ್ತು ಸುಗ್ರೀವನಿಗೆ ಯುದ್ಧವಾಯಿತು, ಆಗ ಸೋತ ವಾಲಿಯನ್ನು ಸುಟ್ಟರು, ಹಿಡಂಬಾಸುರನನ್ನು ಸುಟ್ಟಿದ್ದರಿಂದ, ಅರ್ಜುನನು ಯುದ್ಧ ಮಾಡಿ ಶತ್ರುಗಳನ್ನು ಸುಟ್ಟು ಹಾಕಿದನು ಹೀಗೆ ಮೊದಲಾದ ಕಾರಣಗಳಿಂದ ಬೂದಿ ದಿನ್ನೆಗಳು ರೂಪುಗೊಂಡಿವೆ ಎಂದು ಸ್ಥಳೀಯರು ಹೇಳುತ್ತಾರೆ. ಈ ಕಾರಣಗಳಿಂದ ಇಂದು ಬೂದಿದಿನ್ನೆಗಳನ್ನು ಅರ್ಜುನಾಪುರ, ಹಿಡಂಬಿಪುರ, ವಾಲಿದಿಬ್ಬ ಮುಂತಾಗಿ ಕರೆಯುತ್ತಿರುವುದನ್ನು ಕಾಣುತ್ತೇವೆ. ಬೂದಿ ಸಂಬಂಧಿತ ಗ್ರಾಮನಾಮಗಳಿದ್ದು, ಕೆಲವೊಂದು ಕಡೆ ಪ್ರಾಗಿತಿಹಾಸದ ಅವಶೇಷಗಳು ದೊರೆತಿರುತ್ತವೆ. ಇಂಗಳದಾಳ್, ಕಿಟ್ಟದಾಳ್, ಬೂದಿಪುರ ಮೊದಲಾದವುಗಳು ಬೂದಿ ಸಂಬಂಧಿತ ಗ್ರಾಮಗಳು. ಈ ಗ್ರಾಮನಾಮಗಳಿಂದ ಪ್ರಾಗಿತಿಹಾಸ ಕಾಲದ ನೆಲೆಗಳನ್ನು ಶೋಧಿಸುವುದು ಸುಲಭ ಸಾಧ್ಯ. ಒಟ್ಟಾಗಿ ಬೂದಿದಿನ್ನೆಗಳು ಪಶುಸಂಗೋಪನೆಯ ಸಂಕೇತವಾಗಿದ್ದು, ಪಶು ಸಂಗೋಪನೆ ನವ ಶಿಲಾಯುಗದ ಜನರು ಕಸುಬಾಗಿ ಸ್ವೀಕರಿಸಿದ್ದರೆಂಬುದು ಸ್ಪಷ್ಟವಾಗುತ್ತದೆ.

೪.೫. ಅಲಂಕಾರಿಕ ವಸ್ತುಗಳು

ನವ ಶಿಲಾಯುಗದಿಂದ ಜನರು ಅಲಂಕಾರಿಕ ವಸ್ತುಗಳನ್ನು ಬಳಸಲು ಆರಂಭಿಸಿದ್ದರು. ಬೃಹತ್ ಶಿಲಾಯುಗದಲ್ಲಿ ಹಾಗೂ ನವ ಶಿಲಾಯುಗ ಸೇರಿದಂತೆ ಅಲಂಕಾರಿಕ ವಸ್ತುಗಳು ಬ್ರಹ್ಮಗಿರಿ ಸಮಾಧಿಗಳಲ್ಲಿ ಹಾಗೂ ವಸತಿನೆಲೆಗಳಲ್ಲಿ ದೊರೆತಿರುವುದು ಪ್ರಮುಖ ಆಧಾರ. ಲೋಹ, ಶಿಲೆ, ಸುಡಾವೆ ವಸ್ತುಗಳು, ಶಂಖ,

ಚಿಪ್ಪು ಇವುಗಳು ಅಂದಿನ ಜನರ ಅಲಂಕಾರಿಕ ವಸ್ತುಗಳಲ್ಲಿ ಬಳಕೆಯಾದಂತಹ ಕಚ್ಚಾ ವಸ್ತುಗಳಾಗಿವೆ. ಬ್ರಹ್ಮಗಿರಿಯ ಸಮಾಧಿಗಳಲ್ಲಿ ಡೋಲಾಮೈಟ್, ಮ್ಯಾಗ್ನಾಸೈಟ್ ಮಣಿಗಳು ದೊರಕಿದ್ದು, ತಿಳಿಹಸಿರು ಬಣ್ಣದ್ದಾಗಿರುತ್ತವೆ[೯೫]. ಈ ಮಣಿಗಳು ವೃತ್ತಾಕಾರವಾಗಿ ಗಾಲಿಯಾಕಾರದಲ್ಲಿ, ಸಿಲಿಂಡರ್ ಆಕಾರದಲ್ಲಿದ್ದು, ೦.೧೩x೦.೩೫ ಇಂಚಿನಿಂದ ೦.೨೧x೦.೩೭ ಮತ್ತು ೦.೫೧x೦.೫೫ ಇಂಚಿನಲ್ಲಿ ತಯಾರುಗೊಂಡಿವೆ[೯೬]. ಸುಡಾವೆ ಮಣಿಗಳು, ತಾಮ್ರದ ಬಳೆಗಳು ಹಾಗೂ ೩೩ ಚಿನ್ನದ ಮಣಿಗಳು ಸಮಾಧಿಯಲ್ಲಿ ದೊರೆತಿರುವುದು ಗಮನಾರ್ಹ[೯೭]. ನವ ಶಿಲಾಯುಗದಲ್ಲಿ ಹೆಚ್ಚಿಗೆ ಬಳಕೆಯಾದ ತಾಮ್ರವು ಬೃಹತ್ ಶಿಲಾಯುಗದಲ್ಲಿ ಮುಂದುವರೆದಿದ್ದು, ಮುಖ್ಯವಾಗಿ ಪ್ರಸ್ತುತ ಪರಿಸರದಲ್ಲಿ ಚಿನ್ನದ ಬಳಕೆ ಬೃಹತ್ ಶಿಲಾಯುಗದಿಂದ ಆರಂಭವಾಗಿದೆ. ಚಿನ್ನದ ಮಣಿಗಳು ಸಿಲಿಂಡರ್ ಮತ್ತು ವೃತ್ತಾಕಾರದಲ್ಲಿ ರಚಿತಗೊಂಡಿವೆ. ವಸತಿನೆಲೆಯಲ್ಲಿ ದೊರೆತ ೭೭ ಮಣಿಗಳು ಮ್ಯಾಗ್ನಾಸೆಟ್, ಸೆಲ್, ಸುಡಾವೆ, ಅಗೇಟ್, ಕಾರ್ಲೀನಿಯ, ಗ್ಲಾಸ್, ಜಾಸ್ಪರ್ ಶಿಲೆಗಳಿಂದ ರಚಿತಗೊಂಡಿವೆ[೯೮]. ಪದಕಗಳ ಜೊತೆಗೆ ಅಪೂರ್ಣವಾದ ಮಣಿಗಳು ಕಂಡುಬಂದಿದ್ದು, ಬ್ರಹ್ಮಗಿರಿ ನೆಲೆಯು ಮಣಿಗಳ ತಯಾರಿಕಾ ಘಟಕವಾಗಿತ್ತೆಂದು ನಿರ್ಧರಿಸಬಹುದು[೯೯]. ಗ್ಲಾಸ್‌ನಿಂದ ತಯಾರುಗೊಂಡ ಮಣಿಗಳು ಅಥವಾ ಬಳೆಗಳು ಶಾತವಾಹನರ ಕಾಲದಲ್ಲಿ ಮಾತ್ರ ಬಳಸಿರುವ ಸಾಧ್ಯತೆಗಳಿವೆ. ಉಳಿದಂತಹ ಶಿಲಾ ಮತ್ತು ಲೋಹದ ಮಣಿಗಳು ನವ ಮತ್ತು ಬೃಹತ್ ಶಿಲಾಯುಗದ ಕಾಲದವು. ಕಪ್ಪೆಚಿಪ್ಪಿನಿಂದ ತಯಾರುಗೊಂಡ ಮಣಿಗಳು ನವ ಶಿಲಾಯುಗದ ೧ಬಿ ಸಂಸ್ಕೃತಿಯಲ್ಲಿ ಬೃಹತ್ ಶಿಲಾಯುಗ ಮತ್ತು ಆಂಧ್ರ ಸಂಸ್ಕೃತಿಯ ಘಟ್ಟದಲ್ಲಿ ಬಳಕೆಗೊಂಡಿವೆ[೧೦೦]. ದೊರೆತಂತಹ ಮಣಿಗಳು ತ್ರಿಭುಜಾಕಾರದಲ್ಲಿ, ಗಾಲಿಯಾಕಾರದಲ್ಲಿ, ವೃತ್ತಾಕಾರದಲ್ಲಿ, ಸಿಲಿಂಡರ್ ಆಕಾರದಲ್ಲಿದ್ದು, ಸೆಲ್ ಮಣಿಯಲ್ಲಿ ಚಿಕ್ಕ ಚಿಕ್ಕ ರಂಧ್ರಗಳಿವೆ[೧೦೧]. ಬಹುಶಃ ರಂಧ್ರವಿರುವ ಮಣಿಯು ಆಟವಾಡಿರುವುದಕ್ಕೆ ಬಳಸಿರಬಹುದು. ಸುಡಾವೆ ಮಣಿಗಳು ನವ ಶಿಲಾಯುಗದಲ್ಲಿ ಬೃಹತ್ ಶಿಲಾಯುಗಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬಳಸಿದ್ದು, ಆಂಧ್ರ ಸಂಸ್ಕೃತಿಯಲ್ಲಿ ಹೆಚ್ಚು ಬಳಕೆಯಾಗಿವೆ. ಎರಡು ರೀತಿಯಲ್ಲಿರುವ ಅಗೇಟ್ ಮಣಿಗಳಲ್ಲಿ ಕಪ್ಪು ಬ್ಯಾಂಡೆಡ್ ಮತ್ತು ಕೆಂಪು ಬ್ಯಾಂಡೆಡ್[೧೦೨] ಮಣಿಗಳು ಪ್ರಮುಖವು. ಈ ಅಗೇಟ್ ಮಣಿಗಳು ನವಶಿಲಾಯುಗದ ೧ಎ ಸಂಸ್ಕೃತಿಯಲ್ಲಿ ದೊರಕಿದ್ದು, ಈ ರೀತಿಯವು ಆಂಧ್ರ ಸಂಸ್ಕೃತಿಯಲ್ಲಿ ಹೆಚ್ಚು ಬಳಕೆಯಾಗಿವೆ[೧೦೩]. ಕಂಚಿನ ಉಂಗುರವೊಂದು ನವಶಿಲಾಯುಗದ ೧ಬಿ ಸಂಸ್ಕೃತಿಯಲ್ಲಿ ದೊರೆತಿರುವುದು ವಿಶೇಷ. ಒಟ್ಟಿನಲ್ಲಿ ಬ್ರಹ್ಮಗಿರಿ

ನೆಲೆಯು ನವ ಶಿಲಾಯುಗದಿಂದ ಆಂಧ್ರ ಸಂಸ್ಕೃತಿಯ ಕಾಲದವರೆಗೆ ಪ್ರಮುಖ ಆಭರಣ ತಯಾರಿಕಾ ಕೇಂದ್ರವಾಗಿತ್ತೆಂದು ಮತ್ತು ಚಿನ್ನ, ತಾಮ್ರ, ಕಂಚಿನ ಅಲಂಕಾರಿಕ ವಸ್ತುಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದಿದ ನೆಲೆಯಾಗಿದೆ ಎಂದು ನಿರ್ಧರಿಸಲಾಗಿದೆ.

ಚಳ್ಳಕೆರೆ ತಾಲೂಕಿನ ಹಳೆದೊಡ್ಡೇರಿಯಲ್ಲಿ ೧ಇಂಚು ಉದ್ದದ, ೬ಮಿಲೀ.ಮೀ ಉದ್ದದ ಚೌಕಕಾರದ ಬಳಪದ ಕಲ್ಲಿನ ಮಣಿ[೧೦೪], ಕಾರ್ನೇಲಿಯ ಕಲ್ಲಿನಿಂದ ತಯಾರಿಸಿದ ೧.೮ಸೆಂ.ಮೀ ಉದ್ದದ ಕೊಳವೆಯಾಕರದ ಮಣಿ[೧೦೫], ೨ ರಿಂದ ೩ ಇಂಚು ಸುತ್ತಳತೆಯ ವಿವಿಧ ಮಣಿಗಳು ದೊರಕಿದ್ದು, ಹಳೆದೊಡ್ಡೇರಿಯು ಮಣಿಗಳ ತಯಾರಿಕಾ ಕೇಂದ್ರವಾಗಿತ್ತೆಂದು ಅಭಿಪ್ರಾಯಪಟ್ಟಿದ್ದಾರೆ[೧೦೬]. ಪಿ. ಮಹಾದೇವಪುರ ನೆಲೆಯಲ್ಲಿ ಕಪ್ಪೆ ಚಿಪ್ಪಿನ ಮತ್ತು ಸಾಬೂನು ಕಲ್ಲಿನ ಪದಕ ದೊರೆತಿದ್ದು, ೨.೬ಸೆಂ.ಮೀ.ನಿಂದ ೭ಸೆ.ಮೀ ಉದ್ದ, ೩ಸೆ.ಮೀ.ನಿಂದ ೭ಸೆ.ಮೀ ಅಗಲ, ೦.೬ಸೆ.ಮೀ.ನಿಂದ ೧ಸೆ.ಮೀ.ನಷ್ಟು ರಂಧ್ರಗಳಿವೆ[೧೦೭]. ಹಿರಿಯೂರು ತಾಲೂಕಿನ ಮಾಳಪ್ಪನಗುಡ್ಡದಲ್ಲಿ ಮೃದುಶಿಲೆಯಿಂದ ರಚಿಸಿದ ಪೂರ್ಣ ಮತ್ತು ಅಪೂರ್ಣ ಕಲ್ಲಿನ ಮಣಿಗಳು ಕ್ಷೇತ್ರಕಾರ್ಯದಲ್ಲಿ ದೊರಕಿವೆ. ದೊರೆತಂತಹ ಮಣಿಗಳು ವೃತ್ತಾಕಾರವಾಗಿದ್ದು, ೧ಸೆ.ಮೀನಿಂದ ೨ಸೆ.ಮೀವರೆಗಿನ ರಂಧ್ರಗಳಿವೆ. ೨ಸೆ.ಮೀನಿಂದ ೩ಸೆ.ಮೀವರೆಗೆ ಸುತ್ತಳತೆ ಹೊಂದಿರುವ ಶಿಲಾಮಣಿಗಳು ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ಬಳಕೆಯಾಗಿರಬಹುದು. ಈ ಶಿಲಾಮಣಿಗಳು ಮಾಳಪ್ಪನಗುಡ್ಡದಲ್ಲಿದ್ದು, ಬಂಡೆಗಳ ಮೇಲೆ ಚಿಕ್ಕ ಚಿಕ್ಕ ರಂಧ್ರಗಳಿವೆ. ಈ ಅಂಶವು ತಯಾರಿಕೆಯ ಹಂತವನ್ನು ಪ್ರತಿನಿಧಿಸುವುದು. ಬ್ರಹ್ಮಗಿರಿಯಲ್ಲಿ ದೊರೆತ ಕಲ್ಲಿನ ಮಣಿಗಳಿಗೆ ಮತ್ತು ಮಾಳಪ್ಪನಗುಡ್ಡದಲ್ಲಿ ದೊರೆತ ಕಲ್ಲಿನ ಮಣಿಗಳಿಗೂ ಹೋಲಿಕೆಯಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ.

ನವ ಶಿಲಾಯುಗದ ೧ಬಿ ಹಂತದಲ್ಲಿ ಬಣ್ಣದ ಲೇಪನವಿರುವ ಮಡಕೆಗಳು ಕಂಡುಬಂದಿರುವುದು ಈಗಾಗಲೇ ತಿಳಿಸಿರುವ ಮಡಕೆಗಳ ವಿವರಣೆಯಲ್ಲಿ ಕಾಣಬಹುದು. ಮಡಕೆಗಳ ಮೇಲೆ ಅಡ್ಡ ಮತ್ತು ಉದ್ದಗೆರೆಗಳು ಬಣ್ಣದಲ್ಲಿವೆ. ನವ ಶಿಲಾಯುಗದ ೧ಎ ಹಂತದಲ್ಲಿ ಎಲೆಯಾಕಾರದ ರೀತಿ ಅಡ್ಡಗೆರೆಗಳನ್ನು ಕೊರೆದಿರುವುದು ಕಾಣಬಹುದು. ಈ ರೀತಿಯವು ಬ್ರಹ್ಮಗಿರಿಯ ಉತ್ಖನನದಲ್ಲಿ ದೊರೆತಿವೆ. ಬೃಹತ್ ಶಿಲಾಯುಗದ ಮಡಕೆಗಳ ಮೇಲೆ ಬಿಳಿ ಬಣ್ಣದ ರೇಖೆಗಳನ್ನು ಕ್ರಿಸ್‌ಕ್ರಾಸ್ ರೀತಿಯಲ್ಲಿ ಕಾಣಬಹುದು. ಹೀಗೆ ವಿವಿಧ ಬಣ್ಣದ ಲೇಪನವಿರುವ ಮಡಕೆಗಳು ಅಲಂಕಾರಿಕ ವಸ್ತುವಾಗಿತ್ತೆಂದು ಹೇಳಬಹುದು.

೪.೬. ಶವಸಂಸ್ಕಾರ ಪದ್ಧತಿ

ಪ್ರಾಗಿತಿಹಾಸದಲ್ಲಿ ಅತ್ಯಂತ ಹಳೆಯ ಸಂಸ್ಕೃತಿಯಾದ ಹಳೆ ಶಿಲಾಯುಗದಲ್ಲಿನ ಆಯುಧಗಳು ಮಾತ್ರ ಪ್ರಸ್ತುತ ಪರಿಸರದಲ್ಲಿ ದೊರೆತಿದ್ದು, ಮೂಳೆ ಅವಶೇಷಗಳು ದೊರೆತಿಲ್ಲದ ಕಾರಣ ಶವಸಂಸ್ಕಾರದ ಬಗ್ಗೆ ಹೇಳುವುದು ಕಷ್ಟಸಾಧ್ಯ. ಇದೇ ರೀತಿ ಮಧ್ಯ ಶಿಲಾಯುಗದ ಶವಸಂಸ್ಕಾರ ಪದ್ಧತಿಯನ್ನು ಹೇಳುವುದು ಕಷ್ಟ. ಆದರೆ ಮಧ್ಯ ಶಿಲಾಯುಗದ ಕೊನೆಯ ಹಂತದಲ್ಲಿ ಶವಸಂಸ್ಕಾರಕ್ಕೆ ಮಡಕೆ ಬಳಸಿಕೊಂಡಿರುವುದು ಪ್ರಮುಖ ವಿಷಯ[೧೦೮]. ಕರ್ನಾಟಕದಲ್ಲಿ ನವ ಶಿಲಾಯುಗದಿಂದ ವ್ಯವಸ್ಥಿತ ಶವಸಂಸ್ಕಾರ ಪದ್ಧತಿ ಆರಂಭವಾಯಿತು. ಇದಕ್ಕೆ ಪೂರಕವಾಗಿ ಟಿ.ನರಸೀಪುರ, ಬ್ರಹ್ಮಗಿರಿಯಲ್ಲಿ ದೊರೆತ ಅವಶೇಷಗಳು ಸಾಕ್ಷಿ. ಟಿ.ನರಸೀಪುರ ವಸತಿನೆಲೆಯಲ್ಲಿ ಶವವನ್ನು ಗುಂಡಿಯಲ್ಲಿ ಹೂಳುತ್ತಿದ್ದರು[೧೦೯]. ಹೂಳಿರುವ ಶವವನ್ನು ಪಶ್ಚಿಮಕ್ಕೆ ತಲೆ ಮಾಡಿ ಮಲಗಿಸಿದ್ದಾರೆ. ತಲೆಯು ದಕ್ಷಿಣಕ್ಕೆ ಮುಖ ಮಾಡಿದ್ದು, ಕಾಲುಗಳು ಉದ್ದವಾಗಿದ್ದು, ಕೈಗಳು ಮಾತ್ರ ಮಡಿಸಿವೆ. ತಲೆಯು ಅಲ್ಲಾಡಬಾರದೆಂದು ಸುಟ್ಟ ಮಣ್ಣಿನ ತಲೆಯಾನಿಕೆಯನ್ನು ಇಟ್ಟಿದ್ದಾರೆ. ತಲೆ ಹಿಂಭಾಗ ಸುಟ್ಟ ಬೂದು ಬಣ್ಣದ ಮಡಕೆಗಳನ್ನು ಇಟ್ಟಿದ್ದು, ೫ ಅಡಿ ಉದ್ದವಿರುವ ಶವವನ್ನು ಪರೀಕ್ಷಿಸಿ ೨೫–೩೦ ವರ್ಷದ ವ್ಯಕ್ತಿಯ ಮೃತದೇಹ ಇರಬೇಕೆಂದು ನಿರ್ಧರಿಸಿದ್ದಾರೆ[೧೧೦]. ಬ್ರಹ್ಮಗಿರಿಯಲ್ಲಿ ೨ ರೀತಿಯಲ್ಲಿ ಶವಸಂಸ್ಕಾರ ಪದ್ಧತಿ ಇತ್ತು. ಮೊದಲನೆಯದು ಚಿಕ್ಕಮಕ್ಕಳ ಶವವನ್ನು ಗುಡಾಣಗಳಲ್ಲಿ ಇಟ್ಟು ಅಗೆದ ಗುಂಡಿಯಲ್ಲಿಡುವುದು, ಮತ್ತೊಂದು ದೊಡ್ಡವರ ಶವವನ್ನು ಗೊತ್ತಾದ ದಿಕ್ಕಿಗೆ ಬರುವಂತೆ ಮಲಗಿಸುವುದು[೧೧೧]. ಒಟ್ಟು ೧೭ ಆಸ್ಥಿಪಾತ್ರೆಗಳು, ಒಬ್ಬ ಹುಡುಗನನ್ನು ಮಲಗಿಸಿದ ಶವ ಕುಣಿಯು ಕಂಡುಬಂದಿವೆ. ಮಲಗಿಸಿರುವ ತಲೆಯ ಶವದ ಹತ್ತಿರ ಕೊಳವೆಯುಳ್ಳ ಪಾತ್ರೆಗಳು, ಆಹಾರದ ಪಾತ್ರೆಗಳನ್ನು ಇಟ್ಟಿರುವುದು ಗಮನಿಸಿದರೆ ಸತ್ತವ್ಯಕ್ತಿ ಭೂತವಾಗಿ ಬಾರದಂತೆ ಅಲ್ಲಿಯೇ ದಾಹ ಮತ್ತು ಹಸಿವನ್ನು ನೀಗಿಸಿಕೊಳ್ಳಬೇಕೆಂಬುದು ಅಂದಿನ ಜನರ ನಂಬಿಕೆಯಾಗಿತ್ತು[೧೧೨]. ಮತ್ತೊಂದು ಅನುಕಂಪದ ನಂಬಿಕೆಯಾಗಿರಬಹುದು. ಬೃಹತ್ ಶಿಲಾಯುಗದ ಜನರು ವಿವಿದ ರೀತಿಯಲ್ಲಿ ಶವಸಂಸ್ಕಾರ ಮಾಡಿದ್ದಾರೆ. ಒಟ್ಟು ೩ ರೀತಿಯಲ್ಲಿ ಶವಸಂಸ್ಕಾರ ಮಾಡಲಾಗುತ್ತಿತ್ತು. ಮೊದಲನೆಯದು ಮಡಕೆಯಲ್ಲಿ ಅಸ್ಥಿಯನ್ನು ಇಡುವುದು, ಗುಂಡಿಯಲ್ಲಿ ಪೂರ್ಣ ದೇಹವನ್ನು ಊಳುವುದು, ಕೊನೆಯದಾಗಿ ಮೂಳೆಗಳನ್ನು ಸಂಗ್ರಹಿಸಿ ಊಳುವುದು. ಇವು ಶವಸಂಸ್ಕಾರ ಪದ್ಧತಿಗಳು. ಈ ರೀತಿಯ ಪದ್ಧತಿಯು ಬ್ರಹ್ಮಗಿರಿಯಲ್ಲಿ ಬೃಹತ್

ಶಿಲಾಯುಗದಲ್ಲಿ ಇತ್ತು[೧೧೩]. ಸಣ್ಣ ಗುಡಾಣಗಳಲ್ಲಿ ಶವದ ಅಸ್ಥಿಯನ್ನು ಇಡುವುದು ಬ್ರಹ್ಮಗಿರಿ, ಹೆಗ್ಗಡೆಹಳ್ಳಿಯಲ್ಲಿ ಕಂಡುಬಂದರೆ, ಜಡಗೇನಹಳ್ಳಿಯಲ್ಲಿ ೬ ಕಾಲುಳ್ಳ ಸ್ಯಾಕ್ರೊಫೋಗಿಯದಂತಹ ಮಾದರಿಯ ಮಡಕೆಯಲ್ಲಿ ಶವವನ್ನು ಮಲಗಿಸುವ ಪದ್ಧತಿಯು ಹೆಚ್ಚಿನದಾಗಿ ಇತ್ತು[೧೧೪]. ಪ್ರಸ್ತುತ ಹಾಗೂ ಸಹ್ಯಾದ್ರಿ ಬೆಟ್ಟದ ಪರಿಸರದಲ್ಲಿ ಸ್ಯಾಕ್ರೊಫೋಗಿಯ ಸಮಾಧಿ ಪದ್ಧತಿ ಕಡಿಮೆ. ಸ್ಯಾಕ್ರೊಫೋಗಿಯಾ ರೀತಿಯಲ್ಲಿರುವುದು ೬.೫ ಅಡಿ ಉದ್ದ, ನೆಲದಿಂದ ೧.೬ಅಡಿ ಎತ್ತರವಾಗಿದ್ದು, ೫ ರಿಂದ ೧೨ ಅಡಿ ಆಳದಲ್ಲಿ ಹೂಳಲ್ಪಟ್ಟಿರುತ್ತದೆ[೧೧೫]. ಸ್ಯಾಕ್ರೊಫೋಗಿಯಾದಂತಹ ಸಮಾಧಿಯು ಉತ್ತರ-ದಕ್ಷಿಣ ವಾಗಿರುವುದು ಶವಸಂಸ್ಕಾರ ಪದ್ಧತಿಯ ಒಂದು ನಂಬಿಕೆ[೧೧೬]. ಮತ್ತೊಂದು ಟೊಪಿಕಲ್ ಸಮಾಧಿಯು ಕೊಚ್ಚಿನ್ ಭಾಗದಲ್ಲಿ ಕಾಣಬಹುದು[೧೧೭]. ಸಮಾಧಿ ರಚನೆಗಳು ಸಾಯುವುದಕ್ಕಿಂತ ಮುಂಚೆ ನಿರ್ಮಿಸುತ್ತಿದ್ದರು. ಇದಕ್ಕೆ ಪೂರಕವಾಗಿ ಹೆಗ್ಗಡೆಹಳ್ಳಿಯಲ್ಲಿ ೨ ಗುಂಡಿಸಮಾಧಿಯಲ್ಲಿ ಯಾವುದೇ ರೀತಿಯ ಮಡಕೆ, ಮೂಳೆ ಅವಶೇಷಗಳು ಇಲ್ಲದಿರುವ ಕಾರಣ ಅದು ಸತ್ಯವೆನಿಸುವುದು[೧೧೮]. ಹೆಗ್ಗಡೆಹಳ್ಳಿಯಲ್ಲಿರುವ ಸಮಾಧಿಗಳಿಗೆ ಹೋಲಿಸಿದರೆ ಬ್ರಹ್ಮಗಿರಿಯಲ್ಲಿ ಸಮಾಧಿಗಳಿಗೆ ಬಳಸಿದ ಶಿಲಾಬಂಡೆಗಳು ಕತ್ತರಿಸಲ್ಪಟ್ಟಿವೆ. ಹಿರೇಬೆನಕಲ್ ಭಾಗದಲ್ಲಿರುವ ಸಮಾಧಿಗಳಿಗೆ ಬಳಸಿದ ಶಿಲಾಬಂಡೆಗಳು ಕತ್ತರಿಸಲ್ಪಟ್ಟಿದ್ದು ೫ ರಿಂದ ೧೦ ಅಡಿ ಎತ್ತರದವರೆಗೆ ಚಪ್ಪಡಿ ಕಲ್ಲು ಸಮಾಧಿಗಳು ರಚನೆಗೊಂಡಿರುತ್ತವೆ. ಬ್ರಹ್ಮಗಿರಿ ಪರಿಸರದಲ್ಲಿ ಶಿಲಾಬಂಡೆಗಳು ಕತ್ತರಿಸಿದ್ದರೂ ೨ರಿಂದ ೫ಅಡಿ ಎತ್ತರದವರೆಗೆ ಚಪ್ಪಡಿ ಕಲ್ಲು ಸಮಾಧಿಗಳಿರುತ್ತವೆ. ಬ್ರಹ್ಮಗಿರಿ ಪರಿಸರದಲ್ಲಿ ಅಂತರ್ಗತ ಚಪ್ಪಡಿಕಲ್ಲು ಸಮಾಧಿಗಳು ಜಾಸ್ತಿ. ಸಮಾಧಿಯ ಸುತ್ತಲೂ ಕಲ್ಲು ಗುಂಡುಗಳನ್ನು ವೃತ್ತಾಕಾರವಾಗಿ ಜೋಡಿಸಿದ್ದರೂ ಮಧ್ಯಭಾಗದಲ್ಲಿ ಸಮಾಧಿಯು ಚಪ್ಪಡಿಕಲ್ಲು, ಗುಂಡಿ ಮಾದರಿಯಲ್ಲಿರುತ್ತವೆ ಎಂಬುದು ಸಂಶೋಧನೆಯ ಉತ್ತರ. ಪ್ರಸ್ತುತ ಪರಿಸರದಲ್ಲಿ ಕಂಡುಬಂದಿರುವ ಸಮಾಧಿಗಳಲ್ಲಿ ಸಿಸ್ಟ್ ಸಮಾಧಿ, ಪಿಟ್ ಸಮಾಧಿ, ಡಾಲ್ಮೆನ್ ಸಿಸ್ಟ್ ಸಮಾಧಿ, ನಿಲುಸು ಗಲ್ಲು ಸಮಾಧಿ, ಆಯತಾಕಾರದ ಸಮಾಧಿಗಳು ಪ್ರಮುಖವು. ಒಟ್ಟು ೫ ಮಾದರಿಯ ಸಮಾಧಿಗಳು ಪ್ರಸ್ತುತ ಪರಿಸದರದಲ್ಲಿವೆ.

ಸಿಸ್ಟ್ ಸಮಾಧಿ:

ಚಪ್ಪಡಿ ಬಂಡೆಗಳ ಮಧ್ಯೆ ಆಳವಾದ ಗುಂಡಿಯ ಒಳಗೆ ಸಿಗುವ ಪಳೆಯುಳಿಕೆಯ ಲಕ್ಷಣಗಳನ್ನು ಸಿಸ್ಟ್ ಸಮಾಧಿಗಳೆಂದು ಕರೆಯಲಾಗುವುದು. ನೆಲದ ಒಳಗಿರುವ ಗೋಡೆ ಮಾದರಿಯ ಸಿಸ್ಟ್ ಸಮಾಧಿಗಳಿಗೆ ಕ್ಯಾಪ್‌ಸ್ಟೋನ್ ಇರುತ್ತದೆ, ಕೆಲವೊಂದಕ್ಕೆ

ಇರುವುದಿಲ್ಲ. ಕಿಂಡಿ ಮತ್ತು ಹಾದಿಯು ಅಳವಡಿಕೆ ಸಿಸ್ಟ್ ಸಮಾಧಿಗಳಲ್ಲಿ ಸಾಮಾನ್ಯ. ಸಿಸ್ಟ್ ಸಮಾಧಿಗಳ ಸುತ್ತಲೂ ಮೇಲ್ಭಾಗದಲ್ಲಿ ಕಲ್ಲುವೃತ್ತವನ್ನು ಇಡುವುದು ವಿರಳ. ಆದರೂ ಬ್ರಹ್ಮಗಿರಿ, ಕೊನಸಾಗರದಲ್ಲಿ ಕಂಡುಬಂದಿರುವ ಕೆಲವೊಂದು ಸಮಾಧಿಗಳಿಗೆ ಮಾತ್ರ ಕಲ್ಲು ವೃತ್ತವನ್ನು ಕಾಣಬಹುದು. ಎಲ್ಲಾ ಸಿಸ್ಟ್‌ಸಮಾಧಿಗಳು ಪೂರ್ವಾಭಿಮುಖವಾಗಿರುತ್ತವೆ ಎಂಬುದು ಸ್ಪಷ್ಟ.

ಬ್ರಹ್ಮಗಿರಿಯ ಉತ್ಖನನದಲ್ಲಿ ಕಂಡುಬಂದಿರುವ ಸಿಸ್ಟ್ ಸಮಾಧಿಗಳು ಹೆಗ್ಗಡೆಹಳ್ಳಿಯಲ್ಲಿನ ಸಿಸ್ಟ್ ಸಮಾಧಿಗಳಿಗಿಂತ ಭಿನ್ನ. ದುಂಡುಕಟ್ಟೆಯನ್ನು ನೆಲದ ಒಳಭಾಗದಲ್ಲಿ ಸಿಸ್ಟ್ ಸಮಾಧಿಯ ಸುತ್ತಲೂ ಕಟ್ಟಿರುವುದು ಬ್ರಹ್ಮಗಿರಿಯ ಉತ್ಖನನದಲ್ಲಿ ಕಂಡುಬಂದಿದೆ[೧೧೯]. ಚೌಕೋನ ಗುಂಡಿಯನ್ನು ಅಗೆದು ಅದರ ನಾಲ್ಕು ಬದಿಗಳಲ್ಲಿ ಕಲ್ಲು ಹಲಗೆಗಳನ್ನು ನಿಲ್ಲಿಸಿ ೧ ಕೋಣೆಯ ರೀತಿ ಮಾಡಿರುತ್ತಾರೆ. ಒಂದು ಕಡೆ ಬಂಡೆಯು, ಮತ್ತೊಂದು ಕಡೆ ಇರುವ ಬಂಡೆಗೆ ಆತುಕೊಂಡಿದ್ದು ಸ್ವಲ್ಪ ಹೊರಗೆ ಚಾಚಿರುತ್ತೆ[೧೨೦]. ಈ ರೀತಿಯಾಗಿ ಅಳವಡಿಸಿರುವುದರಿಂದ ಹೊರಗಿನ ಮಣ್ಣು ಒಳಗೆ ಬರುವುದಿಲ್ಲ ಮತ್ತು ಬಂಡೆ ಬೀಳಲು ಸಾಧ್ಯವಿಲ್ಲ. ಬಂಡೆಗಳು ನಿಲ್ಲಿಸಿದ ರೀತಿ ಸ್ವಸ್ತಿಕಾರದಲ್ಲಿ ಕಾಣುವಂತಿರುತ್ತವೆ ವಿನಃ ಯಾವುದೇ ಒಂದು ಧರ್ಮದ ಹಿನ್ನೆಲೆಯಲ್ಲಿ ಮಾಡಿರುವುದಿಲ್ಲ. ಕೋಣೆ ಮಾದರಿಯ ಸಮಾಧಿಯ ಸುತ್ತಲೂ ತುಂಡುಕಲ್ಲುಗಳನ್ನು ಕೋಟೆಯ ರೀತಿ ನಿರ್ಮಿಸಿದ್ದು, ಪೂರ್ವಕ್ಕೆ ಕಿಂಡಿ ಇರುವಂತೆ ಅವಕಾಶ ಮಾಡಲಾಗಿರುತ್ತದೆ. ಇಂಥ ಕಟ್ಟಿದ ರಚನೆಯಿಂದ ಕಿಂಡಿಗೆ ಸಣ್ಣ ಹಾದಿಯನ್ನು ಬಿಡಲಾಗಿರುತ್ತೆ. ಹಾದಿಯ ಎರಡು ಬದಿಯಲ್ಲಿ ಕಿಂಡಿಯ ತನಕ ಚಿಕ್ಕ ಬಂಡೆಗಲ್ಲು ಇರುತ್ತವೆ. ಕೋಣೆಯ ಮೇಲೆ ದಪ್ಪವಾದ ಕಲ್ಲು ಬಂಡೆಯಿಂದ ಮುಚ್ಚಿರುತ್ತಾರೆ. ಕಿಂಡಿಯನ್ನು ಮತ್ತು ಹಾದಿಯನ್ನು ಕಾಲಕಾಲಕ್ಕೆ ಸಂಸ್ಕಾರ ಮಾಡಿದ ವ್ಯಕ್ತಿಗೆ ಆಹಾರ, ಪಾನೀಯ, ಧೂಪ ಹಾಕಲು ಹಾಗು ವ್ಯಕ್ತಿಯ ಆತ್ಮ ಹೋಗಿಬರಲು ಅಳವಡಿಸಿದ್ದರೆಂದು ತಜ್ಞರ ಅಭಿಪ್ರಾಯ[೧೨೧].

ಸಿಸ್ಟ್ ಮಾದರಿಯ ಸಮಾಧಿಗಳಿಗೆ ಬಳಸಿರುವ ಬಂಡೆಗಳು ಕತ್ತರಿಸಲ್ಪಟ್ಟಿವೆ. ಆದರೆ ಹೆಗ್ಗಡೆಹಳ್ಳಿಯಲ್ಲಿರುವ ಸಮಾಧಿಯ ಬಂಡೆಗಳು ಯಥಾವತ್ತಾಗಿವೆ. ಅಲ್ಲದೆ ದುಂಡುಕಟ್ಟೆಯ ರಚನೆಯು ಬ್ರಹ್ಮಗಿರಿ ಪರಿಸರದಲ್ಲಿ ಬೃಹತ್ ಶಿಲಾಯುಗದ ಜನರು ಅಭಿವೃದ್ಧಿಯನ್ನು ಹೊಂದಿದ್ದರು ಎಂಬುದಕ್ಕೆ ಸಾಕ್ಷಿ. ಸಾಮಾನ್ಯವಾಗಿ ಸಿಸ್ಟ್ ಸಮಾಧಿಗಳು ೧.೫ ಮೀಟರ್ ಉದ್ದ ೧.೫ ಮೀಟರ್ ಅಗಲವಾಗಿದ್ದು ೧.೮೦ ಮೀಟರ್

ಎತ್ತರವಿರುತ್ತವೆ[೧೨೨]. ವಿಶೇಷವಾಗಿ ೫ರಿಂದ ೭ಅಡಿ ಉದ್ದ ೬ಅಡಿ ಎತ್ತರವಿರುವ ರೀತಿಯಲ್ಲಿ ಇರುತ್ತವೆ[೧೨೩]. ಕಿಂಡಿಗಳು ವೃತ್ತಾಕಾರವಾಗಿ ಮತ್ತು ಕುದುರೆ ಲಾಳಾಕಾರದಲ್ಲಿದ್ದು, ೧.೫ರಿಂದ ೨ಅಡಿ ಸುತ್ತಳತೆಯನ್ನು ಹೊಂದಿರುತ್ತವೆ[೧೨೪]. ಮೇಲ್ಭಾಗದಿಂದ ನೋಡಿದಾಗ ವೃತ್ತಾಕಾರವಾಗಿರುವ ಸಮಾಧಿಗಳ ಸುತ್ತಳತೆಯು ೧೬ರಿಂದ ೨೧ಅಡಿ ವ್ಯಾಸ ಇರುತ್ತದೆ[೧೨೫]. ಆದರೆ ಪಾಲವ್ವನಹಳ್ಳಿ, ನೆರೇನಾಳ್, ಬೆಳಗಟ್ಟದಲ್ಲಿರುವ ವೃತ್ತಾಕಾರದ ಸಮಾಧಿಯು ೩೦ ರಿಂದ ೬೦ ಅಡಿ ವ್ಯಾಸದಲ್ಲಿ ರಚಿತಗೊಂಡಿರುವುದು ಗಮನೀಯ. ಬೆಳಗಟ್ಟ, ಮಿಂಚೇರಿಗುಡ್ಡದಲ್ಲಿರುವ ವೃತ್ತಾಕಾರದ ಸಮಾಧಿಯ ಮಧ್ಯಭಾಗ ೧೫ ಅಡಿ ಉದ್ದದ ಬಂಡೆಯನ್ನು ಹಾಸಿದ್ದು, ಇದರ ಕೆಳಭಾಗ ಸಿಸ್ಟ್ ಅಥವಾ ಗುಂಡಿ ಮಾದರಿಯ ಸಮಾಧಿಯು ಇರಬಹುದು. ೧೫ ಅಡಿ ಉದ್ದವಾದ ಬಂಡೆಯು ಉತ್ತರ-ದಕ್ಷಿಣಾಭಿಮುಖವಾಗಿದೆ.

ಸಿಸ್ಟ್ ಸಮಾಧಿಯ ಒಳಗೆ ತಳಭಾಗದಲ್ಲಿ ಹಾಸಿದ ಬಂಡೆಯ ಮೇಲೆ ಮಡಕೆಗಳನ್ನು, ಮೂಳೆ ಅವಶೇಷಗಳನ್ನು, ಕಬ್ಬಿಣದ ವಸ್ತುಗಳನ್ನು ಅಥವಾ ಚಿನ್ನ, ಕಂಚು ಮತ್ತು ತಾಮ್ರದ ವಸ್ತುಗಳನ್ನು ಇಡುವುದು ಸಾಮಾನ್ಯ. ಒಂದು ಶವಕುಣಿಯಲ್ಲಿ ಒಂದಕ್ಕಿಂತ ಹೆಚ್ಚಿನ ಅಸ್ಥಿ ಅವಶೇಷಗಳಿರುವುದು ವಿಶೇಷ[೧೨೬]. ಅಂದರೆ ಒಂದೇ ಕುಟುಂಬ ಅಥವಾ ಗಂಡ-ಹೆಂಡತಿ ಅಸ್ಥಿ ಅವಶೇಷಗಳಿರಬೇಕೆಂದು ಎನ್ನಿಸುವುದು. ಈ ಪದ್ಧತಿಯು ಬ್ರಹ್ಮಗಿರಿಯ ಸಮೀಪದ ಕಾಡುಸಿದ್ದಾಪುರದಲ್ಲಿ ಕುರುಬ ಜನಾಂಗದವರು ಸತ್ತಾಗ ಒಂದೇ ಕುಣಿಯಲ್ಲಿ ಅನಾದಿಕಾಲದಿಂದಲೂ ಶವಸಂಸ್ಕಾರ ಮಾಡುತ್ತಾ ಬಂದಿದ್ದಾರೆ. ಅಂದರೆ ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ಧತಿಯು ಇಂದಿಗೂ ಮುಂದುವರೆದಿದೆ ಎನ್ನುವುದಕ್ಕೆ ಕಾಡುಸಿದ್ದಾಪುರ ಸಮಾಧಿಯು ಸಾಕ್ಷಿ. ಚಂದ್ರವಳ್ಳಿಯ ಕಲ್ಲುಗೋರಿಗಳು ಉದ್ದವಾದ ಪೆಟ್ಟಿಗೆಯ ರೀತಿಯಿದ್ದು, ಯಾವುದೇ ಚಪ್ಪಡಿ ಬಂಡೆಗಳು ಮತ್ತು ದುಂಡು ಕಟ್ಟೆಗಳಿಲ್ಲ[೧೨೭]. ಈ ಲಕ್ಷಣಗಳನ್ನು ಆಧರಿಸಿ ಚಂದ್ರವಳ್ಳಿಯ ಶಿಲಾಗೋರಿಗಳು ಬ್ರಹ್ಮಗಿರಿಗಿಂತ ಪ್ರಾಚೀನವಾದವೆಂದು ನಿರ್ಧರಿಸಬಹುದು.

ಪಿಟ್ ಸಮಾಧಿ:

ನಾಲ್ಕು ಮೂಲೆ ಬರುವಂತೆ ಮಧ್ಯಭಾಗದಲ್ಲಿ ಗುಂಡಿಯನ್ನು ತೆಗೆದು ಅದರಲ್ಲಿ ಶವಸಂಸ್ಕಾರ ಮಾಡಿ ಮಣ್ಣಿನಿಂದ ಮುಚ್ಚುವ ಪದ್ಧತಿ ಪಿಟ್ ಸಮಾಧಿಯ ಲಕ್ಷಣ. ಈ ರೀತಿಯವು ಹೆಗ್ಗಡೇಹಳ್ಳಿ, ಬ್ರಹ್ಮಗಿರಿ, ಜಡೆಗೇನಹಳ್ಳಿಯಲ್ಲಿ ಕಂಡುಬಂದಿವೆ. ಪಿಟ್ ಸಮಾಧಿಯ ಸುತ್ತ ಮೇಲ್ಭಾಗದಲ್ಲಿ ವೃತ್ತಾಕಾರದ ಕಲ್ಲುಗಳನ್ನು ಜೋಡಿಸಿರುತ್ತಾರೆ.

ಹೆಗ್ಗಡೆಹಳ್ಳಿಯಲ್ಲಿ ಒಂದು ಪಿಟ್ ಸಮಾಧಿಯ ಮೇಲೆ ಕಲ್ಲು ವೃತ್ತಾಕಾರದ ಮಧ್ಯೆ ಕಲ್ಲು ಚಪ್ಪಡಿಯಿಂದ ಮುಚ್ಚಿರುವುದು ವಿಶೇಷ[೧೨೮]. ಬ್ರಹ್ಮಗಿರಿಯಲ್ಲಿ ದೊರೆತಿರುವ ಗುಂಡಿಸಮಾಧಿಯ ಸುತ್ತ ೬ರಿಂದ ೯ಮೀಟರ್‌ವರೆಗಿನ ವ್ಯಾಸದ ೨ ಸುತ್ತುಳ್ಳ ದುಂಡು ಕಟ್ಟೆಯಿರುವುದು. ೨ರಿಂದ ೩ಮೀಟರ್ ವ್ಯಾಸದ ದುಂಡಾದ ಗುಂಡಿಯ ತಳಭಾಗಕ್ಕೆ ಹೋಗಲು ಅದರ ಪೂರ್ವದ ಬದಿಯಲ್ಲಿ ಇಳಿಜಾರು ಮಾಡಿದ್ದಾರೆ. ಕುಣಿಯು ೨.೫ ಮೀಟರ್ ಆಳವಿರುವುದು[೧೨೯]. ಶವಸಂಸ್ಕಾರ ಆದ ನಂತರ ಕುಣಿಯನ್ನು ಮಣ್ಣಿನಿಂದ ಮುಚ್ಚಲಾಗಿರುತ್ತದೆ. ಆದ್ದರಿಂದ ಹೆಗ್ಗಡೆಹಳ್ಳಿ ಗುಂಡಿ ಸಮಾಧಿಗಿಂತ ಬ್ರಹ್ಮಗಿರಿ ಗುಂಡಿ ಸಮಾಧಿಯು ಭಿನ್ನವಾಗಿದೆ ಎನ್ನಬಹುದು. ಹೆಗ್ಗಡೆಹಳ್ಳಿಯ ಒಂದು ಸಮಾಧಿಯು ಪೂರ್ವಾಭಿಮುಖವಾಗಿದ್ದು, ೨.೫ ಅಡಿ ಆಳದಲ್ಲಿ ಕಲ್ಲು ಚಪ್ಪಡಿಯನ್ನು ಹಾಸಿದ್ದು, ಆ ಚಪ್ಪಡಿಯ ಮೇಲೆ ಮೂಳೆಗಳು ಮತ್ತು ಹಲ್ಲುಗಳು ಪಶ್ಚಿಮ ಗೋಡೆಯ ಪಕ್ಕದಲ್ಲಿದ್ದು, ಸುತ್ತಲೂ ಮಡಕೆಗಳಿವೆ. ಗುಂಡಿಯನ್ನು ಮಣ್ಣಿನಿಂದ ಮುಚ್ಚಿದ್ದು, ಮೇಲ್ಭಾಗದಲ್ಲಿ ಚಪ್ಪಡಿ ಹಾಕಿದ್ದಾರೆ[೧೩೦]. ಮತ್ತೊಂದು ಸಮಾಧಿಯಲ್ಲಿ ಯಾವುದೇ ಮಡಕೆ ಅವಶೇಷಗಳು ಇರುವುದಿಲ್ಲ[೧೩೧]. ಈ ರೀತಿಯವು ಸಾಯುವುದಕ್ಕಿಂತ ಮುಂಚೆ ಸಮಾಧಿಗಳು ರಚನೆಗೊಳ್ಳುತ್ತಿದ್ದವು ಎಂಬ ಸೂಚನೆ ನೀಡುತ್ತವೆ. ಬ್ರಹ್ಮಗಿರಿಯಲ್ಲಿ ಸಮಾಧಿಗಳ ಒಳಗೆ ಮೂಳೆಗಳನ್ನು ಜೋಡಿಸಿದ್ದು ಸತ್ತ ಮೇಲೆ ಸಮಾಧಿಗಳು ರಚನೆಗೊಳ್ಳುತ್ತವೆಂದು ತಿಳಿಸುತ್ತವೆ[೧೩೨]. ಜಡಗೇನಹಳ್ಳಿಯ ಸಮಾಧಿಯ ಉತ್ಖನನದ ಗುಂಡಿಯಲ್ಲಿ ೫-೧೨ಅಡಿ ಆಳದಲ್ಲಿ ೬ಕಾಲುಳ್ಳ ಸ್ಯಾಕ್ರೊಫೋಗಿಯಾ ಇರುವುದು[೧೩೩]. ಈ ಸ್ಯಾಕ್ರೊಫೋಗಿಯಾ ಎರಡೂ ಸುಟ್ಟ ಮಣ್ಣಿನ ಭಾಗಗಳಿಂದ ಜೋಡಿಸಲ್ಪಟ್ಟಿದ್ದು, ಕಾಲುಗಳನ್ನು ಸುಡುವುದಕ್ಕೆ ಮುಂಚೆ ಜೋಡಿಸಿದ್ದಾರೆ[೧೩೪]. ಸ್ಯಾಕ್ರೊಫೋಗಿಯಾ ಮಾದರಿಯು ೨-೩ ಅಡಿ ಉದ್ದಳತೆಯನ್ನು ಹೊಂದಿರುತ್ತದೆ[೧೩೫]. ಇಂತಹ ಸಮಾಧಿಗಳು ಮದ್ರಾಸ್ ಭಾಗದ ಕೊನ್ನತ್ತೂರು ಮತ್ತು ಇತರೆ ಕಡೆಗಳಲ್ಲಿ ಕಂಡುಬಂದಿರುವು ಜಾಸ್ತಿ[೧೩೬]. ಪ್ರಸ್ತುತ ಪರಿಸರದ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿರುವ ಸಮಾಧಿಗಳು ಗುಂಡಿ ಮಾದರಿಯಲ್ಲಿ ಇರಬಹುದೆಂದು ಹೇಳಬಯಸುತ್ತೇನೆ.

ಡಾಲ್ಮೆನ್‌ಸಿಸ್ಟ್ ಸಮಾಧಿ:

೩ರಿಂದ ೪ ಬಂಡೆಗಳನ್ನು ನೆಲದ ಮೇಲೆ ಜೋಡಿಸಿ ಅವುಗಳ ಮೇಲೆ ಬಾರಿ ಛಾವಣಿ ಕಲ್ಲನ್ನು ಹೊಂದಿಸಿರುವ ಸಮಾಧಿಗಳನ್ನು ಡಾಲ್ಮೆನ್ ಸಿಸ್ಟ್ ಸಮಾಧಿ ಎಂದು ಕರೆಯುತ್ತಾರೆ[೧೩೭]. ಪ್ರಸ್ತುತ ಚಿಕ್ಕಕಬ್ಬಿಗೆರೆ, ಹಾನಗಲ್, ಹೊಳಲ್ಕೆರೆ ಹಾಗೂ ಹೊಸದುರ್ಗ

ಭಾಗದಲ್ಲಿ ಡಾಲ್ಮೆನ್‌ಸಿಸ್ಟ್ ಸಮಾಧಿಗಳಿವೆ. ಚಿಕ್ಕಕಬ್ಬಿಗೆರೆಯಲ್ಲಿರುವ ಡಾಲ್ಮೆನ್‌ಸಿಸ್ಟ್ ಸಮಾಧಿಗೆ ದೊಣೆಕರಿಯಮ್ಮ ಎಂದು, ಹಾನಗಲ್‌ನಲ್ಲಿರುವ ಸಿಸ್ಟ್ ಸಮಾಧಿಗಳಿಗೆ ಪಾಂಡವರ ಮನೆಗಳೆಂದು ಸ್ಥಳೀಯರು ಕರೆಯುತ್ತಿದ್ದಾರೆ. ಹಾನಗಲ್‌ನಲ್ಲಿರುವ ಸಮಾಧಿಗಳು ದಕ್ಷಿಣ ಮತ್ತು ಪೂರ್ವಾಭಿಮುಖವಾಗಿದ್ದು, ಹಾದಿ ಮತ್ತು ಕಿಂಡಿ ಕೋಣೆಯನ್ನು ಒಳಗೊಂಡಿವೆ. ಹೊಳಲ್ಕೆರೆ ನಗರದ ಹಿರೆಕೆರೆಯ ಮುಂದಿರುವ ಮಟ್ಟಿಯ ಮೇಲೆ ಇರುವ ಡಾಲ್ಮೆನ್ ಸಮಾಧಿಯು ಉತ್ತರಾಭಿಮುಖವಾಗಿರುವುದು ವಿಶೇಷ. ಈ ರೀತಿ ನಿರ್ಮಿಸಿರುವುದು ಅಂದಿನ ಜನರ ಭಾವನಾತ್ಮಕ ನಂಬಿಕೆ. ಕೊಪ್ಪಳ ಭಾಗದಲ್ಲಿರುವ ಸಮಾಧಿಗಳಿಗಿಂತ ಬ್ರಹ್ಮಗಿರಿ ಪರಿಸರದಲ್ಲಿರುವ ಡಾಲ್ಮೆನ್‌ಸಿಸ್ಟ್ ಸಮಾಧಿಗಳು ಚಿಕ್ಕವು. ೩-೪ಅಡಿ ಎತ್ತರ, ೬ಅಡಿ ಉದ್ದ, ೩ಅಡಿ ಅಗಲವಿರುವ ಸಮಾಧಿಯ ಮೇಲೆ ೧೦ಅಡಿ ವ್ಯಾಸದ ವೃತ್ತಾಕಾರದ ಬಂಡೆಯನ್ನು ಹಾಕಿರುತ್ತಾರೆ. ಈ ರೀತಿದ್ದು ಹಾನಗಲ್ ನೆಲೆಯಲ್ಲಿರುವುದು. ಚಿಕ್ಕಕಬ್ಬಿಗೆರೆಯಲ್ಲಿರುವ ಡಾಲ್ಮೆನ್ ಸಿಸ್ಟ್ ಸಮಾಧಿಗೆ ಯಥಾವತ್ತಾದ ಗುಂಡು ಕಲ್ಲುಗಳನ್ನಿಟ್ಟು ಮೇಲ್ಭಾಗದಲ್ಲಿ ಬಂಡೆಯನ್ನು ಹಾಕಿದ್ದಾರೆ. ಕೊಪ್ಪಳ ಭಾಗದಲ್ಲಿ ಕಂಡುಬಂದಿರುವ ಡಾಲ್ಮೆನ್‌ಸಿಸ್ಟ್ ಸಮಾಧಿಯು ೫-೮ಅಡಿ ಎತ್ತರವಾಗಿರುತ್ತವೆ. ಹಾನಗಲ್‌ನಲ್ಲಿರುವ ಒಂದು ಸಮಾಧಿಗೆ ವೃತ್ತಾಕಾರದ ಕಿಂಡಿಯಿದ್ದು, ೨ ಅಡಿ ಸುತ್ತಳತೆಯನ್ನು ಹೊಂದಿರುವುದು. ಡಾಲ್ಮೆನ್ ಸಿಸ್ಟ್ ಸಮಾಧಿಗಳ ಉತ್ಖನನವು ಪ್ರಸ್ತುತ ಪರಿಸರದಲ್ಲಿ ನಡೆದಿಲ್ಲ ಕಾರಣ ಹೆಚ್ಚು ಮಾಹಿತಿ ತಿಳಿಸಲು ಸಾಧ್ಯವಾಗಿಲ್ಲ. ಆದರೆ ಸಿಸ್ಟ್ ಸಮಾಧಿಗಳ ರೀತಿಯಲ್ಲಿ ಶವಸಂಸ್ಕಾರ ಮಾಡಿರುವ ಸಾಧ್ಯತೆಗಳಿವೆ ಎಂದು ಹೇಳಬಹುದು.

ನಿಲುಸುಗಲ್ಲು ಸಮಾಧಿ:

ಗೊತ್ತಾದ ಸ್ಥಳದಲ್ಲಿ ಗುಂಡಿಯನ್ನು ತೆಗೆದು ಬೃಹತ್ತಾದ ಕಲ್ಲುಬಂಡೆಯನ್ನು ನಿಲ್ಲಿಸಲಾಗಿರುತ್ತದೆ. ಈ ಬಂಡೆಗೆ ಹೊಂದಿಕೊಂಡು ಶವಸಂಸ್ಕರ ಮಾಡಲಾಗಿರುತ್ತೆ. ಈ ರೀತಿಯದ್ದು ನಿಲುಸುಗಲ್ಲು ಸಮಾಧಿಯ ಲಕ್ಷಣವಾಗಿರುವುದು. ಪ್ರಸ್ತುತ ರಾಮಗಿರಿ, ಕುಂಚಿಗನಹಾಳ್, ಆಡುಮಲ್ಲೇಶ್ವರ, ಜಾನಕಲ್, ಬ್ರಹ್ಮಗಿರಿ, ಟಿ.ಎನ್. ಕೋಟೆ, ಅಬ್ಬಿನಹೊಳೆ, ಕಾಮಸಮುದ್ರದ ಪ್ರದೇಶದಲ್ಲಿ ನಿಲುಸುಗಲ್ಲು ಸಮಾಧಿಗಳಿವೆ. ಈ ರೀತಿಯ ಸಮಾಧಿಗಳಿಗೆ ಆನೆ ಕಟ್ಟುವಕಲ್ಲು ಮತ್ತು ನಿಲುವುಗಲ್ಲು ಎಂದು ಕರೆಯುತ್ತಾರೆ. ವಿಶೇಷವಾಗಿ ಬಳ್ಳಾರಿ ಭಾಗದಲ್ಲಿ ರಾಕ್ಷಸಕಲ್ಲು ಎಂದು ಕರೆಯುವುದುಂಟು. ಟಿ.ಎನ್. ಕೋಟೆ, ಅಬ್ಬಿನಹೊಳೆ, ರಾಮಗಿರಿಯಲ್ಲಿ ಕಂಡುಬಂದಿರುವ ನಿಲುಸುಗಲ್ಲು ಸಮಾಧಿಗಳು

ಕ್ಷೇತ್ರಕಾರ್ಯದಲ್ಲಿ ಕಂಡುಬಂದಿವೆ. ಜಾನಕಲ್ಲು, ಆಡುಮಲ್ಲೇಶ್ವರದಲ್ಲಿರುವ ನಿಲುಸುಗಲ್ಲುಗಳು ಗ್ರಾನೈಟ್ ಬಂಡೆಗಳಿಂದ ನಿರ್ಮಾಣಗೊಂಡಿದ್ದು, ೧೦-೧೫ ಅಡಿ ಎತ್ತರವಾಗಿದ್ದು ೪-೮ ಅಡಿ ಅಗಲವಾಗಿರುತ್ತವೆ. ನಿಲುಸುಗಲ್ಲುಗಳು ಪೂರ್ವ ಮತ್ತು ಪಶ್ಚಿಮಕ್ಕೆ ಮುಖಮಾಡಿರುತ್ತವೆ. ಮುಖ ಮಾಡಿದ ಕಡೆ ನಿಧಿಗಳ್ಳರು ಗುಂಡಿಯನ್ನು ಅಗೆದು ಹಾಳು ಮಾಡಿದ್ದಾರೆ. ಅಂದರೆ ಕಲ್ಲಿನ ಪಕ್ಕ ಪೂರ್ವಕ್ಕೆ ಅಥವಾ ಪಶ್ಚಿಮಕ್ಕೊ ಗುಂಡಿಯನ್ನು ತೆಗೆದು ಶವಸಂಸ್ಕಾರ ಮಾಡುತ್ತಿದ್ದರೆಂದು ಅರ್ಥೈಸಬಹುದು. ೩-೪ ಅಡಿ ಆಳವಾಗಿರುವ ಗುಂಡಿಯಲ್ಲಿ ಮಡಕೆ ಮತ್ತು ಮೂಳೆ ಮೊದಲಾದ ಅವಶೇಷಗಳನ್ನು ಇಟ್ಟಿರುವ ಸಾಧ್ಯತೆಗಳಿವೆ. ಪ್ರಸ್ತುತ ನಿಲುಸುಗಲ್ಲು ಸಮಾಧಿಗಳು ನಶಿಸಿಹೋಗುತ್ತಿದ್ದು, ಉತ್ಖನನ ನಡೆದಿಲ್ಲದ ಕಾರಣ ಸ್ಪಷ್ಟವಾದ ಮಾಹಿತಿ ತಿಳಿಸಲು ಅಸಾಧ್ಯ.

ಆಯತಾಕಾರದ ಸಮಾಧಿ:

೧ಅಡಿ ಎತ್ತರದ ಕಲ್ಲುಗಳನ್ನು ಆಯತಾಕಾರವಾಗಿ ಬರುವ ರೀತಿಯಲ್ಲಿ ಸುತ್ತಲೂ ಜೋಡಿಸಿ ಮಧ್ಯಭಾಗದಲ್ಲಿ ಮಣ್ಣು ಹಾಕಲಾಗಿರುತ್ತದೆ. ಈ ರೀತಿಯಾದ ಸಮಾಧಿಗಳೇ ಆಯತಾಕಾರದ ಸಮಾಧಿಗಳು. ಕೆಳಗಳಹಟ್ಟಿ, ಸುಲ್ತಾನಿಪುರ, ಹಳೆಕೆರೆ ನೆಲೆಯಲ್ಲಿ ಆಯತಾಕಾರದ ಸಮಾಧಿಗಳನ್ನು ಗುರುತಿಸಿದ್ದೇನೆ. ೬ಅಡಿ ಉದ್ದ ೩ಅಡಿ ಅಗಲವಾಗಿರುವ ಸಮಾಧಿಯು ನೆಲಮಟ್ಟದಲ್ಲಿ ಕಾಣಿಸುತ್ತದೆ. ಈ ರೀತಿಯಾದ ಸಮಾಧಿಗಳು ಪ್ರಸ್ತುತ ಪರಿಸರದಲ್ಲಿ ವಿಶೇಷವಾದವು. ಸಮಾಧಿಯು ಪೂರ್ವಾಭಿ ಮುಖವಾಗಿದ್ದು, ಶವವನ್ನು ಮಲಗಿಸಿ ಅಥವಾ ಸಂಗ್ರಹಿಸಿದ ಮೂಳೆಗಳನ್ನು ಮಧ್ಯದಲ್ಲಿರಿಸಿ ಸುತ್ತ ಮಡಕೆಗಳನ್ನಿಟ್ಟು ಶವಸಂಸ್ಕಾರ ಮಾಡಿರುವ ಸಾಧ್ಯತೆಗಳಿವೆ. ಇಂತಹ ಸಮಾಧಿಗಳು ಉತ್ಖನನವಾದರೆ ಮತ್ತೊಷ್ಟು ಮಾಹಿತಿ ನೀಡಲು ಸಾಧ್ಯ.

೪.೭. ವರ್ಣ ಚಿತ್ರಗಳು

ಶಿಲಾಯುಗದ ಮಾನವರು ತಮ್ಮ ಬದುಕಿನಲ್ಲಿ ಆಯುಧಗಳನ್ನು ತಯಾರಿಸುವಲ್ಲಿ, ಮಡಕೆಗಳನ್ನು ಮಾಡುವುದರಲ್ಲಿ ಕಾಲಕಳೆಯದೇ ವರ್ಣಚಿತ್ರಗಳನ್ನು ಬಿಡಿಸುವ ಕಲೆಯನ್ನು ಪೋಷಿಸಿಕೊಂಡಿದ್ದರು. ವರ್ಣಚಿತ್ರಗಳು ಕಲಾಪರಂಪರೆಯಲ್ಲಿ ಪ್ರಾಚೀನವಾದವು. ಪ್ರಾಚೀನವಾದ ಕಲಾಪರಂಪರೆ ಇಂದಿಗೂ ಉಳಿದುಕೊಂಡು ಬಂದಿದೆ. ಅವರು ಬಳಸಿದ ಮಾಧ್ಯಮಗಳು ನೈಜತೆಯಿಂದ ಕೂಡಿದವು. ಕಲ್ಲಾಸರೆ ಮತ್ತು ಗವಿಗಳಲ್ಲಿ ಆಯ್ಕೆ ಮಾಡಿಕೊಂಡು ದೀರ್ಘಕಾಲ ಉಳಿಯಲಿ ಎಂದು

ವರ್ಣಚಿತ್ರಗಳನ್ನು ಬಿಡಿಸಿದ್ದಾರೆ. ಅಂದಿನ ಜನರು ಚಿತ್ರಗಳು ಬಿಡಿಸುವಿಕೆಗಾಗಿ ಆಯ್ಕೆ ಮಾಡಿಕೊಂಡ ಬಂಡೆಗಳು, ಅವರ ಚಾಣಕ್ಷತೆ ಮತ್ತು ಮುನ್ನೆಚ್ಚರಿಕೆಯನ್ನು ಪ್ರತಿನಿಧಿಸುವುದು. ಯಾರ ಮಾರ್ಗದರ್ಶನವಿಲ್ಲದೆ ರಚನೆ ಮಾಡಿದ್ದಾರೆ. ವರ್ಣಚಿತ್ರಗಳ ಶೋಧವು ಆಕಸ್ಮಿಕ. ಇದಕ್ಕೆ ಅಲ್ತಮೀರ ಪ್ರದೇಶ ಉದಾಹರಣೆ. ದಾಸ್‌ಮರ್ಸಿಲಿನೋ ತನ್ನ ಚಿಕ್ಕಮಗಳ ಜೊತೆಗೆ ಗವಿ ಪ್ರದೇಶಕ್ಕೆ ಹೊಗಿದ್ದಾಗ ಅಲ್ಲಿ ಗುಂಡಿ ಅಗೆಯುವಾಗ, ಮಗಳು ಗವಿಯೊಳಗೆ ಹೋಗಿ ಬಂಡೆ ಮೇಲೆ ಬರೆದ ಚಿತ್ರ ನೋಡಿ ತೋರೋ ತೋರೋ(ಗೂಳಿ)ಎಂದು ಕೂಗಿಕೊಂಡಳು[೧೩೮]. ಅಂದು ನೋಡಿದ ಆಸಕ್ತಿಯುಳ್ಳ ಚಿತ್ರಗಳು ಬೆಳಕಿಗೆ ಬಂದವು. ಭಾರತದಲ್ಲಿ ೧೮೮೦ರಲ್ಲಿ ಹ್ಯೂಬರ್ಟ್‌ನಾಕ್ಸ್‌ರವರು ಬಳ್ಳಾರಿ ಸಮೀಪದ ಕಪ್ಪಗಲ್ಲು ಗ್ರಾಮದಲ್ಲಿನ ಗುಡ್ಡದಲ್ಲಿ ಕುಟ್ಟಿದ ಚಿತ್ರಗಳು ಶೋಧಗೊಂಡವು[೧೩೯]. ಇದೇ ಸಂದರ್ಭದಲ್ಲಿ ಜಾನ್ ಕಾಕ್‌ಬರ್ನಾ ಮತ್ತು ಸ್ನೇಹಿತರು ಮಧ್ಯಪ್ರದೇಶದ ಮಿರ್ಜಾಪುರ ಬಳಿ ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳನ್ನು ಕಂಡು ಪ್ರಕಟಿಸಿದ್ದಾರೆ[೧೪೦]. ೧೯೩೫ರಲ್ಲಿ ಲಿಯೋನಾರ್ಡ್‌ಮನ್‌ರವರು ಗಂಗಾವತಿ ತಾಲೂಕಿನ ಹಿರೇಬೆನಕಲ್ಲು ಗುಡ್ಡಗಳಲ್ಲಿ ವರ್ಣಚಿತ್ರಗಳನ್ನು ಶೋಧಿಸಿದವರಲ್ಲಿ ಮೊದಲಿಗರು[೧೪೧]. ೧೯೨೯ರಲ್ಲಿ ಎಂ.ಎಚ್.ಕೃಷ್ಣರವರಿಂದ ಚಿತ್ರದುರ್ಗದ ಚಂದ್ರವಳ್ಳಿ ಭಾಗದಲ್ಲಿ ಶೋಧನೆ ಆರಂಭವಾಯಿತು[೧೪೨]. ೧೯೭೮ರಲ್ಲಿ ಅ.ಸುಂದರ ಬ್ರಹ್ಮಗಿರಿ, ಜಟಂಗಿರಾಮೇಶ್ವರದಲ್ಲಿ[೧೪೩], ೧೯೮೩ರಲ್ಲಿ ಶ್ರೀಶೈಲ ಆರಾಧ್ಯ, ಬ್ರಹ್ಮಗಿರಿ ಮತ್ತು ಚಿತ್ರದುರ್ಗದ ಚಂದ್ರವಳ್ಳಿ ಭಾಗದಲ್ಲಿ ೨೫ ರಿಂದ ೩೦ ವರ್ಣಚಿತ್ರಗಳನ್ನು ಶೋಧಿಸಿದ್ದಾರೆ[೧೪೪]. ೧೯೭೪ರಿಂದ ವರ್ಣಚಿತ್ರಗಳನ್ನು ಮತ್ತು ಕುಟ್ಟು ಚಿತ್ರಗಳನ್ನು ಕರ್ನಾಟಕದಲ್ಲಿ ಲಕ್ಷ್ಮಣ್ ತೆಲಗಾವಿಯವರು ಶೋಧಿಸುತ್ತಾ ಬಂದಿದ್ದಾರೆ[೧೪೫]. ಎಸ್.ತಿಪ್ಪೇಸ್ವಾಮಿ, ಮತ್ತು ಎಸ್.ವೈ.ಸೋಮಶೇಖರ್ ಸಂತೇಗುಡ್ಡದಲ್ಲಿ ವರ್ಣಚಿತ್ರಗಳನ್ನು ಶೋಧಿಸಿ ಪ್ರಕಟಿಸಿದ್ದಾರೆ[೧೪೬]. ಎನ್.ಎಸ್.ಮಹಂತೇಶ್, ಶ್ರೀರಾಂಪುರ ಹೋಬಳಿಯ ಗರಗದಲ್ಲಿ ಗೂಳಿಯ ವರ್ಣಚಿತ್ರವನ್ನು ಶೋಧಿಸಿರುವುದು ಗಮನಾರ್ಹ[೧೪೭]. ಕೊಂಡ್ಲಹಳ್ಳಿ ಜಯಪ್ರಕಾಶ್‌ರವರು ಮೊಳಕಾಲ್ಮೂರು ತಾಲೂಕಿನ ಗುಂಡ್ಲೂರು ಬಂಡೆಯ ಮೇಲೆ ಬಿಳಿ ವರ್ಣಚಿತ್ರಗಳನ್ನು ಕಂಡುಪ್ರಕಟಿಸಿದ್ದಾರೆ[೧೪೮]. ಈ ರೀತಿಯಾದ ಶೋಧನೆಗಳು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದಿವೆ. ಅವುಗಳನ್ನು ವಿಶ್ಲೇಷಿಸುವ ಅಗತ್ಯತೆ ಇರುವುದು.

ವರ್ಣಚಿತ್ರಗಳು ವಿವಿಧ ಬಣ್ಣಗಳಿಂದ ಕೂಡಿರುತ್ತವೆ ಅಲ್ಲದೆ ಬಳಸಿದ ಬಣ್ಣಗಳ ಮೇಲೆ ಕಾಲವನ್ನು ನಿರ್ಧರಿಸಲಾಗುವುದು. ಸೂಕ್ಷ್ಮ ಶಿಲಾಯುಗದಲ್ಲಿ–ಕೆಂಪು, ಕಂದು, ಕಪ್ಪು, ನವ ಶಿಲಾಯುಗದಲ್ಲಿ–ತಿಳಿಕೆಂಪು, ತಿಳಿಹಳದಿ, ಹಳದಿಮಿಶ್ರಿತ ಬಿಳುಪು, ಬೃಹತ್

ಶಿಲಾಯುಗದಲ್ಲಿ-ಬಿಳುಪು, ಇತಿಹಾಸ ಆರಂಭದಲ್ಲಿ ಕೆಂಪು ಬಿಳುಪು, ಹಸಿರುಹಳದಿ, ಬಿಳುಪು ಬಣ್ಣದಲ್ಲಿ ಚಿತ್ರಗಳು ರಚಿತಗೊಂಡಿರುತ್ತವೆ ಎಂಬುದು ಸ್ಪಷ್ಟ[೧೪೯]. ನೇರಳೆ ಬಣ್ಣಕ್ಕಾಗಿ-ಮ್ಯಾಂಗನೀಸ್ ಆಕ್ಸೈಡನ್ನು, ಕಪ್ಪು ಬಣ್ಣಕ್ಕಾಗಿ-ಪ್ರಾಣಿಗಳ ರಕ್ತ ಮತ್ತು ಕಲ್ಲಿದ್ದಲ್ಲನ್ನು, ಕಂದು, ಕೆಂಪು, ಹಳದಿ, ಕಿತ್ತಳೆ ಬಣ್ಣಕ್ಕಾಗಿ-ಕಬ್ಬಿಣದ ಆಕ್ಸೈಡ್‌ನ್ನು, ಬಿಳಿ ಬಣ್ಣಕ್ಕಾಗಿ-ಸುಣ್ಣವನ್ನು, ತಿಳಿಕೆಂಪು ಬಣ್ಣಕ್ಕಾಗಿ-ಸುರಮವನ್ನು ಬಳಸುತ್ತಿದ್ದರೆಂಬ ಅಭಿಮತವಿದೆ[೧೫೦]. ವರ್ಣಚಿತ್ರಗಳನ್ನು ಬಿಡಿಸುವುದಕ್ಕೆ ಗಿಡದ ರೆಂಬೆಯಿಂದಾದ ಕುಂಚ, ಪಕ್ಷಿಗಳ ಪುಕ್ಕದ ಕಡ್ಡಿ, ಬೆರಳು, ಹಸ್ತ, ಮರದ ಎಲೆ ಮತ್ತು ಚರ್ಮ ಮೊದಲಾದವುಗಳು ಲೇಖನಿಯಾಗಿ ಬಳಕೆಯಾಗಿರುವ ಸಾಧ್ಯತೆಗಳಿವೆ[೧೫೧].

ವರ್ಣಚಿತ್ರಗಳನ್ನು ಗಮನಿಸಿದಾಗ ಅವರ ಸಂತೋಷಕ್ಕಾಗಿ ಹಾಗೂ ಸಮಾಜದ ಜನರು ನೋಡಲೆಂದು ರಚಿಸಿದ್ದಾರೆ[೧೫೨]. ಸಾಮಾನ್ಯ ಜನತೆಯ ಭಾವನಾತ್ಮಕ ಅಭಿವ್ಯಕ್ತಿಯ ಫಲವಾಗಿ ರಚಿತಗೊಂಡಿವೆ. ಅಲಂಕರಣೆ ಉದ್ದೇಶಕ್ಕಾಗಿ ಬೇಟೆಯ ಸ್ಮರಣಾರ್ಥವಾಗಿ, ನಿರಂತರ ಆಹಾರ ದೊರಕಿಸಿಕೊಳ್ಳುವ ಉದ್ದೇಶದಿಂದ ರಚಿಸಿದ್ದಾರೆ[೧೫೩]. ಮಾಂತ್ರಿಕ ಕಟ್ಟಳೆಗಳನ್ನು ತಿಳಿಸುವ ಉದ್ದೇಶಕ್ಕಾಗಿ ಚಿತ್ರಗಳು ರಚಿತಗೊಂಡಿವೆ[೧೫೪]. ಗುಡೆಕೋಟೆಯಲ್ಲಿ ಗವಿಯ ಒಳಗೆ ಹೋಗುವ ಮುನ್ನ ಬಂಡೆಯ ಮೇಲೆ ಪ್ರಾಣಿಯ ವರ್ಣಚಿತ್ರಗಳಿರುವುದು ಬಹುಶಃ ದೂರದಿಂದ ತಮ್ಮ ನೆಲೆಯನ್ನು ಗುರುತಿಸಲು ಇರಬೇಕು. ಹೀಗೆ ಹಲವು ಉದ್ದೇಶಕ್ಕಾಗಿ ವರ್ಣಚಿತ್ರಗಳು ರಚಿತಗೊಂಡಿವೆ.

ಬಾಹ್ಯರೇಖೆಯನ್ನು ತೋರಿಸುವ ಚಿತ್ರಗಳು ತುಂಬಿದ ಮೈಯುಳ್ಳ ಚಿತ್ರಗಳಿಗಿಂತ ಹೆಚ್ಚು. ಚಿತ್ರಗಳು ಸಾಮಾನ್ಯವಾಗಿ ಸಣ್ಣ ಹಾಗೂ ಮಧ್ಯಮ ಗಾತ್ರದಲ್ಲಿರುತ್ತವೆ. ೮ಸೆ.ಮೀ ನಿಂದ ೧ಮೀಟರ್, ೨.೫ ಮೀಟರ್‌ಗಿಂತಲೂ ಎತ್ತರವಿರುವ ಬೃಹದಾಕಾರದ ಚಿತ್ರಗಳು ಇವೆ. ಸಣ್ಣ ಪ್ರಮಾಣದಲ್ಲಿರುವ ಚಿತ್ರಗಳು ತುಂಬಿದ ದೇಹವನ್ನು ಹೊಂದಿರುತ್ತವೆ. ದೊಡ್ಡ ಪ್ರಮಾಣದ ಚಿತ್ರಗಳು ಬಾಹ್ಯರೇಖೆಯಿಂದ ಕೂಡಿರುವುದು ಬ್ರಹ್ಮಗಿರಿ, ಸಂತೇಗುಡ್ಡದಲ್ಲಿ ಕಾಣಬಹುದು. ಬಿಡಿಸಿರುವ ಚಿತ್ರಗಳಲ್ಲಿ ಪ್ರಾಣಿಗಳಿಗೆ ಮತ್ತು ಮನುಷ್ಯರಿಗೆ ಕಿವಿ, ಮೂಗನ್ನು ತೋರಿಸದಿರುವುದು ಪ್ರಾಚೀನತೆಗೆ ಸಾಕ್ಷಿ. ಅನುಕರಣೀಯವಾದ ಸಂಪ್ರದಾಯದಡಿಯಲ್ಲಿ ಬೆಳೆದು ಬಂದಂತೆ ಕಾಣುತ್ತವೆ. ಸಂತೇಗುಡ್ಡದಲ್ಲಿ ತಿಳಿಕೆಂಪು ಬಣ್ಣದ ಗೂಳಿಯ ಎದುರಿಗೆ ಬಾಹ್ಯರೇಖೆಯಿರುವ ಗೂಳಿಯ ಒಂದು ಚಿತ್ರವಿದೆ. ಸಂತೇಗುಡ್ಡದಲ್ಲಿರುವ ಚಿತ್ರಗಳಲ್ಲಿ ಬೇಟೆಗೆ ಹೊರಟಿರುವ ಮನುಷ್ಯ, ಆತನ ಹಿಂದೆ ನಾಯಿ ಹೋಗುತ್ತಿರುವ ದೃಶ್ಯ ಇರುವುದು. ಗೂಳಿ, ಜಿಂಕೆ,

ಮುಳ್ಳಂದಿ ಚಿತ್ರಗಳು ಮತ್ತು ಕೈಮೇಲೆತ್ತಿರುವ ಮನುಷ್ಯ ಹಾಗೂ ನೃತ್ಯ ಮಾಡುತ್ತಿರುವ ಮನುಷ್ಯನ ಚಿತ್ರಗಳು ನವ ಶಿಲಾಯುಗದಲ್ಲಿ ರಚಿತಗೊಂಡಿವೆ. ಏಕೆಂದರೆ ತುಂಬಿದ ದೇಹ, ತಿಳಿಕೆಂಪು ಬಣ್ಣದ ಬಳಕೆ ಸಣ್ಣ ಮತ್ತು ಮಧ್ಯಮಗಾತ್ರದಲ್ಲಿ ರಚನೆಯಾಗಿರುವುದರಿಂದ ನವ ಶಿಲಾಯುಗದವು ಎಂದು ಹೇಳಿರುವುದು ಸತ್ಯವೆನಿಸುವುದು. ಮಂಡಲ ಚಿತ್ರಗಳು ಮಾಟ ಮಂತ್ರದ ಪ್ರತೀಕವಾದರೆ, ಏಳು ಬೆರಳುಗಳನ್ನು ಹೊಂದಿರುವ ಮನುಷ್ಯ ಮಾಂತ್ರಿಕನಿರಬೇಕು. ಬಿಲ್ಲು-ಬಾಣ ಹಿಡಿದು ಬೇಟೆಗೆ ಹೊರಟಿರುವುದು ಮತ್ತು ಕುದುರೆ ಏರಿ ಈಟಿ ಹಿಡಿದುಕೊಂಡು ಹೋಗುತ್ತಿರುವ ದೃಶ್ಯಗಳು ಬೇಟೆ ಸಂಸ್ಕೃತಿಯನ್ನು ತೋರಿಸುತ್ತವೆ. ಈ ಚಿತ್ರಗಳು ಬಹುಶಃ ಬೃಹತ್ ಶಿಲಾಯುಗದಲ್ಲಿ ರಚಿತಗೊಂಡಿರಬೇಕು. ಬೃಹದಾಕಾರದ ಬಾಹ್ಯ ರೇಖೆಯನ್ನು ಹೊಂದಿರುವ ಕುದುರೆ, ಒಂಟೆ ಮತ್ತು ಆನೆಗಳ ಮೇಲೆ ಕುಳಿತುಕೊಂಡು ಎದುರು ಬದುರು ಹೋರಾಡುತ್ತಿರುವ ದೃಶ್ಯಗಳು ಇತಿಹಾಸ ಕಾಲದಲ್ಲಿ ರಚಿತಗೊಂಡಿವೆ ಎಂಬುದು ಸ್ಪಷ್ಟ. ಗರುಡ, ಗೋಪುರ, ಬಿಳಿ ಬಣ್ಣದ ಮಂಡಲಚಿತ್ರಗಳು ಇತಿಹಾಸ ಕಾಲದವು. ಈ ರೀತಿಯಾದ ಚಿತ್ರಗಳು ಸಂತೇಗುಡ್ಡದ ಕಲ್ಲಾಸರೆಯಲ್ಲಿ ಕಾಣಬಹುದು.

೪.೮. ಬಯಲುಬಂಡೆ ಚಿತ್ರಗಳು

ಭಾವನೆಗಳನ್ನು ವ್ಯಕ್ತಪಡಿಸಿದಾಗ ಕಲೆಯಾಗುತ್ತದೆ. ಅಂತಹ ಕಲೆಗಳು ಹಲವಾರು ಚಿತ್ರಕಲೆಯು ಅವುಗಳಲ್ಲಿ ಮುಖ್ಯವಾಗಿದ್ದು, ಅದನ್ನು ವರ್ಣಚಿತ್ರ ಹಾಗೂ ಬಯಲುಬಂಡೆ ಚಿತ್ರಗಳು ರೂಪದಲ್ಲಿ ಕಾಣಬಹುದು. ಚಿತ್ರಕಲೆಯ ಸೃಷ್ಟಿಗೆ ಅರಿವಿಗೆ ಬಾರದಂತಹ ರಚನೆಗಳು ಮತ್ತು ನೈಸರ್ಗಿಕ ಚಿತ್ರಗಳು ಪ್ರಭಾವ ಬೀರಿದ್ದಾವೆ. ವರ್ಣಚಿತ್ರಗಳು ಶಿಲಾಯುಗ ಸಂಸ್ಕೃತಿಯಲ್ಲಿ ಪ್ರಾಚೀನದ್ದು. ಬಯಲುಬಂಡೆ ಚಿತ್ರಗಳು ನಂತರದ್ದು. ಬೃಹತ್ ಶಿಲಾಯುಗದಲ್ಲಿ ಬಯಲುಬಂಡೆ ಚಿತ್ರಗಳು ಹೆಚ್ಚಾಗಿ ರಚನೆಗೊಂಡಿವೆ. ವರ್ಣಚಿತ್ರಗಳು ಶಿಲಾಯುಗ ಸಂಸ್ಕೃತಿಯ ಕಾಲದಲ್ಲಿ ಗವಿ ಕಲ್ಲಾಸರೆಗಳಲ್ಲಿ ರಚನೆಗೊಂಡಿರುವುದನ್ನು ಹಾಗೂ ಬಯಲು ಬಂಡೆಗಳ ಮೇಲೆ ಗೀರು ಚಿತ್ರಗಳು ರಚನೆಯಾಗಿರುವುದನ್ನು ಗಮನಿಸಿದಾಗ ಶಿಲಾಯುಗದ ಮಾನವನು ಗವಿ ಕಲ್ಲಾಸರೆಗಳಲ್ಲಿ ಬದುಕುತ್ತಿದ್ದವನು, ಬಯಲಲ್ಲಿ ವಾಸಿಸಲು ಆರಂಭಿಸಿದನೆಂದು ಸೂಚನೆ ನೀಡುತ್ತವೆ. ಇದು ಸತ್ಯ ಹೌದು. ಏಕೆಂದರೆ ಬೃಹತ್ ಶಿಲಾಯುಗ ಮಾನವನಿಗಿಂತ ಮುಂಚೆ ನವ ಶಿಲಾಯುಗದ ಮಾನವನು ಬಯಲಿಗೆ ಬಂದು ವಾಸವಾಗಿದ್ದಕ್ಕೆ ಬೂದಿದಿನ್ನೆಗಳೇ ಸಾಕ್ಷಿ. ನವ ಶಿಲಾಯುಗದ ಮತ್ತು ಬೃಹತ್ ಶಿಲಾಯುಗದ ಮಾನವರು ತಾವು

ವಾಸವಾಗಿದ್ದ ನೆಲೆಗಳ ಸಮೀಪ ಬಯಲು ಬಂಡೆಗಳ ಮೇಲೆ ವಿವಿಧ ಪ್ರಾಣಿಗಳನ್ನು, ಧಾರ್ಮಿಕ ಚಿತ್ರಗಳನ್ನು ಕುಟ್ಟುವುದರ ಮೂಲಕ ಹಾಗೂ ಗೀರುವುದರ ಮೂಲಕ ತನ್ನ ಕಲೆಯನ್ನು ಬಿಂಬಿಸಿ ಹೋಗಿದ್ದಾನೆ. ಪ್ರಸ್ತುತ ಪರಿಸರದಲ್ಲಿ ಬಯಲುಬಂಡೆ ಚಿತ್ರಗಳು ಅಧ್ಯಯನ ಮಾಡಲಾಗಿದ್ದು, ಅವುಗಳನ್ನು ವಿಶ್ಲೇಷಿಸಲಾಗಿದೆ. ಬಯಲುಬಂಡೆ ಚಿತ್ರಗಳು ಪ್ರಸ್ತುತ ಜಿಲ್ಲೆಯಲ್ಲಿ ಅಧ್ಯಯನ ಮಾಡಿ ಮತ್ತು ಪರಿಶೀಲಿಸಿ ವಿಭಾಗಿಸಲಾಗಿದೆ. ಅವುಗಳು ಕೆಳಗಿನಂತೆ ತೋರಿಸಲಾಗಿದೆ.

ಬಯಲುಬಂಡೆ ಚಿತ್ರಗಳು

ಕುಟ್ಟಿದಚಿತ್ರಗಳು | ಗೀರಿದಚಿತ್ರಗಳು | ಕೊರೆದಚಿತ್ರಗಳು

ಚಿತ್ರದುರ್ಗ ಪ್ರದೇಶವು (ಹಿರಿಯೂರು, ಹೊಸದುರ್ಗ, ಮೊಳಕಾಲ್ಮೂರು, ಚಿತ್ರದುರ್ಗ) ಬೆಟ್ಟಸಾಲುಗಳಿಂದ ತುಂಬಿದೆ. ಬೆಟ್ಟಗಳಲ್ಲಿ ಗವಿ ಕಲ್ಲಾಸರೆಗಳಿದ್ದು, ಅವುಗಳ ಮೇಲೆ (ನುಂಕೆಮಲೆ, ಚೋಳಗುಡ್ಡ, ಧವಳಪ್ಪನಗುಡ್ಡ, ಬ್ರಹ್ಮಗಿರಿ, ಜಟಂಗಿರಾಮೇಶ್ವರ, ತಮಟಕಲ್ಲು, ಸಂತೇಗುಡ್ಡ, ರಾಮಸಾಗರ) ವರ್ಣಚಿತ್ರಗಳನ್ನು ವಿರಳವಾಗಿ ಕಾಣಬಹುದು ಆದರೆ ಬಯಲುಬಂಡೆ ಚಿತ್ರಗಳು ಹೆಚ್ಚಾಗಿ ಕಾಣುತ್ತೇವೆ. ಬಯಲುಬಂಡೆ ಚಿತ್ರಗಳ ಸಂಶೋಧನೆಗಳಾಗಿವೆ. ಈ ಹಿಂದೆ ಸಂಗೇನಹಳ್ಳಿಕೆರೆ, ಬೆಳಗಟ್ಟ, ಕುಂಚಿಗನಾಳ್, ಚಿಕ್ಕಜಗಳೂರು, ಪಂಡ್ರಹಳ್ಳಿ, ತಣೀಗೆಕಲ್ಲು, ಗೋನೂರು, ಹುಣಸೆಕಟ್ಟೆ ಹಾಗೂ ಕಲ್ಲೇನಹಳ್ಳಿಯಲ್ಲಿ ಬಯಲುಬಂಡೆ ಚಿತ್ರಗಳು ಶೋಧಗೊಂಡಿದ್ದವು. ಚಳ್ಳಕೆರೆ ತಾಲೂಕಿನ ಪೇಲೂರಹಟ್ಟಿಯ ನಲ್ಲುಗಟ್ಲು ಎನ್ನುವ ಪ್ರದೇಶದಲ್ಲಿ ಹಾಗೂ ಜನ್ನೇನಹಳ್ಳಿ ಪರಿಸರದಲ್ಲಿ ಬಯಲುಬಂಡೆ ಚಿತ್ರಗಳನ್ನು ಶೋಧಿಸಿದ್ದೇನೆ. ಈ ಎಲ್ಲಾ ನೆಲೆಗಳಲ್ಲಿ ಸರ್ವೆಮಾಡಿ ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದ್ದು, ಸ್ಪಷ್ಟತೆಯನ್ನು ದೊರಕಿಸಿಕೊಡುವ ಪ್ರಯತ್ನ ಮಾಡಲಾಗಿದೆ. ಬಯಲುಬಂಡೆ ಚಿತ್ರಗಳನ್ನು ಹುಡುಕುತ್ತ ಹೊರಟಿದ್ದಾಗ ಸಂಗೇನಹಳ್ಳಿ ಕೆರೆಯ ಎಡದಂಡೆಯ ಮೇಲೆ ಹಳೆ ಶಿಲಾಯುಗದ ಆಯುಧವೊಂದನ್ನು ಪತ್ತೆ ಮಾಡಲಾಗಿದೆ. ಇದರಿಂದ ಅಧ್ಯಯನಕ್ಕೆ ಮತ್ತಷ್ಟು ಮಹತ್ವವನ್ನು ತಂದುಕೊಟ್ಟಂತಾಗಿದೆ. ಕುಂಚಿಗನಾಳ್‌ನಲ್ಲಿರುವ ಬಯಲುಬಂಡೆ ಚಿತ್ರಗಳು ಗಾಳಿಯಂತ್ರಗಳನ್ನು ಅಳವಡಿಸುವ ಉದ್ದೇಶದಿಂದ ನಾಶವಾಗಿವೆ. ಮತ್ತೊಂದು ನೆಲೆಯಾದ ದೊಡ್ಡಸಿದ್ದವ್ವನಹಳ್ಳಿ ನೆಲೆಯಲ್ಲಿ ಬಯಲುಬಂಡೆ ಚಿತ್ರಗಳು ನಾಶವಾಗಿವೆ.

ಬಂಡೆ–ಗವಿ ವರ್ಣಚಿತ್ರಗಳ ಅಧ್ಯಯನ–ಶೋಧನೆ ಪ್ರಥಮ ಬಾರಿ ೧೮೩೭ರಲ್ಲಿ ಸರ್ ಚಾರ್ಜ್‌ಗ್ರೆ ಅವರಿಂದ ಸಿಡ್ನಿಯಲ್ಲಿ ನಡೆಯಿತು[೧೫೫]. ಭಾರತದಲ್ಲಿ ಪ್ರಾರಂಭಗೊಂಡಿದ್ದು ೧೮೮೦ರಿಂದ. ಈ ಸಂದರ್ಭದಲ್ಲಿ ಹೂಬರ್ಟ್‌ನಾಕ್ಸ್ ಬಳ್ಳಾರಿಯ ಸಮೀಪದಲ್ಲಿರುವ ಕಪ್ಪಗಲ್ಲು ಗ್ರಾಮದಲ್ಲಿ ಗುಡ್ಡಗಳಲ್ಲಿ ಕುಟ್ಟಿ ಗೀರಿ ರಚಿಸಿದ ಚಿತ್ರಗಳನ್ನು ನೋಡಿ ಛಾಯಚಿತ್ರಗಳನ್ನು ತೆಗೆದು ರಾಬರ್ಟ್ ಬ್ರೂಸ್‌ಫೂಟ್ ಅವರಿಗೆ ಕಳುಹಿಸಿಕೊಟ್ಟರು. ೧೯೧೬ರಲ್ಲಿ ಇವರು 'ದಿ ಫೂಟ್ ಕಲೆಕ್ಷನ್ ಆಫ್ ಇಂಡಿಯನ್ನ ಪ್ರೀಹಿಸ್ಟಾರಿಕ್ ಆ್ಯಂಡ್ ಪ್ರೋಟೋ ಹಿಸ್ಟಾರಿಕ್ ಆ್ಯಂಟಿಕ್ವೀಟಿನ್' ಎಂಬ ಪುಸ್ತಕದಲ್ಲಿ ಪ್ರಕಟಿಸಿದರು[೧೫೬]. ಇದು ಈ ರೇಖಾಚಿತ್ರಗಳ ಕುರಿತ ಮೊದಲ ಪ್ರಕಟಣೆಯಾಗಿದೆ. ಕರ್ನಾಟಕದಲ್ಲಿ ಲಿಯೋನಾರ್ಡ್‌ಮನ್ ೧೯೪೦ರ ದಶಕದಲ್ಲಿ ಮಸ್ಕಿ, ಕಲ್ಲೂರು, ಅತನೂರ್‌ಗಳಲ್ಲಿ ಕುಟ್ಟಿದ ಮತ್ತು ಗವಿ ವರ್ಣಚಿತ್ರಗಳನ್ನು ಶೋಧಿಸಿ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದರು[೧೫೭]. ೧೯೬೮–೧೯೭೪ರ ಅವಧಿಯಲ್ಲಿ ಲಿಯೋನಾರ್ಡ್‌ಮನ್ ಅವರು ಹಿರೆಬೇನಕಲ್ಲು ಗುಡ್ಡದಲ್ಲಿ ಶೋಧನೆ ಮಾಡಿದರು[೧೫೮]. ೧೯೮೩ ರಲ್ಲಿ ಶ್ರೀಶೈಲ ಆರಾಧ್ಯರ 'ಸಂಶೋಧನೆಯ ಹಾದಿಯಲ್ಲಿ' ಎಂಬ ಪುಸ್ತಕವು ಚಿತ್ರದುರ್ಗ, ಹೊಸದುರ್ಗ, ಹಾಗೂ ಮೊಳಕಾಲ್ಮೂರು ತಾಲೂಕುಗಳಲ್ಲಿ ದೊರೆತ ಬಯಲುಬಂಡೆ ಚಿತ್ರಗಳ ವಿವರಣೆ ಕೊಟ್ಟಿದೆ. ೧೯೪ರಲ್ಲಿ ಅ.ಸುಂದರ ಅವರು 'ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ'ಯನ್ನು ಬಿಡುಗಡೆಗೊಳಿಸಿದರು. ೧೯೬ರಲ್ಲಿ ಎಸ್.ವೈ.ಸೋಮಶೇಖರ್, ಲಕ್ಷ್ಮಣ್ ತೆಲಗಾವಿ ಅವರು ಸಂಗೇನಹಳ್ಳಿಕೆರೆ ಬಳಿ ಬಂಡೆಯ ಮೇಲೆ ಕುಟ್ಟಿ, ಉಜ್ಜಿ ಮೂಡಿಸಿದ ಪ್ರಾಣಿ, ಮನುಷ್ಯ ಹಾಗೂ ಜ್ಯಾಮಿತಿ ವಿನ್ಯಾಸದ ಆಕೃತಿಗಳನ್ನು ಕಂಡುಹಿಡಿದರು[೧೫೯]. ಒಟ್ಟಾಗಿ ಎಂ.ಎಚ್.ಕೃಷ್ಣ, ಅ.ಸುಂದರ, ಶ್ರೀಶೈಲ ಆರಾಧ್ಯ, ಎಸ್.ಜಿ.ರಾಮದಾಸರೆಡ್ಡಿ, ಎಸ್.ತಿಪ್ಪೇಸ್ವಾಮಿ, ಎಸ್.ವೈ. ಸೋಮಶೇಖರ್, ಲಕ್ಷ್ಮಣ್ ತೆಲಗಾವಿ, ಶರತ್‌ಬಾಬು.ಕೆ.ಎಸ್, ನಾಗರಾಜಪ್ಪ.ಎಸ್, ಎನ್.ಎಸ್.ಮಂಹತೇಶ್ ಇವರ ಶ್ರಮದ ಫಲವಾಗಿ ಜಿಲ್ಲೆಯಲ್ಲಿ ಬಯಲುಬಂಡೆ ಚಿತ್ರಗಳು ಶೋಧಗೊಂಡಿವೆ.

ಬಯಲುಬಂಡೆ ಚಿತ್ರಗಳ ರಚನೆಯ ಉದ್ದೇಶ:

* ಭಾವನೆಯನ್ನು ವ್ಯಕ್ತಪಡಿಸುವಿಕೆ ಕಂಡುಬಂದಿದೆ.
* ಕಲೆಯನ್ನು ಪ್ರದರ್ಶಿಸುವುದಕ್ಕಾಗಿ ರಚಿಸಿದ್ದಾರೆ ಎಂದೆನಿಸುತ್ತದೆ.
* ತನ್ನ ಪೂರ್ವಜರ ಕಲಾಚಿತ್ರ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವಂತೆ ಕಾಣುತ್ತದೆ.

* ತನ್ನ ಪ್ರೀತಿಯ ಪ್ರಾಣಿಗಳನ್ನು ಪರಿಚಯಿಸುವ ಉದ್ದೇಶವಿರುವುದು ಕಾಣಬಹುದು.

* ಭಯ ಭೀತಿ ಹೋಗಲಾಡಿಸಿಕೊಳ್ಳುವ ಉದ್ದೇಶವಿದೆ.

* ತಾನು ಬಂದು ಹೋಗಿದ್ದರ ನೆನಪಿಗಾಗಿರುವ ಉದ್ದೇಶವಿದೆ.

* ಸಮಯವನ್ನು ಕಳೆಯುವ ಉದ್ದೇಶವಿದೆ.

ಬಯಲುಬಂಡೆ ಚಿತ್ರಗಳ ಕಾಲ ನಿರ್ಣಯ ವಿಧಾನಗಳು:

ಬಳಸಿದ ವಸ್ತುಗಳ ಆಧಾರದಿಂದ ಕಾಲನಿರ್ಣಯ:

ಬಯಲುಬಂಡೆ ಚಿತ್ರಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಹರಡಿದ್ದು, ಲೋಹ, ಶಿಲೆಗಳಿಂದ ಕುಟ್ಟಿ ಮೂಡಿಸಿದ್ದಾರೆ ಎಂಬುದನ್ನು ಗಮನಿಸಬೇಕು. ಬಯಲುಬಂಡೆ ಚಿತ್ರಗಳು ರಚನೆಗೊಂಡಿರುವುದು ಬೃಹತ್ ಶಿಲಾಯುಗದಲ್ಲಿ ಹೆಚ್ಚು. ಬೃಹತ್ ಶಿಲಾಯುಗದಲ್ಲಿ ಕಬ್ಬಿಣವನ್ನು ಆವಿಷ್ಕಾರ ಮಾಡಿಕೊಂಡಿದ್ದರಿಂದ, ಚಿತ್ರವನ್ನು ಬಿಡಿಸಲು ಕಬ್ಬಿಣದ ವಸ್ತುವನ್ನು ಬಳಸಿದ್ದಾನೆ. ಕಬ್ಬಿಣದ ವಸ್ತುವಿನಿಂದ ಬಿಡಿಸಿದ ಚಿತ್ರವು ಬೆಳಗಟ್ಟ, ದೊಡ್ಡಘಟ್ಟ, ಮಾಳಪ್ಪನಗುಡ್ಡ ಮೊದಲಾದ ಕಡೆಗಳಲ್ಲಿ ಗಮನಿಸಬಹುದು. ಕಬ್ಬಿಣದ ವಸ್ತುವಿನಿಂದ ಕುಟ್ಟುವುದು ಮತ್ತು ಕೊರೆದು ಚಿತ್ರವನ್ನು ಬಿಡಿಸಲು ಪ್ರಯತ್ನಿಸಿದ್ದಾನೆ. ಕೆಲವೊಂದು ಸಲ ಕಲ್ಲಿನಿಂದ ಕುಟ್ಟಿ ಚಿತ್ರವನ್ನು ಮೂಡಿಸಿದ್ದಾನೆ. ಇಂತಹ ಸಂದರ್ಭದಲ್ಲಿ ಕಾಲನಿರ್ಣಯಕ್ಕೆ ಸಮಸ್ಯೆಯಾಗಬಹುದು. ಆದರೆ ಕಬ್ಬಿಣದ ವಸ್ತುವಿನಿಂದ ರಚಿಸಿದ ಎತ್ತಿನ ಚಿತ್ರಕ್ಕೂ ಮತ್ತು ಕಲ್ಲಿನಿಂದ ಕುಟ್ಟಿದ ಎತ್ತಿನ ಚಿತ್ರಕ್ಕೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಇತಿಹಾಸಾರಂಭ ಕಾಲದಲ್ಲಿ ಎತ್ತಿನ ಚಿತ್ರಗಳಿಗೆ ಅಲಂಕಾರ ಮಾಡಿರುವುದನ್ನು ಗಮನಿಸಲಾಗಿದೆ. ಬೃಹತ್ ಶಿಲಾಯುಗದ ಮಾನವನಲ್ಲದೆ ನವ ಶಿಲಾಯುಗದ ಮಾನವನು ಕಲ್ಲಿನಿಂದ ಕುಟ್ಟಿ ಮೂಡಿಸಿದ ಚಿತ್ರಗಳನ್ನು ಸಂಗೇನಹಳ್ಳಿಕೆರೆಯ ಬಯಲುಬಂಡೆಗಳ ಮೇಲೆ ಕಂಡುಬಂದಿವೆ. ಈ ಎರಡು ಕಾಲದಲ್ಲಿ ಶಿಲೆಗಳಿಂದ ಕುಟ್ಟಿದ ಚಿತ್ರಗಳನ್ನು ಕಾಣಬಹುದಾದರೂ ಚಿತ್ರರಚನೆಯಲ್ಲಿ ವ್ಯತ್ಯಾಸವಿರುತ್ತದೆ. ನವ ಶಿಲಾಯುಗದಲ್ಲಿನ ಗೂಳಿ ಮತ್ತು ಎತ್ತಿನ ಚಿತ್ರವನ್ನು ವರ್ಣಚಿತ್ರಗಳಂತೆ ರಚಿಸಿದ್ದರೆ, ಬೃಹತ್ ಶಿಲಾಯುಗದವರು ಬಾಹ್ಯರೇಖೆಯಲ್ಲಿ ಎತ್ತಿನ ಚಿತ್ರವನ್ನು ಕುಟ್ಟಿ ಮೂಡಿಸಿದ್ದಾರೆ. ಈ ಎಲ್ಲಾ ಅಂಶಗಳಿಂದ ನವ ಶಿಲಾಯುಗದಿಂದ ಇತಿಹಾಸ ಕಾಲದವರೆಗೂ ಬಯಲು ಬಂಡೆ ಚಿತ್ರಗಳು ರಚಿತಗೊಂಡಿರುವುದಾಗಿ ತಿಳಿಯಪಡಿಸುತ್ತೇನೆ.

ಹೋಲಿಕೆ ವಿಧಾನದ ಮೂಲಕ:

ನವ ಶಿಲಾಯುಗದಲ್ಲಿ ವರ್ಣಚಿತ್ರಗಳಂತೆ ರಚನೆಗೊಂಡರೆ ಬೃಹತ್ ಶಿಲಾಯುಗದಲ್ಲಿ ಬಾಹ್ಯರೇಖೆಯ ರೀತಿಯಲ್ಲಿ ಚಿತ್ರಗಳನ್ನು ರಚಿಸಿದ್ದಾರೆ. ಇತಿಹಾಸ ಕಾಲದಲ್ಲಿ ಎತ್ತುಗಳ ಅಲಂಕಾರ, ರಥಗಳ ಕಲ್ಪನೆ ಬೃಹತ್ ಶಿಲಾಯುಗದ ರಚನೆಗಿಂತ ಭಿನ್ನವಾಗಿವೆ. ದೊಡ್ಡಘಟ್ಟ, ಬೆಳಗಟ್ಟ, ಪಾಪಯ್ಯನಮಟ್ಟಿ, ಕುಂಚಿಗನಾಳ್ ಮೊದಲಾದ ಕಡೆಗಳಲ್ಲಿ ಕಂಡುಬಂದಿರುವ ಬಯಲುಬಂಡೆ ಚಿತ್ರಗಳು ಒಂದನ್ನೊಂದು ಹೋಲುತ್ತವೆ. ಮಾಳಪ್ಪನಗುಡ್ಡದಲ್ಲಿ ಕುಟ್ಟಿದ ಚಿತ್ರಗಳಿಗಿಂತ ಕೊರೆದ ಚಿತ್ರಗಳೇ ಹೆಚ್ಚು. ಚಿತ್ರರಚನೆಯ ಸ್ವರೂಪವನ್ನು ಆಧರಿಸಿ ಬೃಹತ್ ಶಿಲಾಯುಗದಲ್ಲಿ ಕೊರೆದ ಚಿತ್ರಗಳು ರಚನೆಗೊಂಡಿರುವುದಾಗಿ ನಿರ್ಧರಿಸಲಾಗಿದೆ. ಸಂಗೇನಹಳ್ಳಿಕೆರೆಯ ಬಯಲು ಬಂಡೆಗಳ ಮೇಲೆ ಉತ್ತರ ಭಾರತದ ತಳಿಯನ್ನು ಹೋಲುವ ಗೂಳಿ ಚಿತ್ರಗಳನ್ನು ಗಮನಿಸಿದ್ದೇನೆ. ತುರುವನೂರಿನ ಭೀಮನಹೆಜ್ಜೆ, ಭೀಮಸಮುದ್ರದ ಭೀಮನಹೆಜ್ಜೆ, ಹಿರಿಯೂರು ತಾಲೂಕಿನ ಭೀಮನಬಂಡೆಯ ಮೇಲಿರುವ ಜೋಡಿ ಪಾದಗಳು ಒಂದೆ ರೀತಿಯಲ್ಲಿವೆ. ಅಳತೆ ಮತ್ತು ಹೋಲಿಕೆಯಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಭೀಮನ ಹೆಜ್ಜೆಗಳೆಂದು ಕರೆಯುವ ಪಾದಚಿತ್ರವು ೨ಅಡಿಯವರೆಗೂ ಉದ್ದವಾಗಿವೆ. ಪಾದಗಳಿಗೆ ಬೆರಳುಗಳನ್ನು ತೋರಿಸಿರುವುದಿಲ್ಲ. ಆದ್ದರಿಂದ ಬೃಹತ್ ಶಿಲಾಯುಗದಲ್ಲಿ ರಚಿತಗೊಂಡಿವೆ ಎಂದು ಹೇಳುತ್ತೇನೆ. ದೊಡಘಟ್ಟದ ದೇವರೆತ್ತಿನ ಗುಡ್ಡದಲ್ಲಿರುವ ಒಂದು ಬಂಡೆಯ ಮೇಲೆ ಬೆರಳನ್ನು ಹೊಂದಿರುವ ಜೋಡಿ ಪಾದದ ಚಿತ್ರವಿದೆ. ಬಹುಶಃ ಈ ಚಿತ್ರವು ಬೃಹತ್ ಶಿಲಾಯುಗದ ನಂತರ ರಚಿತಗೊಂಡಿರಬಹುದು ಎಂದು ನಿರ್ಧರಿಸಬಹುದು.

ಸ್ಥಳೀಯ ಅವಶೇಷಗಳ ಮೂಲಕ:

ಬಯಲುಬಂಡೆ ಚಿತ್ರಗಳ ಕಾಲವನ್ನು ಗುರುತಿಸುವಲ್ಲಿ ಗೊಂದಲವಾದರೆ ಅವಶೇಷಗಳು ನೆರವಿಗೆ ಬರುತ್ತವೆ. ಬೆಳಗಟ್ಟದ ಎದ್ದಲಬಂಡೆಯ ಮೇಲೆ ಚಿತ್ರಗಳಿದ್ದು, ಸಮೀಪದಲ್ಲಿ ಬೃಹತ್ ಶಿಲಾಯುಗದ ಶಿಲಾಗೋರಿಗಳಿವೆ. ಪಾಪಯ್ಯನಮಟ್ಟಿಯು ಹುಲ್ಲುಗಾವಲಿನ ಪ್ರದೇಶವಾಗಿದ್ದು, ಇಲ್ಲಿನ ಬಂಡೆಗಳ ಮೇಲೆ ಚಿತ್ರಗಳಿವೆ. ಈ ನೆಲೆಗೆ ಸಮೀಪದಲ್ಲಿ ಬೆಳಗಟ್ಟದ ಶಿಲಾಗೋರಿ ಮತ್ತು ಬಯಲುಬಂಡೆ ಚಿತ್ರಗಳಿರುವ ನೆಲೆಯಿರುವುದು. ನನ್ನಿವಾಳ ನವ ಮತ್ತು ಬೃಹತ್ ಶಿಲಾಯುಗದ ಹಾಗೂ ಇತಿಹಾಸ ಕಾಲದಲ್ಲಿ ಪ್ರಮುಖ ನೆಲೆಯಾಗಿತ್ತು. ಈ ನೆಲೆಯ ಪಶ್ಚಿಮಕ್ಕೆ ನೆಲೆಯ ಸಮೀಪದಲ್ಲಿ ಕರೀಕಲ್ಲು ಮಟ್ಟಿಯಲ್ಲಿ ಬಯಲುಬಂಡೆ ಚಿತ್ರಗಳಿವೆ. ಈ ರೀತಿಯಾಗಿ ಅವಶೇಷಗಳ ಆಧಾರದ ಮೇಲೆ ಕಾಲನಿರ್ಣಯಿಸಲು ಸಾಧ್ಯ.

ನೆಲೆಗಳ ಆಯ್ಕೆ:

ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ವರ್ಣಚಿತ್ರಗಳು ಕಡಿಮೆಯಾಗಿ ಬಯಲಿನಲ್ಲಿ ಬಯಲುಬಂಡೆ ಚಿತ್ರಗಳು ರಚನೆಗೊಂಡಿವೆ. ಇದಕ್ಕೆ ಕೃಷಿ ಮತ್ತು ಲೋಹಗಳ ಆವಿಷ್ಕಾರ ಮತ್ತು ಪಶುಸಂಗೋಪನೆ ಕಾರಣ. ಪಶುಪಾಲನೆಗಾಗಿ ಹುಲ್ಲುಗಾವಲನ್ನು ಹುಡುಕುತ್ತಾ ಹೋದಾಗ ಅಲ್ಲಿ ಬಯಲುಬಂಡೆಗಳ ಮೇಲೆ ತನ್ನ ಕಲಾಭಿರುಚಿಯನ್ನು ರಚಿಸಿರಬೇಕು. ಬಯಲುಬಂಡೆಗಳ ಚಿತ್ರಗಳಿರುವ ಸಮೀಪವೇ ಶಿಲಾಗೋರಿಗಳು ಹಾಗೂ ಬೂದಿದಿನ್ನೆಗಳಿರುವುದನ್ನು ಗಮನಿಸಬಹುದು. ಚಿತ್ರಗಳನ್ನು ಬಹಿರಂಗವಾಗಿ ಕಾಣುವಂತೆ ರಚಿಸಿದ್ದರು, ಅವುಗಳು ಮಳೆ, ಗಾಳಿ ಬಿಸಿಲಿನಿಂದ ರಕ್ಷಿತಗೊಂಡಿವೆ. ಆದರೆ ಆಧುನಿಕ ಕಾಲದ ಕೈಚಳಕದಿಂದ ವಿನಾಷದ ಅಂಚಿನಲ್ಲಿವೆ. ಮೊದಲನೆಯ ನೆಲೆಗಳು ಮಟ್ಟಿಯ ಮೇಲೆ ಹುಲ್ಲುಗಾವಲಿನಲ್ಲಿದ್ದು, ಮಧ್ಯದಲ್ಲಿ ಬಂಡೆಗಳ ಮೇಲೆ ರಚಿತಗೊಂಡಿವೆ. ಉದಾಹರಣೆಗೆ ಬೆಳಗಟ್ಟದ ಎದ್ದಲುಬಂಡೆ ನೆಲೆಯಲ್ಲಿ ಕುಟ್ಟು ಚಿತ್ರಗಳನ್ನು ಮತ್ತು ಹುಣಸೇಕಟ್ಟೆಯ ಪಾಪಯ್ಯನಮಟ್ಟಿಯಲ್ಲಿ ಕುಟ್ಟು ಚಿತ್ರಗಳನ್ನು ಕಾಣಬಹುದು. ಇದೇ ಸಾಲಿಗೆ ಗೊನೂರಿನ ಕರಿಕಲ್ಲು ಮಟ್ಟಿ, ಕುಂಚಿಗನಾಳ್ ಕಣಿವೆಯಲ್ಲಿರುವ ನೆಲೆಗಳನ್ನು ಸೇರಿಸಬಹುದು. ಎರಡನೇ ನೆಲೆಗಳು ಹಳ್ಳದ ದಂಡೆಯ ಮೇಲಿನ ಬಯಲುಬಂಡೆಗಳಲ್ಲಿ ಚಿತ್ರಗಳನ್ನು ಕಾಣಬಹುದು. ಅಂತಹ ನೆಲೆಗಳಲ್ಲಿ ಸಂಗೇನಹಳ್ಳಿಕೆರೆ, ದೊಡ್ಡಘಟ್ಟ, ಚಿಕ್ಕಜಗಳೂರು, ವೀರಮದಕರಿಪುರ, ಪೇಲೂರಹಟ್ಟಿ, ಜನ್ನೇನಹಳ್ಳಿ ಪ್ರಮುಖವಾದವು. ಪ್ರಸ್ತುತ ನೆಲೆಗಳಲ್ಲಿ ಬಂದರಕೆ ಗಿಡಗಳು ಮತ್ತು ಹುಲ್ಲುಗಾವಲು ಹೆಚ್ಚಾಗಿ ಕಂಡುಬಂದಿವೆ.

ಬಯಲುಬಂಡೆ ಚಿತ್ರಗಳ ರಚನೆಯಲ್ಲಿನ ಉಪಕರಣಗಳು:

ಪ್ರಸ್ತುತ ನೆಲೆಗಳಲ್ಲಿ ಹಲವು ರೀತಿಯಾದ ಬಯಲುಬಂಡೆ ಚಿತ್ರಗಳು ರಚಿತಗೊಂಡಿವೆ. ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಲ್ಲಿನಿಂದ ಲೋಹದಿಂದ ಕುಟ್ಟಲಾಗಿದೆ ಮತ್ತು ಗೀರಿರುವುದು ಕಂಡುಬಂದಿದೆ. ಸಂಗೇನಹಳ್ಳಿಕೆರೆಯ ಎಡದಂಡೆಯ ಮೇಲೆ ಒಂದು ಬಂಡೆಯ ಮೇಲೆ ಎತ್ತಿನ ಸಾಲುಗಳಿದ್ದು, ಕಲ್ಲಿನಿಂದ ಉತ್ಕೃಷ್ಟವಾಗಿ ವರ್ಣಚಿತ್ರಗಳಂತೆ ರಚಿಸಿದ್ದಾರೆ. ಈ ರೀತಿಯ ರಚನೆಗಳು ನವಶಿಲಾಯುಗದ ಕಾಲದ್ದೆನ್ನಬಹುದು. ಬೃಹತ್ ಶಿಲಾಯುಗದಲ್ಲಿ ಕಲ್ಲಿನಿಂದ ಮತ್ತು ಲೋಹದಿಂದ ಕುಟ್ಟಿ ಮತ್ತು ಗೀರಿದ ಚಿತ್ರಗಳನ್ನು ರಚಿಸಿದ್ದಾರೆ. ಈ ಹಿಂದಿನ ಅಧ್ಯಯನಗಳಲ್ಲಿ ಆಳವಾಗಿ ಕಾಣುವ ಚಿತ್ರಗಳನ್ನು ಕೊರೆದ ಚಿತ್ರಗಳೆಂದು ನಿರ್ಧರಿಸಿದ್ದರು. ಆದರೆ ಸೂಕ್ಷ್ಮವಾಗಿ

ಗಮನಿಸಿದಾಗ ಲೋಹದಿಂದ ಬಲವಾದ ಹೊಡೆತದಿಂದ ಕುಟ್ಟಿರುವುದು ಕಂಡು ಬಂದಿದೆ. ಆದ್ದರಿಂದ ಕೊರೆದ ಚಿತ್ರಗಳು ಎನ್ನುವ ಪದವನ್ನು ಬಳಸುವ ಬದಲಾಗಿ ಕುಟ್ಟಿದ ಚಿತ್ರಗಳೆಂದು ಕರೆಯಬಹುದು. ಗೊನೂರು, ಪಾಪಯ್ಯನಹಟ್ಟಿ, ಇತರೆ ನೆಲೆಗಳಲ್ಲಿ ಕುಳಿಗಳನ್ನು ತಿರುಗಳಿಯಿಂದ ರಚಿಸರಬೇಕೆಂದು ಸ್ಪಷ್ಟಪಡಿಸಲಾಗಿದೆ.

ಬಯಲುಬಂಡೆ ಚಿತ್ರಗಳ ನೆಲೆಗಳಿಗಿರುವ ಸ್ಥಳನಾಮಗಳು:

ಬಂದರಕೆಗಡ್ಡೆ:

ಸಂಗೇನಹಳ್ಳಿಕೆರೆಯ ಮಧ್ಯೆಯಿರುವ ಬೂದಿದಿನ್ನೆಗೆ ಓಬಳಾಪುರ ಗಡ್ಡೆಯೆಂದು ಕರೆಯುತ್ತಿದ್ದಾರೆ. ಈ ನೆಲೆಯ ಪಶ್ಚಿಮಕ್ಕೆ ಕೆರೆಯ ಎಡದಂಡೆಯ ಮೇಲೆ ಬಂದರಕೆ ಗಿಡಗಳು ಹೆಚ್ಚಾಗಿ ಬೆಳೆದು ನಿಂತಿವೆ. ಆ ಹಿನ್ನಲೆಯಲ್ಲಿ ಪ್ರಸುತ್ತ ನೆಲೆಯನ್ನು ಬಂದರಕೆ ಗಡ್ಡೆಯೆಂದು ಕರೆಯುತ್ತಿದ್ದಾರೆನ್ನಬಹುದು. ಇಂತಹ ಬಂದರಕೆ ಗಿಡಗಳು ಎಲ್ಲಾ ಬೃಹತ್ ಶಿಲಾಯುಗದ ಬಯಲುಬಂಡೆಯ ರೇಖಾಚಿತ್ರಗಳ ನೆಲೆಯಲ್ಲಿವೆ. ಹಾಗಾಗಿ ಬಂದರಕೆ ಗಿಡಗಳು ಸಿಗುವ ಕಡೆಗಳಲ್ಲಿ ರೇಖಾಚಿತ್ರಗಳು ಸಿಗಬಹುದಾದ ಸಾಧ್ಯತೆಗಳಿವೆ.

ಎದ್ದಲುಬಂಡೆ:

ಬೆಳಗಟ್ಟದಿಂದ ಚಿತ್ರದುರ್ಗಕ್ಕೆ ಹೋಗುವ ಬಲಭಾಗಕ್ಕೆ ದೊಡ್ಡ ಮಟ್ಟಿಯಿದ್ದು, ಈ ಮಟ್ಟಿಗೆ ಸ್ಥಳೀಯರು ಎದ್ದಲುಬಂಡೆಯೆಂದು ಕರೆಯುತ್ತಿದ್ದಾರೆ. ಇದಕ್ಕೆ ಕಾರಣ ಮಟ್ಟಿಯ ಮೇಲೆ ಬಂಡೆಗಳ ಮೇಲೆ ಹೆಚ್ಚಿನ ಚಿತ್ರಗಳಿರುವುದು. 'ಎದ್ದಲು' ಎಂಬ ಪದವು ತೆಲುಗು ಪದವಾಗಿದೆ. ಹಾಗೇಂದರೆ ಎತ್ತುಗಳು ಎಂದರ್ಥ.

ಕರಿಕಲ್ಲು ಮಟ್ಟಿ:

ಗೋನೂರು ಮತ್ತು ಜನ್ನೇನಹಳ್ಳಿ ನೆಲೆಗಳಿಗೆ ಕರಿಕಲ್ಲುಮಟ್ಟಿ ಎಂದು ಕರೆಯುತ್ತಿದ್ದಾರೆ. ಪ್ರಸುತ್ತ ನೆಲೆಗಳಲ್ಲಿ ಕರಿಕಲ್ಲುಗಳು ಹರಡಿಕೊಂಡಿದ್ದು, ಅವುಗಳ ಮೇಲೆ ಗೀರುಚಿತ್ರಗಳು ರಚಿತಗೊಂಡಿರುತ್ತವೆ. ಮಟ್ಟಿಯೆಂದಾಕ್ಷಣ ತುಂಬ ಎತ್ತರವಾಗಿರುತ್ತೆಂದು ಭಾವಿಸುವ ಅವಶ್ಯಕತೆಯಿಲ್ಲ. ತುಂಬಾ ತೂಕದ ಮನುಷ್ಯ ಕೂಡ ಸುಲಭವಾಗಿ ನಡೆಯಬಹುದಾದ ಎತ್ತರವಾದ ದಿನ್ನೆಯಾಗಿದೆ.

ನೆಲ್ಲುಗಟ್ಲು:

ಚಳ್ಳಕೆರೆ ತಾಲೂಕಿನ ಪೇಲೂರಹಟ್ಟಿ ಬಳಿ ಇರುವ ನೆಲೆಗೆ ನೆಲ್ಲುಗಟ್ಲು ಎಂದು ಕರಿಯುತ್ತಿದ್ದಾರೆ. 'ನೆಲ್ಲುಗಟ್ಲು' ಎಂಬ ಪದವು ತೆಲುಗು ಪದವಾಗಿದ್ದು, ಕನ್ನಡದಲ್ಲಿ

ಕರಿಕಲ್ಲು ಎಂದರ್ಥ. ಈ ನೆಲೆಯಲ್ಲಿ ಬೃಹತ್ ಶಿಲಾಯುಗದ ಮತ್ತು ಚರಿತ್ರೆ ಕಾಲದ ಬಯಲುಬಂಡೆ ಚಿತ್ರಗಳಿರುವುದನ್ನು ಗುರುತಿಸಲಾಗಿದೆ.

ದ್ಯಾವರಮಟ್ಟಿ:

ಚಿತ್ರದುರ್ಗ ತಾಲೂಕಿನ ದೊಡ್ಡಗಟ್ಟ ಗ್ರಾಮದ ಕೆರೆಗೆ ಹೊಂದಿಕೊಂಡಿರುವ ಮಟ್ಟಿಯೆ ದ್ಯಾವರಮಟ್ಟಿ. ಮಟ್ಟಿಯ ಕೆಳಗೆ ಕರಿಕಲ್ಲುಗಳಿದ್ದು, ಅವುಗಳ ಮೇಲೆ ಬೃಹತ್ ಶಿಲಾಯುಗದ ಬಯಲುಬಂಡೆ ಚಿತ್ರಗಳಿವೆ. 'ದ್ಯಾವರು' ಎಂದರೆ ಕನ್ನಡದಲ್ಲಿ ದೇವರು ಎಂದರ್ಥ. ಸ್ಥಳೀಯರು ಹೇಳುವ ಪ್ರಕಾರ ದ್ಯಾವರಮಟ್ಟಿಯಲ್ಲಿ ಎತ್ತುಗಳನ್ನು ಕೂಡಿ ಹಾಕುತ್ತಿದ್ದರೆಂದು ತಿಳಿದುಬಂದಿದೆ.

ಪಾಪಯ್ಯನಮಟ್ಟಿ:

ಹುಣಸೆಕಟ್ಟೆಯ ಆಗ್ನೆಯಕ್ಕೆ ಇರುವುದೇ ಪಾಪಯ್ಯನಮಟ್ಟಿ. ಮಟ್ಟಿಯ ಪಶ್ಚಿಮಕ್ಕೆ ಚಿನ್ನದ ಹಾಗೂ ಕಬ್ಬಿಣದ ನಿಕ್ಷೇಪವಿರುವ ಅಜ್ಜನಗುಡ್ಡವಿದೆ. ಸ್ಥಳೀಯರು ಹೇಳುವ ಪ್ರಕಾರ ಪಾಪಯ್ಯನಮಟ್ಟಿಯಲ್ಲಿ ಹಿಂದಿನ ಕಾಲದಲ್ಲಿ ಜನರು ವಾಸವಾಗಿದ್ದರು ಮತ್ತು ವಾಸವಿದ್ದ ಪ್ರದೇಶಕ್ಕೆ ಬಾಗೇಪಟ್ಟಣವೆಂದು ಕರೆಯುತ್ತಿದ್ದರೆಂಬ ಮಾಹಿತಿ ದೊರಕಿದೆ.

ಬಯಲುಬಂಡೆ ಚಿತ್ರಗಳ ಮಹತ್ವ:

ಬಯಲುಬಂಡೆ ಚಿತ್ರಗಳು ಅಂದಿನ ಮಾನವ ಬದುಕಿಗೆ ಹಿಡಿದ ಕನ್ನಡಿ:

ಪ್ರಸುತ್ತ ಜಿಲ್ಲಾ ಪರಿಸರದಲ್ಲಿ ಕಂಡುಬಂದಿರುವ ನವ ಶಿಲಾಯುಗದ ಮತ್ತು ಬೃಹತ್ ಶಿಲಾಯುಗದ ಅವಶೇಷಗಳು, ಬಯಲುಬಂಡೆ ಚಿತ್ರಗಳ ಕಾಲ ನಿರ್ಣಯದಲ್ಲಿ ಮಹತ್ವದ್ದು. ಬಯಲುಬಂಡೆ ಚಿತ್ರಗಳು ಮಾನವನಿಗೆ ಹತ್ತಿರವಾದ ಬದುಕನ್ನು ಕಟ್ಟಿಕೊಡುವಲ್ಲಿ ಸಫಲವಾಗಿದೆ. ಬೂದಿದಿನ್ನೆಗಳಲ್ಲಿ ಪ್ರಾಣಿಗಳ ಮೂಳೆಗಳು ಸಿಗುತ್ತವೆ. ಅದು ಯಾವ ಪ್ರಾಣಿಯದ್ದು ಎಂದು ಹೇಳಬಹುದು. ಆದರೆ ಪ್ರಾಣಿ ಮತ್ತು ಮನುಷ್ಯನ ಸಂಬಂಧವನ್ನು ತಿಳಿಯುವುದು ಕಷ್ಟಸಾಧ್ಯ.

ಶಿಲಾಯುಗದ ಮಾನವನು ಎತ್ತು, ಗೂಳಿ, ಆಡು, ಎಮ್ಮೆ, ಕುದುರೆ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದನೆಂದು ಪ್ರಸುತ್ತ ಅಧ್ಯಯನದಿಂದ ತಿಳಿದು ಬಂದಿದೆ. ಮನುಷ್ಯರು ಕೈ-ಕೈಯನ್ನು ಹಿಡಿದು ಕುಣಿಯುತ್ತಿರುವ, ಭಯ ಭೀತಿಯಿಂದ ಹೊರಬರಲು ಮಂಡಲಗಳನ್ನು ಹಾಕಿರುವ, ಕಲ್ಮನೆ ಆಟವಾಡಲು ಕುಳಿಗಳನ್ನು ಮಾಡಿರುವ,

ಕುದುರೆಯ ಮೇಲೆ ಸವಾರಿ ಮಾಡುತ್ತಿರುವ ಬಯಲುಬಂಡೆ ಚಿತ್ರಗಳು ಅಂದಿನ ಮಾನವನ ಬದುಕಿಗೆ ಹಿಡಿದಂತ ಕನ್ನಡಿ ಎಂದು ಹೇಳಬಹುದು.

ಕಲಾಭಿರುಚಿಯಿಂದ ಮಹತ್ವದ್ದು:

ಶಿಲಾಯುಗದ ಮಾನವನು ಮಡಕೆ, ಆಯುಧಗಳನ್ನು ತಯಾರಿಸಿಕೊಳ್ಳುತ್ತಿದ್ದನು. ಸತ್ತ ಶವವನ್ನು ಶಿಸ್ತು ಬದ್ಧವಾಗಿ ಸಮಾಧಿ ಮಾಡಿಕೊಳ್ಳುವ ಕಲೆಯನ್ನು ರೂಡಿಸಿಕೊಂಡಿದ್ದನು. ಅದೇ ರೀತಿಯಾಗಿ ಅವರ ಭಾವನೆಯನ್ನು ವ್ಯಕ್ತ ಪಡಿಸಲು ವರ್ಣಚಿತ್ರ ಮತ್ತು ಬಯಲುಬಂಡೆ ಚಿತ್ರಗಳನ್ನು ಕಲ್ಲು ಬಂಡೆಗಳ ಮೇಲೆ ಬಿಡಿಸಿದ್ದಾನೆ. ಈವೆಲ್ಲವೂ ಕಲಾಭಿರುಚಿಯನ್ನು ತೋರಿಸುತ್ತವೆ. ಬಯಲುಬಂಡೆ ಚಿತ್ರಗಳಲ್ಲಿ ಕಡ್ಡಿಚಿತ್ರಗಳು ಮತ್ತು ಉತ್ಕೃಷ್ಟಚಿತ್ರಗಳನ್ನು ರಚಿಸಿ ಅವರ ಕಲೆಯನ್ನು ಅಭಿವೃದ್ಧಿಪಡಿಸಿದ್ದಾರೆ.

ಬಯಲುಬಂಡೆ ಚಿತ್ರಗಳು ಅಲಿಖಿತ ಶಾಸನಗಳೆನಿಸಿಕೊಂಡಿವೆ:

ಶಿಲಾಯುಗದ ಸಂಸ್ಕೃತಿಯ ಕಾಲದಲ್ಲಿ ಲಿಖಿತ ಆಧಾರಗಳು ಸಿಗುವುದಿಲ್ಲವಾದ್ದರಿಂದ ಪ್ರಸುತ್ತ ಅಧ್ಯಯನದಲ್ಲಿ ಬಯಲುಬಂಡೆ ಚಿತ್ರಗಳು ಮುಖ್ಯ. ಮಡಕೆಗಳು, ಕಪ್ಪೆಚಿಪ್ಪು, ಮಣಿಗಳು, ಆಯುಧಗಳಂತೆ ಬಯಲುಬಂಡೆ ಚಿತ್ರಗಳು ಕೂಡ ಅಲಿಖಿತವೇ. ಶಾಸನಗಳಲ್ಲಿ ಒಬ್ಬ ರಾಜ ಬಿರುದನ್ನು ಧರಿಸಿ ದೇವಸ್ಥಾನಗಳನ್ನು ನಿರ್ಮಿಸಿ ಧಾನ-ಧರ್ಮವನ್ನು ನೀಡಿ, ಉಜ್ವಲ ಸಾಮ್ರಾಜ್ಯ ಸ್ಥಾಪಿಸಿದ ಕುರಿತು ಮಾಹಿತಿ ತಿಳಿಸಿಕೊಡುತ್ತವೆ. ಆದರೆ ಬಯಲುಬಂಡೆ ಚಿತ್ರಗಳು ಅವುಗಳಿಗಿಂತ ಭಿನ್ನವಾಗಿವೆ. ಅಂದಿನ ಕಾಲದ ಜನರಿಗೆ ಲಿಪಿ, ಗೊತ್ತಿಲ್ಲವಾಗಿದ್ದರಿಂದ ಚಿತ್ರಗಳ ಮೂಲಕ ತಿಳಿಯ ಪಡಿಸಲು ಪ್ರಯತ್ನಿಸಿದ್ದಾನೆ. ಉದಾ:- ಬೇಟೆ ಚಿತ್ರಗಳು, ಕಾದಾಡುತ್ತಿರುವ ಎತ್ತುಗಳು, ನೃತ್ಯ ಚಿತ್ರಗಳು, ಅಲಿಖಿತ ಶಾಸನಗಳೆನ್ನಿಸಿಕೊಂಡಿವೆ.

ಪಶುಸಂಗೋಪನೆಯಿಂದ ಮಹತ್ವದ್ದು:

ನವ ಶಿಲಾಯುಗಕ್ಕಿಂತ ಬೃಹತ್ ಶಿಲಾಯುಗದಲ್ಲಿ ಪಶುಸಂಗೋಪನೆ ಅತೀ ಹೆಚ್ಚು, ಅದಕ್ಕೆ ಬಯಲುಬಂಡೆ ಚಿತ್ರಗಳು ಸಾಕ್ಷಿ. ಬೃಹತ್ ಶಿಲಾಯುಗದ ಮಾನವನು ಎತ್ತು, ಗೂಳಿ, ಜೊತೆಗೆ ಆಡು, ಎಮ್ಮೆ, ಕುದುರೆ ಮುಂತಾದ ಪ್ರಾಣಿಗಳನ್ನು ಕೂಡ ಸಾಕುತ್ತಿದ್ದನೆಂದು ಬಯಲುಬಂಡೆ ಚಿತ್ರಗಳಿಂದ ತಿಳಿದುಬಂದಿದೆ. ಇಂದು ಕಂಡು ಬರುವ ಬಯಲುಬಂಡೆ ಚಿತ್ರಗಳ ನೆಲೆಗಳ ಪರಿಸರದಲ್ಲಿ ಹುಲ್ಲುಗಾವಲು, ಹಳ್ಳ, ಬೆಟ್ಟಗಳು ಹಾಗೂ ಕೃಷಿಗೆ ಯೋಗ್ಯವಾದ ಜಮೀನುಗಳಿರುವುದರಿಂದ ಪಶುಸಂಗೋಪನೆಗೆ ಅನುಕೂಲವಾಗಿತ್ತೆಂದು ಹೇಳಬಹುದು.

ಲೈಂಗಿಕ ಪ್ರಜ್ಞೆಯಿಂದ ಮಹತ್ವದ್ದು:

ಲೈಂಗಿಕ ಕ್ರಿಯೆಯನ್ನು ಬಯಲುಬಂಡೆ ಚಿತ್ರಗಳಿಂದ ತಿಳಿಯಬಹುದು. ಹಂಪಿ ಮತ್ತು ಹಿರೇಬೆನಕಲ್ಲು ವರ್ಣಚಿತ್ರಗಳಲ್ಲಿ ಇರುವಷ್ಟು ಲೈಂಗಿಕ ಚಿತ್ರಗಳು ಬಯಲುಬಂಡೆಗಳ ಮೇಲಿಲ್ಲ. ಆದರೆ ಎತ್ತಿನ ಶಿಷ್ನವನ್ನು ಲೈಂಗಿಕ ಕ್ರಿಯೆಯ ಸಾಂಕೇತಿಕವಾಗಿ ತೋರಿಸಲಾಗಿದೆ. ಗೂಳಿ ಮತ್ತು ಎತ್ತಿನ ಶಿಷ್ನವನ್ನು ಕಿರು ಬೆರಳಿನಷ್ಟು ಹಾಗೂ ೩ರಿಂದ ೯ಸೆಂ.ಮೀಉದ್ದವಾದ ಶಿಷ್ನವನ್ನು ಬಿಡಿಸಿದ್ದಾರೆ. ಈ ಮೂಲಕ ಅಂದಿನ ಮನುಷ್ಯನು ಲೈಂಗಿಕ ಪ್ರಜ್ಞೆಯನ್ನು ಹೊಂದಿದ್ದನೆಂದು ಹೇಳಬಹುದು.

ತಾಂತ್ರಿಕವಾಗಿ ಮಹತ್ವದ್ದು:

ಬಯಲುಬಂಡೆ ಚಿತ್ರಗಳನ್ನು ರಚಿಸಲು ಹಿಟ್ಟುಕಲ್ಲು, ಮೊಣಚಾದ ಕಲ್ಲು ಮತ್ತು ಕಬ್ಬಿಣವನ್ನು ಬಳಸಿದ್ದನೆಂದು ಬಯಲುಬಂಡೆ ಚಿತ್ರಗಳ ಮೂಲಕ ತಿಳಿಯಲಾಗಿದೆ. ಉಪಕರಣಗಳನ್ನು ಬಳಸಿ ಬಂಡೆಗಳ ಮೇಲೆ ಗೀರಿ ಮತ್ತು ಕುಟ್ಟುವುದರ ಮೂಲಕ ಬಯಲುಬಂಡೆ ಚಿತ್ರಗಳನ್ನು ರಚಿಸಿದ್ದಾನೆ. ಪ್ರಾಣಿಚಿತ್ರಗಳನ್ನು ಚೌಕ, ಆಯತಕಾರದಲ್ಲಿ ರಚಿಸಿರುವನು. ಕೆಲವು ಚಿತ್ರಗಳನ್ನು ಕಡ್ಡಿ ರೂಪದಲ್ಲಿ ರಚಿಸಿದ್ದರೆ, ಇನ್ನೂ ಕೆಲವನ್ನು ಉತ್ಕೃಷ್ಟವಾಗಿ ಕುಟ್ಟಿ ರಚಿಸಿದ್ದಾರೆ. ಚಿತ್ರಗಳನ್ನು ರಚಿಸಲು ಕಲ್ಲಿನ ಕಪ್ಪು ಮತ್ತು ಕೆಂಪುಛಾಯಾ ಮುಖವುಳ್ಳ ಭಾಗವನ್ನು ಆಯ್ಕೆಮಾಡಿಕೊಂಡಿರುವುದು ಕಂಡುಬಂದಿದೆ. ಎತ್ತಿನ ಚಿತ್ರವನ್ನು ನೆಲ್ಲುಗಟ್ಲು ನೆಲೆಯಲ್ಲಿ ಎರಡು ಅಡಿ ಅಗಲ ಮತ್ತು ಎರಡು ಅಡಿ ಎತ್ತರವಿರುವಂತೆ ರಚಿಸಲಾಗಿದೆ. ಬೆಳಗಟ್ಟದ ಎದ್ದಲುಬಂಡೆ ನೆಲೆಯಲ್ಲಿ ಮೂರು ಇಂಚು ಅಗಲ ಮತ್ತು ಮೂರು ಇಂಚು ಎತ್ತರದ ಪ್ರಮಾಣದಲ್ಲಿ ಕುದುರೆಯ ಚಿತ್ರವನ್ನು ರಚಿಸಿರುವುದು, ಆತನ ಹಿಡಿತವನ್ನು ತೋರಿಸುವುದು. ಎತ್ತಿನ ಭುಜವನ್ನು ದೇಹದ ಮಧ್ಯೆ, ಗೂಳಿಯ ಭುಜವನ್ನು ಕುತ್ತಿಗೆ ಹಿಂಭಾಗದಲ್ಲಿ ವಾಲಿರುವಂತೆ ಹಾಗೂ ಕೋಡಿಗೆ ಹೊಂದಿಕೊಂಡಿರುವಂತೆ ರಚಿಸಿದ್ದರಿಂದ ಎತ್ತು ಮತ್ತು ಗೂಳಿಯನ್ನು ಗುರುತಿಸಲು ಸಾಧ್ಯವಾಗಿರುವುದು.

ಧಾರ್ಮಿರ್ಕವಾಗಿ ಮಹತ್ವದ್ದು:

ಧಾರ್ಮಿಕ ವಿಚಾರಗಳನ್ನು ಹೇಳುವಂತಹವುಗಳಲ್ಲಿ ಅಷ್ಟಮಂಡಲ, ದಶಮಂಡಲ, ಪಾದಾಕೃತಿ, ಮಾಂತ್ರಿಕ ಮನುಷ್ಯನ ಚಿತ್ರಗಳು ಪ್ರಮುಖವು. ಇವುಗಳು ಬೆಳಗಟ್ಟ, ದೊಡ್ಡಗಟ್ಟ, ಪೇಲೂರಹಟ್ಟಿ, ಸಂಗೇನಹಳ್ಳಿ, ನೆಲೆಗಳಲ್ಲಿ ಕಾಣಬಹುದು. ಈ ಚಿತ್ರಗಳು

ಬೃಹತ್ ಶಿಲಾಯುಗಕ್ಕೆ ಸೇರಿವೆ. ಮಾಂತ್ರಿಕ ಮನುಷ್ಯ ಚಿತ್ರದಲ್ಲಿ ಆಯತಾಕಾರದ ಎದೆ ಭಾಗವಿದೆ. ಎದೆಯೋಳಗೆ ಲಂಭವಾಗಿ ಛೇಧಿಸುವ ಎರಡು ಅಡ್ಡಗೆರೆಗಳಿವೆ. ಎದೆಯ ಕೆಳಭಾಗದಲ್ಲಿ ವೃತ್ತಕಾರದ ಹೊಟ್ಟೆಭಾಗವಿದ್ದು, ಹೊಟ್ಟೆಯ ಕೆಳಗೆ ಕಾಲುಗಳು ಚಿಕ್ಕದಾಗಿದ್ದು, ಪಾದಗಳು ವಿರುದ್ಧ ದಿಕ್ಕಿಗೆ ಮುಖಮಾಡಿವೆ. ಎಡ ಮತ್ತು ಬಲಗೈಯಲ್ಲಿ ಹಾವನ್ನು ಹಿಡಿದು ನಿಂತಿದ್ದಾನೆ. ಈ ರೀತಿಯಾದ ಚಿತ್ರ ಮಾಂತ್ರಿಕ ಮನುಷ್ಯನೆಂದು ಸೂಚಿಸುವುದು. ಬೆಳಗಟ್ಟದ ಎದ್ದಲು ಬಂಡೆಯ ನೆಲೆಯಲ್ಲಿ ಏಳು ಇಂಚು ಉದ್ದದ ಎರಡು ಪಾದಾಕೃತಿಗಳಿವೆ. ಈ ರೀತಿಯಾಗಿ ದೊಡ್ಡಗಟ್ಟ ನೆಲೆಯಲ್ಲಿ ಕಾಣಬಹುದು. ಪಾದಗಳನ್ನು ಪೂಜ್ಯನೀಯ ಭಾವನೆಯಲ್ಲಿ ನೋಡಿರುವ ಸಾಧ್ಯತೆಗಳಿವೆ.

೪.೯. ನಂಬಿಕೆ

ಮನುಷ್ಯನ ವೈಯಕ್ತಿಕ ವಿಚಾರಗಳ ತಳಹದಿಯ ಮೇಲೆ ನಂಬಿಕೆ ನಿಂತಿರುವುದು. ಪ್ರಾಗಿತಿಹಾಸದಲ್ಲಿ ವರ್ಣಚಿತ್ರಗಳು ನಾಶವಾಗಭಾರದೆಂದು ಕಲ್ಲಾಸರೆ ಮತ್ತು ಗವಿಗಳಲ್ಲಿ ಬಿಡಿಸಿದ್ದಾರೆ. ಈ ವಿಚಾರದಲ್ಲಿ ಶಾಶ್ವತವಾಗಿ ಉಳಿಯುವುದೆಂಬುವುದು ನಂಬಿಕೆಯಾಗುತ್ತದೆ. ಮಂಡಲದ ಚಿತ್ರಗಳನ್ನು ಬಿಡಿಸುವುದು ಮಾಂತ್ರಿಕತೆಯನ್ನು ಸೂಚಿಸುತ್ತದೆ. ಪಾದಗಳ ಗೀರುಚಿತ್ರಗಳಲ್ಲಿ ಪಾದಗಳನ್ನು ನಕ್ಷತ್ರಕ್ಕೆ ಕಟ್ಟಿಹಾಕಿರುವುದು ಧಾರ್ಮಿಕವಾಗಿ ಮಹತ್ವದ್ದು. ಈ ರೀತಿ ಹಿರಿಯೂರಿನ ಮಾಳಪ್ಪನಗುಡ್ಡದಲ್ಲಿ ಕಾಣಬಹುದು. ತುರುವನೂರು, ಹಿರಿಯೂರು, ಭೀಮಸಮುದ್ರ ಪ್ರದೇಶಗಳಲ್ಲಿ ಬಂಡೆಗಳ ಮೇಲೆ ೨ಅಡಿ ಉದ್ದದ ಪಾದಗಳನ್ನು ಕುಟ್ಟಿ ಮೂಡಿಸಲಾಗಿದೆ. ಈ ಚಿತ್ರಗಳು ಭೀಮನ ಪಾದಗಳಿರಬೇಕೆಂದು ಇಂದಿನ ಜನರು ನಂಬಿದ್ದಾರೆ. ಬೃಹತ್‌ಶಿಲಾಯುಗದ ಸಮಾಧಿಗಳು ಮೌರ್ಯರ, ಪಾಂಡವರ ಮನೆಗಳಿರಬೇಕು, ಗಾದ್ರಿಪಾಲನಾಯಕರ ಸಮಾಧಿಗಳಿರಬೇಕು, ಜುಂಜಪ್ಪನ ಸಮಾಧಿಗಳಾಗಿರಬೇಕು ಎಂಬುದಾಗಿ ಇಂದಿನ ಜನರು ನಂಬಿದ್ದಾರೆ. ಅದರೆ ಸಮಾಧಿಗಳು ಬೃಹತ್ ಶಿಲಾಯುಗದಲ್ಲಿ ರಚಿತಗೊಂಡಿವೆ ಎಂಬುದು ಸತ್ಯ. ಶವಗಳನ್ನು ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದಲ್ಲಿ ನೇರವಾಗಿ ಹೂಳುವುದು, ಮೂಳೆಗಳನ್ನು ಸಂಗ್ರಹಿಸಿ ಹೂಳುವುದು, ಮಡಕೆಗಳಲ್ಲಿ ಮೂಳೆ ಮತ್ತು ಅಸ್ಥಿಗಳನ್ನು ಇಡುವುದು, ಸಂಪ್ರದಾಯವಾದರೆ ಶವವನ್ನು ದಕ್ಷಿಣೋತ್ತರವಾಗಿ, ಪೂರ್ವಾಭಿಮುಖವಾಗಿ, ಉತ್ತರಾಭಿಮುಖವಾಗಿ ಇರುವಂತೆ ಸಮಾಧಿ ಮಾಡುವುದು ನಂಬಿಕೆ. ಶವದ ಸುತ್ತಲೂ ಕುಡಿಯುವುದಕ್ಕೆ ನೀರಿನ ಲೋಟಗಳು, ಧಾನ್ಯ ಸಂಗ್ರಹದ ಮಡಕೆಗಳನ್ನು ಇಡುವುದು, ಸತ್ತ ವ್ಯಕ್ತಿಯ ಆತ್ಮವು ಹೊರಗೆ ಬಾರದೆ ಅದೇ ಕುಣಿಯಲ್ಲಿ ಇರಲಿ ಎಂಬುದು ಒಂದು

ನಂಬಿಕೆಯಾಗಿದೆ. ಇದ್ದಾಗ ಅನುಭವಿಸುತ್ತಿದ್ದ ವಸ್ತುಗಳನ್ನು ಸತ್ತಾಗಲೂ ಅನುಭವಿಸಲಿ ಎಂದು ಬೃಹತ್ ಶಿಲಾಯುಗದ ಜನರು ಶವದ ಸುತ್ತಲೂ ಮಡಕೆ ಮತ್ತು ಆಹಾರ ಧಾನ್ಯಗಳನ್ನು ಇಡುತ್ತಿದ್ದರು ಎಂಬುದು ಮತ್ತೊಂದು ನಂಬಿಕೆ. ಟಿ.ನರಸೀಪುರ, ತೆಕ್ಕಲಕೋಟೆ ನೆಲೆಯ ಉತ್ಖನನದಲ್ಲಿ ತಲೆಯಾನಿಕೆ ಸಿಕ್ಕಿರುವುದು ಸತ್ತ ವ್ಯಕ್ತಿಯ ತಲೆಯ ಕದಲಬಾರದೆಂಬ ಉದ್ದೇಶ ಇರಬೇಕು. ಇಂದು ನಮ್ಮ ಹಿರಿಯರು ಸುರಪಾನ ಕುಡಿಯುತ್ತಿದ್ದರು, ಧೂಮಪಾನ ಮಾಡುತ್ತಿದ್ದರು, ಇಷ್ಟವಾದ ಆಹರವನ್ನು ಸೇವಿಸುತ್ತಿದ್ದರು ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಂತಹ ವಸ್ತುಗಳನ್ನು ವರ್ಷದ ಹಿರಿಯರ ಹಬ್ಬದಲ್ಲಿ ಸಮಾಧಿಯ ಮೇಲೆ ಇಟ್ಟು ಬರುತ್ತೇವೆ. ಇದೇ ರೀತಿ ಬೃಹತ್ ಶಿಲಾಯುಗದ ಜನರು ಅವರಿಗೆ ಇಷ್ಟವಾದ ವಸ್ತುವನ್ನು ಇಟ್ಟಿರಬಹುದು. ಬೃಹತ್ ಶಿಲಾಯುಗದಲ್ಲಿ ಸಮಾಧಿಗಳ ರಚನೆಯು ಗೊತ್ತಾದ ಒಂದೇ ಸ್ಥಳದಲ್ಲಿ ನಡೆಯುತ್ತಿತ್ತು. ಇಂದಿನ ರೀತಿ ಸಮುದಾಯಗಳಿಗೆ ಒಂದು ಸ್ಮಶಾನಗಳು ಇರಲಿಲ್ಲ. ಅಂದರೆ ಬೃಹತ್ ಶಿಲಾಯುಗದ ಜನರು ಒಂದೇ ಗುಂಪಿನವರೆಂದು ಅರ್ಥೈಸಬಹುದು. ಚಿತ್ರದುರ್ಗ ಜಿಲ್ಲೆಯ ನೆರೇನಾಳ್, ಪಾಲವ್ವನಹಳ್ಳಿ, ತುರುವನೂರು, ಬೆಳಗಟ್ಟದಲ್ಲಿ ೩ ಶಿಲಾವೃತ್ತ ಗೋರಿಗಳು ಒಂದರ ಪಕ್ಕದಲ್ಲಿ ತ್ರಿಭುಜಾಕಾರದಲ್ಲಿವೆ. ಈ ರೀತಿಯದ್ದು, ಒಂದೇ ಕುಟುಂಬದವರ ಸಮಾಧಿಗಳಿರಬೇಕೆಂಬುವುದು ಅಭಿಪ್ರಾಯ. ಡಾಲ್ಮೆನ್ ಸಿಸ್ಟ್ ಸಮಾಧಿಯ ರಚನೆಯಲ್ಲಿ ಕಿಂಡಿ ಮತ್ತು ಆದಿಕೋಣೆ ವ್ಯವಸ್ಥೆಯನ್ನು ಅಳವಡಿಸಿರುತ್ತಾರೆ. ಈ ರೀತಿಯಲ್ಲಿ ಪ್ರಸ್ತುತ ಜಿಲ್ಲಾ ಪರಿಸರದಲ್ಲಿನ ಶಿಲಾಗೋರಿಗಳಲ್ಲಿ ಕಂಡುಬಂದಿವೆ. ಯಾವುದೇ ಸಂದರ್ಭದಲ್ಲಿ ಆತ್ಮವು ಹೊರಹೋಗಿ ಬರಲಿ ಎಂದು ಅಥವಾ ಸತ್ತ ವ್ಯಕ್ತಿಗಳ ಇಷ್ಟವಾದ ವಸ್ತುಗಳನ್ನು ಇರಿಸಿ ಹೋಗುವ ಸಲುವಾಗಿ ಮತ್ತು ಸೂರ್ಯನ ಕಿರಣ ಬೆಳಿಗ್ಗೆ ನೇರವಾಗಿ ಸಮಾಧಿಯ ಒಳಗೆ ಪ್ರವೇಶಿಸಲಿ ಎಂದು ಕಿಂಡಿ ಅಥವಾ ಆದಿಕೋಣೆ ಮಾದರಿಯನ್ನು ಸಮಾಧಿಗಳಲ್ಲಿ ಅಳವಡಿಸಿದ್ದಾರೆ. ೨ ಶವವನ್ನು ಒಂದೇ ಕುಣಿಯಲ್ಲಿ ಹೂಳುತ್ತಿದ್ದರೆಂಬುದು ಬ್ರಹ್ಮಗಿರಿ ಉತ್ಖನನದಿಂದ ತಿಳಿದು ಬಂದಿರುವುದು. ಅಂದರೆ ಗಂಡ-ಹೆಂಡತಿ ಅಥವಾ ಸಂಬಂಧಿಕರನ್ನು ಒಂದೇ ಶವಕುಣಿಯಲ್ಲಿ ಹೂಳುತ್ತಿದ್ದಿರಬೇಕು. ಇದೇ ರೀತಿಯಾದ ಹೂಳುವ ಪದ್ಧತಿ ಅಥವಾ ನಂಬಿಕೆ ಬ್ರಹ್ಮಗಿರಿ ಪಕ್ಕದ ಕಾಡುಸಿದ್ದಾಪುರದಲ್ಲಿ ಮುಂದುವರೆದಿದೆ. ಕಾಡುಸಿದ್ದಾಪುರದ ಕುರುಬ ಸಮೂದಾಯದವರು ಸತ್ತರೆ ಒಂದೇ ಶವಕುಣಿಯಲ್ಲಿ ಹೂಳುತ್ತಿರುವುದು ಅಂದಿನ ಸಮಾಜಕ್ಕೆ ಹಿಡಿದ ಕನ್ನಡಿ ಇದು. ಈ ರೀತಿಯಾಗಿ ಪ್ರಾಗಿತಿಹಾಸದ ನಂಬಿಕೆಯು ಇಂದು ಕೂಡ ಮುಂದುವರೆದುಕೊಂಡು ಬಂದಿರುವುದು ಕಾಣುತ್ತೇವೆ.

೪.೧೦. ಸಾಂಸ್ಕೃತಿಕ ಪ್ರಸರಣ

ಮಾನವರೆಲ್ಲರು ಸಂಘ ಮತ್ತು ಸಂಚಾರಿ ಜೀವಿಯಾಗಿರುವುದರಿಂದ ಸಾಂಸ್ಕೃತಿಕ ಸಂಬಂಧವನ್ನು ಹೊಂದಿರುತ್ತಾರೆ. ಸಾಂಸ್ಕೃತಿಕ ಪ್ರಸರಣವಾಗಬೇಕಾದರೆ ಸಂಚಾರ ಮುಖ್ಯವಾಗಿರುತ್ತದೆ. ಪ್ರಾಚೀನ ಮಾನವರು ಅಲೆಮಾರಿಗಳಾಗಿದ್ದರಿಂದ ಭಾರತದಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಕಾಣಸಿಗುತ್ತಿವೆ. ಬೇಟೆ, ಪಶುಸಂಗೋಪನೆ, ಪರಿಸರದಲ್ಲಿಯಾಗುವ ಬದಲಾವಣೆಗಳಿಂದ ಪ್ರಾಗಿತಿಹಾಸ ಮಾನವರು ಸಂಚರಿಸುತ್ತ ನಿರಂತರವಾಗಿ ಸಿಗುವ ನೀರು, ಶಿಲೆ, ಖನಿಜ ಹುಲ್ಲುಗಾವಲು ಪ್ರದೇಶದಲ್ಲಿ ನೆಲೆಸಿದ್ದಾರೆ. ತನ್ನ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ನದಿಯನ್ನು ದಾಟುವ, ಪ್ರಾಣಿಗಳನ್ನು ಪಳಗಿಸುವ ಕಲೆ ತಿಳಿದ ನಂತರ ಸಾಂಸ್ಕೃತಿಕ ಪ್ರಸರಣವು ವಿಸ್ತಾರಗೊಂಡಿದೆ. ಹಳೆಶಿಲಾಯುಗದಿಂದ ಆರಂಭವಾದ ಸಾಂಸ್ಕೃತಿಕ ಪ್ರಸರಣವು ಇಂದಿಗೂ ಮುಂದುವರಿಯುತ್ತಿದೆ. ಪ್ರಸ್ತುತ ಪ್ರಾಗೈತಿಹಾಸಿಕ ನೆಲೆಗಳಲ್ಲಿ ದೊರೆತಿರುವ ಅವಶೇಷಗಳನ್ನು ಆಧರಿಸಿ ಸಾಂಸ್ಕೃತಿಕ ಪ್ರಸರಣವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಪ್ರಾರಂಭಿಕ ಮಾನವನ ವರ್ತನೆಯಲ್ಲಿ ಬದಲಾವಣೆಗಳು ಕಂಡು ಬಂದಿದ್ದು ಆಫ್ರಿಕಾದಲ್ಲಿ. ಓಲ್ಡೋವಾನ್ ನೆಲೆಯು ಆಫ್ರಿಕಾದ ಮೊದಲ ಆಯುಧ ತಯಾರಿಕಾ ಉದ್ದಿಮೆಯಾಗಿದ್ದು, ಕೋರ್ ಚಾಪರ್, ಡಿಸ್ಕಾಯಿಡ್‌ಗಳು, ಫ್ಲೇಕ್ಸ್, ಸ್ಕ್ರೆಪರ್‌ಗಳು ೨.೫ ಮಿಲಿಯನ್ ವರ್ಷಗಳ ಹಿಂದೆ ತಯಾರುಗೊಂಡಿವೆ[೧೬೦]. ಅಂದರೆ ಹೋಮೋಎರಕ್ಟಸ್ ಮಾನವನು ದ್ವಿಮುಖ ಕೊಡಲಿ(ಅಶ್ಯೂಲಿಯನ್) ತಯಾರು ಮಾಡುವುದಕ್ಕಿಂತ ಮುಂಚೆ ಆದಿ ಅಶ್ಯೂಲಿಯನ್ ಸಂಸ್ಕೃತಿ ಆಫ್ರಿಕಾದಲ್ಲಿ ನೆಲೆಗೊಂಡಿತ್ತೆಂಬುದು ಧೃಢವಾಗಿದೆ[೧೬೧]. ಆದಿ ಅಶ್ಯೂಲಿಯನ್ ಸಂಸ್ಕೃತಿಯ ನೆಲೆಗಳು ಝರಿಗಳ ಬದಿಗಳ ಪಕ್ಕದಲ್ಲಿದ್ದು, ಝರಿಗಳು ಬತ್ತಿದ ನಂತರ ವಸತಿ ನೆಲೆಗಳು ಅವಸಾನಗೊಂಡಿವೆ[೧೬೨]. ತರುವಾಯ ಜನರು ವಲಸೆ ಹೋಗಿದ್ದಾರೆ. ಹಳೆಶಿಲಾಯುಗದ ಆಯುಧ, ಪ್ರಾಣಿ, ಮತ್ತು ಸಸ್ಯಗಳನ್ನು ಆಧರಿಸಿ ಆಫ್ರಿಕ ಮತ್ತು ಭಾರತದ ನಡುವೆ ಸಂಪರ್ಕವಿತ್ತೆಂದು ತರ್ಕಿಸಲಾಗಿದೆ[೧೬೩]. ಅಲ್ಲದೆ ಭೌತಿಕ ಮಾನವಶಾಸ್ತ್ರೀಯ ಅಧ್ಯಯನಗಳು ಭಾರತೀಯರು ಆಫ್ರಿಕಾದಿಂದ ಬಂದವರೆಂದು ಬೆಟ್ಟು ಮಾಡಿ ತೋರಿಸುತ್ತಿವೆ[೧೬೪]. ಸಂಶೋಧಕ ಲೀಕೆಯವರು ಆಫ್ರಿಕಾ ಮತ್ತು ಭಾರತದ ಜೀವರಾಶಿಗಳು ಒಂದೇ ಬಗೆಯಲ್ಲಿವೆ ಎಂದು ಉಲ್ಲೇಖಿಸಿದ್ದಾರೆ[೧೬೫]. ಇವುಗಳನ್ನು ಆಧರಿಸಿ ಭಾರತಕ್ಕೆ ಸಮುದ್ರ ಅಥವಾ ಭೂ ಮಾರ್ಗಗಳ ಮೂಲಕ ಬಂದಿದ್ದಾರೆಂದು ಸ್ಪಷ್ಟಪಡಿಸಿದ್ದೇನೆ.

ಹಳೆಶಿಲಾಯುಗ:

ನರ್ಮದಾ, ಗೋದಾವರಿ, ಕೃಷ್ಣ, ತುಂಗಭದ್ರ, ವೇದಾವತಿ, ಕಾವೇರಿ ನದಿಗಳ ಬಯಲಿನಲ್ಲಿ ಹಳೆಶಿಲಾಯುಗದ ಅವಶೇಷಗಳು ಶೋಧಿತಗೊಂಡಿವೆ. ನರ್ಮದಾ ಮತ್ತು ಗೋದಾವರಿ ನದಿಯ ಉತ್ತರ ಭಾಗದಲ್ಲಿ ಹಾಗೂ ಕೃಷ್ಣ , ತುಂಗಭದ್ರ, ಕಾವೇರಿ ನದಿಗಳ ದಕ್ಷಿಣ ಭಾಗದಲ್ಲಿ ಹಳೆಶಿಲಾಯುಗದ ಆಯುಧಗಳು ದೊರೆತಿವೆ. ಅಂದರೆ ಉತ್ತರದವರು ದಕ್ಷಿಣಕ್ಕೆ, ಕೃಷ್ಣನದಿಯಿಂದ ದಕ್ಷಿಣದವರು ಉತ್ತರದ ಕಡೆ ವಲಸೆ ಹೋಗದೆ ಆಯಾ ಸ್ಥಳದಲ್ಲಿ ವಾಸವಾಗಿದ್ದಾರೆ ಎಂದು ಅರ್ಥೈಸಲಾಗಿದೆ. ನರ್ಮದಾ, ಗೋದಾವರಿ, ಕೃಷ್ಣ ನದಿಗಳ ಬಯಲು ಫಲವತ್ತಾಗಿದ್ದು, ಹಳೆಶಿಲಾಯುಗದವರಿಗೆ ಅವಶ್ಯಕವಾದ ಸಂಪನ್ಮೂಲಗಳು ಹೆಚ್ಚಿನ ಪ್ರಮಾಣದಲ್ಲಿ ಸಿಗುವ ಕಾರಣದಿಂದ ಕಮ್ಮಟ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದಾರೆ. ತುಂಗಭದ್ರ, ವೇದಾವತಿ ಹಾಗೂ ಕಾವೇರಿ ನದಿಗಳ ಬಯಲಿನಲ್ಲಿ ಕಮ್ಮಟ ನೆಲೆಗಳಿಲ್ಲ. ಈ ನದಿಗಳ ಬಯಲಿನಲ್ಲಿ ಕಡಿಮೆ ಸಂಖ್ಯೆಯಲ್ಲಿ ಆಯುಧಗಳು ದೊರೆತಿವೆ. ಅಲ್ಲದೆ ಹುಣಸಗಿ ನೆಲೆಯಲ್ಲಿರುವ ಆಯುಧಗಳಷ್ಟು ಪ್ರಸ್ತುತ ಆಯುಧಗಳು ಅರಿತವಾಗಿಲ್ಲ. ಸಂಪನ್ಮೂಲಗಳ ಕೊರತೆ ಅದಕ್ಕೆ ಕಾರಣವಾಗಿದೆ. ಈ ಕಾರಣದ ಜೊತೆಗೆ ಬತ್ತಿಹೋಗುವ ನದಿಗಳಿರುವ ಕಾರಣ ದಕ್ಷಿಣದವರು ಉತ್ತರದ ಕಡೆ ವಲಸೆ ಹೋಗಿದ್ದಾರೆಂದು ಖಚಿತಪಡಿಸಲಾಗಿದೆ. ಹುಣಸಗಿ, ಸಾಲ್ವಡಗಿ, ಕೋವಳ್ಳಿ, ಮರಳುಭಾವಿ ಮೊದಲಾದ ಕಮ್ಮಟ ನೆಲೆಗಳು ಉತ್ತರ ಕರ್ನಾಟಕದಲ್ಲಿವೆ. ಆದುದರಿಂದ ಉತ್ತರ ಕರ್ನಾಟಕದಲ್ಲಿ ಹಳೆಶಿಲಾಯುಗ ಸಂಸ್ಕೃತಿ ವಿಸ್ತಾರವಾಗಿ ಹಬ್ಬಿತ್ತೇಂದು ನಿರ್ಧರಿಸಲಾಗಿದೆ.

ಸೂಕ್ಷ್ಮ ಶಿಲಾಯುಗ:

ಕೆ. ಪದ್ದಯ್ಯ ಅವರು ಹುಣಸಗಿಯಲ್ಲಿ ಉತ್ಖನನ ಮಾಡಿ ಅಶ್ಯೂಲಿಯನ್ ಸಂಸ್ಕೃತಿಯ ಪದರದ ಮೇಲೆ ಸೂಕ್ಷ್ಮ ಶಿಲಾಯುಗದ ಶಿಲಾಯುಧಗಳನ್ನು ಪತ್ತೆಮಾಡಿದ್ದಾರೆ[೧೬]. ಸಾಲ್ವಡಗಿಯಲ್ಲಿ ದೊರೆತಿರುವ ಆಯುಧಗಳು ಅಂತ್ಯ ಹಳೆಶಿಲಾಯುಗದ ಆಯುಧಗಳಿಗಿಂತ ಭಿನ್ನವಾಗಿವೆಂದು ತಿಳಿದುಬಂದ ವಿಚಾರವಾಗಿದೆ[೧೭]. ಮರುಳುಭಾವಿ(ಗುಲ್ಬರ್ಗ)ಯಲ್ಲಿ ಕೆ. ಪದ್ದಯ್ಯ ಅವರು ಉತ್ಖನನದಲ್ಲಿ ಆದಿ, ಮಧ್ಯ, ಅಂತ್ಯಹಳೆಶಿಲಾಯುಗದ ಆಯುಧಗಳನ್ನು ಬೆಳಕಿಗೆ ತಂದಿದ್ದಾರೆ[೧೮]. ಇದೇ ನೆಲೆಯಲ್ಲಿ ಅಂತ್ಯ ಹಳೆಶಿಲಾಯುಗದ ಮೇಲ್ಪದರದಲ್ಲಿ ಸೂಕ್ಷ್ಮ ಶಿಲಾಯುಗದ ಆಯುಧಗಳನ್ನು ಶೋಧಿಸಿರುವುದು ಗಮನಾರ್ಹವಾದದ್ದು[೧೯]. ಆದ್ದರಿಂದ ಸೂಕ್ಷ್ಮ ಶಿಲಾಯುಗವು ಉತ್ತರ

ಕರ್ನಾಟಕದಲ್ಲಿ ಆರಂಭವಾಗಿದೆ ಎಂಬುದಾಗಿ ನಿರ್ಧರಿಸಲಾಗಿದೆ. ದಕ್ಷಿಣ ಕರ್ನಾಟಕದ ಸಂಗನಕಲ್ಲು[೧೬೦], ಬ್ರಹ್ಮಗಿರಿಯಲ್ಲಿ[೧೬೧] ನವಶಿಲಾಯುಗದ ಸ್ತರದ ಕೆಳಗೆ ಸೂಕ್ಷ್ಮ ಶಿಲಾಯುಗದ ಆಯುಧಗಳು ಉತ್ಖನನದಲ್ಲಿ ದೊರೆತಿವೆ. ಉಳಿದಂತೆ ದಕ್ಷಿಣ ಕರ್ನಾಟಕದಲ್ಲಿನ ವಸತಿ ನೆಲೆಗಳ ಮೇಲೆ ಹಾಗೂ ಬಯಲಿನಲ್ಲಿ ಕಂಡುಬಂದಿವೆ. ದೊರೆತಿರುವ ಆಯುಧಗಳು ಹೋಲಿಕೆಯಲ್ಲಿ ಯಾವುದೇ ವ್ಯತ್ಯಾಸಗಳಿರುವುದಿಲ್ಲ. ಆದ್ದರಿಂದ ಉತ್ತರ ಕರ್ನಾಟಕದಲ್ಲಿ ಆರಂಭವಾದ ಸೂಕ್ಷ್ಮ ಶಿಲಾಯುಗವು ದಕ್ಷಿಣ ಕರ್ನಾಟಕದಲ್ಲಿ ವಿಸ್ತಾರವಾಗಿ ಪ್ರಸರಣವಾಗಿದೆ ಎಂದು ವ್ಯಕ್ತಪಡಿಸುತ್ತೇನೆ.

ನವಶಿಲಾಯುಗ:

ಈ ಹಂತದಲ್ಲಿ ಆದಿ ನೂತನಶಿಲಾಯುಗ(ಕ್ರಿ.ಪೂ.೨೫೦೦-೧೮೦೦), ಸುಧಾರಿತ ನೂತನಶಿಲಾಯುಗ(ಕ್ರಿ.ಪೂ.೧೮೦೦-೧೪೦೦), ನೂತನ ಶಿಲಾತಾಮ್ರಯುಗ (ಕ್ರಿ.ಪೂ.೧೪೦೦-೧೦೫೦), ಎಂಬುದಾಗಿ ವಿಭಾಗಿಸಲಾಗಿದೆ[೧೬೨]. ಈ ವಿಭಾಗಳು ಸಾಂಸ್ಕೃತಿಕ ಪ್ರಸರಣವನ್ನು ತಿಳಿಸಲು ಸಹಾಯಕವಾಗುತ್ತವೆ. ಕಾಲದ ಅನ್ವಯ ಹೇಳುವುದಾದರೆ ಕೃಷ್ಣಾ ನದಿ ಬಯಲಿನ ನೆಲೆಗಳ ಕಾಲವು(ಕ್ರಿ.ಪೂ.೨೩೦೦-೧೮೦೦) ತುಂಗಭದ್ರ ಬಯಲಿನ ನೆಲೆಗಳ(ಕ್ರಿ.ಪೂ.೧೩೦೦-೮೦೦) ಕಾಲಕ್ಕಿಂತ ಪ್ರಾಚೀನವಾದವುಗಳು[೧೬೩]. ಈ ಹಿನ್ನಲೆಯಿಂದ ತಂಗಭದ್ರ ಬಯಲಿನಲ್ಲಿ ನವಶಿಲಾಯುಗದ ಸಂಸ್ಕೃತಿ ಆರಂಭಗೊಳ್ಳುವುದಕ್ಕಿಂತ ಮುಂಚೆ ಕೃಷ್ಣಾ ನದಿ ಬಯಲಿನಲ್ಲಿ ನವಶಿಲಾಯುಗವು ಆರಂಭವಾಗಿತ್ತೆಂದು ಕಾಣುತ್ತದೆ.

ಆದಿ ನೂತನಶಿಲಾಯುಗದ ಅವಶೇಷಗಳು ಸಂಗನಕಲ್ಲು, ಬ್ರಹ್ಮಗಿರಿ, ಟಿ.ನರಸೀಪುರ ಮತ್ತು ಹಳ್ಳೂರಿನಲ್ಲಿ ದೊರೆತಿವೆ[೧೬೪]. ಈ ಕಾರಣದಿಂದ ದಕ್ಕಿಣ ಕರ್ನಾಟಕದಲ್ಲಿ ನವಶಿಲಾಯುಗವು ಆರಂಭಗೊಂಡು ಕಾವೇರಿ ನದಿ ತೀರದವರೆಗೆ ವಿಸ್ತಾರವಾಗಿ ಹಬ್ಬಿರುವುದಾಗಿ ಖಚಿತಪಡಿಸುತ್ತೇನೆ. ಹಳ್ಳೂರಿನಲ್ಲಿ ದೊರೆತಿರುವ ಕಲ್ಲಿನ ಕೊಡಲಿಗಳು ಕಡಿಮೆ ಪ್ರಮಾಣದಲ್ಲಿವೆ[೧೬೫]. ಅಲ್ಲದೆ ಟಿ. ನರಸೀಪುರದಲ್ಲಿ ದೊರೆತಿರುವ ಕಲ್ಲಿನ ಕೊಡಲಿಯು ಸ್ಥಳೀಯವಾಗಿ ಸಿಗುವ ಶಿಲೆಗಳಿಂದ ತಯರಾಗಿಲ್ಲವೆಂದು ವ್ಯಕ್ತವಾಗಿದೆ[೧೬೬]. ಸಂಗನಕಲ್ಲು ನೆಲೆಯು ನವಶಿಲಾಯುಗದ ಕಲ್ಲಿನ ಕೊಡಲಿ ತಯಾರಿಕಾ ಕೇಂದ್ರವಾಗಿರುವುದರಿಂದ[೧೬೭] ಹಾಗೂ ಯಾವ ನೆಲೆಯಲ್ಲಿಯೂ ತಯಾರು ಹಂತದಲ್ಲಿರುವ ಕಲ್ಲಿನ ಕೊಡಲಿಗಳು ದೊರೆತಲ್ಲವಾದ್ದರಿಂದ ಸಂಗನಕಲ್ಲು ನೆಲೆಯಿಂದ ಆಯುಧಗಳು ಸರಬರಾಜಾಗಿವೆ ಎಂದು ದೃಢಪಡಿಸಲಾಗಿದೆ. ಜೋರ್ವೆ ಮೃತ್ಪಾತ್ರೆಗಳು ಬೂದುವರ್ಣದ

ಪಾತ್ರೆಗಳೊಂದಿಗೆ ಬಸಾಪುರ, ಸಂಗನಕಲ್ಲು, ಪಿಕ್ಲಿಹಾಳ್, ತೆಕ್ಕಲಕೋಟೆ, ಹಳ್ಳೂರು ಹಾಗೂ ಬ್ರಹ್ಮಗಿರಿಯಲ್ಲಿ ದೊರೆತಿವೆ[೧೭೮]. ಅಂದರೆ ಶಿಲಾತಾಮ್ರಯುಗದಲ್ಲಿ ಉತ್ತರ ಭಾರತದ ಸಂಸ್ಕೃತಿಯು ದಕ್ಷಿಣ ಭಾರತಕ್ಕೆ ಪರಿಚಯವಾಗಿದೆಂದು ಅರ್ಥೈಸಬಹುದು. ಟಿ.ನರಸೀಪುರ, ಹೆಮ್ಮಿಗೆ, ಮುತ್ತಲವಾಡಿ, ಪಿಕ್ಲಿಹಾಳ್‌ನಲ್ಲಿ ಕಂಡುಬಂದಿರುವ ಶಿರ ವಿಶ್ರಾಮಕಗಳು ಹೋಲಿಕೆಯಲ್ಲಿ ಒಂದೇ ರೀತಿಯಲ್ಲಿವೆ[೧೭೯]. ಚಂದೋಳಿ[೧೮೦], ಬ್ರಹ್ಮಗಿರಿ ಹಾಗೂ ತೆರೆದಾಳನಲ್ಲಿರುವ[೧೮೧] ನವಶಿಲಾತಾಮ್ರಯುಗದ ಶವಕುಣಿಯಲ್ಲಿ ದೊರೆತಿರುವ ತಾಮ್ರದ ಮಣಿಗಳು ಒಂದನೋಂದು ಹೊಲುತ್ತವೆ. ಆದ್ದರಿಂದ ಕರ್ನಾಟಕದಲ್ಲಿ ಒಂದು ನೆಲೆಯಿಂದ ಮತ್ತೋಂದು ನೆಲೆಗೆ ಸಾಂಸ್ಕೃತಿಕ ಸಂಬಂಧವಿತ್ತೆಂದು ಅರ್ಥವಾಗುತ್ತದೆ. ಗೀರಿದ, ಕುಟ್ಟಿದ ಬಯಲುಬಂಡೆ ಚಿತ್ರಗಳು ಬೆಳಗಲಿ, ಕುರುಗೋಡು, ಭಿಲ್ಲಮರಾಯಗುಡ್ಡ, ಮಸ್ಕಿ, ಜಟಂಗಿರಾಮೇಶ್ವರ[೧೮೨] ಹಾಗೂ ಸಂಗೇನಹಳ್ಳಿಕೆರೆ ಬಯಲಿನಲ್ಲಿದ್ದು, ಶಿಲಾತಾಮ್ರಯುಗಕ್ಕೆ ಸೇರಿವೆ. ಇಲ್ಲಿ ಕಂಡುಬಂದಿರುವ ಗೂಳಿಚಿತ್ರಗಳು ಹೋಲಿಕೆಯಲ್ಲಿ ಒಂದೇ ರೀತಿಯಲ್ಲಿವೆ. ಈ ಮೂಲಕ ನವಶಿಲಾತಾಮ್ರಯುಗದಲ್ಲಿ ಜನರು ಪಶುಸಂಗೋಪನೆಗಾಗಿ ಸ್ಥಳೀಯವಾಗಿ ವಲಸೆ ಜೀವನ ನಡೆಸಿದ್ದರೆಂದು ಖಚಿತವಾಗಿದೆ.

ಬೃಹತ್ ಶಿಲಾಯುಗ:

ಬೃಹತ್ ಶಿಲಾಯುಗದ ಪೂರ್ವದಲ್ಲಿ ಕಲ್ಲುಗಳಿಂದ ಸಮಾಧಿ ನಿರ್ಮಾಣಗೊಂಡಿವೆ. ತೆರದಾಳ್ ಪ್ರದೇಶದ ಶಿಲಾತಾಮ್ರಯುಗದ ನೆಲೆಯಲ್ಲಿ ಶವಕುಣಿಯ ಮೇಲೆ ಕಲ್ಲುಗಳನ್ನು ಹಾಕುವ ಪದ್ಧತಿ ಆರಂಭಗೊಂಡಿದೆ[೧೮೩]. ಈ ಮಾದರಿಯ ಸಮಾಧಿಗಳನ್ನು ಮೆಡಿಟರೇನಿಯನ್ ಜನಾಂಗವು ನಿರ್ಮಾಣ ಮಾಡಿದ್ದಾರೆ[೧೮೪]. ಈ ಜನಾಂಗವು ಯಾವ ಮಾರ್ಗದ ಮೂಲಕ ಭಾರತಕ್ಕೆ ಬಂದರು ಎಂಬುದಕ್ಕೆ ಅಭಿಪ್ರಾಯಗಳಿವೆ. ಅ.ಸುಂದರ ಅವರು ಬೃಹತ್ ಶಿಲಾಯುಗ ಕಾಲದಲ್ಲಿ ಮೆಡಿಟರೇನಿಯನ್ ಜನಾಂಗವು ಸಮುದ್ರ ಮಾರ್ಗದ ಮೂಲಕ ಭಾರತಕ್ಕೆ ಬಂದರೆಂದು ಹೇಳಿದ್ದಾರೆ[೧೮೫]. ಇದೇ ರೀತಿ ಬಿ.ಕೆ.ಗುರುರಾಜರಾವ್ ಭೂ ಮಾರ್ಗದ ಮೂಲಕ ಬಂದಿದ್ದಾರೆಂದು ತರ್ಕಿಸಿದ್ದಾರೆ[೧೮೬]. ಈ ಅಂಶಗಳನ್ನು ಗಮನಿಸಿದಾಗ ಬೃಹತ್ ಶಿಲಾಯುಗದ ಜನರು ಶಿಲಾತಾಮ್ರಯುಗದಲ್ಲಿ ದಕ್ಷಿಣ ಭಾರತವನ್ನು ಪ್ರವೇಶಿದ್ದರಿಂದ ಶಿಲಾಸಮಾಧಿ ಸಂಸ್ಕೃತಿಯು ಆರಂಭಗೊಂಡಿತ್ತೆಂದು ತಿಳಿಯಬಹುದು. ಅಲ್ಲದೆ ಬೃಹತ್ ಶಿಲಾಯುಗದಲ್ಲಿ ಸಮಾಧಿ ನಿರ್ಮಾಣ ಮಾಡಿದವರು ಸಿಥಿಯ, ಇರಾನ್ ಕಡೆಯಿಂದ ಬಂದವರೆಂದು ಬಲವಾಗಿ ನಂಬಬಹುದು. ಮೆಡಿಟರೇನಿಯನ್ ಜನಾಂಗ ಎರಡು ಮಾರ್ಗ ಬಳಸಿ ಬಂದಿರುವುದು ನಿಜ. ಸಹ್ಯಾದ್ರಿ ಬೆಟ್ಟಗಳ ಮೂಲಕ ಕರ್ನಾಟಕವನ್ನು ಪ್ರವೇಶಿಸಿದ್ದಾರೆಂಬುದು ನನ್ನ ಅಭಿಪ್ರಾಯವಾಗಿದೆ.

ಏಕೆಂದರೆ ಕೊಡಗು ಜಿಲ್ಲೆಯ ಹೆಗ್ಗಡೆಹಳ್ಳಿಯಲ್ಲಿರುವ ಶಿಲಾಸಮಾಧಿಗಳು ಆದಿ ಬೃಹತ್ ಶಿಲಾಯುಗದವಾಗಿದ್ದರಿಂದ ನನ್ನ ಅಭಿಪ್ರಾಯ ಸರಿಯೆನ್ನಿಸಿದೆ. ಹೆಗ್ಗಡೆಹಳ್ಳಿಯ ಶಿಲಾಸಮಾಧಿಗೆ ಬಳಸಿದ ಬಂಡೆಗಳು ಸ್ವಾಭಾವಿಕವಾಗಿವೆ. ಆದರೆ ಬ್ರಹ್ಮಗಿರಿ ಮತ್ತು ಹಿರೆಬೆನಕಲ್ಲು ಶಿಲಾಸಮಾಧಿಗೆ ಬಳಸಿದ ಕಲ್ಲುಗಳು ಕತ್ತರಿಸಲ್ಪಟ್ಟಿದ್ದು, ಉದ್ದವಾಗಿವೆ[೧೮೬]. ಆದ್ದರಿಂದ ಸಹ್ಯಾದ್ರಿ ಕಡೆಯಿಂದ ಬ್ರಹ್ಮಗಿರಿ ಪರಿಸರಕ್ಕೆ ವಲಸೆ ಬಂದಿರುವುದಾಗಿ ನಿರ್ಧರಿಸಲಾಗಿದೆ.

ಚಿತ್ರದುರ್ಗ ಪರಿಸರದಲ್ಲಿರುವ ಬಯಲು ಬಂಡೆ ಚಿತ್ರಗಳಲ್ಲಿ ಗೂಳಿಚಿತ್ರಗಳು ಒಂದೇ ರೀತಿಯಲ್ಲಿವೆ. ಈ ಮೂಲಕ ಬೃಹತ್ ಶಿಲಾಯುಗದ ಜನರು ಪಶುಸಂಗೋಪನೆಗಾಗಿ ವಲಸೆಯ ವೃತ್ತಿಯು ಸ್ಥಳೀಯವಾಗಿ ವಿಸ್ತಾರಗೊಂಡಿದೆ ಎಂಬುದು ನಿರ್ಧರಿತ ವಿಷಯವಾಗಿದೆ.

೪.೧೧. ಕಾಲಮಾನ

ಪ್ರಾಗಿತಿಹಾಸದಲ್ಲಿ ಹಳೆ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವ ಶಿಲಾಯುಗ ಮತ್ತು ಬೃಹತ್ ಶಿಲಾಯುಗವೆಂದು ೪ ಕಾಲಘಟ್ಟಗಳಿವೆ. ಈ ಎಲ್ಲಾ ಕಾಲಘಟ್ಟಗಳ ಮಧ್ಯೆ ಹೋಲಿಕೆಯಾತ್ಮಕ ವ್ಯತ್ಯಾಸಗಳಿವೆ. ಮೂಲಸ್ವರೂಪದ ಕಲ್ಲಿನಿಂದ ರಚನೆಯಾದ ಕೊರೆಯುವ, ಎರೆಯುವ ಆಯುಧಗಳು ಹಳೆ ಶಿಲಾಯುಗದವು. ಸೂಕ್ಷ್ಮವಾದ ನೀಳಚಕ್ಕೆಗಳನ್ನು ಹೊಂದಿರುವ ಆಯುಧಗಳು ಸೂಕ್ಷ್ಮ ಶಿಲಾಯುಗದವು. ನಯವಾದ ಕೊಡಲಿ ಮತ್ತು ಬೂದುಬಣ್ಣದ ಮಡಕೆಯನ್ನು ಬಳಸುವ ಕಾಲವೇ ನವ ಶಿಲಾಯುಗ. ಕಬ್ಬಿಣ ಹಾಗೂ ಕಪ್ಪು ಮತ್ತು ಕೆಂಪು ಬಣ್ಣದ ಮಡಕೆಗಳನ್ನು ಬಳಸುವ ಕಾಲವೇ ಬೃಹತ್ ಶಿಲಾಯುಗ. ಈ ರೀತಿ ಹೋಲಿಕೆಯ ಮೂಲಕ ಕಾಲವನ್ನು ನಿರ್ಧರಿಸಬಹುದು. ಸ್ತರಗಳನ್ನು ಆಧರಿಸಿ ಕಾಲ ನಿರ್ಧರಿಸಬಹುದಾಗಿದು. ಅತ್ಯಂತ ಕೆಳಗಿನ ಸ್ತರ ಸೂಕ್ಷ್ಮ ಶಿಲಾಯುಗದ್ದು, ಮಧ್ಯದ ಸ್ತರವು ನವ ಶಿಲಾಯುಗದ್ದು, ಮೇಲಿನ ಸ್ತರವು ಬೃಹತ್ ಶಿಲಾಯುಗದ್ದು ಎಂದು ಗುರುತಿಸಬಹುದು. ಕೆಲವೊಂದು ಸಲ ನವ ಶಿಲಾಯುಗದ ಅವಶೇಷಗಳು ಸೂಕ್ಷ್ಮ ಶಿಲಾಯುಗದ ಸ್ತರದಲ್ಲಿ ಸಿಗುವ ಸಾಧ್ಯತೆಗಳಿರುವುದರಿಂದ ಸೂಕ್ಷ್ಮವಾಗಿ ಗಮನಿಸಿ ಕಾಲವನ್ನು ಬೇರ್ಪಡಿಸುವ ಅವಶ್ಯಕತೆ ಇದೆ. ಇಂಗಾಲ ೧೪ರ ಮೂಲಕ ಕಾಲವನ್ನು ಸ್ಪಷ್ಟವಾಗಿ ನಿರ್ಧರಿಸಬಹುದು. ಆದರೆ ಹಳೆ ಶಿಲಾಯುಗಕ್ಕೆ ಸಂಬಂಧಿಸಿದಂತೆ ಹೋಲಿಕೆಯಾತ್ಮಕ ಕಾಲ ನಿರ್ಧಾರ ಮುಖ್ಯವೆನಿಸುವುದು. ಆದ್ದರಿಂದ ಹೋಲಿಕೆ ಮತ್ತು ವೈಜ್ಞಾನಿಕ ಕಾಲನಿರ್ಧಾರ ಎರಡೂ ಅತ್ಯಮೂಲ್ಯವಾದವುಗಳು.

ಬ್ರಹ್ಮಗಿರಿಯ ಸಂಸ್ಕೃತಿಯು ಕ್ರಿ.ಪೂ. ೧೦೦೦ರಿಂದ ಕ್ರಿ.ಪೂ. ೨೦೦ರವರೆಗೆ ವಿಕಾಸವನ್ನು ಹೊಂದಿತ್ತೆಂದು ತೀರ್ಮಾನಿಸಿರುವುದು ಸರಿಯಷ್ಟೇ[೧೮೮]. ಆದರೆ ಹಳೆ ಶಿಲಾಯುಗದಷ್ಟು ಇತಿಹಾಸವನ್ನು ಚಿತ್ರದುರ್ಗ ಜಿಲ್ಲಾ ಪರಿಸರವು ಹೊಂದಿರುವುದು ಗಮನಿಸಬೇಕು. ಆದಿ ಹಳೆಶಿಲಾಯುವು ೧ಲಕ್ಷದಿಂದ ೪ಲಕ್ಷ ವರ್ಷಗಳಷ್ಟು ಪೂರ್ವದ್ದು, ಮಧ್ಯ ಹಳೆಶಿಲಾಯುಗವು ೪೦ ಸಾವಿರಗಳಷ್ಟು ಪೂರ್ವದ್ದು, ಅಂತ್ಯ ಹಳೆಶಿಲಾಯುಗವು ೨೫೦೦೦ವರ್ಷಗಳ ಪೂರ್ವದ್ದು, ಅಂದರೆ ಹಳೆ ಶಿಲಾಯುಗವು ೧ ಲಕ್ಷದಿಂದ ೨೫೦೦೦ ವರ್ಷಗಳ ಪೂರ್ವದವರೆಗೆ ಆಸ್ತಿತ್ವದಲ್ಲಿತ್ತು[೧೮೯]. ಸೂಕ್ಷ್ಮ ಶಿಲಾಯುಗವು ೨೫೦೦೦ ರಿಂದ ೧೦೦೦೦ವರ್ಷಗಳ ಪೂರ್ವದಲ್ಲಿತ್ತು[೧೯೦]. ನವ ಶಿಲಾಯುಗವು ಕ್ರಿ.ಪೂ. ೨೦೦೦ರಿಂದ ಕ್ರಿ.ಪೂ. ೧೦೦೦ರವರೆಗೆ ಆಸ್ತಿತ್ವದಲ್ಲಿದ್ದು[೧೯೧], ಬೃಹತ್ ಶಿಲಾಯುಗವು ಕ್ರಿ.ಪೂ. ೧೨೦೦ರಿಂದ ಕ್ರಿ.ಪೂ. ೮೦೦ರವರೆಗೆ ಹೆಗ್ಗಡೆಹಳ್ಳಿ ಪರಿಸರದಲ್ಲಿ ಆಸ್ತಿತ್ವದಲ್ಲಿತ್ತು[೧೯೨]. ಬ್ರಹ್ಮಗಿರಿಯ ವರದಿಯ ಪ್ರಕಾರ ಕ್ರಿ.ಪೂ.೮೦೦ರಿಂದ ಕ್ರಿ.ಪೂ. ೨೦೦ರವರೆಗೆ ಬೃಹತ್ ಶಿಲಾಯುಗವು ಆಸ್ತಿತ್ವದಲ್ಲಿತ್ತೆಂದು ತಿಳಿದುಬಂದಿದೆ[೧೯೩]. ಆದ್ದರಿಂದ ಹೆಗ್ಗಡೆಹಳ್ಳಿಯಲ್ಲಿ ನೆಲೆಸಿದ್ದ ಬೃಹತ್ ಶಿಲಾಯುಗದ ಮಾನವನ ಸಮಾಧಿಯು ಬ್ರಹ್ಮಗಿರಿ ಶಿಲಾಸಮಾಧಿಗಿಂತ ಪ್ರಾಚೀನವಾದವೆಂದು, ಅಲ್ಲದೆ ಆ ಭಾಗದಿಂದ ಬ್ರಹ್ಮಗಿರಿ ಪರಿಸರಕ್ಕೆ ಬಂದಿರುವ ಸಾಧ್ಯತೆಗಳಿವೆ ಎನ್ನುವುದಕ್ಕೆ ಮತ್ತಷ್ಟು ಆಧಾರಗಳು ಸಿಗುತ್ತವೆ.

ಅಡಿಟಿಪ್ಪಣಿಗಳು

೧. ಇರ್ಫಾನ್ ಹಬೀಬ್, ಪೋರ್ವೈತಿಹಾಸ, ೨೦೦೮, ಪು-೫೨.

೨. ತಂಬಂಡ ವಿಜಯ್ ಪೂಣಚ್ಛ(ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ:೪, ೨೦೦೧, ಪು-೭೬.

೩. ಇರ್ಫಾನ್ ಹಬೀಬ್, ಪೂರ್ವೋಕ್ತ, ೨೦೦೮, ಪು-೫೨.

೪. ಅದೇ, ಪು-೫೨.

೫. ಅ.ಸುಂದರ, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, ೧೯೭೩, ಪು-೫೦.

೬. ಅದೇ, ಪು-೫೦.

೭. ಅದೇ, ಪು-೪೦, ೪೧.

೮. ಅದೇ, ಪು-೫೦.

೯. ಜಾಲತಾಣದಿಂದ ಪಡೆದ ಮಾಹಿತಿ.

೧೦. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೫೦.

೧೧. ಜಾಲತಾಣದಿಂದ ಪಡೆದ ಮಾಹಿತಿ.

೧೨. ಎಂ. ಶೇಷಾದ್ರಿ, ಟಿ.ನರಸೀಪುರ ಉತ್ಖನನ ವರದಿ, ೧೯೭೧, ಪು-೭೫.

೧೩. ಅದೇ, ಪು-೭೫.

೧೪. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಹೆಗ್ಗಡೆಹಳ್ಳಿ ಉತ್ಖನನ ವರದಿ-೧೯೯೫, ೧೯೯೬, ಪು-೩೨.

೧೫. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ), ಇತಿಹಾಸ ದರ್ಪಣ, ೨೦೧೨, ಪು.೮೦.

೧೬. ಎಂ. ಶೇಷಾದ್ರಿ, ಪೂರ್ವೋಕ್ತ, ೧೯೭೧, ಪು-೭೫.

೧೭. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ) ,ಪೂರ್ವೋಕ್ತ, ೨೦೧೨, ಪು-೮೨.

೧೮. ಅದೇ, ಪು-೮೨.

೧೯. ಇತಿಹಾಸ ದರ್ಶನ ಸಂಪುಟ-೧೧, ೧೯೯೬, ಪು-೩೨.

೨೦. ಎಸ್.ಜಿ.ರಾಮದಾಸರೆಡ್ಡಿ, ಚಿತ್ರದುರ್ಗ ಜಿಲ್ಲೆ ಪ್ರಾಕ್ಚಾರಿತ್ರಿಕ, ೨೦೦೯, ಪು-೧೫೭.

೨೧. ಅದೇ, ಪು-೧೫೭.

೨೨. ತಂಬಂಡ ವಿಜಯ್ ಪೂಣಚ್ಛ(ಸಂ), ಪೂರ್ವೋಕ್ತ, ೨೦೦೧, ಪು-೭೯.

೨೩. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೪.

೨೪. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ), ಪೂರ್ವೋಕ್ತ, ೨೦೧೨, ಪು-೮೬.

೨೫. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೫.

೨೬. ಅದೇ, ಪು-೪೫.

೨೭. ಎಸ್.ಜಿ. ರಾಮದಾಸರೆಡ್ಡಿ, ಚಿತ್ರದುರ್ಗ ಜಿಲ್ಲೆ ಪ್ರಾಕ್ಚಾರಿತ್ರಿಕ, ೨೦೦೯, ಪು-೯೪.

೨೮. ಏನ್ಸಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು-೨೨೨.

೨೯. ಅದೇ, ಪು-೨೨೨.

೩೦. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೭.

೩೧. ಅದೇ, ಪು-೩೭.

೩೨. ಅದೇ, ಪು-೩೭.

೩೩. ಅದೇ, ಪು-೩೭.

೩೪. ಎಸ್.ಜಿ. ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೯೪.

೩೫. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೭.

೩೬. ಅದೇ, ಪು-೩೭.

೩೭. ಅದೇ, ಪು-೩೮.

೩೮. ಏನ್ಸಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು-೨೨೫.

೩೯. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೮.

೪೦. ಅದೇ, ಪು-೩೮.

೪೧. ಏನ್ಸಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು-೨೨೯.

೪೨. ಅದೇ, ಪು-೨೨೪.

೪೩. ಅದೇ, ಪು-೨೨೪.

೪೪. ಅದೇ, ಪು-೨೩೧.

೪೫. ಅದೇ, ಪು-೨೩೧.

೪೬. ಅದೇ, ಪು-೨೩೧.

೪೭. ಏನ್ಸಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು-೨೩೨.

೪೮. ಅದೇ, ಪು-೨೭೭.

೪೯. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೩.

೫೦. ಅದೇ, ಪು-೪೩.

೫೧. ಅದೇ, ಪು-೪೩.

೫೨. ಅದೇ, ಪು-೪೩.

೫೩. ಏನ್ಸಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು-೨೭೭.

೫೪. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಪೂರ್ವೋಕ್ತ, ೧೯೯೬, ಗ್ರಾಫಿಟಿ ಚಿತ್ರ ಆಧಾರಿತ.

೫೫. ಅದೇ, ಪು-೧೩.

೫೬. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ), ಪೂರ್ವೋಕ್ತ, ೨೦೧೨, ಪು-೯೫.

೫೭. ಅದೇ, ಪು-೯೫.

೫೮. ಅದೇ, ಪು-೯೫.

೫೯. ಅದೇ, ಪು-೯೬.

೬೦. ಅದೇ, ಪು-೯೬.

೬೧. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೬.

೬೨. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ), ಪೂರ್ವೋಕ್ತ, ೨೦೧೨, ಪು-೧೦೦.

೬೩. ದಿವಾಕರ ಆರ್.ಆರ್(ಸಂ), ಕರ್ನಾಟಕ ಪರಂಪರೆ ಸಂಪುಟ:೧, ೨೦೦೬, ಪು-೨೩.

೬೪. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೫.

೬೫. ಜಯಣ್ಣ.ಯು, ಮೊಳಕಾಲ್ಮೂರು ತಾಲೂಕಿನ ಪುರಾತತ್ತ್ವೀಯ (ಮಹಾಪ್ರಬಂಧ) ಪರಿಸರ, ೨೦೦೨, ಪು-೨೦.

೬೬. ಚಿತ್ರದುರ್ಗ ಜಿಲ್ಲಾ ಮಾನವ ಅಭಿವೃದ್ಧಿ ವರದಿ-೨೦೧೪, ಪು-೩೬.

೬೭. ಸೂರ್ಯನಾಥ .ಯು.ಕಾಮತ್, ಕರ್ನಾಟಕ ಗ್ಯಾಸೆಟಿಯರ್:೧, ೧೯೮೨, ಪು-೧೯೬.

೬೮. ಇತಿಹಾಸ ದರ್ಶನ ಸಂಪುಟ-೨೭, ೨೦೧೨, ಪು-೮.

೬೯. ಸೂರ್ಯನಾಥ.ಯು.ಕಾಮತ್, ಪೂರ್ವೋಕ್ತ, ೧೯೮೨, ಪು-೧೯೪.

೭೦. ಅದೇ, ಪು-೧೯೪.

೭೧. ಇತಿಹಾಸ ದರ್ಶನ ಸಂಪುಟ-೨೬, ೨೦೧೧, ಪು-೧೮.

೭೨. ಸೂರ್ಯನಾಥ.ಯು.ಕಾಮತ್, ಪೂರ್ವೋಕ್ತ, ೧೯೮೨, ಪು-೧೯೮.

೭೩. ಎಸ್.ಜಿ. ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೬೮.

೭೪. ಸೂರ್ಯನಾಥ.ಯು.ಕಾಮತ್, ಪೂರ್ವೋಕ್ತ, ೧೯೮೨, ಪು-೧೯೯.

೭೫. ಅದೇ, ಪು–೧೯೯.

೭೬. ಅದೇ, ಪು–೧೯೯.

೭೭. ಅ.ಸುಂದರ, ಪೂರ್ವೋಕ್ತ, ೧೯೭೩, ಪು–೧೦.

೭೮. ಸೂರ್ಯನಾಥ.ಯು.ಕಾಮತ್, ಪೂರ್ವೋಕ್ತ, ೧೯೮೨, ಪು–೨೦೨.

೭೯. ಅದೇ, ಪು–೨೦೨.

೮೦. ಅದೇ, ಪು–೨೦೨.

೮೧. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು–೭೮.

೮೨. ಏನ್ಶಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು–೨೫೨.

೮೩. ಅದೇ, ಪು–೨೦೮.

೮೪. ಏನ್ಶಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು–೨೫೩.

೮೫. ಅ.ಸುಂದರ, ಪೂರ್ವೋಕ್ತ, ೧೯೭೩, ಪು–೩೬.

೮೬. ಅದೇ, ಪು–೪೫.

೮೭. ಏನ್ಶಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು–೨೫೩.

೮೮. ಎಸ್.ವೈ. ಸೋಮಶೇಖರ್(ಸಂ), ಬ್ರಹ್ಮಗಿರಿ, ೨೦೧೦, ಪು–೧೦.

೮೯. ಅ.ಸುಂದರ ಮತ್ತು ಷೇಕ್ ಅಲಿ, ಕರ್ನಾಟಕ ಚರಿತ್ರೆ ಸಂಪುಟ:೧, ೧೯೯೭, ಪು–೧೮೬,೧೮೭.

೯೦. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ), ಪೂರ್ವೋಕ್ತ, ೨೦೧೨, ಪು–೨೮.

೯೧. ಅದೇ, ಪು–೨೮.

೯೨. ಅದೇ, ಪು–೨೯.

೯೩. ಎಸ್.ವೈ. ಸೋಮಶೇಖರ್(ಸಂ), ಪೂರ್ವೋಕ್ತ, ೨೦೧೦, ಪು–೧೦.

೯೪. ಅದೇ, ಪು–೧೦.

೯೫. ಏನ್ಶಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು–೨೬೪.

೯೬. ಅದೇ, ಪು–೨೬೪.

೯೭. ಅದೇ, ಪು–೨೬೪.

೯೮. ಅದೇ, ಪು–೨೬೪.

೯೯. ಅದೇ, ಪು–೨೬೪.

೧೦೦. ಅದೇ, ಪು–೨೬೫.

೧೦೧. ಅದೇ, ಪು-೨೬೫.

೧೦೨. ಅದೇ, ಪು-೨೬೫.

೧೦೩. ಅದೇ, ಪು-೨೬೫.

೧೦೪. ಎಸ್.ಜಿ. ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೨೦.

೧೦೫. ಅದೇ, ಪು-೨೬.

೧೦೬. ಅದೇ, ಪು-೨೬.

೧೦೭. ಅದೇ, ಪು-೪೪.

೧೦೮. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು-೭೮.

೧೦೯. ಎಂ. ಶೇಷಾದ್ರಿ, ಪೂರ್ವೋಕ್ತ, ೧೯೭೧, ಪು-೧೯.

೧೧೦. ಅದೇ, ಪು-೧೯.

೧೧೧. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೯.

೧೧೨. ಅದೇ, ಪು-೩೯.

೧೧೩. ಅದೇ, ಪು-೩೯.

೧೧೪. ಶೇಷಾದ್ರಿ.ಎಂ, ಜಡೆಗೇನಹಳ್ಳಿ ಉತ್ಖನನ ವರದಿ:೧೯೫೭. ೧೯೬೦, ಪು-೦೫.

೧೧೫. ಅದೇ, ಪು-೦೮.

೧೧೬. ಅದೇ, ಪು-೦೮.

೧೧೭. ಅದೇ, ಪು-೦೧.

೧೧೮. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಪೂರ್ವೋಕ್ತ, ೧೯೯೬, ಪು-೧೨.

೧೧೯. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೬.

೧೨೦. ಅದೇ, ಪು-೪೭.

೧೨೧. ಅದೇ, ಪು-೪೮.

೧೨೨. ಅದೇ, ಪು-೪೮.

೧೨೩. ಏನ್ಸಿಯಂಟ್ ಇಂಡಿಯ(ಐ.ಎ.ನಂ.೪), ೧೯೪೮, ಪು-೧೮೭.

೧೨೪. ಅದೇ, ಪು-೧೮೭.

೧೨೫. ಅದೇ, ಪು-೧೮೭.

೧೨೬. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೮.

೧೨೭. ಅದೇ, ಪು-೪೯.

೧೨೮. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಪೂರ್ವೋಕ್ತ, ೧೯೯೬, ಪು-೧೫.

೧೨೯. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೭.

೧೩೦. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಪೂರ್ವೋಕ್ತ, ೧೯೯೬, ಪು-೧೫.

೧೩೧. ಅದೇ, ಪು-೧೨.

೧೩೨. ಏನ್ಷಿಯಂಟ್ ಇಂಡಿಯ(ಐ.ಎ.ನಂ.೪), ೧೯೮೪, ಪು-೧೯೧.

೧೩೩. ಶೇಷಾದ್ರಿ.ಎಂ, ಪೂರ್ವೋಕ್ತ, ೧೯೬೦, ಪು-೦೫, ೦೮.

೧೩೪. ಅದೇ, ಪು-೦೮.

೧೩೫. ಅದೇ. ಪು-೦೫.

೧೩೬. ಅದೇ, ಪು-೦೪.

೧೩೭. ಎನ್.ಎಸ್.ಶಾರದಪ್ರಸಾದ್(ಅನು), ಭಾರತದ ಪ್ರೌಢ ಇತಿಹಾಸ, ೨೦೧೨, ಪು-೦೭.

೧೩೮. ಲಕ್ಷ್ಮಣ್ ತೆಲಗಾವಿ(ಸಂ), ಹರತಿಸಿರಿ, ೧೯೮೭, ಪು-೦೩.

೧೩೯. ಅದೇ, ಪು-೦೫.

೧೪೦. ಅದೇ, ಪು-೦೫.

೧೪೧. ಅದೇ, ಪು-೦೫.

೧೪೨. ಎಸ್.ಜಿ. ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೦೫.

೧೪೩. ಅದೇ, ಪು-೧೦೭.

೧೪೪. ಲಕ್ಷ್ಮಣ್ ತೆಲಗಾವಿ(ಸಂ), ಪೂರ್ವೋಕ್ತ, ೧೯೮೭, ಪು-೦೮.

೧೪೫. ಅದೇ, ಪು-೦೮.

೧೪೬. ಎಸ್.ಜಿ. ರಾಮದಾಸರೆಡ್ಡಿ, ಪೂರ್ವೋಕ್ತ, ೨೦೦೯, ಪು-೧೫೫.

೧೪೭. ಎನ್.ಎಸ್. ಮಹಂತೇಶ್, ಹೊಸದುರ್ಗ ತಾಲೂಕು ಪರಿಸರ:ಸಾಂಸ್ಕೃತಿಕ ಅಧ್ಯಯನ, (ಮಹಾಪ್ರಬಂಧ) ೨೦೧೨, ಪು-೧೧೦.

೧೪೮. ಪ್ರಜಾವಾಣಿ ದಿನಪತ್ರಿಕೆ, ಗುಂಡ್ಲೂರಿನ ಬಂಡೆಯ ಮೇಲೆ ಪ್ರಾಚೀನ ಚಿತ್ರ, ೨೧/೦೧/೧೬

೧೪೯. ಶರಣಬಸಪ್ಪ.ಪಿ, ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸ ಕಲೆ(ಪಿಎಚ್.ಡಿ. ಮಹಾಪ್ರಬಂಧ) ೨೦೦೨, ಪು-೧೮೬.

೧೫೦. ಅದೇ, ಪು-೧೮೮.

೧೫೧. ಅದೇ, ಪು-೧೮೯.

೧೫೨. ಅದೇ, ಪು-೧೯೦.

೧೫೩. ಲಕ್ಷ್ಮಣ್ ತೆಲಗಾವಿ(ಸಂ), ಪೂರ್ವೋಕ್ತ, ೧೯೮೭, ಪು-೧೪.

೧೫೪. ದೇವರಕೊಂಡರೆಡ್ಡಿ(ಸಂ), ಹಂಪಿ ಸಂಪುಟ, ೨೦೦೬, ಪು-೨೦.

೧೫೫. ರಾಮದಾಸರೆಡ್ಡಿ ಎಸ್.ಜಿ., ಪೂರ್ವೋಕ್ತ, ೨೦೦೯, ಪು-೧೦೪.

೧೫೬. ಅದೇ, ಪು-೧೦೪.

೧೫೭. ಅದೇ, ಪು-೧೦೪.

೧೫೮. ಅದೇ, ಪು-೧೦೪.

೧೫೯. ಸಂಗೇನಹಳ್ಳಿಕೆರೆ ಬಳಿ ಚಾರಿತ್ರಿಕ ಅವಶೇಷ ಪತ್ತೆ, ಸಂಯುಕ್ತ ಕರ್ನಾಟಕ ದಿನ ಪತ್ರಿಕೆ, ೫/೪/೯೬.

೧೬೦. ತಂಬಂಡ ವಿಜಯ್ ಪೂಣಚ್ಚ(ಸಂ), ಪೂರ್ವೋಕ್ತ, ೨೦೦೧, ಪು-೮೧.

೧೬೧. ಅದೇ, ಪು-೮೧.

೧೬೨. ಅದೇ, ಪು-೮೧.

೧೬೩. ಇತಿಹಾಸ ದರ್ಪಣ, ೨೦೧೨, ಪು-೧೧೦.

೧೬೪. ಅದೇ, ಪು-೧೧೧.

೧೬೫. ಅದೇ, ಪು-೧೧೧.

೧೬೬. ಅದೇ, ಪು-೨೧.

೧೬೭. ಅದೇ, ಪು-೨೧.

೧೬೮. ಅದೇ, ಪು-೨೧.

೧೬೯. ಅದೇ, ಪು-೨೧.

೧೭೦. ಅದೇ, ಪು-೨೨.

೧೭೧. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೧೦.

೧೭೨. ಇತಿಹಾಸ ದರ್ಪಣ, ೨೦೧೨, ಪು-೧೧೨.

೧೭೩. ಅ.ಸುಂದರ ಮತ್ತು ಷೇಕ್ಅಲಿ, ಪೂರ್ವೋಕ್ತ, ೧೯೯೪, ಪು-೧೭೦.

೧೭೪. ಅದೇ, ಪು-೧೫೧.

೧೭೫. ಅದೇ, ಪು-೧೫೧.

೧೭೬. ಅದೇ, ಪು-೧೫೧.

೧೭೭. ಅದೇ, ಪು-೧೫೧.

೧೭೮. ಅದೇ, ಪು-೧೬೧.

೧೭೯. ಇತಿಹಾಸ ದರ್ಪಣ, ೨೦೧೨, ಪು-೧೧೪.

೧೮೦. ಅ.ಸುಂದರ ಮತ್ತು ಷೇಕ್‌ಅಲಿ, ಪೂರ್ವೋಕ್ತ, ೧೯೯೭, ಪು-೧೬೩.

೧೮೧. ಅದೇ, ಪು-೧೬೩.

೧೮೨. ಅದೇ, ಪು-೧೬೪.

೧೮೩. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೦.೪೧.

೧೮೪. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೪೦.೪೧.

೧೮೫. ಇತಿಹಾಸ ದರ್ಪಣ, ೨೦೧೨, ಪು-೧೨೬.

೧೮೬. ಅದೇ, ಪು-೧೨೬.

೧೮೭. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಪೂರ್ವೋಕ್ತ, ೧೯೯೬, ಪು-೩೩.

೧೮೮. ಅರುಣಿ. ಎಸ್.ಕೆ, ಹಂ.ಗು. ರಾಜೇಶ್(ಸಂ), ಪೂರ್ವೋಕ್ತ, ೨೦೧೨, ಪು-೨೩.

೧೮೯. ಶಿವತಾರಕ್ ಕೆ.ಬಿ, ಕರ್ನಾಟಕ ಪುರಾತತ್ವ ನೆಲೆಗಳು, ೨೦೦೧, ಪು-೧೧-೧೪.

೧೯೦. ಅದೇ, ಪು-೧೫.

೧೯೧. ಇತಿಹಾಸ ದರ್ಪಣ, ೨೦೧೨, ಪು-೧೧೨.

೧೯೨. ಡಿ.ವಿ ದೇವರಾಜ್, ಸಿ.ಎಸ್.ಪಾಟೀಲ್, ಪೂರ್ವೋಕ್ತ, ೧೯೯೬, ಪು-೩೬.

೧೯೩. ಅ.ಸುಂದರ, ಪೂರ್ವೋಕ್ತ, ೧೯೭೩, ಪು-೩೦.

ಅಧ್ಯಾಯ ಐದು : ಸಮಾರೋಪ

ಅಧ್ಯಾಯ–ಐದು

ಸಮಾರೋಪ

ಪ್ರಸ್ತುತ ಮಹಾಪ್ರಬಂಧದಲ್ಲಿ ಪ್ರಾಗಿತಿಹಾಸದ ಅರ್ಥ ಅದರ ವ್ಯಾಪ್ತಿ, ಪ್ರಾಗಿತಿಹಾಸದ ನೆಲೆಗಳು, ಸ್ವರೂಪ, ನೆಲೆಗಳಲ್ಲಿ ದೊರೆತಿರುವ ಅವಶೇಷಗಳ ಮಹತ್ವ, ವಸತಿ ಮತ್ತು ಸಮಾಧಿ ನೆಲೆಗಳನ್ನು ಆಧರಿಸಿ ಸಾಂಸ್ಕೃತಿಕ ಪ್ರಸರಣವನ್ನು ಅಭ್ಯಸಿಸುವುದು ಮುಖ್ಯವಾಗಿದ್ದರೂ, ಅಂದಿನ ಜನರ ಜೀವನ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿದ್ದ ಸಾಂಸ್ಕೃತಿಕ ಅಂಶಗಳನ್ನು ಅರಿಯುವುದು ಅಧ್ಯಯನದ ಉದ್ದೇಶವಾಗಿದೆ.

ಚಿತ್ರದುರ್ಗ ಜಿಲ್ಲೆಯು ಸಮಶೀತೋಷ್ಣ ವಲಯವಾಗಿದ್ದು, ಹುಲ್ಲುಗಾವಲಿನಿಂದ ಕೂಡಿದ ಬಯಲು ಸೀಮೆ. ಆರು ತಾಲೂಕುಗಳನ್ನು ಒಳಗೊಂಡಿರುವ ಚಿತ್ರದುರ್ಗ ಜಿಲ್ಲೆಯಲ್ಲಿ ಶಿಲಾಬೆಟ್ಟಗಳನ್ನು ಮೊಳಕಾಲ್ಮೂರು, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ ತಾಲೂಕುಗಳಲ್ಲಿ ಕಾಣುತ್ತೇವೆ. ನುಂಕೆಮಲೆ, ಜಟಂಗಿರಾಮೇಶ್ವರ, ಬ್ರಹ್ಮಗಿರಿ, ತಣಿಗೆಕಲ್ಲು, ತಾಳ್ಯ, ಜಾನಕಲ್ಲು, ಚಂದ್ರವಳ್ಳಿಯಂತಹ ಪ್ರಾಗೈತಿಹಾಸಿಕ ನೆಲೆಗಳಿರುವುದು ಶಿಲಾಬೆಟ್ಟಗಳ ತಪ್ಪಲಿನಲ್ಲಿ ಎಂಬುದು ಗಮನಾರ್ಹ. ಜಿಲ್ಲೆಯ ಯಾದಲಗಟ್ಟೆ, ಘಟ್ಟಿಹೊಸಹಳ್ಳಿ, ದೊಡ್ಡಕಿಟ್ಟದಾಳ್ ಮೊದಲಾದ ಆಯುಧ ತಯಾರಿಕ ಘಟಕಗಳಿರುವುದು ಖನಿಜಾಂಶಗಳು ದೊರೆಯುವ ಪರಿಸರದಲ್ಲಿ. ಜಿಲ್ಲೆಯಲ್ಲಿ ಬಯಲುಬಂಡೆಗಳಿದ್ದು, ಬಂಡೆಗಳ ಮೇಲೆ ನವಶಿಲಾಯುಗ ಹಾಗೂ ಬೃಹತ್ ಶಿಲಾಯುಗದ ಕುಟ್ಟು ಚಿತ್ರಗಳಿವೆ. ವೇದಾವತಿ ನದಿಯ ದಂಡೆಯ ಮೇಲೆ ವಸತಿ ನೆಲೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೆ ಜಿನಗಿಹಳ್ಳ ಮತ್ತು ಗುಂಡಿಹಳ್ಳದ ಪರಿಸರದಲ್ಲಿ ಶಿಲಾಸಮೂಹ ಇರುವುದರಿಂದ ಶಿಲಾಸಮಾಧಿಗಳು ಹೆಚ್ಚು ನಿರ್ಮಾಣಗೊಂಡಿರುವುದು ಗಮನಾರ್ಹ. ಈ ರೀತಿ ಜಿಲ್ಲೆಯು ಭೌಗೋಳಿಕವಾಗಿ ಮಹತ್ವದ್ದು.

ಚಿತ್ರದುರ್ಗ ಜಿಲ್ಲೆಯಲ್ಲಿ ಹಳೆಶಿಲಾಯುಗದ ೬, ಸೂಕ್ಷ್ಮ ಶಿಲಾಯುಗದ ೨೧, ನವಶಿಲಾಯುಗದ ೧೦೭, ಬೃಹತ್ ಶಿಲಾಯುಗದ ೨೧೭ ನೆಲೆಗಳು ಶೋಧವಾಗಿವೆ. ಒಟ್ಟು ೩೫೧ ನೆಲೆಗಳು ಕಂಡುಬಂದಿದ್ದು, ಇವುಗಳಲ್ಲಿ ೩೬ ನೆಲೆಗಳು ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಪತ್ತೆಯಾಗಿವೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಪ್ರಸ್ತುತ ಜಿಲ್ಲೆಯಲ್ಲಿ ಅತೀ ಹೆಚ್ಚು ಪ್ರಾಚೀನ ನೆಲೆಗಳು ಕಂಡುಬಂದಿರುವುದು ಗಮನಾರ್ಹ. ಹಳೆಯ ಹಾಗೂ ಸೂಕ್ಷ್ಮ ಶಿಲಾಯುಗಕ್ಕಿಂತ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದ ಸಂಸ್ಕೃತಿಯು ಈ ಜಿಲ್ಲೆಯಲ್ಲಿ ವಿಸ್ತಾರವಾಗಿ ಹರಡಿದೆ.

ಹಳೆಶಿಲಾಯುಗದ ಮತ್ತು ಸೂಕ್ಷ್ಮಶಿಲಾಯುಗದ ಅವಶೇಷಗಳು ಜಿಲ್ಲೆಯಲ್ಲಿ ಬೆಟ್ಟ ಮತ್ತು ಬೆಟ್ಟದ ತಪ್ಪಲಿನಲ್ಲಿ ಕಂಡುಬಂದರೆ, ನವಶಿಲಾಯುಗದ ಹಾಗೂ ಬೃಹತ್ ಶಿಲಾಯುಗದ ನೆಲೆಗಳು ಶಿಲಾಬಂಡೆಗಳು, ಹುಲ್ಲುಗಾವಲು ಪ್ರದೇಶಗಳಲ್ಲಿ ನೆಲೆಗೊಂಡಿರುವುದು ಗಮನೀಯವಾದ ವಿಚಾರ.

ಪ್ರಾಗೈತಿಹಾಸಿಕ ನೆಲೆಗಳಿಗೆ ಮೋರೆಯರ ಮಟ್ಟಿ, ಪಾಂಡವರ ಮಟ್ಟಿ, ಪಾಂಡವರ ಗುತ್ತಿ, ಬೂದುಗಡ್ಡೆ ಎಂದು ಕರೆಯುತ್ತಿರುವುದು ಸಾಮಾನ್ಯ. ಆದರೆ ಚಿತ್ರದುರ್ಗ ಜಿಲ್ಲಾ ಪರಿಸರದಲ್ಲಿ ಜುಂಜಪ್ಪನ ಮಟ್ಟಿ, ಅರ್ಜುನಾಪುರ, ನಲ್ಲುಗಟ್ಲು, ಗಾದ್ರಿಪಾಲನಾಯಕನ ಸಮಾಧಿ, ಎದ್ದಲುಬಂಡೆ, ದೋಣೆಕರಿಯಮ್ಮ, ದೊಡ್ಡಚೌಡಮ್ಮ, ಕರಿದೇವರ ಮಟ್ಟಿ, ದೊರೆಗಳ ಸಮಾಧಿ, ಆನೆ ಕಟ್ಟುವಕಲ್ಲು, ಪಾಪಯ್ಯನಮಟ್ಟಿ, ಎಂಬಂತಹ ವಿಶಿಷ್ಟ ಹೆಸರುಗಳಿಂದ ಇಂದಿಗೂ ಜನಮಾನಸದಲ್ಲಿ ಹಾಸುಹೊಕ್ಕಾಗಿರುವುದು ವಿಶೇಷವಾಗಿದೆ.

ಎಂ.ಎಚ್.ಕೃಷ್ಣ ಅವರು ಬ್ರಹ್ಮಗಿರಿಯಲ್ಲಿ ಉತ್ಖನನಮಾಡಿ ಸೂಕ್ಷ್ಮ ಶಿಲಾಯುಗದ ಸ್ತರವನ್ನು ಗುರುತಿಸಿದ್ದರು. ಮಾರ್ಟಿಮರ್ ವೀಲರ್ ಇದೇ ನೆಲೆಯಲ್ಲಿ ಉತ್ಖನನಮಾಡಿ ಸೂಕ್ಷ್ಮ ಶಿಲಾಯುಧಗಳು ನವಶಿಲಾಯುಗದ ಎರಡು ಹಂತದಲ್ಲಿ ದೊರೆತಿವೆ ಎಂದು ದಾಖಲಿಸಿದ್ದಾರೆ. ಈ ಅಂಶಗಳನ್ನು ಆಧರಿಸಿ ಸೂಕ್ಷ್ಮ ಶಿಲಾಯುಗದವರ ಆಯುಧಗಳನ್ನು ನವಶಿಲಾಯುಗದಲ್ಲೂ ಬಳಸಿದ್ದರೆಂಬುದು ಸ್ಪಷ್ಟವಾದಂತಾಗಿದೆ.

ಮಾರ್ಟಿಮರ್ ವೀಲರ್ ಉತ್ಖನನ ಮಾಡಿದ ಬ್ರಹ್ಮಗಿರಿ ನೆಲೆಯಲ್ಲಿ ಒಟ್ಟು ೧೯ ಪದರಗಳು ಕಂಡುಬಂದಿವೆ. ಮೇಲಿನಿಂದ ೧ ರಿಂದ ೬ ಇತಿಹಾಸ ಆರಂಭಕಾಲ, ೭ ರಿಂದ ೮ ಬೃಹತ್ ಶಿಲಾಯುಗ, ೯ ರಿಂದ ೧೮ ರವರೆಗೆ ಇರುವ ಪದರಗಳಲ್ಲಿ ನವಶಿಲಾಯುಗದ ಆವಶೇಷಗಳು ದೊರೆತಿವೆ. ಇಲ್ಲಿ ಇತಿಹಾಸ ಆರಂಭಕಾಲದ ಪದರದಲ್ಲಿ ಬೃಹತ್ ಶಿಲಾಯುಗದ ಕಬ್ಬಿಣ ಅವಶೇಷಗಳು ಕಂಡುಬಂದಿರುವುದು ಸತ್ಯ. ಆದರೆ

ಇತಿಹಾಸ ಆರಂಭಕಾಲದ ಪದರದಿಂದ ಬೃಹತ್ ಶಿಲಾಯುಗದ ಪದರದವರೆಗೆ ಕಂಬದ ಕುಣಿಯಿರುವುದರಿಂದ ಕಬ್ಬಿಣದ ವಸ್ತುಗಳು ದೊರೆತಿರುವುದನ್ನು ಸ್ಪಷ್ಟಪಡಿಸಲಾಗಿದೆ. ಈ ಮೂಲಕ ಇತಿಹಾಸ ಆರಂಭ ಕಾಲದಲ್ಲಿ ಬೃಹತ್ ಶಿಲಾಯುಗವಿತ್ತೆಂಬ ಹೇಳಿಕೆಯನ್ನು ತಳ್ಳಿಹಾಕಿದಂತಾಗಿದೆ.

ನವಶಿಲಾಯುಗದಲ್ಲಿ ಅಸ್ಟ್ರಲಾಯ್ಡ್ ಜನಾಂಗದವರಿದ್ದು, ಶಿಲಾತಾಮ್ರಯುಗದ ಕೊನೆಯ ಹಂತದಲ್ಲಿ ವಿಶಿಷ್ಟವಾಗಿ ಸಮಾಧಿಗಳನ್ನು ನಿರ್ಮಿಸುವ ಪದ್ಧತಿಯನ್ನು ಅನುಸರಿಸಿದವರು ಮೆಡಿಟರೇನಿಯನ್ ಜನಾಂಗದವರು ಎಂಬುದು ನಿರ್ಧಾರಿತ ವಿಷಯ. ಬೃಹತ್ ಶಿಲಾಯುಗದಲ್ಲಿ ಅಸ್ಟ್ರಲಾಯ್ಡ್ ಮತ್ತು ಮೆಡಿಟರೇನಿಯನ್ ಜನಾಂಗದವರ ಮಿಶ್ರಣದಿಂದ ಶಿಲಾಸಮಾಧಿಗಳು ರಚನೆಗೊಂಡಿರುವುದು ಗಮನಾರ್ಹ. ಇದಕ್ಕೆ ಪೂರಕವಾಗಿ ಬ್ರಹ್ಮಗಿರಿ ಮತ್ತು ಟಿ.ನರಸೀಪುರದ ನೆಲೆಯಲ್ಲಿ ಈ ಎರಡು ಜನಾಂಗದ ಮಿಶ್ರಣವುಳ್ಳ ಮೂಳೆಗಳು ದೊರೆತಿರುವುದು ಪ್ರಮುಖವಾಗಿದೆ. ಮೂಳೆಗಳನ್ನು ಪರಿಕ್ಷೀಸಿದ್ದರಿಂದ ಸತ್ತವರು ೨೦ ರಿಂದ ೩೦ ವರ್ಷದ ಒಳಗಿನವರೆಂದು ತಿಳಿದುಬಂದಿದೆ. ಈ ಅಂಶವನ್ನು ಗಮನಿಸಿದಾಗ ಜನಾಂಗದ ಸಂಘರ್ಷದಿಂದ ಅಥವಾ ರೋಗಕ್ಕೆ ತುತ್ತಾಗಿರಬೇಕೆಂದು ನಿರ್ಣಯಿಸಬಹುದು.

ಪ್ರಾಗಿತಿಹಾಸ ಕಾಲದ ಜನರ ಜೀವನದಲ್ಲಿ ಮಡಕೆಗಳು ಪ್ರಾಮುಖ್ಯತೆ ಪಡೆದಿವೆ. ಅಲ್ಲದೆ ಸಾಂಸ್ಕೃತಿಕ ಭಿನ್ನತೆಯನ್ನು ಗುರುತಿಸುವಲ್ಲಿ ಬಹುಮುಖ್ಯ ಕುರುಹುಗಳಿವು. ಬ್ರಹ್ಮಗಿರಿಯ ಉತ್ಖನನದಲ್ಲಿ ಎಳೆಕಂದು, ಕೆಂಪು, ಕಪ್ಪು ಬೂದು, ತಿಳಿ ಹಸಿರು ಬೂದು, ಚಾಕಲೇಟ್ ವರ್ಣದ ಹಾಗೂ ಕೆಮ್ಮಣ್ಣಿನಿಂದ ಅಲಂಕೃತಗೊಂಡ ಮಡಕೆಗಳು ಕಂಡುಬಂದಿವೆ. ಇವು ನವಶಿಲಾಯುಗದವು. ತಿಳಿ ಬೂದು, ನುಣುಪಾದ ಕಪ್ಪು ವರ್ಣದ ಮತ್ತು ಅಲಂಕೃತವಲ್ಲದ ಮಡಕೆಗಳು ನವಶಿಲಾತಾಮ್ರಯುಗದವು. ಕಪ್ಪು ಮತ್ತು ಕೆಂಪು, ಪೂರ್ಣ ಕೆಂಪು, ಪೂರ್ಣ ಕಪ್ಪು ಇರುವ ಮಡಕೆಗಳು ಚಕ್ರದ ಸಹಾಯದಿಂದ ಮಾಡಿದವುಗಳಾಗಿದ್ದು, ಈ ಮಡಕೆಗಳು ಬೃಹತ್ ಶಿಲಾಯುಗದವು. ಬ್ರಹ್ಮಗಿರಿಯ ಶಿಲಾಸಮಾಧಿಯಲ್ಲಿ ಮಡಕೆಗಳು ದೊರಕಿದ್ದು, ಮಡಕೆಗಳ ಮೇಲೆ ಬ್ರಾಹ್ಮಿ ಲಿಪಿಯನ್ನು ಹೋಲುವ ೨೪ ಗೀಚುಗಳಿರುವುದು ಗಮನಾರ್ಹ ಸಂಗತಿ. ಈ ರೀತಿಯಲ್ಲದೆ ಮಡಕೆಗಳ ಮೇಲೆ ಬಾಣ, ಪೋಣಿಸಿದ ಮತ್ತು ಕ್ರಿಸ್ ಕ್ರಾಸ್ ರೀತಿಯ ಗೆರೆಗಳಿವೆ. ಬೃಹತ್ ಶಿಲಾಯುಗದ ಕಪ್ಪು ಮತ್ತು ಕೆಂಪು ವರ್ಣದ ಮಡಕೆಯ ಮೇಲೆ ಬಿಳಿ ಬಣ್ಣದ ರೇಖೆಗಳಿವೆ. ಈ ರೀತಿಯ ಮಡಕೆಯು ಹೆಗ್ಗಡೆಹಳ್ಳಿಯ ಶಿಲಾಸಮಾಧಿಯಲ್ಲಿ ಕಂಡುಬಂದಿದೆ. ಈ ಮೂಲಕ ಬೃಹತ್ ಶಿಲಾಯುಗದಲ್ಲಿ ಕಪ್ಪು ಮತ್ತು ಕೆಂಪು

ವರ್ಣದ ಮಡಕೆಯ ಮೇಲೆ, ಶಾತವಾಹನರ ಕಾಲದಲ್ಲಿ ಕೆಂಪು ವರ್ಣ ಮಡಕೆಗಳ ಮೇಲೆ ಬಿಳಿ ರೇಖೆಗಳಿರುತ್ತವೆಂದು ಸ್ಪಷ್ಟಪಡಿಸಲಾಗಿದೆ.

ನವಶಿಲಾಯುಗದವರು ಪಶುಸಂಗೋಪನೆಗಾಗಿ ಹುಲ್ಲುಗಾವಲು ಮತ್ತು ಫಲವತ್ತಾದ ಪ್ರದೇಶದಲ್ಲಿ ವಾಸವಾಗಿ ಕೃಷಿಯನ್ನು ಆರಂಭಿಸಿದರು. ಹೆಸರು, ಹುರುಳಿ, ನವಣೆ, ರಾಗಿ ಮೊದಲಾದ ಧಾನ್ಯಗಳನ್ನು ಬೆಳೆದಿದ್ದು, ಇವು ಮಳೆಯಾಶ್ರಿತ ಬೆಳೆಗಳಾಗಿವೆ. ಹಳ್ಳೂರಿನಲ್ಲಿ ದೊರೆತ ಭತ್ತದ ಹೊಟ್ಟು, ನೀರಾವರಿ ವ್ಯವಸ್ಥೆಯನ್ನು ಅಳಡಿಸಿ ಕೊಂಡಿದ್ದರೆಂಬುದಕ್ಕೆ ಸಾಕ್ಷಿಯಾಗಿದೆ. ಆದುದರಿಂದ ನವಶಿಲಾಯುಗದವರು ಒಣ ಬೇಸಾಯ ಮತ್ತು ನೀರಾವರಿ ಪದ್ಧತಿಯನ್ನು ಅನುಸರಿಸದ್ದರೆಂದು ಸ್ಪಷ್ಟವಾಗುತ್ತದೆ. ಬೃಹತ್ ಶಿಲಾಯುಗದವರು ಈ ಹಿಂದಿನ ಬೆಳೆಗಳ ಜೊತೆಗೆ ಹಾರಕ, ಅವರೆ, ತೊಗರಿ, ಸಾಸಿವೆ ಬೆಳೆಗಳನ್ನು ಬೆಳೆದಿದ್ದಾರೆ. ಬೃಹತ್ ಶಿಲಾಯುಗದಲ್ಲಿ ಕೃಷಿ ಉಪಕರಣಕ್ಕಾಗಿ ಕಬ್ಬಿಣವನ್ನು ಬಳಸಿದ್ದರಿಂದ ವ್ಯವಸಾಯ ಹೆಚ್ಚು ಅಭಿವೃದ್ಧಿಗೊಂಡಿದೆ.

ಕೃಷಿಯ ಜೊತೆಗೆ ಪಶುಸಂಗೋಪನೆಯು ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದವರಿಗೆ ಮುಖ್ಯ ಕಸುಬಾಗಿತ್ತು. ಇದುವರೆಗೆ ಕಂಡುಬಂದಿರುವ ಬೂದಿದಿನ್ನೆಗಳು ಎರಡು ಎಕರೆಯಷ್ಟು ವಿಸ್ತಾರವಾಗಿವೆ. ಜಾನುವಾರುಗಳನ್ನು ಬೃಹತ್ ಸಂಖ್ಯೆಯಲ್ಲಿ ಸಾಕುತ್ತಿದ್ದರೆಂಬುದಕ್ಕೆ ವಿಸ್ತಾರವಾದ ಈ ಬೂದಿದಿನ್ನೆಗಳೇ ಸಾಕ್ಷಿ. ಎನ್.ಗೌರಿಪುರದಲ್ಲಿರುವ ಬೂದಿದಿನ್ನೆ ವಸತಿನೆಲೆಯಿಂದ ದೂರವಿದ್ದರೆ, ರಾಮಗಿರಿಯಲ್ಲಿರುವ ಬೂದಿದಿನ್ನೆಯು ವಸತಿ ನೆಲೆಯ ಪಕ್ಕದಲ್ಲಿರುವುದು ಗಮನಿಸಬೇಕಾದ ವಿಷಯ. ಜಿಲ್ಲೆಯಲ್ಲಿರುವ ಬಯಲುಬಂಡೆ ಚಿತ್ರಗಳಲ್ಲಿ ಗೂಳಿ, ಎತ್ತಿನ ಚಿತ್ರಗಳೇ ಅತಿ ಹೆಚ್ಚಾಗಿವೆ. ಅಲ್ಲದೆ ಈ ಚಿತ್ರಗಳು ಜಿಲ್ಲೆಯಾದ್ಯಂತ ಒಂದೇ ರೀತಿ ರಚನೆಗೊಂಡಿವೆ. ಆದುದರಿಂದ ಒಂದೇ ಸಮುದಾಯದವರು ವಲಸೆಯನ್ನು ಕೈಗೊಂಡಿದ್ದರೆಂದು ಅರ್ಥವಾಗುತ್ತದೆ.

ಹಳೆಶಿಲಾಯುಗದ ಆಯುಧಗಳು ಜಾನಕಲ್ಲು ಮತ್ತು ತಾಳ್ಯದಲ್ಲಿ ಮೊದಲು ಶೋಧವಾಗಿದ್ದವು. ನಂತರ ಕ್ಷೇತ್ರಕಾರ್ಯದಲ್ಲಿ ಕೂನಬೇವು ಮತ್ತು ಸಂಗೇನಹಳ್ಳಿಕೆರೆ ಬಯಲಿನಲ್ಲಿ ದೊರೆತಿರುವುದು ಗಮನೀಯದ್ದು. ದೊರೆತಿರುವ ಆಯಧಗಳು ಆದಿ, ಮಧ್ಯ ಹಳೆಶಿಲಾಯುಗದವು. ಕ್ಲಾಕ್‌ಟಾನ್ ಮತ್ತು ಲೆವೆಲ್ವಾ ವಿಧಾನದಲ್ಲಿರುವ ಈ ಆಯುಧಗಳು ಆಂಗ್ಲ ಪದವಾದ 'ಯು' ಮತ್ತು 'ವಿ' ಆಕಾರದಲ್ಲಿವೆ. ಜಿಲ್ಲೆಯಲ್ಲಿ ಹಳೆಶಿಲಾಯುಗದ ಆಯುಧಗಳು ಕಡಿಮೆ ಸಂಖ್ಯೆಯಲ್ಲಿ ಕಂಡುಬಂದಿದ್ದು, ಹುಣಸಗಿ ನೆಲೆಯಲ್ಲಿ ಸಿಗುವ ಆಯುಧಗಳಷ್ಟು ಪ್ರಮಾಣ ಬದ್ಧವಾಗಿಲ್ಲ. ಇದಕ್ಕೆ ಕಾರಣ ಕಚ್ಚಾವಸ್ತುಗಳ ಕೊರತೆ ಎಂಬುದು ಸ್ಪಷ್ಟವಾದಂತಾಗಿದೆ.

ಸೂಕ್ಷ್ಮಶಿಲಾಯುಗದ ಆಯುಧಗಳು ಜಿಲ್ಲೆಯಲ್ಲಿ ೨೧ ಕಡೆ ದೊರೆತಿವೆ. ಆಯುಧಗಳು ಬ್ರಹ್ಮಗಿರಿಯ ಉತ್ಖನನದ ಸ್ತರದಲ್ಲಿ ದೊರೆತಿರುವುದರಿಂದ ಒಂದು ಕಡೆ ನೆಲೆಸಿದ್ದರೆಂದು ಹೇಳುವುದಕ್ಕೆ ಸಾಧ್ಯವಾಗಿದೆ. ಉಳಿದಕಡೆ ಭೂ ಮೇಲ್ಮೈಯಲ್ಲಿ ಶೋಧವಾಗಿವೆ. ಸೂಕ್ಷ್ಮ ಆಯುಧಗಳಿಗೆ ಓರೆ, ಚಂದ್ರಕಾರದ ಮೊನೆಗಳಿದ್ದು, ಅಕ್ಕ ಪಕ್ಕದಲ್ಲಿ ಅರಿತವಾದ ತುದಿಯಿದೆ. ಆಯುಧಗಳು ಚಾಲ್ಸಿಡೋನಿಯ, ಚರ್ಟ್, ಅಗೇಟ್ ಶಿಲೆಗಳಿಂದ ರಚಿತಗೊಂಡಿದ್ದು, ಈ ಶಿಲೆಗಳು ಪ್ರಸ್ತುತ ಜಿಲ್ಲೆಯಲ್ಲಿ ಸಿಗುವುದು ಕಡಿಮೆ. ಬ್ರಹ್ಮಗಿರಿ ಸಮೀಪದ ಸಂಗನಕಲ್ಲು ನೆಲೆಯು ಆಯುಧ ತಯಾರಿಕ ಘಟಕವಾಗಿದ್ದರಿಂದ ಆಯುಧಗಳನ್ನು ಸಂಗನಕಲ್ಲು ನೆಲೆಯಿಂದ ತಂದಿರುವ ಸಾಧ್ಯತೆಗಳಿವೆ.

ನವಶಿಲಾಯುಗದ ಕಲ್ಲಿನ ಕೊಡಲಿಗಳು ಮೂರು ಹಂತಗಳಲ್ಲಿ ತಯಾರಾಗಿವೆ. ಪ್ರಸ್ತುತ ನವಶಿಲಾಯುಗದ ನೆಲೆಗಳಲ್ಲಿ ದೊರೆತಿರುವ ಕಲ್ಲಿನ ಕೊಡಲಿಗಳು ಮೂರನೇ ಹಂತದಲ್ಲಿ ರಚನೆಯಾಗಿವೆ. ಮೂರು ಹಂತದ ಕಲ್ಲಿನ ಕೊಡಲಿಗಳು ಸಂಗನಕಲ್ಲು ಮತ್ತು ಕುರುಗೋಡು ಪರಿಸರದಲ್ಲಿ ಕಾಣಬಂದಿರುವುದು ವಿಶ್ಲೇಷಣೆಗೆ ಸಹಾಯಕವಾಗಿವೆ. ಮೂರನೇ ಹಂತದ ನಯಗೊಳಿಸಿದ ಕಲ್ಲಿನ ಕೊಡಲಿಗಳ ಕಾಲವನ್ನು ನವ ಶಿಲಾತಾಮ್ರಯುಗಕ್ಕೆ ಸೇರಿಸಲಾಗಿದೆ. ಅಂದರೆ ನಯಗೊಳಿಸಿದ ಕಲ್ಲಿನ ಕೊಡಲಿಗಳು ದೊರೆತ ಜಿಲ್ಲೆಯ ಎಲ್ಲಾ ನೆಲೆಗಳು ನವ ಶಿಲಾತಾಮ್ರಯುಗಕ್ಕೆ ಸೇರಿದವೆಂದು ನಿರ್ಧರಿಸಲಾಗಿದೆ. ಮೊದಲನೆ ಹಂತದ ಕಲ್ಲಿನ ಕೊಡಲಿ ತಮಟಕಲ್ಲಿನ ವಸತಿನೆಲೆಯಲ್ಲಿ ಕಂಡುಬಂದಿರುವುದು ಗಮನಾರ್ಹ. ಕಲ್ಲಿನ ಕೊಡಲಿಗಳು ಡೈಕ್ ಮತ್ತು ಡಾಲರೈಟ್ ಶಿಲೆಯಿಂದ ರಚಿತಗೊಂಡಿವೆ. ತ್ರಿಭುಜಾಕೃತಿಯ ಕಲ್ಲಿನ ಕೊಡಲಿಗಳು ೫ ರಿಂದ ೧೪ ಸೆಂ.ಮೀ ಉದ್ದ, ೨ ರಿಂದ ೫ ಸೆಂ.ಮೀ ಅಗಲವಾಗಿವೆ. ಈ ಕಲ್ಲಿನ ಕೊಡಲಿಗಳು ಜಿಲ್ಲೆಯಲ್ಲಿದ್ದು, ಸಣ್ಣ ಗಿಡ, ಬಳ್ಳಿಗಳನ್ನು ಮತ್ತು ಮೊಲದಂತಹ ಪ್ರಾಣಿಗಳನ್ನು ಕತ್ತರಿಸಲು ಯೋಗ್ಯವಾಗಿವೆ ಎಂದು ಖಚಿತಪಡಿಸಲಾಗಿದೆ. ಕಲ್ಲಿನ ಕೊಡಲಿಗಳಲ್ಲದೆ ತಾಮ್ರದ ಕೊಡಲಿ ಹಾಗೂ ಕವಣೆಕಲ್ಲು, ಕಲ್ಲಿನ ಒನಕೆ, ಉಜ್ಜುವ ಕಲ್ಲು, ರುಬ್ಬುವ ಕಲ್ಲು, ಅರೆಯುವ ಕಲ್ಲುಗಳನ್ನು ನವಶಿಲಾಯಗದಲ್ಲಿ ಜೀವನೋಪಾಯಕ್ಕಾಗಿ ಬಳಸಿದ್ದಾರೆ.

ಬ್ರಹ್ಮಗಿರಿ ನೆಲೆಯ ಉತ್ಖನನದಲ್ಲಿ ಬೃಹತ್ ಶಿಲಾಯುಗದ ಕಬ್ಬಿಣದ ಬಾಣದ ಮೊನೆ, ಮೂರು ಅಡಿ ಉದ್ದದ ಈಟಿ, ಚಪ್ಪಟೆ ಕೊಡಲಿ, ಕುಡುಗೋಲು, ಚಾಕು ಮೊದಲಾದ ಆಯುಧಗಳು ದೊರೆತಿವೆ. ಈ ಆಯುಧಗಳು ಕೃಷಿ, ಬೇಟೆ ಮತ್ತು ಶಿಲಾಸಮಾಧಿಗಳ ರಚನೆಯಲ್ಲಿ ಬಳಕೆಗೊಂಡಿವೆ. ಆಯುಧಗಳು ಜಿಲ್ಲೆಯಲ್ಲಿ ಘಟ್ಟಿಹೊಸಹಳ್ಳಿ, ಯಾದಲಗಟ್ಟೆ, ದೊಡ್ಡ ಕಿಟ್ಟದಾಳ್, ಸಂತೆಗುಡ್ಡದ ಆಯುಧ ತಯಾರಿಕ ಘಟಕದಿಂದ

ವಿತರಣೆಯಾಗಿವೆ. ಘಟ್ಟಿಹೊಸಹಳ್ಳಿಯ ಆಯುಧ ತಯಾರಿಕೆ ಘಟಕದಲ್ಲಿ ಮ್ಯಾಂಗನೀಸ್ ಕಿಟ್ಟಗಳು ಕಂಡುಬಂದಿರುವುದರಿಂದ ಆಯುಧಗಳಿಗೆ ಮೆರಗು ನೀಡುತ್ತಿದ್ದರೆಂದು ತಿಳಿಯಬಹುದು. ಹೆಗ್ಗಡೆಹಳ್ಳಿಯ ಶಿಲಾಸಮಾಧಿಯಲ್ಲಿ ದೊರೆತ ಆಯುಧಗಳು ಬ್ರಹ್ಮಗಿರಿ ಆಯುಧಗಳಿಗಿಂತ ಚಿಕ್ಕವು. ಈ ಮೂಲಕ ಬ್ರಹ್ಮಗಿರಿ ಪರಿಸರದ ಶಿಲಾಸಮಾಧಿಗಳ ರಚನೆಯಲ್ಲಿ ಅಭಿವೃದ್ಧಿ ಹೊಂದಿವೆ ಎಂದು ನಿರ್ಧರಿಸಲಾಗಿದೆ. ಬ್ರಹ್ಮಗಿರಿ ಸಿಸ್ಟ್ ಸಮಾಧಿಯಲ್ಲಿ ಕಟ್ಟಡದ ರಚನೆಯಿರುವುದು ಅಭಿವೃದ್ಧಿಗೆ ಸಾಕ್ಷಿಯಾಗಿದೆ.

ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದವರು ಅಲಂಕಾರಿಕ ವಸ್ತುಗಳನ್ನು ಬಳಸಿದ್ದಾರೆ. ಬ್ರಹ್ಮಗಿರಿಯಲ್ಲಿ ಮಣಿಗಳ ತಯಾರಿಕ ಘಟಕವಿತ್ತೆಂದು ಉತ್ಖನನದಿಂದ ತಿಳಿದುಬಂದಿರುವ ವಿಚಾರ. ಕಲ್ಲಿನ ಮಣಿ ತಯಾರಿಕೆಯ ಮತ್ತೊಂದು ಕೇಂದ್ರ ಹಿರಿಯೂರು ತಾಲೂಕಿನ ಮಾಳಪ್ಪನಗುಡ್ಡದಲ್ಲಿ ಪತ್ತೆಗೊಂಡಿದೆ. ನವಶಿಲಾಯುಗದ ಜನಸಮುದಾಯ ಕಂಚಿನ ಉಂಗುರ, ಸುಡಾವೆ ಮಣಿಗಳು, ಅಗೇಟ್, ಕಾರ್ನಿಲೀಯಾ, ಜಾಸ್ಪರ್ ಮತ್ತು ಚಾಲ್ಸಿಡೋನಿ ಮಣಿಗಳನ್ನು, ಸಾಬೂನು ಕಲ್ಲಿನ ಪದಕ, ಕಪ್ಪೆಚಿಪ್ಪಿನ ಪದಕವನ್ನು ಧರಿಸುತ್ತಿದ್ದರು. ಬ್ರಹ್ಮಗಿರಿ ಶಿಲಾಸಮಾಧಿ ಉತ್ಖನನದಲ್ಲಿ ೩೩ ಚಿನ್ನದ ಮಣಿಗಳು ದೊರಕಿದ್ದು, ವಸತಿ ನೆಲೆಯಲ್ಲಿ ೭೭ ಮ್ಯಾಗ್ನಸೈಟ್ ಮಣಿಗಳು ಕಂಡುಬಂದಿರುವುದು ವಿಶೇಷವಾಗಿದೆ. ಅಂದರೆ ಬೃಹತ್ ಶಿಲಾಯುಗದವರು ನವಶಿಲಾಯುಗದವರಿಗಿಂತ ಬೆಲೆಬಾಳುವ ಮಣಿಗಳನ್ನು ಧರಿಸುತ್ತಿದ್ದರೆಂದು ಉಲ್ಲೇಖಿಸಬಹುದು.

ಸಂತೋಷಕ್ಕಾಗಿ, ಸಮಾಜದ ಜನರಿಗೆ ತಿಳಿಯಲೆಂದು, ಬೇಟೆಯ ಸ್ಮರಣಾರ್ಥ, ನಿರಂತರವಾಗಿ ಆಹಾರವು ದೊರೆಯಲು ಹಾಗೂ ತನ್ನ ನೆಲೆಯನ್ನು ದೂರದಿಂದ ಕಂಡುಹಿಡಿಯುವ ಸಲುವಾಗಿ ಕಲ್ಲಾಸರೆಗಳಲ್ಲಿ ವರ್ಣಚಿತ್ರಗಳನ್ನು ರಚಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬಂದಿರುವ ವರ್ಣಚಿತ್ರಗಳು ಕಲ್ಲಾಸರೆಗಳಲ್ಲಿ ರಚನೆಗೊಂಡಿವೆ. ತುಂಬಿದ ದೇಹವುಳ್ಳ ಕೆಂಪು ವರ್ಣದ ಗೂಳಿ, ಹಂದಿ, ನಾಯಿ, ಮನುಷ್ಯರ ನೃತ್ಯ ಮತ್ತು ಬೇಟೆಯ ಚಿತ್ರಗಳು ನವಶಿಲಾಯುಗದವು. ಬಾಹ್ಯ ರೇಖೆಗಳಿಂದ ಕೂಡಿದ ಕೆಂಪು ವರ್ಣದ ಗೂಳಿ, ಬೇಟೆ, ಮಾಂತ್ರಿಕ ಹಾಗೂ ಕುದರೆ, ಒಂಟೆ ಮೇಲೆ ಕುಳಿತ ಮನುಷ್ಯನ ಚಿತ್ರಗಳು ಬೃಹತ್ ಶಿಲಾಯುಗದವು. ಬಿಳಿ ವರ್ಣದ ಚಿತ್ರಗಳು ಹಾಗೂ ಕುದರೆ ಮೇಲೆ ಕುಳಿತ ಮನುಷ್ಯರು ಎದರು ಬದರು ಹೋರಾಡುತ್ತಿರುವ ಕೆಂಪು ವರ್ಣದ ಚಿತ್ರಗಳು ಇತಿಹಾಸ ಆರಂಭಕಾಲದವು. ಸಂತೇಗುಡ್ಡದಲ್ಲಿರುವ ಕಲ್ಲಾಸರೆಯ

ಮೇಲೆ ಕೆಲವು ಅನುಕರಣಿಯ ಚಿತ್ರಗಳಿವೆ. ನವಶಿಲಾಯುಗದ ಗೂಳಿ ಚಿತ್ರದ ಪಕ್ಕದಲ್ಲಿ ಬೃಹತ್ ಶಿಲಾಯುಗದ ಬಾಹ್ಯರೇಖೆಯ ಗೂಳಿಚಿತ್ರವು ಯಥಾವತ್ ರಚನೆಯಾಗಿರುವುದು ಅನುಕರಣೀಯತೆಗೆ ಸಾಕ್ಷಿಯಾಗಿದೆ.

ಬಯಲುಬಂಡೆ ಚಿತ್ರಗಳು ಬೇರೆ ಜಿಲ್ಲೆಗಳಿಗಿಂತ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚು ಕಂಡುಬಂದಿರುತ್ತವೆ. ಇದಕ್ಕೆ ಕಾರಣ ಪಶುಸಂಗೋಪನೆ ಮತ್ತು ಬಯಲಿನಲ್ಲಿ ಸಿಗುವ ಬಂಡೆಗಳು. ಬಯಲುಬಂಡೆ ಚಿತ್ರಗಳಲ್ಲಿ ಎತ್ತು ಮತ್ತು ಗೂಳಿ ಚಿತ್ರಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಜಿಲ್ಲೆಯಲ್ಲಿ ಚಿತ್ರದುರ್ಗ ತಾಲೂಕು, ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ಭಾಗದಲ್ಲಿ ಬಯಲುಬಂಡೆ ಚಿತ್ರಗಳನ್ನು ಕಾಣುತ್ತೇವೆ. ಅತಿ ದೊಡ್ಡ ಬಯಲುಬಂಡೆ ಚಿತ್ರದ ನೆಲೆಗಳಲ್ಲಿ ಸಂಗೇನಹಳ್ಳಿಕೆರೆ, ಕುಂಚಿಗನಹಾಳು ನನ್ನಿವಾಳ ಮತ್ತು ಬೆಳಗಟ್ಟದ ಎದ್ದಲುಬಂಡೆ ನೆಲೆಗಳು ಪ್ರಮುಖವು.

ಪ್ರಾಗೈತಿಹಾಸಿಕ ಮಾನವರು ಪ್ರಕೃತಿಯನ್ನು ನಂಬಿ ಬದುಕಿದ್ದರು. ಪ್ರಕೃತಿಯನ್ನು ಪಳಗಿಸಿ ಬದುಕಲು ಆರಂಭಿಸಿದ ನಂತರ ನಂಬಿಕೆಗಳು ಹೆಚ್ಚಿದವು. ಪ್ರಕೃತಿಯಲ್ಲಿನ ಸ್ವಾಭಾವಿಕ ದೃಶ್ಯಗಳು ಹಾಗೂ ನಿಸರ್ಗದತ್ತ ಚಿತ್ರಗಳಿಂದ ಪ್ರಭಾವಿತನಾಗಿ ಶಾಶ್ವತವಾಗಿ ಉಳಿಯಬಹುದೆಂಬ ನಂಬಿಕೆಯಿಂದ ವರ್ಣ ಚಿತ್ರಗಳನ್ನು ಮತ್ತು ಕಟ್ಟು ಚಿತ್ರಗಳನ್ನು ಬಂಡೆಯ ಮೇಲೆ ರಚಿಸಿದ್ದಾರೆ. ಶಿಲಾಸಮಾಧಿಗಳಲ್ಲಿ ಶವವನ್ನು ಉತ್ತರ, ದಕ್ಷಿಣ ಹಾಗೂ ಪೂರ್ವ ಅಭಿಮುಖವಾಗಿ ಹೂಳುತ್ತಿದ್ದರು. ಇಲ್ಲಿ ಸತ್ತವರು ಸ್ವರ್ಗ, ನರಕಕ್ಕೆ ಹೊಗುತ್ತಾರೆಂದು ಹಾಗೂ ದೇವರಿಗೆ ಸಮಾನವಾಗಿ ಪೂರ್ವ ಅಭಿಮುಖವಾಗಿ ಶವವನ್ನು ಹೂಳುವುದು ಅವರಲ್ಲಿದ್ದ ನಂಬಿಕೆಯಾಗಿದೆ. ಸತ್ತವರ ಆತ್ಮವು ಹೊರಗೆ ಹೋಗಿಬರಲೆಂದು, ದೂಪವನ್ನು ಹಾಕಲು, ಸೂರ್ಯನ ಕಿರಣಗಳು ಪ್ರವೇಶಿಸಲೆಂದು ಸಮಾಧಿಗಳಲ್ಲಿ ಕಿಂಡಿ ಮತ್ತು ಹಾದಿಯನ್ನು ಬಿಡಲಾಗಿರುತ್ತದೆ. ಸಮಾಧಿಗಳನ್ನು ಒಂದೇ ಕಡೆ ನಿರ್ಮಿಸಿರುವುದು ಹಾಗೂ ಮೂರು ವೃತ್ತಾಕಾರದ ಸಮಾಧಿಯನ್ನು ತ್ರಿಭುಜಾಕಾರವಾಗಿ ಬರುವಂತೆ ಒಂದೇ ಕಡೆ ಸಮಾಧಿಗಳನ್ನು ರಚಿಸಿರುವುದು ಅವರ ಸಮುದಾಯ ಮತ್ತು ಕುಟುಂಬದವರೆಂದು ಗುರುತಿಸುವ ಉದ್ದೇಶವಿರಬೇಕು. ಒಂದು ಕುಟುಂಬದವರು ಅಥವಾ ಗಂಡ ಹೆಂಡತಿ ಸತ್ತ ಮೇಲೆ ಸ್ವರ್ಗದಲ್ಲಿಯೂ ಜೊತೆಗೂಡಿರಬೇಕೆಂಬ ಕಾರಣದಿಂದ ಇಬ್ಬರನ್ನು ಒಂದೇ ಕುಣಿಯಲ್ಲಿ ಹೂಳುತ್ತಿದ್ದರು. ಈ ರೀತಿಯ ಸಮಾಧಿ ಬ್ರಹ್ಮಗಿರಿಯಲ್ಲಿ ಕಂಡುಬಂದಿದೆ. ಇದೇ ರೀತಿಯ ಪದ್ಧತಿಯನ್ನು ಬ್ರಹ್ಮಗಿರಿ ಪಕ್ಕದ ಕಾಡುಸಿದ್ದಾಪುರದಲ್ಲಿ ಇಂದಿಗೂ ಮುಂದುವರಿದು ಬಂದಿರುವುದು ಗಮನಾರ್ಹ.

ಪ್ರಾಗೈತಿಹಾಸಿಕ ಮಾನವರು ಬೇಟೆಗಾಗಿ ವಲಸೆ ಹೋಗಲು ಆರಂಭಿಸಿದರು. ನದಿದಾಟುವುದು ಮತ್ತು ಪ್ರಾಣಿಗಳನ್ನು ಪಳಗಿಸಿ ಸಂಚರಿಸಿದಾಗ ಸಾಂಸ್ಕೃತಿಕ ಪ್ರಸರಣ ವಿಸ್ತಾರಗೊಂಡಿದೆ. ಹಳೆಶಿಲಾಯುಗದಲ್ಲಿ ಮಾನವರು ಭಾರತಕ್ಕೆ ಭೂ ಮಾರ್ಗ ಅಥವಾ ಸಮುದ್ರ ಮಾರ್ಗದ ಮೂಲಕ ಆಫ್ರಿಕಾದಿಂದ ಬಂದಿದ್ದಾರೆ. ಬಂದಂತಹ ಜನರು ಭಾರತದ ಕಾವೇರಿ, ವೇದಾವತಿ, ತುಂಗಭದ್ರ, ಕೃಷ್ಣಾ, ನರ್ಮದ ಹಾಗೂ ಗೋದಾವರಿ ನದಿ ದಂಡೆಯ ಮೇಲೆ ವಾಸವಾಗಿದ್ದಾರೆ. ನದಿ ನೀರು ಬತ್ತಿಹೋಗುವ ಕಾರಣದಿಂದ ಮತ್ತು ಕಚ್ಚಾವಸ್ತುಗಳ ಕೊರತೆಯಿಂದ ಕಾವೇರಿ, ವೇದಾವತಿ, ತುಂಗಭದ್ರಾನದಿ ಪರಿಸರದ ಜನರು ಕೃಷ್ಣಾ ನದಿ ಪರಿಸರದ ಕಡೆ ವಲಸೆ ಹೋಗಿದ್ದಾರೆಂದು ಖಚಿತವಾದಂತಾಗಿದೆ. ಚಿತ್ರದುರ್ಗ ಪರಿಸರದಲ್ಲಿ ಹಳೆಶಿಲಾಯುಗದ ಆಯುಧಗಳು ದೊರೆತಿರುವುದು ಕಡಿಮೆ ಹಾಗೂ ಕಚ್ಚಾವಸ್ತುಗಳು ಸಿಗುವುದು ಕಷ್ಟವಾಗಿರುವ ಕಾರಣ ಉತ್ತರದ ಕಡೆ ವಲಸೆ ಹೋಗಿದ್ದಾರೆಂದು ನಿರ್ಧರಿಸಲಾಗಿದೆ.

ಹುಣಸಗಿ, ಸಾಲ್ವಡಗಿ, ಮರುಳು ಬಾವಿಯಲ್ಲಿ ಅಂತ್ಯ ಹಳೆಶಿಲಾಯುಗದ ಸ್ತರದ ಮೇಲೆ ಸೂಕ್ಷ್ಮ ಶಿಲಾಯುಗದ ಆಯುಧಗಳು ದೊರೆತಿವೆ. ಅಂದರೆ ಸೂಕ್ಷ್ಮಶಿಲಾಯುಗವು ಉತ್ತರ ಕರ್ನಾಟಕದಲ್ಲಿ ಆರಂಭವಾಗಿದೆ ಎಂದು ಅರ್ಥೈಸಬಹುದು. ಸಂಗನಕಲ್ಲು, ಬ್ರಹ್ಮಗಿರಿಯ ಉತ್ಖನನದಲ್ಲಿ ಸೂಕ್ಷ್ಮ ಆಯುಧಗಳು ಕಂಡುಬಂದಿರುವುದರಿಂದ ದಕ್ಷಿಣ ಕರ್ನಾಟಕದಲ್ಲಿ ಸೂಕ್ಷ್ಮಶಿಲಾಯುಗವು ವಿಸ್ತರಿಸಿರುವುದು ದೃಢವಾಗುತ್ತದೆ.

ನವಶಿಲಾಯುಗದ ಮಾನವರು ದಕ್ಷಿಣ ಕರ್ನಾಟಕದಲ್ಲಿ ತಮ್ಮ ಜೀವನವನ್ನು ಆರಂಭಿಸಿದ್ದಾರೆ. ಆದಿ ನೂತನಶಿಲಾಯುಗದ ಅವಶೇಷಗಳು ಬ್ರಹ್ಮಗಿರಿ, ಸಂಗನಕಲ್ಲು, ಹಳ್ಳೂರು, ಟಿ.ನರಸೀಪುರದಲ್ಲಿ ಕಂಡುಬಂದಿವೆ. ನವಶಿಲಾಯುಗದ ಮಾನವರು ದಕ್ಷಿಣ ಕರ್ನಾಟಕದಲ್ಲಿ ಸ್ಥಳೀಯವಾಗಿ ವಲಸೆ ಜೀವನ ನಡೆಸಿದ್ದಾರೆ. ಟಿ.ನರಸೀಪುರ ಮತ್ತು ಪಿಕ್ಲಿಹಾಳ್‌ನಲ್ಲಿ ದೊರೆತಿರುವ ಶಿರವಿಶ್ರಾಮಕಗಳು ಒಂದೆ ರೀತಿಯಲ್ಲಿವೆ. ಇಷ್ಟೇ ಅಲ್ಲದೆ ಬೆಳಗಲಿ, ಜಟಂಗಿರಾಮೇಶ್ವರ, ಕುರುಗೋಡು, ಸಂಗೇನಹಳ್ಳಿಕೆರೆಯಲ್ಲಿ ಕಾಣಬಂದಿರುವ ಬಯಲು ಬಂಡೆಚಿತ್ರಗಳು ಹೋಲಿಕೆಯಲ್ಲಿ ವ್ಯತ್ಯಾಸವಿರುವುದಿಲ್ಲ. ಆದುದರಿಂದ ದಕ್ಷಿಣ ಕರ್ನಾಟಕದಲ್ಲಿ ಸಾಂಸ್ಕೃತಿಕ ಪ್ರಸರಣವಾಗಿದೆ ಎಂದು ಅರ್ಥೈಸಲಾಗಿದೆ. ಆದರೆ ಜೋರ್ವೆ ಮಡಕೆಗಳು ಬೂದುವರ್ಣದ ಮಡಕೆಯ ಜೊತೆಗೆ ಬ್ರಹ್ಮಗಿರಿ, ಬಸಾಪುರ, ಪಿಕ್ಲಿಹಾಳ್ ಹಾಗೂ ಹಳ್ಳೂರಿನಲ್ಲಿ ದೊರಕಿವೆ. ಈ ಆಧಾರದಿಂದ ಉತ್ತರದವರು ಶಿಲಾತಾಮ್ರಯುಗದಲ್ಲಿ ದಕ್ಷಿಣ ಭಾರತದ ಸಂಸ್ಕೃತಿಯ ಜನರ ಜೊತೆಗೆ ಸೇರಿಕೊಂಡಿದ್ದಾರೆ ಎಂದು

ವಿವೇಚಿಸಲಾಗಿದೆ. ಅಲ್ಲದೆ ಇದರಿಂದ ಉತ್ತರ ಮತ್ತು ದಕ್ಷಿಣ ಭಾರತಕ್ಕೆ ಇದ್ದ ಸಾಂಸ್ಕೃತಿಕ ಸಂಬಂಧಗಳು ಸ್ಪಷ್ಟವಾದಂತಾಗಿವೆ.

ನವ ಶಿಲಾತಾಮ್ರಯುಗದಲ್ಲಿ ಸಮಾಧಿಯ ಮೇಲೆ ಕಲ್ಲುಗಳನ್ನು ಹಾಕುವ ಪದ್ಧತಿಯು ಆರಂಭವಾಯಿತು. ತೆರದಾಳ್ ನೆಲೆಯಲ್ಲಿ ಈ ರೀತಿಯ ಕಲ್ಲುಗಳಾಕುವ ಪದ್ಧತಿಯಿತ್ತೆಂದು ಉತ್ಖನನದಿಂದ ಸಾಬೀತಾಗಿದೆ. ಸಮಾಧಿಯ ಮೇಲೆ ಕಲ್ಲುಗಳನ್ನು ಹಾಕುವ ಕಲೆಯನ್ನು ಅರಿತವರು ಸಿಥಿಯಾ ಮತು ಇರಾನ್ ಕಡೆಯಿಂದ ಬಂದವರು. ಈ ಭಾಗವು ಸಿಥಿಯಾ, ಇರಾನ್ ಕಡೆಯಿಂದ ಬಂದ ಮೆಡಿಟರೇನಿಯನ್ ಜನಾಂಗವು ಬೃಹತ್ ಶಿಲಾಸಮಾಧಿ ಸಂಸ್ಕೃತಿಯನ್ನು ಆರಂಭಿಸಿದ್ದಾರೆ. ದೇಶದಲ್ಲಿನ ಸಮಾಧಿಗಳ ಹೋಲಿಕೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಗುರುತಿಸಬಹುದು. ಆದ್ದರಿಂದ ಮೆಡಿಟರೇನಿಯನ್ ಜನಾಂಗವು ಭಾರತ ದೇಶಕ್ಕೆ ಕಾಲ ಕಾಲಕ್ಕೆ ವಲಸೆ ಬಂದಿದ್ದಾರೆಂದು ವಿಮರ್ಶಿಸಲಾಗಿದೆ. ಕರ್ನಾಟಕವನ್ನು ಸಹ್ಯಾದ್ರಿ ಬೆಟ್ಟಗಳ ಮೂಲಕ ಪ್ರವೇಶಿಸಿದ್ದಾರೆಂಬುದು ಖಚಿತವಾದ ವಿಷಯವಾಗಿದೆ. ಹೆಗ್ಗಡೆಹಳ್ಳಿಯಲ್ಲಿ ಆದಿ ಬೃಹತ್ ಶಿಲಾಯುಗದ ಅವಶೇಷಗಳು ಇದಕ್ಕೆ ಸಮರ್ಥನೆ ಒದಗಿಸಿವೆ. ಚಂದ್ರವಳ್ಳಿ ಶಿಲಾಸಮಾಧಿ ಮತ್ತು ಮಡಕೆಗಳಿಗಿಂತ ಬ್ರಹ್ಮಗಿರಿ ಪರಿಸರದಲ್ಲಿ ಅಭಿವೃದ್ಧಿಹೊಂದಿದ ಅವಶೇಷಗಳು ಜಿಲ್ಲೆಯಲ್ಲಿ ಕಂಡುಬಂದಿರುವುದು ಸತ್ಯ. ಈ ಕಾರಣದಿಂದ ಜನರು ಚಿತ್ರದುರ್ಗದ ದಕ್ಷಿಣದಿಂದ ಉತ್ತರಕ್ಕೆ ವಲಸೆ ಹೋಗಿರುವುದು ಗೊತ್ತಾಗುತ್ತದೆ. ಚಿತ್ರದುರ್ಗ ಪರಿಸರದ ಸಮಾಧಿಗಳಿಗಿಂತ ಹಿರೇಬೆನಕಲ್ಲು ಪರಿಸರದ ಸಮಾಧಿಗಳು ಎತ್ತರವಾಗಿವೆ ಮತ್ತು ಕತ್ತರಿಸಿದ ಬಂಡೆಗಳನ್ನು ಸಮಾಧಿರಚನೆಗೆ ಬಳಸಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬಂದಿರುವ ಬಯಲು ಬಂಡೆಚಿತ್ರಗಳಲ್ಲಿ ಗೂಳಿಚಿತ್ರಗಳು ಒಂದೇ ರೀತಿಯಲ್ಲಿವೆ. ಆದ್ದರಿಂದ ಸ್ಥಳೀಯವಾಗಿ ಸಾಂಸ್ಕೃತಿಕ ಪ್ರಸರಣವಾಗಿದೆ ಎಂದು ನಿರ್ಧರಿಸಲಾಗಿದೆ.

ಚಿತ್ರದುರ್ಗ ನೆಲೆಯಲ್ಲಿ ಹಳೆಶಿಲಾಯುಗದ ಆಯುಧಗಳು ದೊರೆತಿವೆ. ಈ ಕಾರಣದಿಂದ ಜಿಲ್ಲೆಯಲ್ಲಿ ೧ಲಕ್ಷ ವರ್ಷದ ಪೂರ್ವ ಭಾಗದಿಂದ ಜನರು ವಾಸವಾಗಿದ್ದರೆಂದು ತಿಳಿಸಲಾಗಿದೆ. ಸೂಕ್ಷ್ಮ ಶಿಲಾಯುಗದಿಂದ ಬೃಹತ್ ಶಿಲಾಯುಗದ ಅವಶೇಷಗಳು ದೊರೆತಿರುವುದನ್ನು ಗಮನಿಸಿದರೆ ನಿರಂತರ ಚಟುವಟಿಕೆಯಲ್ಲಿ ಇತ್ತೆಂದು ದೃಢವಾಗುತ್ತದೆ. ಒಟ್ಟಾರೆ ಕ್ರಿ.ಪೂ. ೧ಲಕ್ಷ ವರ್ಷದಿಂದ. ಕ್ರಿ.ಪೂ. ೨೦೦ರವರೆಗೆ ಪ್ರಾಗಿತಿಹಾಸ ಕಾಲದ ಅವಶೇಷಗಳು ಚಿತ್ರದುರ್ಗ ಜಿಲ್ಲೆಯಾದ್ಯಂತ ಹರಡಿರುವುದು ಸ್ಪಷ್ಟವಾದಂತಾಗಿದೆ.

ಅನುಬಂಧಗಳು

ಗ್ರಂಥಸೂಚಿ

ಛಾಯಾಚಿತ್ರಗಳು

ಗ್ರಂಥಸೂಚಿ

ಕೃತಿಗಳು:

ಅರುಣಿ.ಎಸ್.ಕೆ., ೨೦೧೨, ಹಂ.ಗು.ರಾಜೇಶ್, *ಇತಿಹಾಸ ದರ್ಪಣ(ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು)*, ಬೆಂಗಳೂರು

ಇರ್ಫಾನ ಹಬೀಬ್, ೨೦೦೮, *ಪೂರ್ವೈತಿಹಾಸ*, ಚಿಂತನ ಪ್ರಕಾಶನ, ಶಿರಸಿ

ಕರೀವ್ಕಿನ್.ಎಫ್., ೧೯೮೭, *ಪುರಾತನ ಜಗತ್ತಿನ ಇತಿಹಾಸ*, ನವಕರ್ನಾಟಕ ಪಬ್ಲೀಕೇಷನ್, ಬೆಂಗಳೂರು

ಗಾಯಿತ್ರಿ, *ಚಿತ್ರಗಳಲ್ಲಿ ಚರಿತ್ರೆ*, ೨೦೦೫, ಗಾಯಿತ್ರಿ ಎಂಟರ್ ಪ್ರೇಸೈಸ್, ಮೈಸೂರು.

ಗಿಲ್ಬರ್ಟ ಸಿಕ್ವೇರಾ, ೨೦೦೪, *ಪೂರ್ವ ಪ್ರಾಚೀನ ಭಾರತದ ಇತಿಹಾಸ*, ಚೇತನ ಬುಕ್ ಹೌಸ್, ಮೈಸೂರು

ಗಿರಿಜಾ.ಟಿ., ೧೯೯೧, *ಚಿತ್ರದುರ್ಗ ಜಿಲ್ಲಾ ದರ್ಶಿನಿ*, ರೇಣುಕಾ ಪ್ರಕಾಶನ, ದಾವಣಗೆರೆ

ಗುರುರಾಜರಾವ್.ಬಿ.ಕೆ., ೧೯೭೧, *ಕರ್ನಾಟಕ ಲೋಹಯುಗ ಸಂಸ್ಕೃತಿಗಳು*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಗೋಪಾಲ್.ಬಾ.ರಾ., ೧೯೮೭, *ಕರ್ನಾಟಕದಲ್ಲಿ ನವಶಿಲಾಯುಗ*, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಗೋಪಾಲ್.ಆರ್(ಸಂ)., ೨೦೦೫, *ಚಿತ್ರದುರ್ಗ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಸಂಗ್ರಹಾಲಗಳ ನಿರ್ದೇಶನಾಲಯ, ಹೊಸಪೇಟೆ

ತಿಪ್ಪೇರುದ್ರಸ್ವಾಮಿ.ಎಚ್., ೨೦೦೭, *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ಡಿ.ವಿ.ಕೆ ಪ್ರಕಾಶಕರು, ಮೈಸೂರು

ನಂಜಮಣ್ಣಿ ಎಂ., ೧೯೮೦, *ಪ್ರಾಚೀನ ಭಾರತದ ಸಾಮಾಜಿಕ ಇತಿಹಾಸ*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ನರಸಿಂಹಮೂರ್ತಿ. ಎ.ವಿ., ೧೯೨೯, *ಕರ್ನಾಟಕದಲ್ಲಿ ಪುರಾತತ್ವ ಶೋಧನೆ*, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

ಬಸವರಾಜಪ್ಪ.ಎಚ್.ಈ., ೨೦೦೬, *ಬಳ್ಳಾರಿ ಜಿಲ್ಲೆಯ ಚಿತ್ರಕಲೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಂಜುನಾಥ್ ನಾಯಕ್.ಕೆ., ೨೦೧೫, *ಚಿತ್ರದುರ್ಗ ಜಿಲ್ಲಾ ದರ್ಶನ*, ಪಾರ್ವತಿ ಪ್ರಕಾಶನ, ಪಂಡರಹಳ್ಳಿ

ಮಹದೇವ.ಸಿ., ೨೦೦೧, *ಕರ್ನಾಟಕ ಪುರಾತತ್ವ ಶೋಧ*, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗ ಪಟ್ಟಣ

ರಾಜಶೇಖರಪ್ಪ.ಬಿ., ೨೦೦೧, *ದುರ್ಗಶೋಧ*, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ರಾಜಶೇಖರಪ್ಪ.ಬಿ., ೨೦೦೧, *ಇತಿಹಾಸ ಕಥನ*, ಸಿ.ವಿ.ಜಿ.ಪಬ್ಲಿಕೇಷನ್, ಬೆಂಗಳೂರು

ರಾಮದಾಸರೆಡ್ಡಿ.ಎಸ್.ಜಿ., ೨೦೦೯, *ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ*, ಕನ್ನಡಸಾಹಿತ್ಯ ಪರಿಷತ್, ಬೆಂಗಳೂರು

ರಾಮದಾಸರೆಡ್ಡಿ.ಎಸ್.ಜಿ., ೨೦೧೧, *ಕ್ಷೇತ್ರಕಾರ್ಯ*, ರೇಣುಕಶ್ರೀ ಪ್ರಕಾಶನ, ಮೈಸೂರು

ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀನಿವಾಸ್.ಎಂ.ವಿ(ಸಂ)., ೧೯೯೫, *ಹುಲ್ಲೂರು ಶ್ರೀನಿವಾಸ್ ಜೋಯಿಸರ ಸಂಶೋಧನ ಲೇಖನಗಳು*, ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ

ಶಿವತಾರಕ್.ಕೆ.ಬಿ., ೨೦೦೧, *ಕರ್ನಾಕಟಕದ ಪುರಾತತ್ವ ನೆಲೆಗಳು*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸ.ಎಲ್., ೨೦೧೦, *ಹಂಪಿ ಪರಿಸರದ ಆದಿ ಮಾನವನ ನೆಲೆಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀವತ್ಸ.ಎಸ್.ವಟಿ., ೨೦೦೭, *ಪುರಾತನ ಭಾರತೀಯರ ಕಾಲಗಣನೆ ವಿಜ್ಞಾನ*, ಕನ್ನಡ ಸಾಹಿತ್ಯ ಪರಿಷತ್, ಮಹಾರಾಷ್ಟ್ರ ಘಟಕ–ಮುಂಬೈ

ಸಂತೋಷ ಕೆ.ವಿ., ೨೦೧೬, *ಹೊಳಲ್ಕೆರೆ ತಾಲೂಕು ದರ್ಶನ*, ಸಂತೋಷ ಪ್ರಕಾಶನ, ಹೊಳಲ್ಕೆರೆ

ಸುಂದರ.ಅ., ೧೯೭೧, *ಇತಿಹಾಸ ಪೂರ್ವ ಕರ್ನಾಟಕ ಅಥವಾ ಕರ್ನಾಟಕ ಪ್ರಾಗೈತಿಹಾಸ*, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು

ಸುಂದರ.ಅ., ೧೯೭೨, *ಪ್ರಾಚ್ಯವಸ್ತು ಸಂಶೋಧನೆ*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸುಂದರ.ಅ., ೧೯೯೪, *ಕರ್ನಾಟಕ ಪ್ರಾಗೈತಿಹಾಸಿಕಾಲದ ಕಲೆ*, ಬೃಂದಾವನ ಪ್ರಿಂಟರ್ಸ್, ಬೆಂಗಳೂರು

ಸುಂದರ. ಅ. ಮತ್ತು ಷೇಕ ಅಲಿ, ೧೯೭, *ಕರ್ನಾಟಕ ಚರಿತ್ರೆ ಸಂಪುಟ–೧*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೂರ್ಯನಾಥ.ಯು.ಕಾಮತ್, ೧೯೮೬, *ಕರ್ನಾಟಕದ ಗ್ಯಾಸೆಟಿಯರ್–೩*, ಕರ್ನಾಟಕ ಸರ್ಕಾರ, ಬೆಂಗಳೂರು

ಸೋಮಶೇಖರ್.ಎಸ್.ವೈ., ೨೦೦೪, *ಜಟಂಗಿರಾಮೇಶ್ವರ ಸಾಂಸ್ಕೃತಿಕ ದರ್ಶನ*, ಸುಮೇಧ ಪ್ರಕಾಶನ, ದೇವಸಮುದ್ರ(ಮೊಳಕಾಲ್ಮೂರು)

ಸೋಮಶೇಖರ್.ಎಸ್.ವೈ., ೨೦೧೭, *ಕರ್ನಾಟಕ ದೇವಾಲಯಕೋಶ: ಚಿತ್ರದುರ್ಗ ಜಿಲ್ಲೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪಾದಕೀಯ ಕೃತಿಗಳು

ಚಿತ್ರದುರ್ಗ ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೧೦-೧೧, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರ ಕಛೇರಿ, ಚಿತ್ರದುರ್ಗ

ಚಿತ್ರದುರ್ಗ ಜಿಲ್ಲೆ ಮಾನವ ಅಭಿವೃದ್ಧಿ ವರದಿ-೨೦೧೪. ಜಿಲ್ಲಾ ಪಂಚಾಯಿತಿ, ಚಿತ್ರದುರ್ಗ

ತಂಬಂಡ ವಿಜಯ ಪೂಣಚ್ಚ(ಸಂ), ೨೦೦೦, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪, ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿವಾಕರ.ಆರ್.ಆರ್(ಸಂ)., ೨೦೦೬, ಕರ್ನಾಟಕ ಪರಂಪರೆ ಸಂಪುಟ-೧ (ಆದಿಕಾಲದಿಂದ ವಿಜಯನಗರ ಕಾಲದವರೆಗೆ), ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

ದೇವರಕೊಂಡಾರೆಡ್ಡಿ(ಸಂ), ೨೦೦೬, ಹಂಪಿ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೋಮಶೇಖರ್.ಎಸ್.ವೈ(ಸಂ)., ೨೦೧೦, ಬ್ರಹ್ಮಗಿರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಂಗ್ಲ ಗ್ರಂಥಗಳು

Ancient India(I.A.no-4), 1984, ASI

Annual Report of the Mysore archaeology, 1964, department for the year 1947-56, Super indent Govt, Mysore

Devaraj.D.V., Talwar.H.T., 1996, Interview Report on the Excavation at Sannati 1993-95, Directorate of Archaeology and Museums, Mysore

Devaraj.D.V., Joshi.N.V., Patil.C.S., and Gangadhara.T.S., 1996, Heggadehalli A Report on Megalithic Excavation-1995, Directorate of Archaeology and Museums, Mysore

Ganapayya Bhat.P.(E.d), 2009, Pre- History of Coastal Karnataka, Suryakanth.U.Kamath, Aruni.S.K.(E.d), vol-1, Archaeology and Antiquities, Mythic Society, Bangalore

Gururaja Rao.B.K., 1972, the Megalithic Culture in south India, Prasaranga University of Mysore, Mysore

Krishna Sahstri.M.S., 2009, The Significance of the Megalithic Moments, Suryakanth.U.Kamath, Arunis.K.(E.d), Vol-1, Archaeology and antiquities, Mythic Society, Bangalore

Krishna.M.H., 1931, Excavation at Chandravalli-1929, Govt Press, Bangalore

Michael Petrolia, 4.03.2010, Homo Sapiens Man have reached India - 74, thousand Years ago, Deccan Herald

Mysore Archaeology report 1930-1934, Mysore Archaeology Department, Govt Press, Bangalore

Nilakanta Sastri.K.A., 2010, A History of South India from Prehistoric times to the fall of Vijayanagar- Fourth edition, Oxford University Press, New Delhi

Sanakalia.H.D., 1970, Some aspects of prehistory technology in India, Indian National Science Academy, New Delhi

Sathyan (Ed), 1967, Chitradurga District, Gazetteers, Govt Press, Bangalore

Sheshadri.M., 1971, Report on the Excavation at T.Narsipura (1959, 60, 62), Govt Press, Bangalore

Sheshadri.M., 1997, Excavation at Banavasi, Directorate of Archaeology and Museum, Mysore

Sheshadri.M., 1956, The Stone using culture of pre-historic and protohistoric Mysore, University of Mysore, Mysore

Subbayya.K.K., 1978, Archaeology of coopel, Geetha Book House, Mysore.

Sundara.A., 2004, Indian Prehistory and Protohistory, Directorate of Archaeology Museum, Hospet

Sundara.A., 1990, Archaeological in Karnataka, Directorate of Archaeology Museum, Mysore

Sundara.A., 1975, The Early Chamber Tombs of South India, University Publication, New Delhi

Sundara.A.(Ed), 1989, Annual Reports of the Archaeological Department 1885-1905, Directorate of Archaeology & Museum, Mysore

Thapar.B.K. (Ed), 1980, Indian Archaeology 1977-78, A review Archaeological Search India, New Delhi

ಲೇಖನಗಳು

ಕೃಷ್ಣಮೂರ್ತಿ.ಪಿ.ವಿ., ೧೯೮೭, ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ, ಲಕ್ಷ್ಮಣ್ ತೆಲಗಾವಿ(ಸಂ), ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಗೋಪಾಲಕೃಷ್ಣವಿ., ೧೯೮೭, ಚಿತ್ರದುರ್ಗ ಜಿಲ್ಲೆಯ ಸ್ಥಳ ನಾಮಗಳು: ಒಂದು ಅವಲೋಕನ, ಲಕ್ಷ್ಮಣ್ ತೆಲಗಾವಿ(ಸಂ), ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ತಿಪ್ಪೇಸ್ವಾಮಿ.ಹೆಚ್., ೧೯೯೯, ಕೂಡ್ಲಿಗಿ ತಾಲೂಕಿನ ಅಪರೂಪ ಮಾನವನ ಆಕೃತಿಗಳು, ಇ.ದ.ಸಂ-೧೪, ಕರ್ನಾಟಕ ಇತಿಹಾಸ ಅಕಾಡಮಿ, ಬೆಂಗಳೂರು

ತಿಪ್ಪೇಸ್ವಾಮಿ.ಎಸ್., ೨೦೦೭, ಚಿತ್ರದುರ್ಗ ತಾಲೂಕಿನ ಮತ್ತಷ್ಟು ಪ್ರಾಗೈತಿಹಾಸಿಕ ನೆಲೆಗಳು, ಇತಿಹಾಸ ದರ್ಶನ ಸಂಪುಟ-೨೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ತಿಪ್ಪೇಸ್ವಾಮಿ.ಹೆಚ್., ೨೦೦೦, ನುಂಕೆಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ನೆಲೆಗಳು ಶೋಧ, ಇ.ದ.ಸಂ-೧೫, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ನರಸಿಂಹಯ್ಯ.ಬಿ., ೨೦೦೪, Neolithic Culture in Kolaara District with Special Reference to excavation at banahalli, ಗೋಪಾಲ್.ಆರ್.(ಸಂ), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಾಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

ನಾಗರಾಜಪ್ಪ.ಎಸ್., ೨೦೧೧, ಚಿತ್ರದುರ್ಗ ತಾಲೂಕಿನ ಕೆಲವು ಪ್ರಾಗೈತಿಹಾಸಿಕ ನೆಲೆಗಳು, ಇತಿಹಾಸ ದರ್ಶನ ಸಂಪುಟ-೨೬, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ನಾಗರಾಜಪ್ಪ.ಎಸ್., ಶರತಬಾಬು.ಕೆ.ಎಸ್., ೨೦೧೨, ಕೂನಬೇವು ಪರಿಸರದ ಇತ್ತೀಚಿನ ಪ್ರಾಗೈತಿಹಾಸಿಕ ಶೋಧನೆಗಳು, ಇತಿಹಾಸ ದರ್ಶನ ಸಂಪುಟ-೨೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಬುರುಡೆಕಟ್ಟೆ ಮಂಜಪ್ಪ, ೨೦೦೮, ಬುರುಡೆಕಟ್ಟೆ ಪರಿಸರದ-ಪ್ರಾಗೈತಿಹಾಸಿಕ ಕುರುಹುಗಳು, ಇತಿಹಾಸ ದರ್ಶನ ಸಂಪುಟ-೨೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ರಂಗರಾಜು.ಸಂ.ಶಿ., ೨೦೦೭, ಕರ್ನಾಟಕದ ಬೃಹತ್ ಶಿಲಾ ಸಂಸ್ಕೃತಿ-ಒಂದು ಮರು ಚಿಂತನೆ, ರಮೇಶನಾಯಕ (ಸಂ), ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರು ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಕ್ಷ್ಮಣ್ ತೆಲಗಾವಿ, ೨೦೦೪, ಬೆಳಗಟ್ಟ ಗ್ರಾಮ ಪರಿಸರದ ಎದ್ದಲು ಬಂಡೆಯ ಬಯಲು ಬಂಡೆ ರೇಖಾಕೃತಿಗಳು, ಇತಿಹಾಸ ದರ್ಶನ ಸಂಪುಟ-೧೯, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ವಿರೂಪಾಕ್ಷಿ ಪುಜಾರಹಳ್ಳಿ, ೧೯೯೭, ಚಿನ್ನಹಗರಿ ನದಿ ಪರಿಸರದ ಪ್ರಾಚ್ಯ ಅವಶೇಷಗಳು ಒಂದು ಶೋಧನೆ, ಇ.ದ.ಸಂ-೧೨, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಶರಣಬಸಪ್ಪ ಕೋಲ್ಕಾರ್, ೨೦೦೬, ಹಂಪಿ ಪ್ರದೇಶದ ಪ್ರಾಗೈತಿಹಾಸ ಕಾಲದ ಕಲೆ, ದೇವರಕೊಂಡರೆಡ್ಡಿ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶರತ್‌ಬಾಬು.ಕೆ.ಎಸ್., ಮಂಜಣ್ಣ.ಪಿ.ಬಿ., ೨೦೧೩, ಚಳ್ಳಕೆರೆ ತಾಲೂಕು ಕೊಂಡ್ಲಹಟ್ಟಿಯಲ್ಲಿ ಬೃಹತ್ ಶಿಲಾಯುಗದ ನೆಲೆಗಳ ಶೋಧ, ಇ.ದ.ಸಂ-೨೮, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಶಿವತಾರಕ್.ಕೆ.ಬಿ., ೨೦೦೬, ಗದಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು, ಗೋಪಾಲ್.ಆರ್. (ಸಂ), ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಶಿವರುದ್ರಪ್ಪ.ಟಿ.ಟಿ., ೧೯೮೭, ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ, ಲಕ್ಷ್ಮಣ್ ತೆಲಗಾವಿ (ಸಂ), ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಶ್ರೀಶೈಲ ಆರಾಧ್ಯ, ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸಿಕ ಚಿತ್ರಗಳು, ಲಕ್ಷ್ಮಣ್ ತೆಲಗಾವಿ (ಸಂ), ಹರಿತಿಸಿರಿ, ೧೯೮೭, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಸುಂದರ.ಅ., ೨೦೦೪, ಆದಿ ಕಬ್ಬಿಣಯುಗದ ಬೃಹತ್‌ಶಿಲಾ ಸಂಸ್ಕೃತಿ, ಗೋಪಾಲ್.ಆರ್(ಸಂ), ಕೋಲಾರ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

ಸುಂದರ.ಅ., ೧೯೯೧, ಜಟಂಗಿರಾಮೇಶ್ವರದಲ್ಲಿಯ ಪ್ರಾಗೈತಿಹಾಸಿಕ ಪುರಾತತ್ವ ಅವಶೇಷಗಳು ಮತ್ತು ಐತಿಹ್ಯದ ಒಂದು ವಿವೇಚನೆ, ಇ.ದ.ಸಂ–೬, ಕರ್ನಾಟಕ ಇತಿಹಾಸ ಅಕಡಾಮಿ, ಬೆಂಗಳೂರು

ಸುಂದರ.ಅ., ೧೯೮೭, ಪ್ರಾಗೈತಿಹಾಸಿಕ ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳು: ಕರ್ನಾಟಕ, ಲಕ್ಷ್ಮಣ್ ತೆಲಗಾವಿ (ಸಂ), ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಸುಂದರ.ಅ., ೨೦೦೬, ಗದಗ ಜಿಲ್ಲಾ ಪ್ರದೇಶದ ಪ್ರಾಗೈತಿಹಾಸಿಕ ಒಂದು ಪಕ್ಷಿನೋಟ, ಗೋಪಾಲ್.ಆರ್. (ಸಂ), ಗದಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಸೋಮಶೇಖರ್.ಎಸ್.ವೈ., ೨೦೦೬, ಚಿತ್ರದುರ್ಗ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳು, ರಾಜಶೇಖರಪ್ಪ.ಬಿ.(ಸಂ), ದುರ್ಗಸಿರಿ–ಸ್ಮರಣ ಸಂಚಿಕೆ, ಜಿಲ್ಲಾ ಉತ್ಸವ ಸಮಿತಿ, ಚಿತ್ರದುರ್ಗ

ಸೋಮಶೇಖರ್.ಎಸ್.ವೈ., ತಿಪ್ಪೇಸ್ವಾಮಿ.ಎಸ್, ೨೦೦೮, ಚಿತ್ರದುರ್ಗ ತಾಲೂಕು ನೆರೇನಾಳು ಪರಿಸರದ ಬೃಹತ್‌ಶಿಲಾಯುಗ ಸಮಾಧಿ ನೆಲೆಗಳ ಶೋಧ, ಇತಿಹಾಸ ದರ್ಶನ ಸಂಪುಟ–೨೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

ಸೋಮಶೇಖರ್.ಎಸ್.ವೈ., ೨೦೧೦, ಭೌಗೋಳಿಕ ಪರಿಸರ ಮತ್ತು ಪ್ರಾಗಿತಿಹಾಸ, ಸೋಮಶೇಖರ್.ಎಸ್.ವೈ.(ಸಂ), ಸ್ಥಳಿಯ ಚರಿತ್ರೆ ಮತ್ತು ಪುರಾತತ್ವ ಮಾಲೆ–೩– ಬ್ರಹ್ಮಗಿರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೋಮಶೇಖರ್.ಎಸ್.ವೈ., ೨೦೧೦, ಭೌಗೋಳಿಕ ಪರಿಸರ ಮತ್ತು ಪ್ರಾಗೈತಿಹಾಸ, ಸೋಮಶೇಖರ್. ಎಸ್.ವೈ(ಸಂ), ಸ್ಥಳಿಯ ಚರಿತ್ರೆ ಮತ್ತು ಪುರಾತತ್ವ ಮಾಲೆ–೪(ಜಗಳೂರು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪತ್ರಿಕೆಗಳು:

ಕೊಂಡ್ಲಹಳ್ಳಿ ಜಯಪ್ರಕಾಶ್, ಗುಂಡ್ಲೂರಿನ ಬಂಡೆ ಮೇಲೆ ಪ್ರಾಚೀನ ಚಿತ್ರ, ೨೧.೦೧.೨೦೧೬. ಪ್ರಜಾವಾಣಿ

ತಿಪ್ಪೇಸ್ವಾಮಿ.ಎಸ್. ಮತ್ತು ಸೋಮಶೇಖರ್.ಎಸ್.ವೈ., ಬೆಳಗಟ್ಟ ಗ್ರಾಮದಲ್ಲಿ ಶಿಲಾಯುಗದ ಬೃಹತ್ ಶಿಲಾಸಮಾಧಿ ಪತ್ತೆ, ೦೩.೦೮.೨೦೦೩, ಪ್ರಜಾವಾಣಿ

ತಿಪ್ಪೇಸ್ವಾಮಿ.ಎಸ್., ಸೋಮಶೇಖರ್.ಎಸ್.ವೈ., ಮೊಳಕಾಲ್ಮೂರು ತಾಲೂಕಿನ ಸಂತೆಗುಡ್ಡದಲ್ಲಿ ಪ್ರಾಚೀನ ಗವಿ ವರ್ಣಚಿತ್ರಗಳ ಶೋಧ, ೦೩.೦೮.೨೦೦೩. ವಿಜಯಕರ್ನಾಟಕ

ಮಹಂತೇಶ್.ಎನ್.ಎಸ್., ಪ್ರಾಚೀನ ಬೃಹತ್ ಶಿಲಾ ಸಮಾಧಿ ಪತ್ತೆ, ೦೨.೦೫.೧೦, ಪ್ರಜಾವಾಣಿ

ಲಕ್ಷ್ಮಣ್ ತೆಲಗಾವಿ ಮತ್ತು ತಂಡ, ಸಂಗೇನಹಳ್ಳಿ ಕೆರೆ ಬಳಿ ಚಾರಿತ್ರಿಕ ಅವಶೇಷ ಪತ್ತೆ, ೦೫.೦೪.೧೯೯೬, ಸಂಯುಕ್ತ ಕರ್ನಾಟಕ

ಶರತ್‌ಬಾಬು.ಕೆ.ಎಸ್., ನಾಗರಾಜಪ್ಪ.ಎಸ್., ಕೂನಬೇವು, ಶಿಲಾಯುಗದ ಕೊಡಲಿ ಪತ್ತೆ, ೧೯.೦೩.೧೦, ಕನ್ನಡಪ್ರಭ

ಶರತ್‌ಬಾಬು.ಕೆ.ಎಸ್., ಪ್ರಾಗಿತಿಹಾಸದ ಕುರುಹುಗಳು ಶೋಧ, ೨೩.೧೧.೨೦೧೦, ದುರ್ಗದ ಕೂಗು

ಶರತ್‌ಬಾಬು.ಕೆ.ಎಸ್., ಬಯಲು ಬಂಡೆ ರೇಖಾಕೃತಿಗಳು ಪತ್ತೆ, ೧೨.೦೮.೨೦೦೯, ಸಂಯುಕ್ತ ಕರ್ನಾಟಕ

ಸೋಮಶೇಖರ್.ಎಸ್.ವೈ., ನಾಗರಾಜಪ್ಪ.ಎಸ್., ಚಾರುಲತ.ಬಿ.ಟಿ., ನವಶಿಲಾಯುಗದ ಕಲ್ಲಿನ ಕೊಡಲಿಪತ್ತೆ, ೩೧.೦೭.೦೮, ಪ್ರಜಾವಾಣಿ

ಸೋಮಶೇಖರ್.ಎಸ್.ವೈ., ನಾಗರಾಜಪ್ಪ.ಎಸ್., ಚಾರುಲತ.ಬಿ.ಟಿ., ನವಶಿಲಾಯುಗದ ಕಲ್ಲಿನ ಕೊಡಲಿ ಪತ್ತೆ(ಕುರುಮರಡಿಕೆರೆ) ೧೯.೦೫.೨೦೦೮, ಪ್ರಜಾವಾಣಿ

ಸೋಮಶೇಖರ್.ಎಸ್.ವೈ., ಚಿಕ್ಕಕಬ್ಬಿಗೆರೆಯಲ್ಲಿ ಪುರಾತನ ಶಿಲಾಸಮಾಧಿ ಪತ್ತೆ, ೧೪.೧೨.೦೫, ವಿಜಯಕರ್ನಾಟಕ

ಸೋಮಶೇಖರ್ ಎಸ್.ವೈ., ಸಂಗೇನಹಳ್ಳಿಕೆರೆ ಬಳಿಚಾರಿತ್ರಿಕ ಅವಶೇಷಗಳ ಪತ್ತೆ, ೧೯೯೬, ಸಂಯುಕ್ತ ಕರ್ನಾಟಕ, ಚಿತ್ರದುರ್ಗ

ಮಹಪ್ರಬಂಧಗಳು

ಕೃಷ್ಣಪ್ಪ.ಎಸ್., ೨೦೦೬, ಕರ್ನಾಟಕದಲ್ಲಿ ಉತ್ಖನನ ನೆಲೆಗಳು ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಕೃಷ್ಣಪ್ಪ.ಬಿ., ೨೦೧೭, ಹಿರಿಯೂರು ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಚಾರುಲತ.ಬಿ.ಟಿ., ೨೦೧೫, ಬ್ರಹ್ಮಗಿರಿ ಪರಿಸರ: ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಜಯಣ್ಣ.ಯು., ೨೦೦೨, ಮೊಳಕಾಲ್ಮೂರು, ತಾಲೂಕಿನ ಪುರಾತತ್ವೀಯ ಪರಿಸರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಬಸವರಾಜು.ಸಿ., ೨೦೧೬, ಇತಿಹಾಸ ಸಂಶೋಧಕ ಶ್ರೀ ಲಕ್ಷ್ಮಣ್ ತೆಲಗಾವಿ ಒಂದು ಸಮಗ್ರ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಮಹಾಂತೇಶ.ಎನ್.ಎಸ್., ೨೦೧೩, ಹೊಸದುರ್ಗ ತಾಲೂಕಿನ ಪರಿಸರ: ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಶರಣಬಸಪ್ಪ.ಪಿ., ೨೦೦೨, ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

ಎಂ.ಫಿಲ್ ಪ್ರಬಂಧಗಳು

ಕೃಷ್ಣವೇಣಿ, ೨೦೦೮, ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗಿರಿಜಾ, ೨೦೦೮, ಬಿಜಾಪುರ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಾರುಲತ.ಬಿ.ಟಿ., ೨೦೦೯, ಇಂಗಳದಾಳು ಗಣಿಗಾರಿಕೆ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಯೋಗೀಶ್.ಹೆಚ್., ೨೦೦೮, ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶರತ್‌ಬಾಬು.ಕೆ.ಎಸ್, ೨೦೧೦, ತುರುವನೂರು ಹೋಬಳಿಯ ಪುರಾತತ್ವೀಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂತೋಷ ಕುಲಕರ್ಣಿ, ೨೦೧೦, ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ




ಆದಿಹಳೆಶಿಲಾಯುಗದ ಕಲ್ಲಿನಕೊಡಲಿ : ಕೂನಬೇವು
(ಮುಮ್ಮುಖ)



ಆದಿಹಳೆಶಿಲಾಯುಗದ ಕಲ್ಲಿನಕೊಡಲಿ : ಕೂನಬೇವು
(ಹಿಮ್ಮುಖ)



ಆದಿಹಳೆಶಿಲಾಯುಗದ ಕಲ್ಲಿನಕೊಡಲಿ : ಕೂನಬೇವು
(ಮುಮ್ಮುಖ)



ಮಧ್ಯಹಳೆಶಿಲಾಯುಗದ ಕಲ್ಲಿನಕೊಡಲಿ : ಕೂನಬೇವು
(ಮುಮ್ಮುಖ)



ಆದಿಹಳೆಶಿಲಾಯುಗದ ಕಲ್ಲಿನಕೊಡಲಿ : ಸಂಗೇನಹಳ್ಳಕೆರೆ
(ಮುಮ್ಮುಖ)



ಆದಿಹಳೆಶಿಲಾಯುಗದ ಕಲ್ಲಿನಕೊಡಲಿ : ಸಂಗೇನಹಳ್ಳಕೆರೆ
(ಹಿಮ್ಮುಖ)






ಮಧ್ಯಹಳೆಶಿಲಾಯುಗದ ಕಲ್ಲಿನಕೊಡಲಿ : ಸಂಗೇನಹಳ್ಳಕೆರೆ
(ಮುಮ್ಮುಖ)

ಮಧ್ಯಹಳೆಶಿಲಾಯುಗದ ಕಲ್ಲಿನಕೊಡಲಿ : ಸಂಗೇನಹಳ್ಳಕೆರೆ
(ಹಿಮ್ಮುಖ)



ನವಶಿಲಾಯುಗದ ಕಲ್ಲಿನಕೊಡಲಿ : ತಮಟಕಲ್ಲು



ನವಶಿಲಾಯುಗದ ಕಲ್ಲಿನಕೊಡಲಿ : ಪಾಲವ್ವನಹಳ್ಳಿ



ಸೂಕ್ಷ್ಮಶಿಲಾಯುಗದ ಆಯುಧಗಳು : ಜೆ.ಎನ್ ಕೋಟೆ



ಕಲ್ಲಿನ ಮಣಿ/ಕಚ್ಚಾವಸ್ತು : ಮಾಳಪ್ಪನಗುಡ್ಡ



ಕೆಂಪು ವರ್ಣಚಿತ್ರ : ಸಂತೆಗುಡ್ಡ



ಕೆಂಪು ವರ್ಣಚಿತ್ರ : ಸಂತೆಗುಡ್ಡ



ನವಶಿಲಾಯುಗದ ಕಲ್ಲಿನಕೊಡಲಿ : ಬೋಮ್ಮಕ್ಕನಹಳ್ಳಿ



ನವಶಿಲಾಯುಗದ ಕಲ್ಲಿನಕೊಡಲಿ : ಬೋಮ್ಮಕ್ಕನಹಳ್ಳಿ



ನವಶಿಲಾಯುಗದ ಕಲ್ಲಿನಕೊಡಲಿ : ಕುರುಮರಡಿಕೆರೆ



ನವಶಿಲಾಯುಗದ ಕಲ್ಲಿನಕೊಡಲಿ : ಸೋಮೇರನಹಳ್ಳಿ





ಕಲ್ಲಿನ ಉಪಕರಣಗಳು : ಜೆ.ಎನ್ ಕೋಟೆ

ಕಲ್ಲಿನ ಉಪಕರಣಗಳು : ಹೊಸದ್ಯಾಮವ್ವನಹಳ್ಳಿ





ಕಲ್ಲಿನ ಉಪಕರಣಗಳು : ತವಂದಿ

ಕಲ್ಲಿನ ಉಪಕರಣಗಳು : ಪಾಲವ್ವನಹಳ್ಳಿ





ವಸತಿನೆಲೆ : ತಮಟಕಲ್ಲು

ಬೂದಿದಿನ್ನೆ : ಎನ್.ಗೌರಿಪುರ



Brahmagiri: microliths from the town-site. Enlarged ⁴⁄₃

නවශිලායුගද సూక్ష్మ

ನವಶಿಲಾಯುಗದ ಸೂಕ್ಷ್ಮ ಕಲ್ಲಿನ ಉಪಕರಣಗಳು : ಬ್ರಹ್ಮಗಿರಿ


(ಕೃಪೆ :ಏ.ಎ.ನಂ ೪)



Brahmagiri: stone objects


ನವಶಿಲಾಯುಗದ ಸೂಕ್ಷ್ಮ ಕಲ್ಲಿನ ಉಪಕರಣಗಳು : ಬ್ರಹ್ಮಗಿರಿ

(ಕೃಪೆ :ಏ.ಎ.ನಂ ೪)



ಕಬ್ಬಿಣದ ಉಪಕರಣಗಳು : ಬ್ರಹ್ಮಗಿರಿ

(ಕೃಪೆ : ಬ್ರಹ್ಮಗಿರಿ ಚಂದ್ರವಳ್ಳಿ ಗ್ರಂಥ)



ಕರಿಕಲ್ಲಿನ ಉಪಕರಣಗಳು : ಬ್ರಹ್ಮಗಿರಿ ನೆಲೆ

(ಕೃಪೆ : ಬ್ರಹ್ಮಗಿರಿ ಚಂದ್ರವಳ್ಳಿ ಗ್ರಂಥ)





ವಸತಿ ನೆಲೆ : ಜೆ.ಎನ್ ಕೋಟೆ

ವಸತಿ ನೆಲೆ : ಜೆ.ಎನ್ ಕೋಟೆ



ನವಶಿಲಾಯುಗದ ಕಲ್ಲಿನ ಕೊಡಲಿ : ಕೂನಬೇವು



ಶಿಲಾವೃತ್ತ ಗೋರಿ : ನನ್ನಿವಾಳ



ನವಶಿಲಾಯುಗದ ಕಲ್ಲಿನ ಕೊಡಲಿ : ಕೊಡಗವಳ್ಳಿ



ನವಶಿಲಾಯುಗದ ಕಲ್ಲಿನ ಕೊಡಲಿ : ಹುಣಸೆಕಟ್ಟೆ



ಗೀರುಚಿತ್ರವಿರುವ ನೆಲೆ : ಮಾಳಪ್ಪನಗುಡ್ಡ



ವರ್ಣಚಿತ್ರವಿರುವ ನೆಲೆ : ಸಂತೆಗುಡ್ಡ



ವಸತಿ ನೆಲೆ : ಜೆ.ಎನ್ ಕೋಟೆ



ಬೂದಿದಿನ್ನೆ : ಸಂಗೇನಹಳ್ಳಿ ಕೆರೆ



ಕಬ್ಬಿಣದ ಕಿಟ್ಟಗಳು : ರೇಖಲಗೆರೆ ಕಾವಲು



ಕಬ್ಬಿಣದ ಕಿಟ್ಟಗಳು : ದೊಡ್ಡ ಉಳ್ಳಾರ್ತಿ



ಮ್ಯಾಂಗನೀಸ್ ಕಿಟ್ಟಗಳು : ಗಟ್ಟಿಹೊಸಹಳ್ಳಿ



ಮ್ಯಾಂಗನೀಸ್ ಕಿಟ್ಟಗಳು : ಹೊಸದ್ಯಾಮವನಹಳ್ಳಿ



ಕಬ್ಬಿಣದ ಕಿಟ್ಟಗಳು : ನೊಣಬಿಪಟ್ಟಣ



ಕಬ್ಬಿಣದ ಕಿಟ್ಟಗಳು : ತವಂದಿ



ಕಬ್ಬಿಣದ ಕಿಟ್ಟಗಳು : ಕರಿಓಬನಹಳ್ಳಿ ಗೇಟ್



ಬೂದಿ ಕಿಟ್ಟಗಳು : ಎನ್.ಗೌರಿಪುರ





ಕೆಂಪುಮಡಕೆ : ರೇಖಲಗೆರೆ ಕಾವಲು

ಮಡಕೆ ಚೂರುಗಳು : ಎನ್.ದೇವರಹಳ್ಳಿ





ಕಬ್ಬಿಣ ತಯಾರಿಕೆ ಕೊಳವೆಗಳು : ಯಾದಲಗಟ್ಟೆ


ವರ್ಣಚಿತ್ರಿತ ಮಡಕೆ ಚೂರುಗಳು : ಚಂದ್ರವಳ್ಳಿ





ಮಡಕೆ ಚೂರುಗಳು : ಪಾಲವ್ವನಹಳ್ಳಿ

ಮಡಕೆ ಚೂರುಗಳು : ಕರಿಓಬನಹಳ್ಳಿ ಗೇಟ್



Brahmagiri: painted and incised pottery of the 'Stone Axe' culture IA



FIG. 18. *Pottery of the Brahmagiri Stone Axe culture IA.* ½

225

ನವಶಿಲಾಯುಗದ ರೇಖಾಚಿತ್ರವುಳ್ಳ ಮಡಕೆ : ಬ್ರಹ್ಮಗಿರಿ

(ಕೃಪೆ :ಪ.ಎ.ನಂ ೪)




FIG. 21. *Burial-pottery of the Brahmagiri Stone Axe culture IB.* ¼





FIG. 22. *Pottery of the Brahmagiri Stone Axe culture.* ¼

ನವಶಿಲಾಯುಗದ ಮಡಕೆ : ಬ್ರಹ್ಮಗಿರಿ

(ಕೃಪೆ :ಏ.ಐ.ನಂ ೪)



Brahmagiri: black-and-red Megalithic pottery

BRAHMAGIRI AND CHANDRAVALLI 1947




FIG. 13. *Pottery from the Brahmagiri pit-circles.* ¼

ಕಬ್ಬಿಣಯುಗದ ಮಡಕೆಗಳು : ಬ್ರಹ್ಮಗಿರಿ

(ಕೃಪೆ :ಏ.ಐ.ನಂ ೪)




FIG. 31. *Brahmagiri: graffiti on 'Megalithic' pottery.* ½

ಕಬ್ಬಿಣಯುಗದ ಮಡಕೆ ಮೇಲಿದ್ದ ರೇಖೆಗಳು : ಬ್ರಹ್ಮಗಿರಿ

(ಕೃಪೆ :ಏ.ಇ.ನಂ ೪)



ವೃತ್ತಾಕಾರದ ಸಮಾಧಿ : ಕೋತಿಗುಡ್ಡ



ವೃತ್ತಾಕಾರದ ಸಮಾಧಿ : ಕಾಡುಸಿದ್ದಾಪುರ



ವೃತ್ತಾಕಾರದ ಸಮಾಧಿ : ನನ್ನಿವಾಳ



ವೃತ್ತಾಕಾರದ ಸಮಾಧಿ : ನರೇನಾಳ್



ವೃತ್ತಾಕಾರದ ಸಮಾಧಿ : ತೋರೆಕೊಲಮ್ಮನಹಳ್ಳಿ



ವೃತ್ತಾಕಾರದ ಸಮಾಧಿ : ಗೋಸಿರಪ್ಪನಗುಡ್ಡ



ಸಿಸ್ಟ್ ಸಮಾಧಿ : ಕೋನಸಾಗರ



ಸಿಸ್ಟ್ ಸಮಾಧಿ : ಬ್ರಹ್ಮಗಿರಿ



ಡಾಲ್ಮೆನ್ ಸಿಸ್ಟ್ ಸಮಾಧಿ : ಹೊಳಲ್ಕೆರೆ



ಡಾಲ್ಮೆನ್ ಸಿಸ್ಟ್ ಸಮಾಧಿ : ಹಾನಗಲ್ಲು



ಡಾಲ್ಮೆನ್ ಸಿಸ್ಟ್ ಸಮಾಧಿ : ಹಿರೇಕಬ್ಬಿಗೆರೆ



ಡಾಲ್ಮೆನ್ ಸಿಸ್ಟ್ ಸಮಾಧಿ : ಹಾನಗಲ್ಲು



ಆಯಾತಾಕಾರದ ಸಮಾಧಿ : ಕೆಳಗಳಹಟ್ಟಿ (ಮೊಳಕಾಲ್ಮೂರು)



ಡಾಲ್ಮೆನ್ ಸಿಸ್ಟ್ ಸಮಾಧಿ : ಗುಂಡ್ಲುರು



ವೃತ್ತಾಕಾರದ ಸಮಾಧಿ : ಸುಲ್ತಾನಿಪುರ



ವೃತ್ತಾಕಾರದ ಸಮಾಧಿ : ಕಡ್ಲೆಗುದ್ದು



ನಿಲುಸುಗಲ್ಲು ಸಮಾಧಿ : ಆಡುಮಲ್ಲೇಶ್ವರ



ನಿಲುಸುಗಲ್ಲು ಸಮಾಧಿ : ಅಬ್ಬಿನಹೊಳೆ




ನಿಲುಸುಗಲ್ಲು ಸಮಾಧಿ : ರಾಮಗಿರಿ



ನಿಲುಸುಗಲ್ಲು ಸಮಾಧಿ : ಚಿಕ್ಕಂದವಾಡಿ



ಗೂಳಿ ಚಿತ್ರ : ಮಾಳಪ್ಪನಗುಡ್ಡ



ಪಾದ/ನಕ್ಷತ್ರ ಚಿತ್ರ : ಮಾಳಪ್ಪನಗುಡ್ಡ



ವೃತ್ತಾಕಾರದ ಸಮಾಧಿ(ಸಿಸ್ಟ್) : ಕೋನಸಾಗರ




ವೃತ್ತಾಕಾರದ ಸಮಾಧಿ : ಹುಲ್ಲೇಹಾಳ್



ವೃತ್ತಾಕಾರದ ಸಮಾಧಿ : ಬೆಳಗಟ್ಟ



ವೃತ್ತಾಕಾರದ ಸಮಾಧಿ : ಮನ್ನೇಕೋಟೆ




ಎತ್ತುಗಳ ಗೀರು ಚಿತ್ರ : ಸಂಗೇನಹಳ್ಳಕೆರೆ




ಗೂಳ ಗೀರು ಚಿತ್ರ : ಬೆಳಗಟ್ಟ



ಗೂಳ ಗೀರು ಚಿತ್ರ : ಮಾಳಪ್ಪನಗುಡ್ಡ



ಪಾದ/ನಕ್ಷತ್ರಗೀರು ಚಿತ್ರ : ಮಾಳಪ್ಪನಗುಡ್ಡ



ಬಿಳ ವರ್ಣಚಿತ್ರ : ನುಂಕೆಮಲೆ



ಬಿಳ ವರ್ಣಚಿತ್ರ : ಸಂತೆಗುಡ್ಡ





ಕಡವೆಗಳ ಗೀರು ಚಿತ್ರ : ಮಾಳಪ್ಪನಗುಡ್ಡ

ಕಡವೆ ಗೀರು ಚಿತ್ರ : ಮಾಳಪ್ಪನಗುಡ್ಡ



ಗಿಳಿ ಗೀರು ಚಿತ್ರ : ಮಾಳಪ್ಪನಗುಡ್ಡ



ಎತ್ತು/ಮನುಷ್ಯ ಗೀರು ಚಿತ್ರ : ಮಾಳಪ್ಪನಗುಡ್ಡ



ಗೂಳಿ ಗೀರು ಚಿತ್ರ : ಸಂಗೇನಹಳ್ಳಕೆರೆ



ಗೂಳಿ ಗೀರು ಚಿತ್ರ : ಸಂಗೇನಹಳ್ಳಕೆರೆ



ಎತ್ತಿನ ಗೀರು ಚಿತ್ರ : ಚಿಕ್ಕಜಗಲೂರು


ಎತ್ತಿನ ಗೀರು ಚಿತ್ರ : ಚಿಕ್ಕಜಗಲೂರು


ಗುಳಗಳು : ಚಿಕ್ಕಜಗಲೂರು


ಗುಳಗಳು : ಚಿಕ್ಕಜಗಲೂರು


ಮನುಷ್ಯಗೀರು ಚಿತ್ರ : ದೊಡಗಟ್ಟ


ಎತ್ತಿನ ಗೀರು ಚಿತ್ರ : ದೊಡಗಟ್ಟ





ಪಾದ ಚಿತ್ರ : ಬೆಳಗಟ್ಟ

ಎತ್ತಿನ ಚಿತ್ರ : ಬೆಳಗಟ್ಟ





ಗುಳಿಗಳು : ಬೆಳಗಟ್ಟ

ಗುಳಿಗಳು : ಬೆಳಗಟ್ಟ





ಗುಳಿಗಳು : ಗೊನೂರು

ಗುಳಿಗಳು : ಗೊನೂರು



ಗೂಳಿಗೀರು ಚಿತ್ರ : ಹುಣಸೆಕಟ್ಟೆ



ಎತ್ತಿನಗೀರು ಚಿತ್ರ : ಹುಣಸೆಕಟ್ಟೆ



ಗೂಳಿಗೀರು ಚಿತ್ರ : ಪೆಲಾರಹಟ್ಟಿ



ಎತ್ತಿನ ಗೀರು ಚಿತ್ರ : ಪೆಲಾರಹಟ್ಟಿ



ನೃತ್ಯ ಗೀರು ಚಿತ್ರ : ಪೆಲಾರಹಟ್ಟಿ



ನೃತ್ಯ ಗೀರು ಚಿತ್ರ : ಪೆಲಾರಹಟ್ಟಿ





ಮನುಷ್ಯ ಗೀರು ಚಿತ್ರ : ಪೆಲಾರಹಟ್ಟಿ


ಎತ್ತುಗಳ ಕಾದಾಟ ಗೀರು ಚಿತ್ರ : ಪೆಲಾರಹಟ್ಟಿ





ಗುಳಿಗಳು : ವೀರಮದಕರಿಪುರ

ಗುಳಿಗಳು : ವೀರಮದಕರಿಪುರ





ಆಯುಧ ಚಿತ್ರ : ನರೆನಾಳ್

ಪಕ್ಷಿ ಚಿತ್ರ : ಬೆಳಗಟ್ಟ





FIG. 42


ಸ್ತರವಿಂಗಡಣೆ : ಚಂದ್ರವಳ್ಳಿ ನೆಲೆ

(ಕೃಪೆ : ಏ.ಐ.ನಂ ೪)



ಸ್ತರವಿಂಗಡಣೆ : ಬ್ರಹ್ಮಗಿರಿ ನೆಲೆ


(ಕೃಪೆ : ಬ್ರಹ್ಮಗಿರಿ ಚಂದ್ರವಳ್ಳಿ ಗ್ರಂಥ)



A. *Section showing weathered surface (18) on layer (19) containing Brahmagiri 'Stone Axe' culture IA*

ನವಶಿಲಾಯುಗದ ಸ್ತರ : ಬ್ರಹ್ಮಗಿರಿ

(ಕೃಪೆ :ಐ.ಎ.ನಂ ೪)



B. *Brahmagiri: polished stone axes* in situ *in cutting Br. 21, layer 15 (see fig. 8).* (Scale of inches.)

ನವಶಿಲಾಯುಗದ ಕಲ್ಲಿನಕೊಡಲಿ : ಬ್ರಹ್ಮಗಿರಿ

(ಕೃಪೆ :ಐ.ಎ.ನಂ ೪)





FIG. 3


ಸಿಸ್ಟ್ ಸಮಾಧಿ ಉತ್ಖನನ : ಬ್ರಹ್ಮಗಿರಿ

(ಕೃಪೆ :ಐ.ಎ.ನಂ ೮)



ಸಿಸ್ಟ್ ಸಮಾಧಿ ಉತ್ಖನನ : ಬ್ರಹ್ಮಗಿರಿ

(ಕೃಪೆ :ಐ.ಎ.ಸಂ ೪)




A. *Brahmagiri: megalith I*



ಸಿಸ್ಟ್ ಸಮಾಧಿ ಉತ್ಖನನ : ಬ್ರಹ್ಮಗಿರಿ

(ಕೃಪೆ :ಐ.ಎ.ನಂ ೪)



A. *Brahmagiri: megalith IX (pit-circle), with part of (earlier) megalith III on right*



ಪಿಟ್ ಸಮಾಧಿ ಉತ್ಖನನ : ಬ್ರಹ್ಮಗಿರಿ

(ಕೃಪೆ :ಐ.ಎ.ನಂ ೪)




A. *Brahmagiri: megalith IX, pit-floor showing pottery and four base-stones*




B. *Brahmagiri: gold beads, copper bracelets, conch-shell and human bones in megalith IX*

ಪಿಟ್ ಸಮಾಧಿ ಉತ್ಖನನ : ಬ್ರಹ್ಮಗಿರಿ

(ಕೃಪೆ :ಪು.ಎ.ಸಂ ೪)




A. *Brahmagiri: terracotta and stone beads.* 1/1



B. *Brahmagiri: gold beads from megalith IX*

ಮಣ್ಣಿನ/ಲೋಹದ ಮಣಿಗಳು : ಬ್ರಹ್ಮಗಿರಿ ನೆಲೆ
(ಕೃಪೆ : ಐ.ಎ.ನಂ ೪)



ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ